Edited with the trial version of
Foxit Advanced PDF Editor
To remove this notice, visit:
www.foxitsoftware.com/shopping


# ಅರಿವಿನೊಂದಿಗೆ ನಮ್ಮ ಪಯಣ

## ಮಲೆನಾಡಿನಲ್ಲಿ ಮಹಿಳಾ ಚೈತನ್ಯದಿನ

**(ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ – 2018, ಶಿವಮೊಗ್ಗ)**

**ಸಂ:**

ಡಾ. ಸಬಿತಾ ಬನ್ನಾಡಿ ಮತ್ತು ರೇಖಾಂಬ ಟಿ. ಎಲ್.



*ಪ್ರಕಟಣೆ*

**ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಶಿವಮೊಗ್ಗ**

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

**ಅರಿವಿನೊಂದಿಗೆ ನಮ್ಮ ಪಯಣ**

*ಮಲೆನಾಡಿನಲ್ಲಿ ಮಹಿಳಾ ಚೈತನ್ಯ ದಿನ*

(ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ – 2018,
ಶಿವಮೊಗ್ಗದ ನೆನಪಿನ ಹೊತ್ತಗೆ)

*ಸಂಪಾದನೆ:*

**ಡಾ. ಸಬಿತಾ ಬನ್ನಾಡಿ,** ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತರೀಕೆರೆ,
ಫೋ: 9449204906

**ಟಿ. ಎಲ್. ರೇಖಾಂಬ,** ಬೆಳಕು, ನಂ. 47, ನಾಲ್ಕನೇ
ಮುಖ್ಯರಸ್ತೆ, ನಂಜಪ್ಪ ಬಡಾವಣೆ, ಬೈಪಾಸ್ ರಸ್ತೆ,
ಶಿವಮೊಗ್ಗ,
ಫೋ: 9901445030

*ಸಹಕಾರ:*

ಪದ್ಮಾಕ್ಷಿ ಮತ್ತು ವಿನಯ್

ಪ್ರಕಟಣೆ ವರ್ಷ: 2019

ಹಕ್ಕುಗಳು: ಒಕ್ಕೂಟದ್ದು

ಪುಟಗಳು: viii+188=196

ಬೆಂಬಲ ಬೆಲೆ: 100

*ಪ್ರಕಟಣೆ:* ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ
ವಿರೋಧಿ ಒಕ್ಕೂಟ, ಶಿವಮೊಗ್ಗ

ಮುಖಪುಟ ಮತ್ತು ಪುಟ ವಿನ್ಯಾಸ: ಎಚ್. ಕೆ. ಶರತ್

*ಮುದ್ರಣ:*

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಹೋರಾಟವನ್ನೇ ಚೇತನವನ್ನಾಗಿಸಿಕೊಂಡಿದ್ದ
**ಪೊನ್ನಮ್ಮಾಳ್** ಮತ್ತು **ಪಾರ್ವತಿ**ಯರಿಗೆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ನೀನು ನಂಗೊಂದ್ ರೊಟ್ಟಿ ಕೊಟ್ರೆ
ಒಂದು ದಿವ್ಸದ ಹಸಿವನ್ನ ತೀರಿಸ್ದಂಗೆ

ರೊಟ್ಟಿ ಗಳಿಸೋದು ಹೆಂಗೇಂತ ಕಲಿಸಿದ್ರೆ
ಗಳಿಸೋ ಅವಕಾಶ ಕಿತ್ಕಳೋ ತಂಕ
ಉಳೋ ನೆಲ ಮಾರೋ ತಂಕ
ನನ್ ಹಸಿವನ್ನ ತೀರಿಸ್ದಂಗೆ..

ಅದೇ ನೀನೇನಾದ್ರು ವಿದ್ಯೆ ಕಲ್ಸಿ
ಒಗ್ಗಟ್ಟಾಗಿ ಹೋರಾಡೋದು ಕಲ್ಸಿದ್ರಾ
ಏನ್ಬೇಕಾದ್ರೂ ಆಗ್ಲಿ, ಯಾವ ಕಷ್ಟನಾದ್ರೂ ಬರ್ಲಿ
ನಮ್ ದಾರಿ ನಾವು ಹುಡುಕೋದ
ಹೇಳಿಕೊಟ್ಟಂಗೆ..

– ಅರಿವಿನ ಅವ್ವ **ಸಾವಿತ್ರಿ ಬಾಯಿ ಫುಲೆ**

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಅರಿವಿನ ಹೆಜ್ಜೆ ಗುರುತುಗಳು...

**ಅರಿವಿನ ಚಿಂತನ**


- ತಿಳಿವಿನ ಹಳಿಯ ಮೇಲೆ ಸಮತೆಯ ಬಾವುಟ ಹೊತ್ತ ಅರಿವಿನ ಬಂಡಿಯ ಪಯಣ: ಸಬಿತಾ ಬನ್ನಾಡಿ / 01
- ಒಳಗು ಬೆಳಗಿದ ಆ ಕ್ಷಣ; ರೇಖಾಂಬ ಟಿ. ಎಲ್. / 07
- ಶಿವಮೊಗ್ಗದಲ್ಲಿ ಮೆರವಣಿಗೆಯ ಹೆಜ್ಜೆಗಳು: ವಾಣಿ ಪೆರಿಯೋಡಿ / 12
- ವಿಚಾರ ಸಂಕಿರಣ ಆಹ್ವಾನ ಪತ್ರಿಕೆ / 17
- ಹೆಣ್ಣಿನ ಸವಾಲು ಮತ್ತು ಸಾಧ್ಯತೆಗಳ ವಿವಿಧ ಮುಖಗಳನ್ನು ಅನಾವರಣಗೊಳಿಸಿದ ವಿಚಾರ ಸಂಕಿರಣ: ಬಿ. ಎಸ್. ಸುಧಾ / 18
- ಹೋರಾಟಕ್ಕೆ ಅಂತ್ಯವಿಲ್ಲ, ಆರಂಭ ಮಾತ್ರ ಇದೆ: ಸ. ಉಷಾ / 20
- ಸಮತೆಯೆಡೆಗೆ ನಮ್ಮ ನಡಿಗೆ: ಡಿ. ಬಿ. ರಜಿಯಾ / 22
- ಅತಿಥಿಗಳ ಪರಿಚಯ: ಎಚ್. ಎಸ್. ಅನುಪಮಾ / 24
- ಸಂವಿಧಾನ ತಿರುಚಲು ನಾವು ಬಿಡುವುದಿಲ್ಲ: ಮನಿಶಾ ಗುಪ್ತೆ / 29
- ಅಂಬೇಡ್ಕರ್ ಸಂವಿಧಾನ ಮತ್ತು ಲಿಂಗ ರಾಜಕಾರಣ: ವಿನಯಾ<br>ಪ್ರತಿಕ್ರಿಯೆಗಳು: ವೀಣಾ ಭಟ್, ನಿಶಾ ಗೂಳೂರು / 44
- ಸಂವಿಧಾನ ಮತ್ತು ದುಡಿಯುವ ಮಹಿಳೆ: ಶೈಲಜಾ ಟಿ., ಮೈಸೂರು<br>ಪ್ರತಿಕ್ರಿಯೆಗಳು: ಟಿ. ಪದ್ಮಶ್ರೀ, ಮೈಸೂರು, ಭಾಗೀರಥಿ ಸಾಗರ, ಲಚುಮಮ್ಮ ಹಿರೇಮನೆ / 57
- ಸಂವಿಧಾನ ಮತ್ತು ಧರ್ಮ: ರೇಶ್ಮಾ, ಶಿವಮೊಗ್ಗ<br>ಪ್ರತಿಕ್ರಿಯೆಗಳು: ವೃಂದಾ ಸಾಗರ, ನಸ್ರೀನ್ ಮಿಠಾಯಿ ಹೊಸಪೇಟೆ, ಗೀತಾ ಭದ್ರಾವತಿ / 71
- ಭಾರತದ ಸಂವಿಧಾನ ರಚನಾ ಸಭೆಯಲ್ಲಿದ್ದ ಮಹಿಳೆಯರು / 82
- ಬಿಳಿಯುಡುಗೆಯಲ್ಲಿ ಮಹಿಳೆಯರು: ಅರಿವಿನ ಪಯಣದಲ್ಲೊಂದು ಮೌನಕ್ರಾಂತಿ: ಮಂಜುಳಾ ರಾಜು / 83

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

**ಅರಿವಿನ ಮಂಥನ**


- ಸಮಾವೇಶ ಆಹ್ವಾನ ಪತ್ರಿಕೆ / 85
- ಜಾಥಾ, ಜಾಥಾ ಸಮಾವೇಶಗೊಂಡಾಗ – ಸಂಪಾದಕರು / 86
- ಜೇನಿನಂತಹ ಮಧುರ ಮಾತಿನ ಜೆನ್ನಕ್ಕ: ಎಂ. ಜಿ. ಗಾಯತ್ರಿ ಶೇಷಗಿರಿ / 88
- ಭೂದೇವಿಯ ಸಖಿ ಶ್ರೀದೇವಿ: ಅಕ್ಷತಾ ಹುಂಚದಕಟ್ಟೆ / 91
- ಹುತ್ತ ಕಟ್ಟದೆ ಮೂಡಿದ ರೂಪ ಗೌರಮ್ಮ: ವೃಂದಾ ಹೆಗಡೆ / 93
- ಎಂದೂ ಯಾರನ್ನೂ ದ್ವೇಷಿಸಬೇಡಿ: ಜನ್ನಿಬಾಯಿ / 97
- ಒಗ್ಗಟ್ಟಾದರೆ ಪರಿಹಾರ: ಶ್ರೀದೇವಿ ಶಾಮಣ್ಣ / 98
- ಸಮಾನತೆ ಮಹಿಳಾ ಹಕ್ಕಾಗಲಿ: ಜ್ಯೋತಿ ಎಸ್. / 99
- ಒಕ್ಕೂಟವೆಂಬ ಜೀವಪರ ಜಾಲ: ಗುಲಾಬಿ ಬಿಳಿಮಲೆ / 101
- ಹೆಣ್ಣು ಜೀವವೆಂಬ ಏಕ ಅಸ್ಮಿತೆ: ಸವಿತಾ ನಾಗಭೂಷಣ / 107
- ಹೆಣ್ಣು ಸಮುದಾಯವಾಗಿ ಮುನ್ನಡೆಯಬೇಕಿದೆ: ಫ್ಲೇವಿಯಾ ಆಗ್ನೆಸ್ / 112
- ಸಹತಮದ ನುಡಿಗಳು: ಶೈಲಮ್ಮ ಬಿಳಲುಕೊಪ್ಪ, ಮಂಜಮ್ಮ ಗೋಗಡಿಗೆ, ಪ್ರಿಸಿಲ್ಲಾ ಮಾರ್ಟಿಸ್, ವಿದ್ಯಾ ಕನ್ನಡಪ್ರಭ, ಚಾಂದಿನಿ, ಸುಶೀಲಮ್ಮ ಮಡಸೂರು, ಸರೋಜಾ ಬಾಕಳೆ, ಪ್ರತಿಭಾ ಗಾಟು, ಪದ್ಮಾ ಕೋಲಾರ, ಗೌರಮ್ಮ ಚರಕ / 117
- ಸಮಾವೇಶದ ನಿರ್ಣಯಗಳು, ಒಕ್ಕೂಟದ ಹಕ್ಕೊತ್ತಾಯಗಳು / 125


**ಅರಿವಿನ ಪಯಣ:**

**ಕೈಗೆ ಕೈ ಜೋಡಿಸಿದವರ ಅನುಭವಗಳು**


- ಮೆರವಣಿಗೆ ಹೊರಡುತ್ತಾರೆ: ಶೃಂಗೇಶ್ / 129
- ಕನಸು ಕಟ್ಟಿ ಕೊಟ್ಟ ಒಕ್ಕೂಟ: ಸಿರಿ ಚೆನ್ನಿ / 131
- ಒಕ್ಕೂಟವೆಂಬ ತೆರೆದ ಬಯಲು: ಕೃತಿ ಆರ್. ಪುರಪ್ಪೆಮನೆ / 133
- ನಾನು ಅರ್ಧ ಹೆಣ್ಣು: ಕಿರಣ ಗಾಜನೂರು / 136
- ಭದ್ರಾವತಿಯಲ್ಲಿ ಅರಿವಿನ ಪಯಣ: ವೀಣಾ ಭಟ್ / 137
- ನನ್ನ ಅರಿವು ಬೆಳೆಸಿದ ಅರಿವಿನ ಪಯಣ: ಪವಿತ್ರ ಜ್ಯೋತಿಗುಡ್ಡೆ / 140
- ಅನಿಷ್ಟ ಪದ್ಧತಿಯ ವಿರುದ್ಧ ಜಾಗೃತಿ ಕಾರ್ಯಕ್ರಮ: ರಾಜಪ್ಪ ಶೇಕರಮ್ಮ / 142
- ನಮ್ಮೊಳಗೊಂದು ವಿಭಿನ್ನ ಸಂಚಲನ: ಶುಭಾ ಮರವಂತೆ / 146

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping


- ವಿಚಾರಗಳ ಅರಿವು ಮೂಡಿಸಿದ ಪಯಣ: ಮಂಜುಳಾ ರಾಜು / 148
- ಉತ್ತಮ ಕಾರ್ಯಕ್ರಮ: ನಾಗವೇಣಿ, ಭದ್ರಾವತಿ / 149
- ಅರಿವು ವಿಸ್ತರಿಸಿದ ಅರಿವಿನ ಪಯಣ: ಹೆಚ್. ಬಿ. ರಾಘವೇಂದ್ರ / 150
- ಅರಿವಿನ ಪಯಣವೆಂಬ ಸೇತುವೆ: ವೃಂದಾ ಹೆಗಡೆ, ಸಾಗರ / 153
- ಜಾಗೃತಿಯ ನಡೆ: ಎಂ. ಜಿ. ಗಾಯತ್ರಿ, ತೀರ್ಥಹಳ್ಳಿ / 156
- ಬೆಳಗಲಿ ಮೌನ ಜಾಗೃತಿಯ ದೀಪ: ಹೊನ್ನಾಳಿ ಚಂದ್ರಶೇಖರ್ / 158
- ಅರಿವಿನೊಂದಿಗೆ ಪ್ರೀತಿಯ ತೊರೆ: ಭಾಸ್ಕರ್, ರಂಗಬೆಳಕು / 160

'ಹೊಸಮನುಷ್ಯ' ಪತ್ರಿಕೆಗಾಗಿ ಸಂದರ್ಶನ: ಎಚ್. ಎಸ್. ಅನುಪಮಾ / 163

ಅಂತ್ಯಕ್ಕೊಂದು ಆರಂಭ – ಸಂಪಾದಕರು / 165

ಸಹಭಾಗಿ ಸಂಘಟನೆ–ಸಂಘ ಸಂಸ್ಥೆಗಳು / 166

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಅರಿವಿನ ಚಿಂತನ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ತಿಳಿವಿನ ಹಳಿಯ ಮೇಲೆ ಸಮತೆಯ ಬಾವುಟ ಹೊತ್ತ ಅರಿವಿನ ಬಂಡಿಯ ಪಯಣ

❖ ಸಬಿತಾ ಬನ್ನಾಡಿ

**ಶಿ**ವಮೊಗ್ಗೆಯಲ್ಲಿ ಮನೀಷಾ ಗುಪ್ತೆ ಒಂದು ಮಾತು ಹೇಳಿದರು. ಮಹಿಳೆಯರಿಗೆ ಇಪ್ಪತ್ತನಾಲ್ಕು ಗಂಟೆ ಸಾಕಾಗುವುದಿಲ್ಲ, ಅದನ್ನು ನಲವತ್ತೆಂಟು, ಅರವತ್ನಾಲ್ಕು, ಹೀಗೆ ವಿಸ್ತರಿಸುತ್ತಾ ಹೋಗಬೇಕು ಅಂತ. ಅದನ್ನು ಸಾಧಿಸುವುದು ಹೇಗೆಂದರೆ, ಒಬ್ಬಳು ಈರ್ವಳಾಗುತ್ತಾ, ಮೂರ್ವಳಾಗುತ್ತಾ ಸಾಗುವುದು. ಅಂದರೆ, ಕೈಗೆ ಕೈ ಜೋಡಿಸುವುದು. ರೈಲುಬಂಡಿಯಂತೆ ಒಂದನ್ನು ಇನ್ನೊಂದು ಆತುಕೊಳ್ಳುತ್ತಾ ಮುನ್ನಡೆಯುವುದು. ಇದೊಂದು ಅಪ್ಯಾಯಮಾನವಾದ ಪರಿಕಲ್ಪನೆ. ಇದೇನು ಅಸಾಧ್ಯವೂ ಅಲ್ಲ ಅಂತ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಪ್ರಾಯೋಗಿಕವಾಗಿ ತೋರಿಸಿಕೊಡುತ್ತಲೂ ಬಂದಿದೆ. ಆ ಪಯಣ 2018ರ ಸಾಲಿನಲ್ಲಿ ಶಿವಮೊಗ್ಗವನ್ನು ತಂಗುದಾಣವಾಗಿಸಿಕೊಂಡಿತ್ತು. ಮಾರ್ಚ್ 8, 9 ರಂದು ವಿಚಾರ ಸಂಕಿರಣ, ಮೌನ ಪ್ರತಿಭಟನೆ, ಸಮಾವೇಶಗಳನ್ನು ನಡೆಸಲಾಯಿತು. ಅರಿವಿನ ಪಯಣವೆಂಬ ವಿಶಿಷ್ಟ ಕಾರ್ಯಕ್ರಮವು ಹೊಸರೂಪ ಪಡೆದು ವಿಸ್ತರಿಸಿಕೊಂಡಿತು. ಕೊಪ್ಪಳದಿಂದ ಇಲ್ಲಿಗೆ ಬಂದ ಬಂಡಿ, ನಮ್ಮ ಬೋಗಿಯನ್ನು ಜೋಡಿಸಿಕೊಂಡು ಧಾರವಾಡದೆಡೆಗೆ ಮುನ್ನಡೆಯಿತು. ಹಲವು ಅನುಭವಗಳನ್ನು, ನೆನಪುಗಳನ್ನು ಹಳಿಗುಂಟ ಚೆಲ್ಲುತ್ತಾ, ಒಡಲಲ್ಲಿಷ್ಟು ಒಳಗೊಳ್ಳುತ್ತಾ ಸಾಗಿತು.

ಅಕ್ಕಮಹಾದೇವಿಯೆಂಬ ಮಹಾನದಿಯೊಂದು ಜನಿಸಿದ ಜಿಲ್ಲೆ ಶಿವಮೊಗ್ಗ. ಈಗಲೂ ಬಿಡುಗಡೆಯ ಮಂತ್ರ ಜಪಿಸುವ ಪ್ರತಿ ಮನದಲ್ಲೂ ಚಿಲುಮೆಯಾಗಿ ತುಂಬಿಕೊಳ್ಳುತ್ತಲೇ ಇದ್ದಾಳೆ. ಅವಳನ್ನು ಭಕ್ತೆಯೆಂತಲೋ, ಶರಣೆಯೆಂತಲೋ, ವಚನಕಾರ್ತಿಯೆಂತಲೋ ಬಂಧಿಸ ಹೊರಟರೆ ಆಗಲೂ ಅವಳು ನಮ್ಮ ಕೈಯಳವಲ್ಲದೆ ತಪ್ಪಿಸಿಕೊಳ್ಳುತ್ತಾಳೆ. ಅರಿವಿನ ಸ್ಫೋಟ ಆಕೆ. ತಿಳಿವಿನ ಹಾದಿ ಆಕೆ. ಖಂಡಿತಾ ಅವಳದು ಒಂಟಿ ಹಾದಿಯಲ್ಲ, ಒಂಟಿತನದ ಹಾದಿಯೂ ಅಲ್ಲ. ಚೈತನ್ಯವನ್ನು ನಾಶಮಾಡುವ ವ್ಯವಸ್ಥೆಯನ್ನು ಧಿಕ್ಕರಿಸುವ ದಿಟ್ಟನಡೆ ಅವಳದು. ಅವಳ ನಡೆ ಯಾವುದೇ ವ್ಯಕ್ತಿಗಳ ವಿರುದ್ಧವಾಗಿರಲೇ ಇಲ್ಲ. ಆದರೆ ತಮ್ಮ ವ್ಯಕ್ತಿಗತ ಆಕಾಂಕ್ಷೆಗಳಿಗಾಗಿ ಇನ್ನೊಬ್ಬರನ್ನು ನಿರ್ಬಂಧಿಸಹೊರಟವರನ್ನು ನಿರಾಕರಿಸಿದ ನಡೆಯಾಗಿತ್ತು. ಅಕ್ಕನ ಕಣ್ಬೆಳಕಿನಲ್ಲಿ ಒಕ್ಕೂಟವೂ ಕೂಡ ಈ ಸ್ಪಷ್ಟತೆಯೊಂದಿಗೇ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ತನ್ನ ಪಯಣ ಮುಂದುವರಿಸುತ್ತಿದೆ. ಈ ಸ್ಪಷ್ಟತೆ ಮೊನ್ನೆ ಮೊನ್ನೆ ಬಂದೂಕಿಗೆ ಎದೆಯೊಡ್ಡಿದ ಶಿವಮೊಗ್ಗೆಯ ಕಳ್ಳುಬಳ್ಳಿ ಗೌರಿಯಲ್ಲೂ ಇತ್ತು. ಹೀಗಾಗಿ ವಿಚಾರ ಸಂಕಿರಣದ ವೇದಿಕೆಗೆ ಆಕೆಯ ಹೆಸರಿಡಲಾಗಿತ್ತು. ಸಮಾವೇಶದ ವೇದಿಕೆಗೆ ಮತ್ತೊಬ್ಬ ಹಿರಿಯ ಚೇತನ, ಇಳಿವಯಸ್ಸಿನಲ್ಲೂ ನ್ಯಾಯಕ್ಕಾಗಿ ರಸ್ತೆಗಿಳಿಯುತ್ತಿದ್ದ ಪೊನ್ನಮ್ಮಾಳ್ ಹೆಸರಿಡಲಾಗಿತ್ತು. ಈ ಹಿರಿಯಕ್ಕಂದಿರನ್ನು ಬೆನ್ನಿಗಿಟ್ಟುಕೊಂಡು ಶಿವಮೊಗ್ಗೆಯ ರಸ್ತೆಯುದ್ದಕ್ಕೂ ಕೈಗೆ ಕೈ ಜೋಡಿಸಿ ಸ್ತ್ರೀಪರ ಮನಸ್ಸುಗಳು ನಡೆದಿದ್ದು ಐತಿಹಾಸಿಕ ಸಂಚಲನವಾಗಿತ್ತು. ಅದೀಗ ನದಿಯ ರಭಸದ ಹರಿವಿನಂತೆ ಕಣ್ಣಿಗೆ ಕಾಣುತ್ತಿಲ್ಲವಾದರೂ, ಬೊಗಸೆಯಲ್ಲಿ ಭರವಸೆಯನ್ನು ಕಾಪಿಟ್ಟುಕೊಂಡಿದೆ ಎಂಬ ಬಗೆಗೆ ಸಂಶಯವಿಲ್ಲ.

***

ಸ್ವಪ್ರಜ್ಞೆ ಎಂಬುದು ಮಹಿಳಾ ಜಾಗೃತಿಯ ಮೊದಲ ಮೆಟ್ಟಿಲು. ಈ ಜಾಗೃತಿ ಮೂಡಿಸದಂತೆ ಮಾಡುವುದೇ ಅಧಿಕಾರಸ್ಥರ ಹುನ್ನಾರವಾಗಿರುತ್ತದೆ. ಈ ಕಾರಣಕ್ಕೇ ಹೆಣ್ಣನ್ನು ಸದಾ ಒಂದಿಲ್ಲೊಂದು ಅಂಕೆಯಲ್ಲಿ ಇಡುವುದನ್ನೇ ಮೌಲ್ಯವಾಗಿಸಲಾಗಿದೆ. ಇದು ಹೆಣ್ಣಿನ ದೇಹದ ಮೇಲೆ ಗಂಡಿಗೆ ಅನಿರ್ಬಂಧಿತ ಒಪ್ಪಿಗೆಯನ್ನು ಕೊಡಿಸಿದೆ. ಅವನು ಅದನ್ನು ಅಸ್ತ್ರವಾಗಿಸಿ ದಾಳಿ ಮಾಡಿದಾಗ ಅವನನ್ನು ಶಿಕ್ಷಿಸದೇ ಅವನಿಗೇ ಹೆಣ್ಣಿನ ರಕ್ಷಣೆಯ ಕವಚ ನೀಡಲಾಗಿದೆ. ರಕ್ಷಣೆಯ ಹೆಸರಿನಲ್ಲಿ ಅವಳನ್ನು ಅಸುರಕ್ಷಿತಳಾಗಿಸಿ, ಅಭದ್ರತೆಯನ್ನು ಹುಟ್ಟಿಸಿ, ಅಸಹಾಯಕತೆಯ ಭಾವ ಅವಳಲ್ಲಿ ಮೂಡಿ ಅಧೈರ್ಯವನ್ನು ಹುಟ್ಟಿಸುತ್ತದೆ. ಈ ಬಿಡಿಸಿಕೊಳ್ಳಲಾರದ ಬಲೆಯಲ್ಲಿ ಸಿಲುಕುವ ಅಪಾಯದಿಂದ ಪಾರಾಗುವ ದಾರಿಯೆಂದರೆ ಸೋದರಿತ್ವದ ನೆಲೆಯಲ್ಲಿ ಒಗ್ಗೂಡುವುದು, ನಮ್ಮ ಕುಟುಂಬವನ್ನು ವಿಸ್ತರಿಸಿಕೊಳ್ಳುವುದು, ಅರಿವಿನ ದೊಂದಿಯನ್ನು ಹಿಡಿದು ಮುನ್ನಡೆಯುವುದು. ಅಹಿಂಸೆ ಮತ್ತು ಸಮತೆಯನ್ನು ಧ್ಯೇಯವಾಗಿಸಿಕೊಂಡ, ಈ ದಾರಿಯಲ್ಲಿ ನಂಬಿಕೆ ಇರುವ ಸ್ತ್ರೀ ಪುರುಷರೆಲ್ಲರೂ ಒಗ್ಗೂಡಿ ಮಾಡುತ್ತಿರುವ ಕಾಯಕವಿದು.

ಕರ್ನಾಟಕದ ಪ್ರತಿ ಜಿಲ್ಲೆಯೂ ಅನನ್ಯ ಲಕ್ಷಣಗಳನ್ನು ಒಳಗೊಂಡಿದೆ. ಮಲೆನಾಡಿನ ಹಸಿರಿನೊಳಗೆ ಅಡಗಿ ಕುಳಿತಂತೆ ಕಾಣುವ ಶಿವಮೊಗ್ಗೆಯಲ್ಲಿ ಈಚೀಚೆಗೆ ಧಗೆ ಹೆಚ್ಚುತ್ತಿದೆ. ಅಕ್ಕನೊಂದಿಗೆ ಅಲ್ಲಮ, ಕುವೆಂಪುರಂತಹ ಚಿಂತಕರು, ಸಹ್ಯಾದ್ರಿಯ ಮಲೆಯ ಸಾಲು, ತುಂಗೆ, ಭದ್ರೆ, ಶರಾವತಿ ಮೊದಲಾದ ಹೊಳೆಸಾಲುಗಳ ಕಲರವಗಳ ಈ ಬೀಡು ಹಲವು ಸವಾಲುಗಳನ್ನು ಎದುರಿಸುತ್ತಿದೆ. ತಿಳಿನೀರಿನ ಆಳದಲ್ಲಿ ಮಡುಗಟ್ಟಿದ ಬಗ್ಗಡದಂತೆ ಕಣ್ಣಿನ ನೋಟಕ್ಕೆ ಸಿಕ್ಕದೇ ಇದ್ದರೂ ಹೃದಯದ ನೋಟಕ್ಕೆ ಸಿಕ್ಕೇ ಸಿಗುತ್ತದೆ. ಹೆಣ್ಣುಮಕ್ಕಳ ನಾಪತ್ತೆ ಇಲ್ಲೂ ಆಗುತ್ತಿದೆ. ದಿನಪತ್ರಿಕೆಗಳಲ್ಲಿ ಆಗಾಗ ಪತ್ನಿಯ ಮೇಲಿನ ಅನುಮಾನದಿಂದ ಪತಿಯಿಂದಲೇ ಹತ್ಯೆ ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗುತ್ತಲೇ ಇರುತ್ತದೆ. ಹೊಟ್ಟೆಪಾಡಿಗಾಗಿ ದೇಹ ಮಾರಿಕೊಳ್ಳುವವರು ಇಲ್ಲೂ ಇದ್ದಾರೆ. ಸ್ವ ಸಹಾಯ ಸಂಘಗಳಿಂದ ಸಾಲ ಪಡೆದು ಮನೆಗೆ ನೀಡಿ ಅದನ್ನು ತೀರಿಸಲೆಂದೇ ಜೀವ ತೇಯುವವರ ದೊಡ್ಡ ಯಾದಿಯೇ ಇಲ್ಲಿದೆ. ಕೋಮುಜ್ವಾಲೆ ಭತ್ತದ ಹೊಟ್ಟಿಗೆ ಬಿದ್ದ ಬೆಂಕಿಯಂತೆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಒಳಗೊಳಗೇ ದಹಿಸುತ್ತಿದೆ. ನಿಜ, ನಮ್ಮ ಸಂವಿಧಾನ ಮತ್ತು ಕಾನೂನಿನಲ್ಲಿ ನಮಗೆ ಹಲವು ಆಸರೆಗಳಿವೆ. ಆದರೆ ಅವು ಜಾರಿಯಲ್ಲಿವೆಯೇ ಎಂಬುದು ಪ್ರಶ್ನೆ. ಸಂವಿಧಾನದಾಚೆಗೆ ನಮ್ಮನ್ನು ಆಳುತ್ತಿರುವುದು ಅಲಿಖಿತ ಸಂವಿಧಾನವೇ. ಮರ್ಯಾದೆ, ನೀತಿ ನಿಯಮ, ವಿಧೇಯತೆ, ಆಶ್ರಯ, ಆಚರಣೆ ಎಂಬೆಲ್ಲ ಹೆಸರು ಪರದೆಯ ಹಿಂದುಗಡೆ ವೇಷ ಮರೆಸಿಕೊಂಡು ಜಾರಿಯಲ್ಲಿವೆ. ಹೆಣ್ಣಿನಿಂದಲೂ ಒಪ್ಪಿಗೆ ಸಂಪಾದಿಸಿವೆ. ಇದರಿಂದ ಪಾರಾಗಲು ದಾರಿ ಹುಡುಕುತ್ತಿರುವಾಗಲೇ ಇದೀಗ ಸಂವಿಧಾನಕ್ಕೇ ಧಕ್ಕೆ ಬರುವ ಹೊಸ ಸಂಕಟವೂ ಇದಿರಾಗಿದೆ. ಸಂವಿಧಾನದ ಬಲದಿಂದಲಾದರೂ ಅನ್ಯಾಯಗಳನ್ನು ಗೆಲ್ಲಬಹುದು ಎಂಬ ಸಣ್ಣ ಭರವಸೆಯನ್ನೂ ಕತ್ತು ಹಿಸುಕಲು ಹೊರಟ ಈ ಸಂದರ್ಭದಲ್ಲಿ ಸಂವಿಧಾನವನ್ನು ಎತ್ತಿ ಹಿಡಿಯುವುದು ನಮ್ಮ ಹೊಣೆಗಾರಿಕೆಯಾಗಿದೆ. ಹೀಗಾಗಿ ಈ ಬಾರಿ 'ಸಂವಿಧಾನ ಮತ್ತು ಮಹಿಳೆ' ಎಂಬ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಪೂನಾದಿಂದ ಮನೀಷಾ ಗುಪ್ತೆ ಮತ್ತು ಮುಂಬೈನಿಂದ ಫ್ಲೇವಿಯಾ ಆಗ್ನೆಸ್ ನಮ್ಮೊಡನೆ ಸೇರಿಕೊಂಡರು. ಕನ್ನಡದ ನೆಲದ ಹಲವು ಗೆಳತಿಯರು ಜೊತೆಯಾದರು.

ಕಣ್ಣಿಗೆ ಕಾಣುವ ಮತ್ತು ಕಣ್ಣಿಗೆ ಕಾಣದ ಹಿಂಸೆಗಳ ವಿರುದ್ಧದ ಜಾಗೃತಿಯ ಅಭಿಯಾನವನ್ನು 'ಪ್ರೀತಿಯ ರಾಜಕಾರಣ'ವಾಗಿಸಿರುವ ಒಕ್ಕೂಟದ ಗೆಳತಿಯರು ಅದನ್ನು ಶಿವಮೊಗ್ಗೆಗೆ ತಂದಿದ್ದಕ್ಕಾಗಿ ಅವರಿಗೆ ಪ್ರೀತಿಯ ಅಪ್ಪುಗೆಯನ್ನು ನೀಡುತ್ತಾ, ಇಲ್ಲಿ ವಿಶೇಷವಾಗಿ ರೂಪುಗೊಂಡ ಅರಿವಿನ ಪಯಣದ ಕುರಿತು ಒಂದಿಷ್ಟು ಮಾತುಗಳನ್ನು ಹೇಳಬಯಸುತ್ತೇನೆ.

ಅರಿವಿನ ಪಯಣ: ಹೆಣ್ಣಿನ ಮೇಲಾಗುತ್ತಿರುವ ದೌರ್ಜನ್ಯವನ್ನು ವಿರೋಧಿಸುವ, ಪ್ರಶ್ನಿಸುವ ಮನೋಭಾವವನ್ನು ಜಗತ್ತಿನಾದ್ಯಂತ ಹಲವರು ಹೊಂದಿದ್ದೂ ಇಂದಿಗೂ ಇದು ಕಡಿಮೆಯಾಗದೇ ಇರುವುದರ ಹಿಂದೆ ಕೆಲಸ ಮಾಡುತ್ತಿರುವ ಸಂಗತಿ ಯಾವುದು? ಬಹುಶಃ ಇದು ಎಲ್ಲ ಸೂಕ್ಷ್ಮಜ್ಞರ ಪ್ರಶ್ನೆಯೂ ಹೌದು. ಲಿಂಗ ತಾರತಮ್ಯವನ್ನು ಸಂಘಟಿತವಾಗಿಯೋ, ವೈಯಕ್ತಿಕ ನೆಲೆಯಲ್ಲೋ ನಿರಾಕರಿಸಿದ ಹಲವು ಸಂದರ್ಭಗಳನ್ನು ನಾವು ಇತಿಹಾಸದಲ್ಲಿ ಗಮನಿಸಿರುತ್ತೇವೆ. ಅದನ್ನು ಲಿಂಗ ತಾರತಮ್ಯ ಎಂಬ ಹೆಸರಿನಿಂದ ಕರೆಯದೆಯೂ ಆ ಕೆಲಸವನ್ನು ಮಾಡಿರುವ ಉಲ್ಲೇಖಗಳು ನಮಗೆ ಸಿಗುತ್ತವೆ. 'ಅರಿವಿಂಗೆ ಗಂಡು ಹೆಣ್ಣೆಂಬ ಒಡಲುಂಟೆ?' ಎಂಬ ವಚನಕಾರರ ಜ್ಞಾನ ಈ ರೀತಿಯದು. ಪಾಶ್ಚಾತ್ಯ ಜಗತ್ತಿನಲ್ಲಿ ಇದೊಂದು ಸಿದ್ಧಾಂತವಾಗಿ ರೂಪುಗೊಂಡು ಮುನ್ನೆಲೆಗೆ ಬಂದು 'ಸ್ತ್ರೀವಾದ' ಎಂಬ ಹೆಸರು ಪಡೆದ ಮೇಲೆ ಇದಕ್ಕೊಂದು ಸಾಂಸ್ಥಿಕ ಅಧಿಕೃತತೆ ಕೂಡ ದೊರೆಯಿತು. ಹಾಗೆಯೇ ಅದರೆಡೆಗಿನ ಅನುಮಾನದ ಹುತ್ತಗಳೂ ಹಲವರನ್ನು ಕಾಡಿದ್ದಿದೆ. ಈಗಲೂ ಕಾಡುತ್ತಲಿದೆ. ಈಗಲೂ ಪುರುಷ ಚಿಂತನೆಗಳನ್ನು 'ಮೌಲ್ಯ'ವಾಗಿಸಿಕೊಂಡ 'ಸುಶಿಕ್ಷಿತ' ಹೆಣ್ಣುಮಕ್ಕಳು ಸ್ಟೈಲ್ ಆಗಿ 'ಯು ನೋ, ಐ ಹೇಟ್ ದ ಫೆಮಿನಿಸ್ಟ್ಸ್' ಅಂತಲೋ, 'ಬೀದಿಗೆ ಹೋಗಿ ಫ್ಲೆಕ್ಸ್ ಹಿಡಿದುಕೊಂಡು ಘೋಷಣೆ ಕೂಗಿದರೆ ಹೆಂಗಸರು ಉದ್ಧಾರ ಆಗಿ ಬಿಡ್ತಾರಾ?' ಅಂತಲೋ ಹೇಳುತ್ತಾ ಗಂಡಸರ 'ಮೆಚ್ಚುಗೆ' ಪಡೆಯಲು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಒದ್ದಾಡುವುದು ನಿಂತಿಲ್ಲ. ಬಹುಶಃ ನಿಲ್ಲುವುದೂ ಇಲ್ಲ. ಈಗ ನಮ್ಮ ಗುರಿ ಇವರಿಗೆಲ್ಲಾ ಉತ್ತರ ಕೊಡುವುದರಲ್ಲೇ ದಣಿಯುವುದೂ ಅಲ್ಲ. ಹಾಗಾದರೆ ನಾವು ಮಾಡಬೇಕಿರುವುದು ಏನು? ಕಣ್ಣೆದುರೇ ಪುಟ್ಟ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರವಾಗುತ್ತಿರುವಾಗಲೂ ಕಣ್ಣುಮುಚ್ಚಿಕೊಂಡು ಕುಳಿತು 'ಏನೂ ಆಗುತ್ತಿಲ್ಲ' ಎಂಬ ಸುಳ್ಳು ಲೋಕದಲ್ಲಿ ಕಳೆದುಹೋಗಬೇಕೇ? ಹೆಣ್ಣುಮಕ್ಕಳೆಲ್ಲ ಸಂಘಟಿತರಾಗಿ ನಿರಂತರ ಚಳುವಳಿಗಳಲ್ಲಿ ತೊಡಗಿಸಿಕೊಳ್ಳಬೇಕೇ? ಅಥವಾ ಇದರಾಚೆಗೂ ಕೆಲವು ದಾರಿಗಳನ್ನು ಹುಡುಕಿಕೊಳ್ಳಬೇಕೇ? ಎನ್ನುವ ಪ್ರಶ್ನೆ ಲಿಂಗಾತೀತವಾಗಿ ಎಲ್ಲ ಸೂಕ್ಷ್ಮಮತಿಗಳನ್ನು ಕಾಡುತ್ತಿರುವುದರಲ್ಲಿ ಯಾವ ಸಂಶಯವೂ ಇಲ್ಲ. ಹೀಗೆ ಯೋಚಿಸುತ್ತಿರುವ ಎಲ್ಲ ಹೆಣ್ಣು, ಗಂಡು, ಟ್ರಾನ್ಸ್‌ಜೆಂಡರ್ಸ್ ಒಂದು ವೇದಿಕೆಯಡಿ ಸೇರುವುದು ಮೊದಲು ಆಗಬೇಕಿರುವ ಕೆಲಸ. ಇದು ತಿಳಿದಿದ್ದೂ ಇದನ್ನು ಮಾಡುವವರು ಯಾರು ಎಂಬುದು ಎಲ್ಲಕ್ಕಿಂತ ದೊಡ್ಡ ಸಂಗತಿ. ಇಂತಹ ಒಂದು ಸವಾಲನ್ನು 'ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ' ತನ್ನ ಒಡಲಲ್ಲಿ ಹಾಕಿಕೊಂಡು ಕೆಲಸ ಮಾಡತೊಡಗಿದೆ. ಭಿನ್ನತೆಯಲ್ಲಿ ನಂಬಿಕೆ ಇರುವ ಈ ಒಕ್ಕೂಟ ಭಿನ್ನತೆಯನ್ನು ಉಳಿಸಿಕೊಂಡೂ ಒಗ್ಗೂಡಿ ಕೆಲಸ ಮಾಡುವುದು ಸಾಧ್ಯ ಎಂದು ಗಾಢವಾಗಿ ನಂಬಿಕೆ ಇಟ್ಟುಕೊಂಡಿದೆ. ಅಂದರೆ, ಭಿನ್ನತೆಯಾಚೆಗಿನ ಸಾಮ್ಯತೆಯನ್ನು ಗುರುತಿಸಿ ಅವರೊಂದಿಗೆ ಅದು ಕೆಲಸ ಮಾಡುತ್ತದೆ. ಆ ಸಾಮ್ಯತೆಯೆಂದರೆ 'ಎಲ್ಲ ರೀತಿಯ ತರತಮಗಳನ್ನು ನಿರಾಕರಿಸುವ, ಜೀವಪರ ಕಾಳಜಿಯಿರುವ, ಅಹಿಂಸೆಯ ದಾರಿಯಲ್ಲಿ ಮುನ್ನಡೆಯುವ' ಯೋಚನಾಕ್ರಮವನ್ನು ಹೊಂದುವುದು. ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಹೋರಾಟಗಳೆಂದರೆ ಒಣ ಸಿದ್ಧಾಂತ, ಜಡ ಚಿಂತನೆಗಳಾಗದೆ ಚೈತನ್ಯಮುಖಿಯಾಗಿ ಇರಬೇಕು ಎನ್ನುವುದನ್ನು ಬಾಳುವುದು.

ಈ ಹಿನ್ನೆಲೆಯಲ್ಲಿ ಮೊದಲ ಹೆಜ್ಜೆಯೆಂದರೆ ನಾವು ತಲುಪಬೇಕಿರುವುದು ಯಾರನ್ನು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳುವುದು. ಜಾಗೃತಿಯ ಕೊರತೆ ಖಂಡಿತ ನಮ್ಮ ಜನ ಮಾನಸದಲ್ಲಿ ಇದೆ. ಇದೂ ಕೂಡ ಪುರುಷಾಧಿಕಾರ ಪರ ಯೋಚನೆಗಳು ಆಳವಾಗಿ ಬೇರು ಬಿಡಲು ಕಾರಣ. ಎಷ್ಟೋ ಸಲ ತಾವು ಏನು ಮಾಡುತ್ತಿದ್ದೇವೆ, ಇದು ಯಾಕೆ ತಪ್ಪು ಎಂಬುದೂ ಕೂಡ ಹಲವರಿಗೆ ಗೊತ್ತಿರುವುದೇ ಇಲ್ಲ. ಶಿವಮೊಗ್ಗ ಸಮಾವೇಶಕ್ಕೆ ಎಂಟು ತಿಂಗಳಿಗೂ ಮೊದಲೇ ಈ ಕುರಿತು ಚಿಂತಿಸಲು ಒಕ್ಕೂಟವು ಸಭೆಯೊಂದನ್ನು ಕರೆಯಿತು. ಅದರಲ್ಲಿ ಸುಮಾರು ಮೂವತ್ತು ಜನ ಪಾಲ್ಗೊಂಡಿದ್ದರು. ಅಲ್ಲಿನ ಚರ್ಚೆಯಿಂದ ತೆಗೆದುಕೊಂಡ ಮೊದಲ ನಿರ್ಣಯವೆಂದರೆ ಹೆಣ್ಣುಮಕ್ಕಳಲ್ಲಿ ಅರಿವು ಮೂಡಿಸುವುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಕೆಲವೊಮ್ಮೆ ಅದಕ್ಕಿಂತ ಮುಖ್ಯವಾಗಿ ಗಂಡು ಮಕ್ಕಳನ್ನೂ ತಲುಪುವುದು. ವೈಯಕ್ತಿಕವಾಗಿ ನನಗೆ ಈ ಆಲೋಚನೆ ದಶಕಗಳಿಂದ ಇದ್ದರೂ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗಿರಲಿಲ್ಲ. ಹೀಗಾಗಿ ನನ್ನನ್ನು ಮೊದಲು ಸೆಳೆದಿದ್ದು ಈ ಅಂಶ. ಇದಕ್ಕಾಗಿ ನಾವು ಮೊದಲು ತಲುಪಬೇಕಾಗಿರುವುದು ಹೈಸ್ಕೂಲು ಹಂತದಲ್ಲಿ ಓದುತ್ತಿರುವ ಮಕ್ಕಳನ್ನು. ಜೊತೆ ಜೊತೆಗೇ ಪಿ.ಯು.ಸಿ ಹಾಗೂ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಕಾಲೇಜು ಮಕ್ಕಳನ್ನೂ ಭೇಟಿಯಾಗುವುದು ಎಂದು ನಿರ್ಧರಿಸಲಾಯಿತು. ಅಲ್ಲಿ ಸೇರಿದ್ದವರ ಸಂಪರ್ಕದ ಮೂಲಕವೇ ಮೊದಲ ಹೆಜ್ಜೆಗಳನ್ನು ಇಡುವುದು ಎಂದು ನಿರ್ಧರಿಸಲಾಯಿತು.

ಇದು ನಿಜಕ್ಕೂ ಅಚ್ಚರಿ. ನಮ್ಮ ದಾರಿ ಸರಿಯಾಗಿತ್ತು. ಹಳ್ಳಿ, ನಗರ ಎಂಬ ಭೇದವಿಲ್ಲದೆ ಒಕ್ಕೂಟದ ತಂಡಗಳು ತಲುಪಿದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಸುಮಾರು ಇಪ್ಪತ್ತರಿಂದ ಇಪ್ಪತ್ತೈದು ಸಾವಿರದಷ್ಟು. ಇಲ್ಲಿ ಸಂಖ್ಯೆ ಮುಖ್ಯವಲ್ಲ. ಆದರೆ ಆ ಮಕ್ಕಳಿಗೆ ಇದು ಎಷ್ಟು ಅವಶ್ಯಕವಾಗಿತ್ತು ಅನ್ನುವುದು ಮುಖ್ಯ. ಶಿವಮೊಗ್ಗದ 'ರಂಗ ಬೆಳಕು' ತಂಡದ ಸದಸ್ಯರ ಮನಮುಟ್ಟುವ ಹಾಡು, ವಾಣಿಪೆರಿಯೋಡಿ, ಪವಿತ್ರ, ಸರಸ್ವತಿ ಮೊದಲಾದವರು ಚಿಕ್ಕ ಚಿಕ್ಕ ಸ್ಕಿಟ್‌ಗಳ ಮೂಲಕ ನೇರವಾಗಿ ನೋಡುಗರ ಯೋಚನಾ ಕ್ರಮದ ಮೇಲೇ ಮಾಡುತ್ತಿದ್ದ ಪರಿಣಾಮ,  ರೇಖಾಂಬ, ಮೈತ್ರಾ, ಕಿರಣ್‌ಗಾಜನೂರು ಇವರ ಗದ್ಯ ನಿರೂಪಣೆಗಳು ವಿಷಯವನ್ನು ಸ್ಪಷ್ಟ ಪಡಿಸುತ್ತಾ ಹೋಗಿದ್ದು, ತೋರಿಸುತ್ತಿದ್ದ  'ದಟ್ ಡೇ ಆಫ್ಟರ್ ಎವ್ರೀ ಡೇ' ಎಂಬ ಸಿನಿಮಾದ ಪುಟ್ಟ ವಿಡಿಯೋಗಳು ಮಕ್ಕಳು ತಮ್ಮನ್ನು ತಾವು ಅರಿಯುವಂತೆ ಮಾಡಿದ್ದು ಇದರ ಹೆಗ್ಗಳಿಕೆ. ಪ್ರತಿಭಾ ಎಂ.ವಿ, ಚಾರ್ವಾಕ ರಾಘವೇಂದ್ರ, ವೃಂದಾ, ಕೃತಿ, ಸಿ. ಗೀತಾ, ನಾಗವೇಣಿ, ಡಾ. ವೀಣಾ ಭಟ್, ಮಂಜುಳಾ ರಾಜು, ಗಾಯತ್ರಿ ತೀರ್ಥಹಳ್ಳಿ, ಪದ್ಮಾಕ್ಷಿ ಮೊದಲಾದವರು ಇದರಲ್ಲಿ ಸೇರಿಕೊಳ್ಳುತ್ತಾ ಮಾಡಿದ ಅಪೂರ್ವ ಸಂಘಟನೆಗಳು ಈ ಕಾರ್ಯಕ್ರಮವನ್ನು ಅಲೆ ಅಲೆಯಾಗಿ ಹೊಮ್ಮುವಂತೆ ಮಾಡಿತು. ಇದಕ್ಕಾಗಿ ಮಾಡಿಸಿದ 'ಅರಿವಿನ ಪಯಣ' ಎಂಬ ಇಪ್ಪತ್ತು ರೂಪಾಯಿಯ ಕಿರು ಹೊತ್ತಿಗೆಯ ಸಾವಿರಾರು ಮುದ್ರಣಗಳನ್ನು ಶೃಂಗೇಶ್ ಅವರು ಸತತವಾಗಿ ಬೇಸರವಿಲ್ಲದೆ, ಕೇಳಿದಾಗಲೆಲ್ಲ ಮಾಡಿಕೊಡುತ್ತಿದ್ದರು.

ಹೀಗೆ ಹೊರಟ ಪಯಣ ಹೋದಲ್ಲೆಲ್ಲಾ ತನ್ನ ಗುರಿಯನ್ನು ಮುಟ್ಟಿದೆ ಎಂಬುದು ಅಲ್ಲಿ ವ್ಯಕ್ತವಾಗುತ್ತಿದ್ದ ಪ್ರತಿಕ್ರಿಯೆಯಿಂದ ತಿಳಿಯುತ್ತಿತ್ತು. ಒಕ್ಕೂಟದ ಗೆಳೆಯರ ಆ ಅನುಭವಗಳನ್ನು ಇಲ್ಲಿ ಹಂಚಿಕೊಳ್ಳಬಯಸುವೆ. ಒಂದೆಡೆ ಒಬ್ಬ ಹುಡುಗ, "ಇದುವರೆಗೂ ನಾನು ಹುಡುಗಿಯರ ಮೇಲೆ ಆಗುವುದಕ್ಕೆಲ್ಲಾ ಹುಡುಗಿಯರೇ ಕಾರಣ ಅಂದು ಕೊಂಡಿದ್ದೆ. ಅವರು ಸರಿ ಇದ್ದರೆ ಏನೂ ಆಗುವುದಿಲ್ಲ ಅಂದುಕೊಂಡಿದ್ದೆ. ಎಲ್ಲಾ ಪ್ರಾಬ್ಲೆಮ್ ಅವರದ್ದೇ ಎಂದುಕೊಂಡಿದ್ದ ನನಗೆ ಇವತ್ತು ಗೊತ್ತಾಯ್ತು, ಪ್ರಾಬ್ಲೆಮ್ ಅವರದ್ದಲ್ಲ, ನಮ್ಮದೇ ಅಂತ" ಎಂದ. ಇನ್ನೊಂದೆಡೆ ಒಬ್ಬ ಹುಡುಗ ಪ್ರತಿಕ್ರಿಯೆ ಕೊಡಲು ಪ್ರಯತ್ನಿಸಿ ಚಡಪಡಿಸುತ್ತಾ ಇದ್ದ. ಒತ್ತಾಯಿಸಿ ಕೇಳಿದಾಗ ಅಳುವುದಕ್ಕೇ ಶುರುಮಾಡಿದ. ಕೊನೆಗೂ ಮಾತಾಡಿದ ಅವನು, ತನ್ನ ತಂದೆ ನಾಲ್ಕು ವರ್ಷಗಳ ಹಿಂದೆ ತಮ್ಮನ್ನು ಬಿಟ್ಟು ಹೋಗಿದ್ದಾನೆ. ಆಗಿನಿಂದ ಅಮ್ಮನೇ ನಮ್ಮನ್ನು ಸಾಕುತ್ತಿದ್ದಾಳೆ. ಆದರೆ ಊರವರೆಲ್ಲಾ ತನ್ನ ತಾಯಿಯ ಬಗ್ಗೆ ಕೆಟ್ಟದಾಗಿ ಮಾತಾಡುತ್ತಿದ್ದಾರೆ ಎಂದು ಬಿಕ್ಕಿಬಿಕ್ಕಿ ಅತ್ತ ಆತ, ನನಗೆ ಇವತ್ತು ಗೊತ್ತಾಯ್ತು. ತನ್ನ ಅಮ್ಮನ ತಪ್ಪು ಏನೂ ಇಲ್ಲ ಅಂದ. ಆತನ ಈ ತಪ್ಪೊಪ್ಪಿಗೆಗೆ ಅಲ್ಲಿದ್ದ ಸಾವಿರಾರು ಮಕ್ಕಳು ಬೆಂಬಲ ನೀಡಿ ನಾವೆಲ್ಲಾ ನಿನ್ನೊಂದಿಗೆ ಮತ್ತು ನಿನ್ನ ತಾಯಿಯೊಂದಿಗೆ ಇದ್ದೇವೆ ಎಂದು ಹೇಳುವಂತೆ ಮಾಡಿದ ಆ ಅಪೂರ್ವ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ದೃಶ್ಯ ಮರೆಯಲಾರದ್ದು. ಇನ್ನೂ ಕೆಲವೆಡೆ ಹುಡುಗರು ನಾವೆಲ್ಲಾ ತಿದ್ದಿಕೊಳ್ಳಬೇಕಾದ್ದು ಎಷ್ಟೊಂದು ಇದೆ ಎಂದು ಹೇಳಿದ್ದಾರೆ. ಇನ್ನೊಂದು ವಿಶಿಷ್ಟ ಘಟನೆಯೂ ನಡೆದಿದ್ದನ್ನು ಇಲ್ಲಿ ಹಂಚಿಕೊಳ್ಳಬೇಕು. ಈ ಕಿರು ನಾಟಕದ ಕೊನೆಯಲ್ಲಿ ಒಂದೆಡೆ ಇದರ ಅಂತ್ಯವನ್ನು ಸ್ವಲ್ಪ ಮಾರ್ಪಡಿಸಲಾಯಿತು. ಕೊನೆಯಲ್ಲಿ ನಾಯಕಿ 'ಅಬ್ಬ, ನಾನು ಇದನ್ನೆಲ್ಲಾ ನನ್ನ ಗಂಡನಿಗೆ ಹೇಳಿ ಹಗುರಾದೆ' ಅನ್ನುತ್ತಾಳೆ. ಅಲ್ಲಿನ ಪಿ.ಯು.ಸಿ ಓದುತ್ತಿರುವ ಹುಡುಗನೊಬ್ಬ ಪ್ರತಿಕ್ರಿಯೆಯ ವೇಳೆಗೆ ಈ ಅಂತ್ಯದ ಕುರಿತು ಹೇಳಿದ್ದು ಭಿನ್ನವಾಗಿತ್ತು. 'ಮೇಡಂ, ಗಂಡಸರು ನೀವು ಹೇಳಿದಷ್ಟು ಒಳ್ಳೆಯವರಿರುವುದಿಲ್ಲ. ಇಲ್ಲಿ ಅವಳೇನೋ ಹಗುರಾದಳು. ಆದರೆ ಹೀಗೆ ಹೇಳುವುದರಿಂದಲೇ ಎಷ್ಟೋ ಮದುವೆಗಳು ಮುರಿದು ಹೋಗಬಹುದು.' ಇಲ್ಲಿ ಗಮನಿಸಬೇಕಾದ್ದು ಆ ಹುಡುಗ ಹಾಗೆ ಹೇಳುವಾಗ ಅವನಿಗೆ ಯಾವ ದುರುದ್ದೇಶಗಳೂ ಇದ್ದಿರಲಿಲ್ಲ. ಬದಲಿಗೆ ಕಾಳಜಿ ಇತ್ತು. ಗಂಡಸರು ವರ್ತಿಸುವ ರೀತಿಯ ಕುರಿತು ಆತನಿಗೊಂದು ಸಿಟ್ಟಿತ್ತು. ಇಂತಹ ಹಲವು ಚರ್ಚೆಗಳು ಈ ಅರಿವಿನ ಪಯಣದ ಉದ್ದಕ್ಕೂ ಕಂಡು ಬಂದವು. ಎಲ್ಲಕ್ಕಿಂತ ಹೆಚ್ಚಾಗಿ ಹೆಚ್ಚಿನ ಮಕ್ಕಳು ಇವೆಲ್ಲ ನಮಗೆ ಗೊತ್ತೇ ಇರಲಿಲ್ಲ. ನಮಗೆ ಈ ಕುರಿತು ಯಾರೂ ಹೇಳೇ ಇರಲಿಲ್ಲ ಎಂದು ಹೇಳಿದರು. ಇಂತಹ ಮಾತುಗಳನ್ನು ಕೇವಲ ಹಳ್ಳಿಯ ಮಕ್ಕಳು ಹೇಳಿದ್ದಲ್ಲ. ಶಿವಮೊಗ್ಗದ ಪ್ರತಿಷ್ಠಿತರ ಮಕ್ಕಳು ಓದುವ ಖಾಸಗೀ ಶಾಲೆಯ ಮಕ್ಕಳೂ ಹೇಳಿದ್ದರು. ಶಾಲಾ ಕಾಲೇಜುಗಳಲ್ಲದೆ, ಬೇರೆಬೇರೆ ಸಂಘಟನೆಗಳು, ಕೇರಿಗಳಲ್ಲೂ ಇದನ್ನು ಮಾಡಲಾಯಿತು. ಈ ಕಾರ್ಯಕ್ರಮವನ್ನು ನಿರಂತರವಾಗಿ ಮುಂದುವರಿಸುವ ನಿರ್ಣಯವನ್ನೂ ಶಿವಮೊಗ್ಗದ ಗೆಳೆಯರು ತೆಗೆದುಕೊಂಡಿದ್ದಾರೆ.

***

ನಮ್ಮದೇ ಕಾರ್ಯಸೂಚಿಗಳಲ್ಲಿ ಮುಳುಗಿದ್ದ ನಮ್ಮನ್ನೆಲ್ಲಾ ಬಡಿದೆಬ್ಬಿಸಿ ಮಹಿಳಾ ಚೈತನ್ಯದಿನವೆಂದರೆ ಎರಡು ದಿನಗಳ ಬೃಹತ್ ಕಾರ್ಯಕ್ರಮವಲ್ಲ, ಬದಲಿಗೆ ಅದೊಂದು ನಿರಂತರ ಪ್ರಕ್ರಿಯೆ ಎಂಬುದನ್ನು ಮನಗಾಣಿಸಿ ನಮ್ಮ ಉದಾಸೀನ ಭಾವವನ್ನು ಗುಡಿಸಿಹಾಕಿ, ನಮ್ಮ ಅನುಮಾನಗಳಿಗೆ ತಮ್ಮ ಕ್ರಿಯೆಗಳಿಂದಲೆ ಉತ್ತರಿಸಿ ಹೀಗೊಂದು ಹಾದಿಯಲ್ಲಿ ನಮ್ಮನ್ನೆಳೆದವರು ಎಚ್. ಎಸ್. ಅನುಪಮಾ, ದು. ಸರಸ್ವತಿ ಮತ್ತು ವಾಣಿ ಪೆರಿಯೋಡಿಯವರು. ಸತತ ಎಂಟು ತಿಂಗಳ ಕಾಲ ತಮ್ಮದಲ್ಲದ ಊರನ್ನು ತಮ್ಮದೇ ಆಗಿಸಿಕೊಂಡು ಬೆರೆತ ಪರಿ ಹೇಗಿತ್ತೆಂದರೆ ಈಗ ಅವರುಗಳಿಗೆ ಕೃತಜ್ಞತೆ ಹೇಳಿದರೆ ಅದು ಅಪರಿಚಿತ ಪದವಾಗಿ ಬಿಡುತ್ತದೆಂಬಷ್ಟು. ಇನ್ನು ಈ ಹೊತ್ತಿಗೆಯ ಸಂಪಾದನೆಯ ಹೊಣೆಯನ್ನು ಅವರು ನನಗೆ ವಹಿಸಿದ್ದರು. ನಾನು ನನ್ನ ಕೈಯನ್ನು ನಾಲ್ಕಾಗಿಸಿಕೊಳ್ಳಲು ರೇಖಾಂಬ ಕೈಹಿಡಿದೆ. ಅವರೊಂದಿಗೆ ಇತರ ಗೆಳೆಯರು ಸೇರಿ ಸಂಪಾದನೆಯ ಕೆಲಸವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿದರು! ಅಂದರೆ, ನಾನು ಕೊನೆಯಲ್ಲಿ ಒಗ್ಗರಣೆಯನ್ನಷ್ಟೇ ಹಾಕಿದೆ. ತಿರುವಿದ್ದು, ಮುರುವಿದ್ದು ಎಲ್ಲಾ ರೇಖಾಂಬ, ವಿನಯ್, ಪದ್ಮಾಕ್ಷಿ ಮತ್ತು ಮೈತ್ರಾ. ಅವರಿಗೆ ಶಾಬಾಶ್ ಚಪ್ಪಾಳೆ. ಬರೆಹ ರೂಪ ದೊರಕಿಸಿದ, ಛಾಯಾಚಿತ್ರ, ಪೋಸ್ಟರ್‌ಗಳನ್ನು ಒದಗಿಸಿದ ಎಲ್ಲರಿಗೂ ಕೈ ಕುಲುಕುತ್ತಿದ್ದೇವೆ. ಸಹಕರಿಸಿದ ಎಲ್ಲರಿಗೂ ಶರಣು ಶರಣು.

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಒಳಗು ಬೆಳಗಿದ ಆ ಕ್ಷಣ

❖ ರೇಖಾಂಬ ಟಿ.ಎಲ್.

'ಏ ಬರ್ರೀ, ನಿಮಗೆ ಖಂಡಿತಾ ಇಷ್ಟ ಆಗತ್ತೆ. ಸುಮ್ಮನೇ ಕಂದನನ್ನೂ ಕರ್ಕೊಂಡ್ ಬರ್ರೀ' ಅಂತ ಗೆಳತಿ ಸಬಿತಾ ಕರೆದಾಗ, ಹೋಗದೇ ಇರಲು ಬಲವಾದ ಕಾರಣಗಳಿರಲಿಲ್ಲ. ಕುತೂಹಲವೂ ಇತ್ತು. ಹೀಗೆ 2017ರ ಆಗಸ್ಟ್‌ನಲ್ಲಿ ಕುಪ್ಪಳಿಯ ಶಿಬಿರದಿಂದ ಒಕ್ಕೂಟದೊಂದಿಗಿನ ನನ್ನ ಪಯಣ ಶುರು. ಯಾವಾಗಿನಿಂದಲೋ ತನ್ನ ಬರವಣಿಗೆ ಹಾಗೂ ಸಾಮಾಜಿಕ ಕಾರ್ಯಗಳಿಂದ ದು. ಸರಸ್ವತಿ ನನ್ನ ಗಮನ ಸೆಳೆದಿದ್ದರು. ಹಾಗಾಗಿ ಶಿಬಿರ ಮುಗಿಯುವವರೆಗೂ ಅವರನ್ನು ಬೆರಗುಗಣ್ಣಿನಿಂದಲೇ ನೋಡುತ್ತಿದ್ದೆ. ಹಾಗೇ ಅನುಪಮಾ, ವಾಣಿ, ಮಲ್ಲಿಗೆ ಅವರ ಸರಳ ವ್ಯಕ್ತಿತ್ವ ಕೂಡಾ ನನ್ನ ಸೆಳೆಯಿತು. ಮುಂದೊಂದು ದಿನ ವಾಣಿ, ಸರಸ್ವತಿ ನಮ್ಮ ಮನೆಗೆ ಬಂದರೆ, ಉಳಿದರೆ ಅಡ್ಡಿಯಿಲ್ವಾ ಅಂತ ಅನುಪಮಾ ಫೋನ್ ಮಾಡಿ ಕೇಳ್ದಾಗ, ಬಹಳ ಖುಷಿಯಿಂದಲೇ ಒಪ್ಪಿಕೊಂಡೆ. ಫೋನಿನಲ್ಲೇ ಆತ್ಮೀಯತೆಯನ್ನು ತುಳುಕಿಸುತ್ತಿದ್ದ ಅನುಪಮಾರ ಕರೆಗೆ ಮನಸೋತಿದ್ದೆ.

ಹೀಗೆ ಶುರುವಾದ ಒಕ್ಕೂಟದೊಡನೆಯ ಒಡನಾಟ, ಅದೆಷ್ಟು ಸಹಜವಾಗಿ ಹೊಂದಿಕೆಯಾಗಿ ಮುಂದುವರಿಯಿತು ಎಂದರೆ, ಅದು ನನಗೇ ನಂಬಲಸಾಧ್ಯವಾಯಿತು. ಅವರೆಲ್ಲ ಎಂದಿನಿಂದಲೂ ನಮ್ಮ ಜೊತೆಗೇ ಇದ್ದರೇನೋ ಅನ್ನುವಷ್ಟರ ಮಟ್ಟಿಗೆ ನಮ್ಮಲ್ಲಿ ಬೆರೆತುಹೋದರು. ಎಂದೂ ಮಾಸದ ನಗುವಿನೊಂದಿಗೆ ವಾಣಿ, ಅಸೀಮ ಕಕ್ಕುಲಾತಿಯ ಸರಸ್ವತಿ, ಚೈತನ್ಯದ ಚಿಲುಮೆಯಂತಿದ್ದ ಪವಿತ್ರ ಬಂದು ಅಡುಗೆ ಮನೆಯಲ್ಲಿ ಹರಟೆಗೆ ಕೂರುತ್ತಿದ್ದ ಪರಿಯನ್ನು ಮರೆಯುವುದಾದರೂ ಹೇಗೆ? ಒಮ್ಮೆ ರಾತ್ರಿ ಊಟವಾದ ಮೇಲೆ, ಸರಸ್ವತಿಯೊಂದಿಗೆ ನಾನು, ಮೈತ್ರಾ ಹೀಗೇ ಮಾತನಾಡುತ್ತ ಕುಳಿತಾಗ, ಸರಸ್ವತಿ ತಮ್ಮ ಲ್ಯಾಪ್‌ಟಾಪ್‌ನಲ್ಲಿದ್ದ ಸಣ್ತಿಮ್ಮಿ ಪುರಾಣವನ್ನು ತೆಗೆದು ಓದತೊಡಗಿದರು.......ನಾವು ಅದೆಷ್ಟು ಅದರಲ್ಲಿ ಮುಳುಗಿದ್ದೆವೆಂದರೆ, ಸಮಯದ ಪರಿವೆಯಿಲ್ಲದೇ ಯಾವುದೋ ಲೋಕವನ್ನು ಹೊಕ್ಕುಬಂದಂತಾಗಿತ್ತು. ಅಂದು ಕೇಳಿದ ಸಣ್ತಿಮ್ಮಿಯ ರಾಮಾಯಣ ಮತ್ತು ಪಿರೂತಿ ಪುರಾಣ ನಮ್ಮೊಳಗೆ ಹೊಸಚೈತನ್ಯವನ್ನು ತುಂಬಿತು. ಸೀತೆಯ ಒಳಗಿನ ಗಟ್ಟಿತನ, ರಾಮನನ್ನು ಮೀರಿ ಬೆಳೆದ ಪರಿ, ತನ್ನ ತಾ ಕಂಡುಕೊಳ್ಳುವ ಬಗೆ, ದೇಹದೊಳಗೇ ಹರಿದಾಡಿ ದೇಹವ ಮೀರಿ ಬೆಳೆವ ಪಿರೂತಿ ಪುರಾಣದ ಪಿರೂತಿ, ಆಹಾ! ಪಕ್ಕನೆ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ನಮ್ಮ ಬದುಕಿಗೆ ಹೊಸಬೆಳಕು, ಹೊಸಹೊಳಹು ದೊರೆತಂತೆ ಎನಿಸಿತು. ಅಂದಿನಿಂದ ನನ್ನೊಳಗೆ ಸಣ್ತಿಮ್ಮಿ ಹೊಕ್ಕುಬಿಟ್ಟಳು. ಅವಳ ಭಾಷೆಯಲ್ಲಿ ಆಗಾಗ ಡೈಲಾಗ್ ಹೊಡೆಯುವುದು ಹವ್ಯಾಸವಾಯಿತು. ಪ್ರೀತಿಯ ರಾಜಕಾರಣಕ್ಕೆ ಮಾರುಹೋದೆವು. ಯಾವ ಚಳುವಳಿಗಳಲ್ಲಿಯೂ ಭಾಗವಹಿಸಿ ಗೊತ್ತಿಲ್ಲದ, ಸಂಘಟನೆಗಳ ಸ್ವರೂಪವೇನೆಂದು ತಿಳಿಯದ ನಾನು ಒಕ್ಕೂಟದಲ್ಲಿ ಇಷ್ಟರಮಟ್ಟಿಗೆ ತೊಡಗಿಕೊಳ್ತೇನೆ ಅನ್ನುವುದು ನನಗೆ ಗೊತ್ತಿರಲಿಲ್ಲ. ಅರಿವಿಲ್ಲದೇ ಅರಿವಿನ ದಾರಿಯಲ್ಲಿ ಹೆಜ್ಜೆಹಾಕುತ್ತಾ ಹೊರಟಿದ್ದೆ...

ಮೊದಲ ದಿನದ 'ಅರಿವಿನ ಪಯಣ' ದಲ್ಲಿ, ಸ. ಉಷಾ, ಸವಿತಾ ನಾಗಭೂಷಣ, ಸರಸ್ವತಿ, ವಾಣಿ, ಪವಿತ್ರಾ, ಕಾವ್ಯ ಸಮತಳ, ಕಿರಣ್ ಗಾಜನೂರು ಇವರೆಲ್ಲ, ಹಾಡಿದ್ದು, ಅಭಿನಯಿಸಿದ್ದು, ಮಾತನಾಡಿದ್ದು ನೋಡಿ ನನ್ನೊಳಗೂ ಹೊಸತೇನೋ ಚಿಗುರುತ್ತಿದೆಯೆನಿಸುತ್ತಿತ್ತು. ಛಳಿ ಬಿಡುತ್ತ ಹೋಯಿತು. ನಿಧಾನವಾಗಿ ತೆರೆದುಕೊಳ್ಳುತ್ತ ಹೋದಂತೆನಿಸಿತು. ಲಿಂಗ ತಾರತಮ್ಯದ ಬಗೆಗಿನ ಅಸ್ಪಷ್ಟ ವಿಚಾರಗಳು ಸ್ಪಷ್ಟವಾಗುತ್ತ ಹೋದವು. ಹಾಗೆಯೇ ಹಾಡುತ್ತ ಒಮ್ಮೊಮ್ಮೆ ಮಾತನಾಡುತ್ತ ಮುಂದರಿದದ್ದು ನನಗೇ ತಿಳಿಯಲಿಲ್ಲ. ಅರಿವಿನ ಪಯಣ ಸಾಗಿದ್ದು ಶಾಲಾ ಕಾಲೇಜುಗಳಲ್ಲಿ, ಹಾಸ್ಟೆಲುಗಳಲ್ಲಿ. ರಂಗಬೆಳಕು ತಂಡ ತಮಟೆ ಹೊಡೆಯುತ್ತ ಹಾಡುವುದನ್ನು ಮಕ್ಕಳು ಬಹಳ ಆನಂದಿಸಿದರು. ನಮ್ಮೊಟ್ಟಿಗಿದ್ದ ಕಿರಣ್, ಸಂತೋಷ್ ಅವರುಗಳು ಮುಟ್ಟಿನ ಬಗ್ಗೆ ಮಾತನಾಡುತ್ತಿದ್ದುದೇ ಮಕ್ಕಳಿಗೆ ನಮ್ಮ ಆಶಯಗಳ ಪ್ರತ್ಯಕ್ಷ ಸಾಕ್ಷಿಯಾಗಿತ್ತು. ಅದು ಅವರ ನಾಚಿಕೆಯನ್ನು ದೂರ ಮಾಡಿ, ಮಾತನಾಡುವಂತೆ ಪ್ರೇರೇಪಿಸುತ್ತಿತ್ತು. ಪವಿತ್ರಳ ಅಭಿನಯದ ಕಿರುನಾಟಕ ನೋಡಿ ಮಕ್ಕಳ ಕಣ್ಣಾಲಿಗಳು ತುಂಬುತ್ತಿದ್ದವು. ಲೈಂಗಿಕ ಕಿರುಕುಳ, ಲಿಂಗ ತಾರತಮ್ಯ, ಮುಟ್ಟು, ಶ್ರಮದ ಬದುಕು, ಸೌಂದರ್ಯದ ಆಂತರ್ಯಗಳಂತಹ ಗಂಭೀರ ವಿಷಯಗಳನ್ನು ಮಕ್ಕಳಿಗೆ ಅರ್ಥಮಾಡಿಸಲು ಹಾಡು, ಕತೆ, ನಾಟಕಗಳು ಅದೆಷ್ಟು ಪರಿಣಾಮಕಾರಿ ಎಂಬುದು ನನಗೆ ಮನವರಿಕೆಯಾಯಿತು. ಮಕ್ಕಳ ನೆನಪಿನ ಕೋಶಗಳಲ್ಲಿ, ಮನಸ್ಸಿನಾಳಗಳಲ್ಲಿ ಅದೆಷ್ಟು ಉಳಿಯುವವೋ ತಿಳಿಯದು. ಆದರೆ ನಮ್ಮ ಅರಿವು ಹೆಚ್ಚಿಸಿಕೊಳ್ಳಲು ಕಾರಣವಾಯಿತೆಂಬುದು ಮಾತ್ರ ನಿಜ. ಅಷ್ಟು ಸೆಳೆಯಿತು ಅರಿವಿನ ಪಯಣ ಮತ್ತು ಒಕ್ಕೂಟದ ಮಂದಿಯ ಒಡನಾಟ. ಪವಿತ್ರಳ ಕರಾವಳಿ ಕನ್ನಡ ಮತ್ತು ಸಣ್ತಿಮ್ಮಿಯ ದೇಸೀ ಕನ್ನಡಗಳು ಎಷ್ಟರಮಟ್ಟಿಗೆ ನನ್ನ ಸೆಳೆದವೆಂದರೆ, ಪವಿತ್ರಳಿಲ್ಲದ ದಿನಗಳಲ್ಲಿ 'ಬ್ಲೂ ರಿಬ್ಬನ್' ಕಿರುನಾಟಕ ಓದುವುದನ್ನು ರೂಢಿಸಿಕೊಂಡ ನಾನು ಅವಳದೇ ಭಾಷೆಯಲ್ಲಿ ಓದುತ್ತಿದ್ದೆ! ಹಾಗೆಯೇ ಸರಸ್ವತಿಯಿಲ್ಲದ ದಿನಗಳಲ್ಲಿ ಸಣ್ತಿಮ್ಮಿ ಬುದ್ಧಪುರಾಣದ ಕತೆಗಳನ್ನೂ ಸಣ್ತಿಮ್ಮಿ ಭಾಷೆಯಲ್ಲೇ ಹೇಳುವಂತಾಗಿತ್ತು!

ನಮ್ಮ ಶಿವಮೊಗ್ಗದವರೇ ಆದ ಕಿರಣ್ ಗಾಜನೂರು, ಶೃಂಗೇಶ್, ಹೊನ್ನಾಳಿ ಚಂದ್ರು, ಅನನ್ಯ ಶಿವು, ಪೂರ್ಣಿಮಾ, ಮಂಜುಳಾ ಆಶೋಕ್, ರಂಗಬೆಳಕು ತಂಡದ ಸದಸ್ಯರಾದ ಸಂತೋಷ್, ಭಾಸ್ಕರ್, ಉಮೇಶ್, ಚೈತ್ರಾ, ಗೌರಿಶಂಕರ್, ಮುರುಳಿ, ವಿನಯ್ ಹಾಗೆಯೇ ಸಾಗರದ ಪ್ರತಿಭಾ, ವೃಂದಾ, ಕೃತಿ, ರಾಘು, ವಿನಯ್ ಎಲ್ಲರೂ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಹತ್ತಿರವಾಗುತ್ತಾ ಹೋದರು. ವಿನಯ್ ಅಂತೂ ನನ್ನೆಲ್ಲ ಕೆಲಸಗಳಲ್ಲೂ ಕೈಜೋಡಿಸುತ್ತಿದ್ದ. ನನ್ನ ಗೆಳತಿಯರಾದ ಮಂಜುಳಾ ರಾಜು, ಅಕ್ಷತಾ, ಪದ್ಮಾಕ್ಷಿ, ಮೈತ್ರಾ, ಸಬಿತಾ, ವಿದ್ಯಾ ಜೋಸೆಫ್, ಜಾರ್ಜ್ ಸರ್ ಮತ್ತು ಅಲೆಮಾರಿ ಸಮುದಾಯದ ಕ್ಯಾಂಪಿನ ಮಕ್ಕಳ ಪ್ರೀತಿ, ಸಹಕಾರ, ಬೆಂಬಲವಂತೂ ಇದ್ದೇ ಇತ್ತು. 'ಇಲ್ಲೇ ಇರುವ ಪ್ರೀತಿ ಸ್ನೇಹಗಳ ಗುರುತಿಸದಾದೆನೋ ಎನ್ನೊಳಗೇ....' ಅಂತ ಜಿಎಸ್ಎಸ್ ಬರೆದ ಹಾಗೆ ಅನ್ನಿಸುತ್ತಲೇ ಇತ್ತು. ಇಲ್ಲೆ ಇದ್ದ ನಾವು ಪರಸ್ಪರ ಪರಿಚಯವಾದದ್ದು, ಆತ್ಮೀಯರಾದದ್ದು ಒಕ್ಕೂಟದ ದೆಸೆಯಿಂದಲೇ ಅನಿಸಿತು. ಒಕ್ಕೂಟವು ಕೆರೆಯ ನೀರನು ಕೆರೆಗೆ ಚೆಲ್ಲಿ ಅನ್ನುವ ಹಾಗೆ ನಮ್ಮೊಂದಿಗೆ ನಮ್ಮವರನ್ನೇ ಸೇರಿಸಿ ಶಿವಮೊಗ್ಗದಲ್ಲೊಂದು ಪ್ರೀತಿಪರ್ವಕ್ಕೆ ನಾಂದಿ ಹಾಡಿತು. ಮೀಟಿಂಗ್ ಕರೆದಾಗಲೆಲ್ಲ ನಮ್ಮ ಮನೆಗೆ ಬಂದು, ಒಟ್ಟಿಗೇ ಉಂಡು, ಮನದುಂಬಿ ಮಾತಾಡಿ, ಪ್ರೀತಿಯ ಔತಣವನ್ನೇ ಬಡಿಸಿದ ಎಲ್ಲರಿಗೂ ಏನೆಂದು ಹೇಳಲಿ ನಾನು? ಏನು ಹೇಳಿದರೂ ಮಾತು ಕ್ಲೀಷೆಯಾದೀತು. ಅನುಭವಿಸಿದ್ದಕ್ಕೆ ಅಕ್ಷರ ರೂಪ ಕೊಡಲಾರೆ. ಈ ಎಲ್ಲ ಹೊಸ ಬಾಂಧವ್ಯಗಳು ನನ್ನನ್ನು ಇನ್ನಷ್ಟು ಆರ್ದ್ರಗೊಳಿಸಿವೆ. ಆತ್ಮವಿಶ್ವಾಸವನ್ನು ಹೆಚ್ಚಿಸಿವೆ ಎಂಬುದಷ್ಟೆ ಒಳಗನ್ನು ತುಂಬಿಕೊಂಡಿದೆ.

**ಕೈಗೆ ಕೈ ಜೋಡಿಸಿದವರ ನೆನೆಯುತ್ತ.......**

ಇಷ್ಟೆಲ್ಲ ಚಟುವಟಿಕೆಗಳು ನಡೆದದ್ದು, ಕರ್ನಾಟಕದ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಕಳೆದ ಐದು ವರ್ಷಗಳಿಂದ ವಿವಿಧ ಜಿಲ್ಲೆಗಳಲ್ಲಿ ಸರಣಿಯೋಪಾದಿಯಲ್ಲಿ ಆಚರಿಸಿಕೊಂಡು ಬಂದ ಮಹಿಳಾ ಚೈತನ್ಯದಿನವೆಂಬ ಹೆಣ್ಣುಮಕ್ಕಳ ಹಬ್ಬವನ್ನು ಈ ಬಾರಿ ನಮ್ಮ ಜಿಲ್ಲೆಯಲ್ಲಿ ಆಚರಿಸಿದ ಹಿನ್ನೆಲೆಯಲ್ಲಿ...

**'ಎನಿತು ಜನುಮದಲಿ/ ಎನಿತು ಜೀವರಿಗೆ**
**ಎನಿತು ನಾವು ಋಣಿಯೋ**
**ಹಾಗೆ ನೋಡಿದರೆ/ ಮನುಜ ಜನ್ಮವಿದು**
**ಋಣದ ರತ್ನ ಖನಿಯೋ...'**

*– ಜಿ. ಎಸ್. ಎಸ್.*

ಅಲ್ಲವೇ? ಶಿವಮೊಗ್ಗದಲ್ಲಿ ಇಷ್ಟು ದೊಡ್ಡಮಟ್ಟದಲ್ಲಿ ಎರಡು ದಿನ ನಡೆದ ಚಿಂತನ–ಮಂಥನ–ಮೆರವಣಿಗೆಯ ಮಹಿಳಾ ಹಬ್ಬವು ಸುಮ್ಮನೇ ಆಗುವುದೇ? ಒಕ್ಕೂಟದ ದೃಢ ಹೆಜ್ಜೆಗಳ ಮೆರವಣಿಗೆಯೊಂದಿಗೆ ಹೆಜ್ಜೆ ಹಾಕಿದ, ಕೈಗೆ ಕೈ ಜೋಡಿಸಿದ....

* ಮಹಿಳಾ ಚೈತನ್ಯದ ಸಂಕೇತವಾದ ಸಸಿಯನ್ನು ಕೊಪ್ಪಳದಿಂದ ಶಿವಮೊಗ್ಗೆಗೆ ತಂದ ವೃಂದಾ ಮತ್ತು ಅಕ್ಷತಾ

* ತಯಾರಿಯ ಎಲ್ಲ ಹಂತಗಳಲ್ಲೂ ಜೊತೆಗಿದ್ದ, ಎರಡೂ ದಿನಗಳ ಕಾರ್ಯಕ್ರಮಗಳನ್ನೂ ವರದಿ ಮಾಡಿದ ಎಲ್ಲ ಮಾಧ್ಯಮ ಮಿತ್ರರು

* ನಮ್ಮ ಘೋಷಣೆಗಳನ್ನು ಬಣ್ಣ ಬಣ್ಣದ ಕೊಡೆಗಳ ಮೇಲೆ ಬರೆಸುವ ಜವಾಬ್ದಾರಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಹೊತ್ತ ಶಿವಮೊಗ್ಗದ ಹೊನ್ನಾಳಿ ಚಂದ್ರು, ಚಿತ್ರಿಸಿದ ಕಲಾವಿದರಾದ ಎಸ್. ಸುಂದರೇಶ್, ಕಲಾಶಿಕ್ಷಕರಾದ ಸತೀಶ್ ಮತ್ತು ರಂಗಬೆಳಕು ತಂಡದ ಗೆಳೆಯರು

* ರಂಗಬೆಳಕು ತಂಡದ ಸೂತ್ರಧಾರ ಕೊಟ್ರಪ್ಪ ಮೇಷ್ಟ್ರು

* ಕೈಮಗ್ಗದ ಬಟ್ಟೆಯ ಮೇಲೆ ಸಂವಿಧಾನ ಪ್ರಸ್ತಾವನೆಯನ್ನು ಕೈಬರಹದಲ್ಲಿ ಚಿತ್ರಿಸಿದ ಕಲಾವಿದ ಎಸ್. ಸುಂದರೇಶ್

* ಅರಿವಿನ ಪಯಣ ಪುಸ್ತಕ ಪ್ರಿಂಟ್ ಹಾಕಿಕೊಟ್ಟು, ಕಾಲಕಾಲಕ್ಕೆ ವಿತರಣೆಯನ್ನೂ ಮಾಡಿದ, ಬ್ಯಾನರ್‌ಗಳನ್ನು ಪ್ರಿಂಟ್ ಮಾಡಿಸುವಲ್ಲಿ ಸಹಕರಿಸಿದ, ಸರ್ಕಾರೀ ಅನುಮತಿಪತ್ರಗಳನ್ನು ಕೊಡಿಸುವಲ್ಲಿ ಪ್ರಮುಖಪಾತ್ರ ವಹಿಸಿದ ಜನಹೋರಾಟ ಪ್ರಿಂಟರ್ಸ್‌ನ ಗೆಳೆಯ ಶೃಂಗೇಶ್

* ಸಹ್ಯಾದ್ರಿ ಕಾಲೇಜು ಮತ್ತು ವಿವಿಧೆಡೆಯಿಂದ ಬಂದು ಸ್ವಯಂಸೇವಕರಾಗಿ ದುಡಿದು ಎರಡೂ ದಿನಗಳ ಕಾರ್ಯಕ್ರಮ ಸುಗಮವಾಗಿ ನಡೆಯುವಂತೆ ಮಾಡಿದ ಯುವಕ/ಯುವತಿಯರು

* ಕೈಮಗ್ಗದ ಕರವಸ್ತ್ರಗಳನ್ನು ಹೊಲೆದುಕೊಟ್ಟ ಹೆಗ್ಗೋಡಿನ ಚರಕದ ಮಹಿಳೆಯರು

* ಸಂಘಟನೆಯ ಕೆಲಸದಲ್ಲಿ ಕೈಜೋಡಿಸಿದ ನಮ್ಮ ಹಕ್ಕು ವೇದಿಕೆಯ ಶ್ರೀಪಾಲ್, ಕೋಮು ಸೌಹಾರ್ದ ವೇದಿಕೆಯ ಅಶೋಕ್

* ಶಾಮಿಯಾನ, ಊಟೋಪಚಾರದಂತಹ ಬಹಳ ದೊಡ್ಡ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಅನನ್ಯ ಶಿವು

* ಅಡುಗೆ ಮಾಡಿದ, ಶಾಮಿಯಾನ ಹಾಕಿದ, ಸ್ವಚ್ಛತಾ ಕಾರ್ಯಗಳನ್ನು ಮಾಡಿದ ಎಲ್ಲ ಶ್ರಮಜೀವಿಗಳು

* ಇಲ್ಲಿ ಬಳಸಲಾಗಿರುವ ಹಲವು ಫೋಟೋಗಳನ್ನು ಸೆರೆಹಿಡಿದಿರುವ ಶಿವಮೊಗ್ಗದ ಫೋಟೋ ಜರ್ನಲಿಸ್ಟ್ ಆದ ಇಸ್ಮಾಯಿಲ್ ಎಂ ಕುಟ್ಟಿ

* ಎರಡೂ ದಿನದ ಕಾರ್ಯಕ್ರಮಗಳ ಆಡಿಯೋ ವಿಡಿಯೋ ರಿಕಾರ್ಡ್ ಮಾಡಿದ ಬೆಂಗಳೂರಿನ ಸನ್‌ರೈಸ್ ಡಿಜಿಟಲ್ ಮೀಡಿಯಾದ ಎಂ. ಸಂದೇಶ್

* ಸಮಾವೇಶದಲ್ಲಿ ಎಲ್ಲರಿಗೂ ಉಚಿತವಾಗಿ ಹಂಚಲು 5000 ತರಕಾರಿ ಬೀಜಗಳ ಪೊಟ್ಟಣಗಳನ್ನು ಮಾಡಿಸಿಕೊಟ್ಟ ಚುಕ್ಕಿ ನಂಜುಂಡಸ್ವಾಮಿ

* ಸಾಮಾಜಿಕ ಜಾಲತಾಣಗಳಲ್ಲಿ ಕಾರ್ಯಕ್ರಮದ ವಿದ್ಯಮಾನಗಳನ್ನು ನೇರ ಪ್ರಸಾರ ಮಾಡುತ್ತಾ, ಭಾಷಣಗಳ ಡಿಜಿಟಲ್ ರೂಪವನ್ನು ಹಂಚಿಕೊಂಡು ಸಹಕರಿಸಿದ 'ಉದ್ಯೋಗಕ್ಕಾಗಿ ಯುವಜನರು' ತಂಡದ ಮುತ್ತುರಾಜ್ ಮತ್ತು ಗೆಳೆಯರು

* ನಾಡಿನ ಹಿರಿಕಿರಿಯರಿಂದ ಹೇಳಿಕೆಗಳನ್ನು ಪಡೆದು ಪೋಸ್ಟರ್‌ಗಳನ್ನು ಸಂಪಾದಿಸಿದ ಮಂಗಳೂರಿನ ಗುಲಾಬಿ ಬಿಳಿಮಲೆ ಮತ್ತು ಸುನೈಫ್

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

* ವಸತಿಯನ್ನು ಒದಗಿಸಿದ ಸರ್ಕಾರೀ ನೌಕರರ ಭವನದ ಆಡಳಿತಾಧಿಕಾರಿಗಳು,

* ಸಭೆಗೆ ತಮ್ಮ ಕಚೇರಿ ಕೊಟ್ಟು, ಅಂಬೇಡ್ಕರ್ ಭವನ ಬುಕ್ ಮಾಡಿಕೊಟ್ಟ ದಲಿತ ಸಂಘರ್ಷ ಸಮಿತಿಯ ಗುರುಮೂರ್ತಿಯವರು,

* ಸಂಘಟನೆ, ದೇಣಿಗೆ ಸಂಗ್ರಹ, ವಸತಿ ವ್ಯವಸ್ಥೆಗಳಿಗೆ ಬೆಂಬಲವಾಗಿ ನಿಂತ ಚೈತನ್ಯ ಸಂಸ್ಥೆ (ಸ್ತ್ರೀಬಂಧು ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ, ಶಿವಮೊಗ್ಗ)

* ಜಾಥಾ ಸಮಾವೇಶದುದ್ದಕ್ಕೂ ಭದ್ರತೆಯನ್ನೊದಗಿಸಿದ ಪೊಲೀಸರು

* ಧನಸಹಾಯ ಮತ್ತು ವಸ್ತು ರೂಪದಲ್ಲಿ ಸಹಾಯ ಮಾಡಿದ ಶಿವಮೊಗ್ಗದ ಸಾರ್ವಜನಿಕರು, ಸಂಘ–ಸಂಸ್ಥೆಗಳು, ವ್ಯಕ್ತಿಗಳು, ಮಿತ್ರರು

* ಒಗ್ಗೂಡಿ ದುಡಿದ ಎಲ್ಲ ಗೆಳೆಯ–ಗೆಳತಿಯರು ಮತ್ತು ಒಕ್ಕೂಟದೊಂದಿಗೆ ಈವರೆಗೆ ಹೆಜ್ಜೆಹಾಕುತ್ತ ಬಂದ ವಿವಿಧ ಜಿಲ್ಲೆಗಳಿಂದ ಬಂದ ಎಲ್ಲ ಸಂಗಾತಿಗಳು


* ಈ ಪುಸ್ತಕವನ್ನು ಹೊರತರುವಲ್ಲಿ ಸಹಕರಿಸಿದ ವಿನಯ್, ಪದ್ಮಾಕ್ಷಿ, ಮೈತ್ರಾ,....

* ವಿವಿಧ ರೀತಿಯಲ್ಲಿ ಸಹಕರಿಸಿದ ಹೆಸರಿಸಲಾಗದ ಹಲವರು

* ಇಷ್ಟೆಲ್ಲ ಆಗುವಾಗ ನನ್ನೆಲ್ಲ ದಿನಚರಿಯ ಎಡವಟ್ಟುಗಳನ್ನು ಒತ್ತಡದ ಕಿರಿಕಿರಿಗಳನ್ನು ಸಹಿಸಿಕೊಂಡು ಸಹಕರಿಸಿದ ನನ್ನ ಮಗ ಸತ್ಯಕಾಮ

ಮತ್ತೆಲ್ಲರಿಗೆ ಒಕ್ಕೂಟದ ಪರವಾಗಿ ತುಂಬು ಪ್ರೀತಿಯ ನೆನಕೆಗಳು.

❖



Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಶಿವಮೊಗ್ಗದಲ್ಲಿ ಮೆರವಣಿಗೆಯ ಹೆಜ್ಜೆಗಳು

❖ **ವಾಣಿ ಪೆರಿಯೋಡಿ**

ನಮ್ಮ ಕನಸಿನ ದಾರಿಯಲ್ಲಿ ಒಕ್ಕೂಟದ ಹೆಜ್ಜೆಗಳು ಸಹಜವಾಗಿ ರೂಪುಗೊಳ್ಳುವ ರೀತಿ ನೋಡುವುದಕ್ಕೆ ಖುಶಿ ಅನಿಸುತ್ತದೆ. ಶಿವಮೊಗ್ಗಕ್ಕೆ ಒಕ್ಕೂಟದ ಮೆರವಣಿಗೆ ತಲುಪಿದ ಮೇಲೆ ಅಲ್ಲಿ ತನ್ನದೇ ಬಗೆಯಲ್ಲಿ ದಾರಿ ಮೂಡುತ್ತಾ ಹೋಯಿತು. ಮುಖ್ಯವಾಗಿ ಮಾರ್ಚ್ ತಿಂಗಳಲ್ಲಿ ಎರಡು ದಿನಗಳು ಮಹಿಳಾ ಚೈತನ್ಯ ದಿನವಾಗಿ ಆಚರಣೆಯಾಗುವ ಹಿನ್ನೆಲೆಯಲ್ಲಿ ನಡೆದ ಆಗುಹೋಗುಗಳ ಸರಳ ನಿರೂಪಣೆ ಇಲ್ಲಿದೆ.

**ಅರಿವಿನ ಪಯಣ ರೂಪುಗೊಂಡಿದ್ದು**

ಎಂದಿನಂತೆ ಒಂದಷ್ಟು ಪರಿಚಿತರ ಮೂಲಕ ಮತ್ತೊಂದಷ್ಟು ಜನರ ಸಮೀಪ ನಡೆಯತೊಡಗಿದೆವು. ಸಾಗರದಲ್ಲಿ ಶಿವಮೊಗ್ಗೆಯಲ್ಲಿ ಒಂದೆರಡು ಸಭೆಗಳು ನಡೆದವು. ಹಿಂದಿನ ವರ್ಷದ ಕೊಪ್ಪಳ ಸಮಾವೇಶದ ಹೊತ್ತಿಗೆ ಕಿರುಹೊತ್ತಗೆ ತಯಾರಿಸಿ ಜನರ ಬಳಿ ಒಯ್ದದ್ದನ್ನು ಚರ್ಚಿಸಿದಾಗ ವಿದ್ಯಾರ್ಥಿಗಳ ಬಳಿ ಹೋಗಬೇಕು ಎಂಬ ಸಲಹೆ ಬಂದಿತ್ತು. ಕುಪ್ಪಳ್ಳಿಯ ಅಧ್ಯಯನ ಶಿಬಿರದ ಬಳಿಕದ ಸಿದ್ಧತಾಪೂರ್ವ ಸಭೆಯಲ್ಲಿ ಒಂಭತ್ತನೇ ತರಗತಿಯ ಹುಡುಗಿ ಸಿರಿ ಚೆನ್ನಿ ಭಾಗವಹಿಸಿದ್ದಳು. ಯುವ ಸಂಗಾತಿಗಳ ಚಿಂತನೆಗಳನ್ನು ತಿಳಿದುಕೊಳ್ಳುವ, ಅವನ್ನೂ ನಮ್ಮ ದಾರಿಯಲ್ಲಿ ಸೇರಿಸಿಕೊಳ್ಳುವ ಉದ್ದೇಶದೊಂದಿಗೆ ಅವಳನ್ನು ಮಾತಾಡುವಂತೆ ಕೇಳಿಕೊಂಡೆವು. ಅವಳು ಬಹಳ ಸ್ಪಷ್ಟವಾಗಿ ಶಾಲೆಗಳಲ್ಲಿ ಮಕ್ಕಳ ಮೇಲೆ ನಡೆಯುವ ಲೈಂಗಿಕ ಕಿರುಕುಳಗಳ ಬಗ್ಗೆ ಮಾತಾಡಿದಳು. ಇದು ಅತ್ಯಂತ ನೋವಿನ ವಿಷಯ, ಇದರ ಬಗ್ಗೆ ಯಾರೂ ಎಲ್ಲೂ ಸರಿಯಾಗಿ ಮಾತಾಡುವುದಿಲ್ಲ, ಬಾಯಿ ಬಿಟ್ಟು ಹೇಳಿದರೂ ಕೆಲವೊಮ್ಮೆ ಕೇಳಿಸಿಕೊಳ್ಳುವುದಿಲ್ಲ, ಈ ವಿಚಾರವನ್ನು ಶಾಲೆಗಳಲ್ಲಿ ಮಾತಾಡಲು ಸಾಧ್ಯವಾಗಬೇಕು; ಎಂದು ಎದೆಯಾಳಕ್ಕೆ ಕರೆ ನೀಡಿದಳು. ನಾವು ಈ ಸಲಹೆಯನ್ನು ಬಹಳ ಪ್ರೀತಿಯಿಂದ, ಕಾಳಜಿಯಿಂದ, ಮಾತ್ರವಲ್ಲದೆ ಗಂಭೀರವಾಗಿ ಎತ್ತಿಕೊಂಡೆವು. ಅದಕ್ಕಾಗಿ ಶಿವಮೊಗ್ಗದಲ್ಲಿ ಒಂದು ನಿರ್ದಿಷ್ಟ ಸ್ವರೂಪದಲ್ಲಿ 'ಅರಿವಿನ ಪಯಣ' ಅಭಿಯಾನ ಮಕ್ಕಳ ನಡುವೆ ಸಂಚರಿಸತೊಡಗಿತು. 'ಅರಿವಿನ ಪಯಣ' ಕಿರುಹೊತ್ತಗೆಯ ಹತ್ತುಸಾವಿರ ಪ್ರತಿ ಅಚ್ಚುಹಾಕಿಸಿದೆವು. ಜನಹೋರಾಟ ಪತ್ರಿಕಾ ಕಚೇರಿ ಸಂಗ್ರಹಾಗಾರವಾಯಿತು. ಅರಿವಿನ ಪಯಣದಲ್ಲಿ ಲೈಂಗಿಕ ಕಿರುಕುಳದ ಬಗ್ಗೆ ಬಹಳ ನೇರವಾಗಿ ಆಪ್ತವಾಗಿ ಮಾತುಕತೆ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಶುರು ಹಚ್ಚಿದೆವು. ನೀಲಿ ರಿಬ್ಬನ್ ನಾಟಕ ಅಥವಾ ದಟ್ ಡೇ ಆಫ್ಟರ್ ಎವ್ರೀ ಡೇ ಸಿನಿಮಾ ಮೂಲಕ ವಿಚಾರ ಮಂಡಿಸಿದೆವು. ಅರಿವಿನ ಪಯಣದ ಅನುಭವ ಒಂದಷ್ಟು ಜನರ ಬರಹಗಳಲ್ಲಿ ಕಾಣಬಹುದು. ಒಂದು ದಿನ ಈ ಸಲಹೆ ನೀಡಿದ ಹುಡುಗಿಯ ಶಾಲೆಗೂ ಹೋಗಿದ್ದೆವು. ನಮ್ಮ ಒಕ್ಕೂಟದ ಕಿರಿಯ ಸದಸ್ಯೆ ಪವಿತ್ರ ನೀಲಿ ರಿಬ್ಬನ್ ಅದೆಷ್ಟು ಸಾರಿ ಮಾಡಿದಳೋ ಲೆಕ್ಕವಿಲ್ಲ, ನಿದ್ದೆಯಿಂದ ಎಬ್ಬಿಸಿ 'ನೀಲಿ ರಿಬ್ಬನ್' ಅಂದರೆ ತಕ್ಷಣ ಶುರು ಹಚ್ಚುವಷ್ಟು ಆಗಿತ್ತು. ಅವಳು ಮಾಡುವುದನ್ನು ನೋಡಿ ನೋಡಿ ಶಿವಮೊಗ್ಗದ ಸಂಗಾತಿ ರೇಖಾಂಬ ಕೂಡಾ ನಾಟಕದ ಸಾಲುಗಳನ್ನು ಹೇಳ ತೊಡಗಿದರು, ಪವಿತ್ರ ಇಲ್ಲದೇ ಹೋದಾಗ ತಾನೇ ನಾಟಕವನ್ನು ಮಾರ್ಮಿಕವಾಗಿ ಓದತೊಡಗಿದರು. ಶಿವಮೊಗ್ಗದಲ್ಲಿ ರಂಗಬೆಳಕು ರಂಗತಂಡ, ಕಿರಣ ಗಾಜನೂರು, ಮೈತ್ರಾ, ಪದ್ಮಾಕ್ಷಿ, ಮಂಜುಳಾ ಮೊದಲಾದವರಿರುವ ತಂಡ ಸಕ್ರಿಯವಾಗಿ ತೊಡಗಿಕೊಂಡಿತು. ಅರಿವಿನ ಪಯಣವನ್ನು ವಿವಿಧ ತಂಡಗಳು ಒಂದೊಂದು ತಾಲೂಕಿನಲ್ಲಿಯೂ ತಮ್ಮ ತಮ್ಮದೇ ರೀತಿಯಲ್ಲಿ ನಡೆಸಿದರು. ಸಾಗರದ ಪ್ರತಿಭಾ, ಎಚ್. ಬಿ. ರಾಘವೇಂದ್ರ, ವಸಂತ ಕುಗ್ವೆ, ಸೊರಬದ ರಾಜಪ್ಪ ಮಾಸ್ಟರು, ವೃಂದಾ, ಸಂದೀಪ, ವಿನಯ, ಮಿಲನ, ಕೃತಿ, ಯೇಸು ಪ್ರಕಾಶ, ಸರೋಜ, ಚರಕದ ಭಾಗೀರಥಿ ಮೊದಲಾದವರು ಅತ್ಯುತ್ಸಾಹದಿಂದ ಪಕ್ಕದ ತಾಲೂಕುಗಳ ಶಾಲೆ, ಕಾಲೇಜು, ಹಾಸ್ಟೆಲುಗಳಿಗೆ ಹೋದರು. ಭದ್ರಾವತಿಯ ಡಾ. ವೀಣಾ, ಗೀತಾ, ನಾಗವೇಣಿ; ತೀರ್ಥಹಳ್ಳಿಯ ಗಾಯತ್ರಿ, ಶಿಕಾರಿಪುರದ ರಾಜು, ಸುರೇಶ, ರೂಪಾ ತೊಡಗಿಕೊಂಡರು. ಎಲ್ಲಾ ಸೇರಿ ಸುಮಾರು 25,000ಕ್ಕೂ ಹೆಚ್ಚು ಮಕ್ಕಳ ಹತ್ತಿರ ತಲುಪಲು ಸಾಧ್ಯವಾಯಿತು.

ಶಿವಮೊಗ್ಗದ ಒಕ್ಕೂಟದ ಹೆಜ್ಜೆಗುರುತುಗಳು 'ಅರಿವಿನ ಪಯಣ' ಎನ್ನಬಹುದು. ನಮ್ಮ ಪಯಣ ಸಂವಿಧಾನ ಕುರಿತು ಪುಣೆಯಿಂದ ಬಂದ 'ಲೋಕಾಯತ' ತಂಡದವರ ಜೊತೆಗೂ ನಡೆಯಿತು. ಉದ್ಘಾಟನೆಗಾಗಿ ಕೈಬರಹದ ದೊಡ್ಡ ಸಂವಿಧಾನ ಪೀಠಿಕಾ ಭಾಗವನ್ನು ಕೈಬರಹದಲ್ಲಿ ಬರೆದ ಭಿತ್ತಿವಸ್ತ್ರ ಬಳಸಿದೆವು. ಸಂವಿಧಾನ ಪೀಠಿಕಾ ಭಾಗ ಮತ್ತು ಅಂಬೇಡ್ಕರ್–ಸಾವಿತ್ರಿಬಾಯಿಯವರ ನುಡಿಗಳಿರುವ ಐದು ಸಾವಿರ ಪುಟ್ಟ ಗುರುತಿನ ಕಾರ್ಡುಗಳನ್ನು ಮಾಡಿಸಿದೆವು.

**ಮುಟ್ಟು ಮುಟ್ಟೆಂದೇಕೆ...**

ಪತ್ರಕರ್ತರೊಂದಿಗೆ ಒಂದು ಮಾತುಕತೆ ಮೊದಲ ದಿನಗಳಲ್ಲೇ ನಡೆಯಿತು. ಸ್ಥಳೀಯ ವಿಚಾರಗಳನ್ನೇ ಮುಂದಿಟ್ಟುಕೊಂಡು ಕೆಲಸ ಮಾಡಬೇಕೆನ್ನುವ ನಮ್ಮ ಆಶಯವನ್ನು ಮುಂದಿಟ್ಟಾಗ ಪತ್ರಕರ್ತ ಸ್ನೇಹಿತರೊಬ್ಬರು ಮುಟ್ಟಿನ ಕುರಿತ ಆಚರಣೆಯ ಬಗ್ಗೆ ವಿವರಿಸಿದರು. ಶಿವಮೊಗ್ಗದ ಕೆಲವು ಭಾಗಗಳಲ್ಲಿ ಭೂಮಿಹುಣ್ಣಿಮೆಯಿಂದ ಹಿಡಿದು ದೀಪಾವಳಿಯವರೆಗೆ ಮುಟ್ಟಾದ ಹೆಣ್ಣುಮಕ್ಕಳು ಆ ಊರಿನಲ್ಲಿ ಇರುವಂತಿಲ್ಲ; ಮುಟ್ಟನ್ನು ತೀರಾ ಅಸ್ಪೃಶ್ಯವಾಗಿ ಕಾಣುವ ರೀತಿ ಇದು, ಎಂದು ಹೇಳುತ್ತಾ ಈ ಆಚರಣೆಯು ಹೇಗೆ ಹೆಣ್ಣುಮಕ್ಕಳಿಗೆ ವಿರೋಧವಾಗಿದೆ ಎಂಬುದನ್ನು ನಾವು ತಿಳಿಸಿಕೊಡಬೇಕು ಎಂದು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಸೂಚಿಸಿದರು. ಒಕ್ಕೂಟ ಇದನ್ನು ಒಪ್ಪಿಕೊಂಡಿತು. ಮುಂದಿನ ದಿನಗಳಲ್ಲೇ ಸರಳವಾದ ಯೋಜನೆ ರೂಪಿಸಿಕೊಂಡೆವು. ಹೊರಗಿನವರು ನೇರ ಹಳ್ಳಿಗಳಿಗೆ ಹೋಗಿ ಅವರ ನಂಬಿಕೆಗಳನ್ನು ಆಕ್ರಮಣ ಮಾಡುವ ಹಾಗೆ ಆಗಬಾರದು ಎಂದು, ಆ ದಿನಗಳಲ್ಲಿ ಪ್ರತಿ ವಾರ ನಡೆಯುವ ಸಂತೆಗಳಲ್ಲಿ ಕಾರ್ಯಕ್ರಮ ಮಾಡುವ ನಿರ್ಧಾರವಾಯಿತು. ಅಂತೆಯೇ ಆನಂದಪುರ, ತ್ಯಾಗರ್ತಿಗಳಲ್ಲಿ ಅಕ್ಟೋಬರ್ ತಿಂಗಳ ಎರಡು ವಾರದ ಸಂತೆ ದಿನದಂದು ಹೋಗಿ, ಮುಟ್ಟಿನ ಕುರಿತಾದ ಶ್ರೀನಿವಾಸ್ ಕಾರ್ಕಳ ಅವರು ಬರೆದ ಹಾಡು ಹಾಡಿ, ಇದಕ್ಕೆ ಸಂಬಂಧಿಸಿದ ಕರಪತ್ರ ಹಂಚಿ, ಹೋಗುವ ಬರುವ ಮಂದಿ ಜೊತೆ ಮಾತುಕತೆ ನಡೆಸಿದೆವು. ಸಾಗರದ ಸಂಗಾತಿಗಳು ಜೊತೆ ಸೇರಿದರು. ಕರ್ನಾಟಕ ವಿದ್ಯಾರ್ಥಿ ಸಂಘಟನೆಯ ಸಂಗಾತಿಗಳೂ ಸೇರಿಕೊಂಡರು. ಇದೊಂದು ವಿಶೇಷ ಅನುಭವ ಆಗಿತ್ತು. ಈ ಅಭಿಯಾನವನ್ನು ತಮ್ಮ ಎದೆಗೊತ್ತಿಕೊಂಡು ಮುಂದುವರಿಸಿದ ಹಿರಿಯ ವ್ಯಕ್ತಿ ರಾಜಪ್ಪ ಮೇಷ್ಟ್ರು. ಒಕ್ಕೂಟದ ಕರಪತ್ರವನ್ನು ತಾವೇ ಮತ್ತೆ ಅಚ್ಚುಹಾಕಿಸಿಕೊಂಡು ಶಾಲೆ ಶಾಲೆಗಳಿಗೆ ತಮ್ಮ ಸಂಗಾತಿ ಶೇಕರಮ್ಮ ಹಾಗೂ ಕಿರಿಯ ಸ್ನೇಹಿತರನ್ನು ಕೂಡಿಕೊಂಡು ಓಡಾಡಿದರು. ಶಾಲೆಗಳಲ್ಲಿ ಮಕ್ಕಳಿಗೆ ಅಮ್ಮನ ಹಿರಿಮೆಯನ್ನು ವಿವರಿಸಿ ಅಂದೇ ಸಂಜೆ ಮನೆಗೆ ಹೋಗಿ ಅಮ್ಮನನ್ನು ತಬ್ಬಿಕೊಂಡು ಅವಳ ಮೇಲೆ ಪ್ರೀತಿ ತೋರಿಸಬೇಕು ಅಂತ ವಿನಂತಿಕೊಳ್ಳುತ್ತಿದ್ದ ರೀತಿ ತುಂಬಾ ಮುದ್ದಾಗಿರುತ್ತಿತ್ತು.

**ಅರಿವಿನ ಅವ್ವನ ದೊಂದಿ ಹಿಡಿದು...**

ಶಿವಮೊಗ್ಗದಲ್ಲಿ ರೂಪುಗೊಂಡು ಇನ್ನೊಂದು ಅಭಿಯಾನ ಇದು. ಗೆಳತಿ ದು. ಸರಸ್ವತಿ ಇದರ ಆಶಯವನ್ನು ಹೀಗೆ ವಿವರಿಸುತ್ತಾಳೆ:

"ದನಿ ಇಲ್ಲದ ಮಹಿಳೆಯರ ಅಭಿವ್ಯಕ್ತಿಗೆ ಒಕ್ಕೂಟವು ಮಾನ್ಯತೆ ನೀಡುತ್ತದೆ, ತನ್ನ ಕಾರ್ಯಚಟುವಟಿಕೆಯಲ್ಲಿ, ಕಾರ್ಯತಂತ್ರದಲ್ಲಿ ಅಂತಹ ಮಹಿಳೆಯರ ಅನುಭವ ಮತ್ತು ಅರಿವಿಗೆ ಮಾನ್ಯತೆ ನೀಡುತ್ತದೆ. ಸಾಂಘಿಕ ನಾಯಕತ್ವದಲ್ಲಿ ಅಂತಹ ಮಹಿಳೆಯರಿಗೆ ಆದ್ಯತೆ ನೀಡಬಯಸುತ್ತದೆ. ಹಾಗಾಗಿಯೇ ದಲಿತ, ದಮನಿತ ಮತ್ತು ಅಂಚಿಗೆ ದೂಡಲ್ಪಟ್ಟ ಮಹಿಳಾ ವಿಷಯಗಳನ್ನು ಕಳೆದ ಆರೂ ವರ್ಷಗಳಿಂದಲೂ ಒಕ್ಕೂಟವು ಗಂಭೀರವಾಗಿ ಚರ್ಚೆ ಮಾಡುತ್ತ ಬಂದಿದೆ, ತನ್ನ ಮಿತಿಯೊಳಗೆ ಚರ್ಚಿಸಿದ ಚಿಂತನೆಗಳನ್ನು ಅಳವಡಿಸಿಕೊಂಡು ಜಾರಿಗೊಳಿಸುತ್ತ ಬಂದಿದೆ.

ಅದಕ್ಕಾಗಿ ಶಿವಮೊಗ್ಗದಲ್ಲಿ ದಲಿತ ಮಹಿಳೆಯರಲ್ಲಿಗೆ ಹೋಗಿ ಅರಿವಿನ ಅವ್ವ, ಅಕ್ಷರದವ್ವ ಸಾವಿತ್ರಿ ಬಾಯಿ ಫುಲೆಯವರ ವಿಚಾರ ಕ್ರಾಂತಿಯ ವಿಷಯಗಳನ್ನು ಹಂಚಿಕೊಳ್ಳುವ ಅಭಿಯಾನವನ್ನು ಆರಂಭಿಸಿದ್ದೇವೆ. ಜಾತಿ, ವರ್ಗ ಮತ್ತು ಲಿಂಗತಾರತಮ್ಯಕ್ಕೆ ಒಳಗಾಗಿದ್ದರೂ, ಈ ದೇಶದ ಪ್ರಜೆಯಾಗಿ ಅವರು ಪಡೆದುಕೊಳ್ಳಬೇಕಾಗಿರುವ ಹಕ್ಕುಗಳಿಂದ ವಂಚಿತರಾಗಿದ್ದರೂ ಸಹ ತಮ್ಮ ದುಡಿಮೆಯಿಂದ ಕುಟುಂಬ ಮತ್ತು ದೇಶದ ಆರ್ಥಿಕತೆಯನ್ನು ಸಲಹುತ್ತಿರುವ ದಲಿತ ಮಹಿಳೆಯರ ಪರಿಸ್ಥಿತಿ ದಾರುಣಮಯವಾಗಿದೆ. ಕಲ್ಯಾಣರಾಜ್ಯದ ಕನಸಿನಿಂದ ದೂರ ಸರಿದು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಖಾಸಗೀಕರಣದ ಮಾರುಕಟ್ಟೆ ಆರ್ಥಿಕತೆಯತ್ತ ಸರ್ಕಾರವು ದಾಪುಗಾಲಿಟ್ಟು 2–3 ದಶಕಗಳಲ್ಲಿ ಬಡವರ, ಮಹಿಳೆಯರ, ದಲಿತರ, ಹಿಂದುಳಿದವರ, ಆದಿವಾಸಿಗಳ ಬದುಕು ದಿಕ್ಕೆಟ್ಟುಹೋಗಿದೆ. ಅದನ್ನು ಮತ್ತೆ ಕಟ್ಟುವ ನಿಟ್ಟಿನಲ್ಲಿ ಜನಪರ ಚಳುವಳಿಗಳು ಕೆಲಸ ಮಾಡಬೇಕಾಗಿದೆ. ಅಂತಹ ಪ್ರಯತ್ನದ ಭಾಗವಾಗಿ ಈ 'ಅರಿವಿನ ಅವ್ವನ ದೊಂದಿಯ ಹಿಡಿದು....' ಎಂಬ ಸಾವಿತ್ರಿಬಾಯಿ ಫುಲೆ ನೆನಪಿನ ಅಭಿಯಾನವನ್ನು ನಡೆಸುತ್ತಿದ್ದೇವೆ. ಇದು ಮುಂದುವರೆಯುತ್ತಲೇ ಇರುವ ಪಯಣ... ದಲಿತ ಸೋದರಿಯರೊಂದಿಗೆ ಹೆಜ್ಜೆ ಹಾಕುತ್ತ ಅವರ ಅರಿವು, ತಿಳುವಳಿಕೆಗಳ ಮೂಲಕ ನಮ್ಮ ಜ್ಞಾನವನ್ನು ವಿಸ್ತರಿಸಿಕೊಳ್ಳುತ್ತ ಮಾನವೀಯ ಲೋಕವನ್ನು ಕಟ್ಟುವ ಪ್ರೀತಿಯ ರಾಜಕಾರಣದ ಪಯಣವಿದು. ಪ್ರೀತಿ, ಅಂತಃಕರಣವನ್ನು ನಂಬುವ ಎಲ್ಲರೂ ನಮ್ಮೊಂದಿಗೆ ಹೆಜ್ಜೆ ಹಾಕಬಹುದಾದ ಪಯಣ."

ಈ ಅಭಿಯಾನದಲ್ಲಿ ತಮ್ಮ ಅದ್ಭುತವಾದ ಹಾಡುಗಳೊಂದಿಗೆ ಕೈಜೋಡಿಸಿದವರು ರಂಗಬೆಳಕು ತಂಡದ ಯುವಕ ಯುವತಿಯರು. ಹಳ್ಳಿಗಳಲ್ಲಿ ಸಂಜೆ ಹೊತ್ತಿನಲ್ಲಿ ಬೀದಿ ದೀಪದ ಬೆಳಕಿನಲ್ಲಿ ಕಾರ್ಯಕ್ರಮ ನಡೆಯುತ್ತಿತ್ತು. ಹಳ್ಳಿಗೆ ಹೋದ ತಕ್ಷಣ ಎಲ್ಲಾ ಬೀದಿಗಳಲ್ಲಿ ಹಾಡುತ್ತಾ ನಡೆದು ಒಂದು ಕಡೆ ಜನರನ್ನು ಸೇರಿಸಿ ಕಾರ್ಯಕ್ರಮ ಮಾಡುತ್ತಿದ್ದೆವು. ಪುಟ್ಟ ಮಕ್ಕಳ ದಂಡೇ ನಮ್ಮ ತಂಡದ ಹಿಂದೆ ಇರುತ್ತಿತ್ತು. ಗಾಜನೂರು, ಹೊಳಲೂರಿನಿಂದ ಹಿಡಿದು ಸಾಗರದ ಬಳಿಯ ಹಸಲ ಸಮುದಾಯದ ಕೇರಿಯವರೆಗೆ ನಮ್ಮ ಪಯಣ ಮುಂದುವರೆಯಿತು.

**ಅಲೆಮಾರಿ ಕ್ಯಾಂಪಿನಲ್ಲಿ...**

ನಮ್ಮ ಸಂಚಾರದ ದಾರಿಯಲ್ಲಿ ಒಂದಷ್ಟು ಕಾಲ ಕಳೆದದ್ದು ನಂಜಪ್ಪ ಲೇ ಔಟ್ ಹತ್ತಿರದ ಅಲೆಮಾರಿ ಕ್ಯಾಂಪಿನಲ್ಲಿ. ಹಿರಿಯ ಸಾಮಾಜಿಕ ಕಾರ್ಯಕರ್ತ ಜಾರ್ಜ್ ಅವರ ಬಗ್ಗೆ ತಿಳಿದು ಸಂಜೆ ಕತ್ತಲು ಬಿದ್ದ ಮೇಲೆ ಅಲ್ಲಿಗೆ ಹೋದರೆ ಯಾವುದೋ ಕಟ್ಟಡದ ಮುಂಭಾಗದಲ್ಲಿ ಬೀಳುವ ದೀಪದ ಬೆಳಕಿನ ಅಡಿಯಲ್ಲಿ ಈ ಪ್ರೀತಿಯ ಅಜ್ಜ ಅಲ್ಲಿಯ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದ ದೃಶ್ಯ ಮರೆಯಲಾಗದು. ಮಕ್ಕಳಂತೂ ಜಾರ್ಜ್ ಅವರ ಜೊತೆ ಬಹಳ ನಿರ್ಭೀತವಾಗಿ ಪ್ರೀತಿಯಿಂದ ತಮಾಷೆ ಮಾಡುತ್ತಾ ಒಡನಾಡುತ್ತಿದ್ದರು. ಮತ್ತೊಂದು ಬಾರಿ ಹೋಗಿ ಜನರ ಎದುರು ನಮ್ಮ ಕಾರ್ಯಕ್ರಮ ನೀಡಿದೆವು. ವಸತಿಗೆ ಜಾಗ ಸಿಗದಿರುವ ಸಂಕಟ, ಸರಿಯಾದ ಶೌಚಾಲಯ ಇಲ್ಲದ ತೊಂದರೆ ಎಲ್ಲವನ್ನೂ ಹೇಳಿಕೊಂಡರು; ತಮ್ಮ ಹೋರಾಟದ ಬಗ್ಗೆ ತಿಳಿಸಿದರು. ಕೂಡಲೇ ಕಿರಣ ಗಾಜನೂರು, ಅಕ್ಷತಾ ಮೊದಲಾದವರು ಸ್ಪಂದಿಸಿ ಜಾಲತಾಣದಲ್ಲಿ ಹಂಚಿಕೊಂಡರು. ಒಕ್ಕೂಟದ ಹಕ್ಕೊತ್ತಾಯದಲ್ಲಿ ಅವರ ಬೇಡಿಕೆಯೂ ಸೇರಿಕೊಂಡಿತು. ಸಮಾವೇಶದಲ್ಲಿ ಅಲ್ಲಿಯ ಮಕ್ಕಳು, ಹಿರಿಯರು ಭಾಗವಹಿಸಿದರು. ಒಬ್ಬ ಹುಡುಗಿ ಅತ್ಯಂತ ಆತ್ಮವಿಶ್ವಾಸದೊಂದಿಗೆ ಸೊಗಸಾಗಿ ಭಾಷಣ ಮಾಡಿದಳು. ಹಾಡು ಹೇಳಿದರು. ಮೆರವಣಿಗೆಯಲ್ಲಿ 'ಉರುಮಿ' (ಚರ್ಮ ವಾದ್ಯ) ಬಾರಿಸುತ್ತಾ ಚಾಲನೆ ನೀಡಿ ಜೊತೆಗೆ ನಡೆದರು.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

**ತಯಾರಿಯ ಸಂಭ್ರಮ..**

ಮಾರ್ಚ್ 8, 9 ರ ಸಮಾವೇಶ ಒಂದು ಗುರಿಯಾಗಿ ಉಳಿಯದೆ ಒಂದು ಸುಂದರ ಪ್ರಕ್ರಿಯೆಯಾಗಿ ರೂಪುಗೊಳ್ಳತೊಡಗಿತು. ಒಬ್ಬೊಬ್ಬರಾಗಿ ಈ ಪ್ರಕ್ರಿಯೆಯೊಳಗೆ ಸೇರಿಕೊಳ್ಳತೊಡಗಿದರು. ಜನರನ್ನು ಪ್ರೇರೇಪಿಸುವುದಕ್ಕೆ ಸವಿತಾ ನಾಗಭೂಷಣ ಅವರು ಒಂದೆರಡು ಹಾಡುಗಳನ್ನು ಬರೆದರು. ಅರಿವಿನ ಪಯಣ ಪುಸ್ತಕ ತಯಾರಾಯಿತು. ಚರಕ, ಹೆಗ್ಗೋಡು ಅವರು ಅತ್ಯಂತ ಸೊಗಸಾದ ಕರವಸ್ತ್ರ ಒದಗಿಸಿಕೊಟ್ಟರು. ಸಿಕ್ಕಸಿಕ್ಕಲ್ಲಿ ಒಕ್ಕೂಟದ ಕತೆ ಹೇಳಿ ಮಾರಾಟ ಮಾಡುವುದು ನಡೆಯತೊಡಗಿತು. ಎಂದಿನಂತೆ ಎರಡು ಮೂರು ದಿನಗಳು ಬೀದಿ ಬೀದಿಯಲ್ಲಿ ಹಣ ಎತ್ತುವ ಕೆಲಸ ನಡೆಯಿತು. ಸಾಮಾಜಿಕ ಜಾಲ ತಾಣಗಳಲ್ಲಿ ಸೊಗಸಾದ ಸಂದೇಶಗಳು ಸಂಚರಿಸತೊಡಗಿದವು. ಸಮಾವೇಶ ನಡೆವ ಮೈದಾನಕ್ಕೆ ಅನುಮತಿಗಾಗಿ ಹತ್ತಾರು ಬಾರಿ ಓಡಾಟ, ವಸತಿಯ ವ್ಯವಸ್ಥೆ, ಮುದ್ರಣದ ಕೆಲಸಗಳಿಗೆ ಶೃಂಗೇಶ್ ಹಾಗೂ ಅವರ ಕಛೇರಿಯವರು ಸಹಾಯಕ್ಕೆ ನಿಂತರು. ಶಾಮಿಯಾನದ ವ್ಯವಸ್ಥೆ ಊಟೋಪಚಾರದ ವ್ಯವಸ್ಥೆಗೆ ಅನನ್ಯ ಶಿವು ಇನ್ನಿಲ್ಲದಂತೆ ಸಹಕರಿಸಿದರು. ಹೊರಗಿನಿಂದ ಬಂದವರಿಗೆ ರೇಖಾಂಬ ಮನೆಯೇ ಮನೆಯಾಗಿ ಹೋಯಿತು. ರುಚಿ ರುಚಿಯಾಗಿ ಉಣಬಡಿಸಿ ನೋಡಿಕೊಂಡವರ ಹೆಸರು ಹೇಳಿ ಮುಗಿಯದು. ಛತ್ರಿ ಮೇಲೆ ಘೋಷಣೆ ಬರೆಯುವುದು, ಸಂವಿಧಾನದ ಪೀಠಿಕಾ ಭಾಗದ ಕಾರ್ಡು–ಕರಪತ್ರ ಹಂಚುವುದು, 'ಬಿಳಿ ಉಡುಪಿನಲ್ಲಿ ಮಹಿಳೆಯರು' ಕಾರ್ಯಕ್ರಮವನ್ನು ಎಲ್ಲ ತಾಲೂಕುಗಳಲ್ಲಿ ನಡೆಸುವುದು, ಸಮಾವೇಶದ ಕೊನೆಗೆ ಕೊಡಲು ಸಾವಯವ ಬೀಜಗಳ ಪೊಟ್ಟಣ ಜೋಡಿಸಿಕೊಳ್ಳುವುದು.. ಓಹೋಹೋ, ತಯಾರಿಗಳು ಒಂದೇ ಸಮನೆ ನಡೆದೇ ನಡೆದವು. ಪವಿತ್ರ, ಗೌರಿ, ಕೆವಿಎಸ್ ಕಾರ್ಯಕರ್ತರ ಜೊತೆಗೆ ಕೊನೆಯ ದಿನಗಳಲ್ಲಿ ಎಲ್ಲರೂ ತಾರುಣ್ಯದ ಉತ್ಸಾಹದೊಂದಿಗೆ ಕೈ ಜೋಡಿಸಿದರು.

**ಮೆರವಣಿಗೆಯ ಕೊನೆಯಲ್ಲಿ**

ವಿಚಾರ ಸಂಕಿರಣ ಬಹಳ ಅರ್ಥಪೂರ್ಣವಾಗಿ ತುಂಬು ಸಭೆಯೊಂದಿಗೆ ನಡೆಯಿತು. ಸಂವಿಧಾನದ ಆಶಯಗಳನ್ನು ಹಿಡಿದೆತ್ತುವ ಪ್ರಯತ್ನ ನಡೆದಿತ್ತು. 'ಬಿಳಿ ಉಡುಪಿನಲ್ಲಿ ಮಹಿಳೆಯರು' ಕಾರ್ಯಕ್ರಮ ಕಣ್ಣು ಮನಸ್ಸು ತುಂಬುವ ರೀತಿಯಲ್ಲಿ ನಡೆಯಿತು. ಮೌನವೇ ಶಕ್ತಿಯಾಗುವ ಅನುಭವವಾಯಿತು. ಸಮಾವೇಶದಲ್ಲಿ ರ್‍ಯಾಲಿ ಜನಸಮೂಹದೊಂದಿಗೆ ಸಂಭ್ರಮದಲ್ಲಿ ನಡೆಯಿತು. ಕೊನೆಯಲ್ಲಿ ಮಾತ್ರ ಮೆರವಣಿಗೆಗೆ ಬಂದಷ್ಟು ಜನ ಸಮಾವೇಶದ ವೇದಿಕೆ ಕಾರ್ಯಕ್ರಮಕ್ಕೆ ಉಳಿಯಲಿಲ್ಲ; ನಾವು ನಿರೀಕ್ಷಿಸಿದಷ್ಟು ಜನ ಸೇರಿರಲಿಲ್ಲ ಎಂಬ ಕೊರಗು ಉಳಿದಿತ್ತು. ಏನೇ ಇರಲಿ ಶಿವಮೊಗ್ಗದಲ್ಲಿ ಬಹಳ ಸಮಯದ ನಂತರ ಇಂತಹ ಒಂದು ಕಾರ್ಯಕ್ರಮ ಎಲ್ಲರ ಒಗ್ಗೂಡುವಿಕೆಯಲ್ಲಿ ನಡೆಯಿತು ಅಂತ ಸ್ಥಳೀಯರು ಅಭಿನಂದಿಸಿದರು. ಶಿವಮೊಗ್ಗ ಜಿಲ್ಲೆಯಲ್ಲಿ ಒಕ್ಕೂಟದ ಸೋದರಿತ್ವದ ಪ್ರೀತಿಯ ಬಳಗ ಸುಂದರವಾಗಿ ವಿಸ್ತರಿಸಿಕೊಂಡಿತು. ಧಾರವಾಡದ ಸಮಾವೇಶಕ್ಕೆ ಅಲ್ಲಿನವರು ಕಟ್ಟಿಕೊಟ್ಟ ಕಾಣಿಕೆಯ ಗಂಟು, ಪ್ರೀತಿಯ–ನೆನಪಿನ ಗಂಟು ಇಡುಗಂಟಾಗಿ ನಮ್ಮನ್ನು ನಡೆಸುತ್ತಿವೆ ಎನ್ನಬಹುದು.

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಮಾ. 8, 2018 ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

**ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಶಿವಮೊಗ್ಗ.**

*ಸಮತೆಯೆಡೆಗೆ ನಮ್ಮ ನಡಿಗೆ*



***ನಮ್ಮ ಬದುಕು ನಮ್ಮ ಹಕ್ಕು, ಹೆಣ್ಣು ಮಗಳು ಜಗದ ಬೆಳಕು***

**ವಿಚಾರ ಸಂಕಿರಣ 'ಸಂವಿಧಾನ, ಸಮಾಜ ಮತ್ತು ಮಹಿಳೆ'**
ಮತ್ತು
**'ಸಮತೆಯೆಡೆಗೆ ನಮ್ಮ ನಡಿಗೆ' ಪುಸ್ತಕ ಬಿಡುಗಡೆ**

**ಸ್ಥಳ:** ಅಂಬೇಡ್ಕರ್ ಭವನ, ಶಿವಮೊಗ್ಗ.

**ಸಾಂಸ್ಕೃತಿಕ ಕಾರ್ಯಕ್ರಮ:** ಬೆ. 10.00–10.30

**ಉದ್ಘಾಟನಾ ಸಮಾರಂಭ:** ಬೆ. 10.30

**ಪ್ರಾಸ್ತಾವಿಕ ನುಡಿ:** ಸಬಿತಾ ಬನ್ನಾಡಿ
**ಉದ್ಘಾಟನೆ:** ಸ. ಉಷಾ
**ಪುಸ್ತಕ ಬಿಡುಗಡೆ:** ಡಿ. ಬಿ. ರಜಿಯಾ
**ದಿಕ್ಸೂಚಿ ಮಾತು:** ಮನಿಶಾ ಗುಪ್ತೆ, ಪುಣೆ
**ನಿರ್ವಹಣೆ:** ಸುಧಾ ಬಿ. ಎಸ್.

**ವಿಚಾರ ಗೋಷ್ಠಿ:** ನಡುಹಗಲು 12.30 –1.30

**ಸಂವಿಧಾನ ಮತ್ತು ಲಿಂಗರಾಜಕಾರಣ:** ವಿನಯಾ, ಧಾರವಾಡ
**ಪ್ರತಿಕ್ರಿಯೆ:** ವೈ. ಎಸ್. ಶ್ರೀಲಕ್ಷ್ಮಿ ಮೈಸೂರು, ವೀಣಾ ಭಟ್, ಭದ್ರಾವತಿ, ನಿಶಾ ಗೂಳೂರು, ಬೆಂಗಳೂರು.

2.30–3.30: **ಸಂವಿಧಾನ ಮತ್ತು ದುಡಿಯುವ ವರ್ಗ:** ಶೈಲಜಾ ವೇಣುಗೋಪಾಲ್, ಮೈಸೂರು
**ಪ್ರತಿಕ್ರಿಯೆ:** ಟಿ. ಪದ್ಮಶ್ರೀ ಮೈಸೂರು, ಭಾಗೀರತಿ ಚರಕ, .ಲಚುಮಮ್ಮ, ಹಿರೇಮನೆ

3.30–4.30: **ಸಂವಿಧಾನ ಮತ್ತು ಧರ್ಮ** – ರೇಶ್ಮಾ, ಶಿವಮೊಗ್ಗ
**ಪ್ರತಿಕ್ರಿಯೆ:** ವೃಂದಾ ಹೆಗಡೆ ಸಾಗರ, ನಸ್ರೀನ್ ಹೊಸಪೇಟೆ, ಸಿ. ಗೀತಾ ಭದ್ರಾವತಿ.

**ನಿರ್ವಹಣೆ:** ಚೈತ್ರಾ, ಶಿವಮೊಗ್ಗ

ಸಂಜೆ: 5.30 ರಿಂದ 6.30ರವರೆಗೆ **'ಬಿಳಿಯುಡುಪಿನಲ್ಲಿ ನಾವು',** ಮೌನಜಾಗೃತಿ, ಗೋಪಿ ಸರ್ಕಲ್, ಶಿವಮೊಗ್ಗ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಹೆಣ್ಣಿನ ಸವಾಲು ಮತ್ತು ಸಾಧ್ಯತೆಗಳ ವಿವಿಧ ಮುಖಗಳನ್ನು ಅನಾವರಣಗೊಳಿಸಿದ ವಿಚಾರ ಸಂಕಿರಣ

❖ **ಬಿ. ಎಸ್. ಸುಧಾ,** ಭದ್ರಾವತಿ.

**ಕ**ರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ 2018ರ ಮಹಿಳಾ ಚೈತನ್ಯದ ದಿನದ ಅಂಗವಾಗಿ ಎರಡು ದಿನಗಳ ಕಾರ್ಯಕ್ರಮವನ್ನು ಶಿವಮೊಗ್ಗದಲ್ಲಿ ಹಮ್ಮಿಕೊಳ್ಳಲಾಗಿತ್ತು. ಮೊದಲ ದಿನದ ಕಾರ್ಯಕ್ರಮವನ್ನು 'ಸಂವಿಧಾನ, ಸಮಾಜ ಮತ್ತು ಮಹಿಳೆ' ವಿಷಯ ಕುರಿತ ವಿಚಾರ ಸಂಕಿರಣ ಹಾಗೂ 'ಸಮತೆಯೆಡೆಗೆ ನಮ್ಮ ನಡಿಗೆ' ಎಂಬ ಪುಸ್ತಕ ಬಿಡುಗಡೆಯ ಮೂಲಕ ಆರಂಭಿಸಲಾಯಿತು. ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಇದು ಮೇಲ್ನೋಟಕ್ಕೆ ಎರಡು ದಿನಗಳ ಕಾರ್ಯಕ್ರಮ ಎಂದೆನಿಸಿದರೂ, ಇದು ಹಲವು ದಿನಗಳ ಕಾಲ ನಿರಂತರವಾಗಿ ನಡೆದ ಮಹಿಳಾ ಜಾಗೃತಿ ಕಾರ್ಯಕ್ರಮದ ಒಂದು ಭಾಗ. ಏಕೆಂದರೆ ಎರಡು ದಿನಗಳ ಮಹಿಳಾ ಸಮಾವೇಶಕ್ಕೆ ಪೂರ್ವ ಪೀಠಿಕೆಯಾಗಿ 8–10 ತಿಂಗಳ ಕಾಲ ಶಿವಮೊಗ್ಗ ಜಿಲ್ಲೆಯಾದ್ಯಂತ ವಿವಿಧ ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ಪದವಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಕಾರ್ಯಕ್ರಮ ಯಶಸ್ವಿಯಾಗಲು ಒಕ್ಕೂಟದ ಸದಸ್ಯರು ನಿರಂತರವಾಗಿ ಶ್ರಮಿಸಿದ್ದಾರೆ. ಅದೆಲ್ಲದರ ಸಾರ್ಥಕತೆಯ ಫಲಶೃತಿ ಈ ಸಮಾವೇಶ. 'ಸಮತೆಯೆಡೆಗೆ ನಮ್ಮ ನಡಿಗೆ' ಪುಸ್ತಕ ಬಿಡುಗಡೆ ಹಾಗೂ 'ಸಂವಿಧಾನ, ಸಮಾಜ ಮತ್ತು ಮಹಿಳೆ' ವಿಷಯ ಕುರಿತಾದ ವಿಚಾರ ಸಂಕಿರಣ ಒಟ್ಟು ಸಮಾವೇಶದ ಮುನ್ನುಡಿಯೂ ಹೌದು, ಅದರ ಕೇಂದ್ರ ಭಾಗವೂ ಹೌದು.

ವಿಚಾರ ಸಂಕಿರಣ ಆರಂಭವಾಗುವುದಕ್ಕೂ ಮೊದಲು ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ ಕಲಾವಿದರುಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಲಾಯಿತು. ಬೆಂಗಳೂರಿನ ಉತ್ಸಾಹಿ ಗೆಳತಿ ಚಿತ್ರಾ ತಮ್ಮ ಹಾಡಿನ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಪುಣೆಯ ಲೋಕಾಯತ ಸಂಸ್ಥೆಯ ಯುವ ಸಂಗಾತಿಗಳು, ಗದಗಿನ ದಲಿತ ಕಲಾ ಮಂಡಳಿಯವರು, ಮಹಿಳಾ ಮುನ್ನಡೆ ತಂಡ ಹಾಗೂ ಶಿವಮೊಗ್ಗದ ರಂಗಬೆಳಕು ತಂಡಗಳ ಕಲಾವಿದರು ಸಾಮೂಹಿಕ ಗೀತೆಗಳನ್ನು ಹಾಡಿ ಕಾರ್ಯಕ್ರಮದ ಆರಂಭಕ್ಕೆ ಕಳೆ ಕಟ್ಟಿದರು.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸದಸ್ಯರು 'ತೂರಬೇಡಿ ಗಾಳಿಗೆ ಹೆಣ್ತನದ ಘನತೆಯ' ಎಂಬ ಆಶಯ ಗೀತೆಯನ್ನು ಹಾಡುವುದರ ಮೂಲಕ ವಿಚಾರಣ ಸಂಕಿರಣಕ್ಕೆ ಚಾಲನೆಯನ್ನು ನೀಡಿದರು. ತರೀಕೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕಿ ಡಾ. ಸಬಿತಾ ಬನ್ನಾಡಿ ಕಾರ್ಯಕ್ರಮದ ಆಶಯ ನುಡಿಗಳನ್ನಾಡಿ ಎಲ್ಲರನ್ನೂ ಸ್ವಾಗತಿಸಿದರು.

ವಿಚಾರ ಸಂಕಿರಣದ ಉದ್ಘಾಟನೆಯನ್ನು ಶಿವಮೊಗ್ಗೆಯ ಲೇಖಕಿ ಸ. ಉಷಾ ಆಳುದ್ದದ ಕೈಮಗ್ಗ ಬಟ್ಟೆಯ ಮೇಲೆ ಕೈಯಿಂದ ಬರೆಯಲ್ಪಟ್ಟ ಸಂವಿಧಾನದ ಪ್ರಸ್ತಾವನೆಯ ಸುರುಳಿ ಬಿಚ್ಚುವ ಮೂಲಕ ಹಾಗೂ ಸಂವಿಧಾನದ ಪ್ರಸ್ತಾವನೆಯನ್ನು ಬೋಧಿಸುವ ಮೂಲಕ ಉದ್ಘಾಟಿಸಿದರು. ಕೈಮಗ್ಗದ ಬಟ್ಟೆಯ ಮೇಲೆ ಸಂವಿಧಾನದ ಪ್ರಸ್ತಾವನೆಯನ್ನು ಸುಂದರವಾಗಿ ಅರಳಿಸಿದವರು ಶಿವಮೊಗ್ಗದ 'ನಂ ಟೀಂ'ನ ಕಲಾವಿದ ಎಸ್. ಸುಂದರೇಶ್.

ಪುಣೆಯಿಂದ ಬಂದಿದ್ದ ಮನಿಶಾ ಗುಪ್ತೆಯವರಿಗೆ ಉಡಿತುಂಬುವ ಮೂಲಕ ಗೌರವಿಸಲಾಯಿತು. ಇದು ಶಿವಮೊಗ್ಗದಲ್ಲಿ ಬೆಳೆಯುವ ಸಾವಯವ ಅಕ್ಕಿ, ಭೂಮಿ ಹುಣ್ಣಿಮೆಯ ಬುಟ್ಟಿ ಮತ್ತು ತಡಿಕೆಯ ಮುಚ್ಚಿಗೆಯನ್ನು ಒಳಗೊಂಡಿತ್ತು. ಉಡಿ ತುಂಬಲು ಬಳಸಿದಂತಹ ಭೂಮಿ ಹುಣ್ಣಿಮೆಯ ಬುಟ್ಟಿ ಮತ್ತದರ ಮೇಲೆ ತಡಿಕೆ ಮುಚ್ಚಿಗೆಯನ್ನು ಮಾಡಿಕೊಟ್ಟವರು ಸಿರಿವಂತೆಯ ಚಿತ್ರಸಿರಿ ದಂಪತಿಗಳು. ಚಿತ್ರಸಿರಿ ದಂಪತಿಗಳಾದ ಚಂದ್ರಶೇಖರ ಸಿರಿವಂತೆ ಮತ್ತು ಗೌರಿ ಅವರು, ಹಸೆ ಚಿತ್ರ, 'ಚಕ್ಕಳ ಬಕ್ಕಳ ಚಿನ್ನಾಣಿ'ಯನ್ನು ಬಿಡಿಸಿದ್ದರು. ಇದು ಸಾಂಕೇತಿಕವಾಗಿ ಮಹಿಳೆಯ ಸ್ವಾಯತ್ತತೆ, ಲೈಂಗಿಕತೆ ಮೊದಲಾದ ಹಲವಾರು ವಿಷಯಗಳನ್ನು ಒಳಗೊಂಡಿತ್ತು. ಅದನ್ನು ಮನೀಷಾ ಗುಪ್ತೆಯವರಿಗೆ ನೆನಪಿನ ಕಾಣಿಕೆಯಾಗಿ ನೀಡಲಾಯಿತು. ಇದೇ ಸಂದರ್ಭದಲ್ಲಿ ಮಹಿಳಾ ಸಮಾವೇಶವನ್ನು ಕುರಿತು ಪ್ರಕಾಶ್ ರೈ ಅವರು ಎನ್. ರವಿಕುಮಾರ್ ಮೂಲಕ ಕಳುಹಿಸಿದ ಸಂದೇಶವನ್ನು ಓದಲಾಯಿತು. ಪ್ರಕಾಶ್ ರೈ 'ನಿಮ್ಮ ಸಮಾವೇಶ ನನ್ನದೂ ಹೌದು, ನನ್ನ ಪ್ರಶ್ನೆಗಳು ನಿಮ್ಮವೂ ಹೌದು. ಮುಂದಿನ ಹಾದಿ ಮುಳ್ಳಿನದ್ದೇ ಆಗಿರಲಿ, ಅದನ್ನು ಗುಲಾಬಿ ಹಾದಿಯನ್ನಾಗಿ ಮಾರ್ಪಡಿಸೋಣ, ಶುಭಾಶಯಗಳೊಂದಿಗೆ ಪ್ರೀತಿಯ ಹಾಗೂ ಗೌರವದೊಂದಿಗೆ ನಿಮ್ಮೆಲ್ಲರ ಸಹೋದರ ಪ್ರಕಾಶ್ ರೈ' ಎಂದು ತಮ್ಮ ಅನುಪಸ್ಥಿತಿಯಲ್ಲಿಯೂ ಕಾರ್ಯಕ್ರಮಕ್ಕೆ ಶುಭ ಕೋರಿದರು.

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಹೋರಾಟಕ್ಕೆ ಅಂತ್ಯವಿಲ್ಲ, ಆರಂಭ ಮಾತ್ರ ಇದೆ

❖ ಸ. ಉಷಾ

**ಕ**ಳೆದ ಏಳೆಂಟು ತಿಂಗಳುಗಳಿಂದ ನಮ್ಮ ಶಿವಮೊಗ್ಗೆಗೆ ಒಕ್ಕೂಟದಲ್ಲಿರುವ ಬೆಂಕಿಯ ಚೂರಿನಂತ ಹುಡುಗಿಯರು ಅರಿವಿನ ಬೆಳಕನ್ನು ಹರಡಿದ್ದಾರೆ. ಅವರ ಜೊತೆಗೆ ಶಿವಮೊಗ್ಗೆಯ ಹುಡುಗಿಯರೂ ಬೆರೆತು ದುಡಿದಿದ್ದಾರೆ. ನಾನು ಆಕ್ಟಿವಿಸ್ಟ್ ಅಲ್ಲ. ನನ್ನ ಹೋರಾಟ ಅಧ್ಯಯನ, ಅಧ್ಯಾಪನ, ಬರವಣಿಗೆ ಮತ್ತು ತುಂಬಾ ತುಂಬಾ ಪ್ರೀತಿಯದು. ಈ ಗೆಳತಿಯರ ಪ್ರೀತಿಗೆ ಮಣಿದು ನಾನು ಈ ವೇದಿಕೆಯ ಗೌರವವನ್ನು ಒಪ್ಪಿಕೊಂಡಿದ್ದೇನೆ. ಅಷ್ಟೇ ಹೊರತು ನನ್ನ ಹೋರಾಟದ ಶಕ್ತಿಯ ಬಗೆಗೆ ನನಗೆ ಭ್ರಮೆಗಳೇನೂ ಇಲ್ಲ. ಈ ಒಕ್ಕೂಟದಲ್ಲಿ ಅನೇಕ ಸಂಘಟನೆಗಳಿವೆ. ಒಕ್ಕೂಟದ ಗೆಳತಿಯರು ತಮ್ಮದು ಪ್ರೀತಿಯ ರಾಜಕಾರಣ ಎಂದು ಹೇಳುತ್ತಾರೆ. ಸೂಕ್ಷ್ಮ ಪುರುಷನ ಬಗ್ಗೆ ಅವರಿಗೆ ಪ್ರೀತಿ ಗೌರವಗಳಿವೆ. ಹಾಗಾಗಿ ಅವರು ತಮ್ಮ ಸಹ ಹೋರಾಟಗಾರರನ್ನು ಗೌರವದಿಂದ ಕಾಣುತ್ತಾ ತಮ್ಮ ಹಕ್ಕೊತ್ತಾಯಗಳನ್ನು ಸಮಾಜದ ಮುಖ್ಯಧಾರೆಯ ಎದುರು ಇಡುತ್ತಿದ್ದಾರೆ. ಒಕ್ಕೂಟಕ್ಕೆ ಇದು ಆರನೆಯ ವರ್ಷ. ನಾನು ಕಂಡಂತೆ ಅಕ್ಟೋಬರಿನಿಂದಲೇ ಶಿವಮೊಗ್ಗ ಜಿಲ್ಲೆಯ ಬೇರೆ ಬೇರೆ ಊರುಗಳಲ್ಲಿ ಈ ಸಹೋದರಿಯರು ದುಡಿದಿದ್ದಾರೆ. ಬುದ್ಧಿವಂತಿಕೆ, ಸೌಂದರ್ಯ, ಒಳ್ಳೆಯ ಸ್ಪರ್ಶ, ಒಳ್ಳೆಯದಲ್ಲದ ಸ್ಪರ್ಶ – ಈ ರೀತಿಯ ವಿಷಯಗಳ ಬಗ್ಗೆ ಶಾಲಾ ವಿದ್ಯಾರ್ಥಿಗಳಿಗೆ ಅರಿವಿನ ಪಯಣ ಕೊಟ್ಟಿರುವ ತಿಳಿವಳಿಕೆ ದೊಡ್ಡದು. ಹಾಡು, ನಾಟಕ, ಘೋಷಣೆಗಳ ಮೂಲಕ ಈ ಗೆಳತಿಯರು ಹೇಳಿದ್ದು ಪೋಷಕರು ಅಥವಾ ಅಧ್ಯಾಪಕರು ಹೇಳುವುದಕ್ಕಿಂತಲೂ ಹೆಚ್ಚಾಗಿ ಮನಸ್ಸನ್ನು ತಟ್ಟುತ್ತದೆ. ಯಾವ ಊರಿನ ಯಾವ ಶಾಲೆಯಲ್ಲಿ ನಾಳಿನ ಹೋರಾಟಗಾರ್ತಿಯರು ಬೆಳೆಯುತ್ತಿದ್ದಾರೋ ಯಾರಿಗೆ ಗೊತ್ತು? ಮುಟ್ಟಿನ ಬಗ್ಗೆ ಈ ಸೋದರಿಯರು ಮಾಡುತ್ತಿರುವ ಪ್ರಚಾರಾಂದೋಲನ ಸಹ ಸಾಮಾಜಿಕ ಆರೋಗ್ಯಕ್ಕೆ ತುಂಬಾ ಮಹತ್ವಪೂರ್ಣವಾದುದು. 2015ರ ಮಹಿಳಾದಿನದ ಆಚರಣೆಗೆ ಸಂಬಂಧಿಸಿದಂತೆ ಒಕ್ಕೂಟವು ಮುಂದಿಟ್ಟ ಹದಿನೆಂಟು ಹಕ್ಕೊತ್ತಾಯಗಳು ಇಂದಿಗೂ ಕೂಡ ಪ್ರಸ್ತುತವಾಗಿವೆ.

ನಮ್ಮ ಸಮಾಜದ ಬೆಳವಣಿಗೆಯಲ್ಲಿ ಫ್ಯೂಡಲ್ ಸಮಾಜದ, ಬಂಡವಾಳಶಾಹಿ ಸಮಾಜದ, ವಸಾಹತುಶಾಹಿ, ನವವಸಾಹತುಶಾಹಿ ಸಮಾಜಗಳು ಹಾಕಿಕೊಟ್ಟ ಮೌಲ್ಯಗಳು


Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮತ್ತು ಆಲೋಚನೆಗಳು ಎಂಥ ಹೋರಾಟಗಾರರ ಮನಸ್ಸಿನಲ್ಲೂ ಅಷ್ಟಿಷ್ಟು ಉಳಿದುಕೊಂಡು ಸಮತೆಯ ಬದುಕನ್ನು ದುಸ್ತರವಾಗಿಸಿವೆ. ಪುರುಷ ರಾಜಕಾರಣ ಎಂದು ಯಾವುದನ್ನು ಕರೆಯುತ್ತೇವೆಯೋ ಅದರ ತಂತ್ರಗಳು ಪ್ರತಿತಂತ್ರ ಉಪಯೋಗದಲ್ಲಿ ಮಹಿಳೆಯರೇನೂ ಹಿಂದೆ ಬಿದ್ದಿಲ್ಲ. ಅದೇ ರೀತಿ ಮಹಿಳೆಯರ ಹೋರಾಟಕ್ಕೆ, ಸಮಾನತೆಯ ತತ್ವಗಳಿಗೆ ಸೂಕ್ಷ್ಮ ಮನಸ್ಸಿನ ಪುರುಷರು ಕೊಟ್ಟಿರುವ ಕಾಣಿಕೆಯನ್ನು ಇಲ್ಲಿ ಅಲ್ಲಗಳೆಯುವಂತಿಲ್ಲ.

ಕೊನೆಯದಾಗಿ ಒಂದು ಮಾತು ಹೇಳಬಹುದು. ನಾವು ಸಾವಿತ್ರಿಯರ ಕತೆಗಳನ್ನು ಕೇಳಿದ್ದೇವೆ. ಆದರೆ ಪುರಾಣದಲ್ಲಿ ರುರುವಿನ ಕತೆಯೂ ಇದೆ. ಇಂದಿನ ಸೂಕ್ಷ್ಮ ಪುರುಷ ನಾಗವಿಷದ ಪ್ರಭಾವದಿಂದ ತನ್ನ ಮಡದಿ–ಪ್ರಿಯತಮೆಯನ್ನು ಬದುಕಿಸಿಕೊಂಡ ರುರುವೂ ಆಗಿದ್ದಾನೆ. ನನ್ನ ಕಣ್ಣೆದುರು ನಮ್ಮ ಶಿವಮೊಗ್ಗೆಯಲ್ಲೇ ಬರಹಗಾರರು, ಹೋರಾಟಗಾರರು, ಹಾಡುಗಾರರು, ಧಾರ್ಮಿಕ ನಾಯಕರು–ನಮ್ಮೊಡನೆ ಮಾನವ ಸರಪಳಿಯಾಗಿ ನಮಗೆ ಬೆಂಬಲ ಕೊಟ್ಟಿದ್ದಾರೆ. ಇನ್ನೇನು ಹೇಳಲಿ? ಆರನೆಯ ವರ್ಷದ ಈ ಹೋರಾಟದಲ್ಲಿ, ಅರಿವಿನ ಪಯಣದಲ್ಲಿ ಅರಿವು ಮುನ್ನಡೆಯಲಿ – ಹೋರಾಟಕ್ಕೆ ಅಂತ್ಯವಿಲ್ಲ. ಆರಂಭ ಮಾತ್ರ ಇದೆ. ಎಲ್ಲರಿಗೂ ತುಂಬಾ ತುಂಬಾ ಪ್ರೀತಿ.

*(ಆಶಯ ನುಡಿ)*

❖



Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಸಮತೆಯೆಡೆಗೆ ನಮ್ಮ ನಡಿಗೆ

❖ ಡಿ. ಬಿ. ರಜಿಯಾ

**ಸ**ತತ ಮೂರ್‍ನಾಲ್ಕು ತಿಂಗಳಿಂದ ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಎಲ್ಲರಿಗೂ ನನ್ನ ಅಭಿನಂದನೆಗಳು. ಪುಸ್ತಕದ ಕುರಿತು ಒಂದೆರಡು ಔಪಚಾರಿಕ ಮಾತುಗಳನ್ನಷ್ಟೇ ಆಡಲು ಇಷ್ಟಪಡುತ್ತೇನೆ.

ಈ ಪುಸ್ತಕದ ಶೀರ್ಷಿಕೆಯೇ ಹೇಳುವಂತೆ ಇದು ಸಮತೆಯೆಡೆಗೆ ನಮ್ಮ ನಡಿಗೆ. ಮಹಿಳೆಯರ ಜ್ವಲಂತ ಸಮಸ್ಯೆಗಳು ಮುಗಿಯುವಂತೆ ಒಳಗೊಳ್ಳುವ ವಿಚಾರ ಮಾಡುವ ಧ್ವನಿಯಾಗಿ ಈ ಪುಸ್ತಕ ಬಂದಿದೆ. ಈ ಕೃತಿಯನ್ನು ದಿಟ್ಟ ಹೋರಾಟಗಾರ್ತಿ ಆದ ಗೌರಿಗೆ ಅರ್ಪಿಸಿರುವುದು ಅತ್ಯಂತ ಸೂಕ್ತ ಮತ್ತು ಅವರ ಪ್ರತಿನಿಧಿಯಾಗಿ ನಾವೆಲ್ಲರೂ ಇದ್ದೀವಿ ಅಂತ ಭಾವಿಸುತ್ತೇನೆ. ಪುಸ್ತಕವನ್ನು ಮೂರು ಭಾಗವಾಗಿ ವಿಂಗಡಿಸಿದ್ದಾರೆ. ಮೊದಲನೇ ಭಾಗದಲ್ಲಿ ಕೊಪ್ಪಳ ಸಮಾವೇಶದ ಬಗ್ಗೆ ಸಾಕಷ್ಟು ಇದೆ. ಎರಡನೇ ಭಾಗದಲ್ಲಿ ಕವನಗಳಿವೆ. ಮೂರನೇ ಭಾಗದಲ್ಲಿ ಗೌರಿ ಸ್ಮರಣೆ ಮತ್ತು ಕೆಲವು ಕವನಗಳೂ ಇವೆ. ಮತ್ತು ನಾನು ಇಲ್ಲಿ ಒಳಗೊಳ್ಳುವುದಕ್ಕೆ ಇಷ್ಟೇ ಕಾರಣ, ಅದು ದು. ಸರಸ್ವತಿ ಅವರು ಹೇಳಿದಂತೆ ಪ್ರೀತಿಯ ರಾಜಕಾರಣ ಮತ್ತು ಎಲ್ಲರನ್ನೂ ಒಳಗೊಳ್ಳುವುದು ಅಂತ. ಹಾಗಾಗಿ ನಾನು ಇಲ್ಲಿ ಈ ದಿನ ನಿಮ್ಮೆಲ್ಲರ ಒಡನಾಟದಲ್ಲಿ ಸಿಕ್ಕಿರೋ ಅವಕಾಶ ಅಂತ ಭಾವಿಸಿಕೊಂಡಿದ್ದೇನೆ.

ಪುಸ್ತಕದ ಶೀರ್ಷಿಕೆಯೇ ತಿಳಿಸುವಂತೆ 'ಸಮತೆಯೆಡೆಗೆ ನಮ್ಮ ನಡಿಗೆ' ಮಹಿಳೆಯರ ಜ್ವಲಂತ ಸಮಸ್ಯೆಗಳೆಡೆಗೆ ಮಿಡಿಯುವಂತಹವರ, ಒಳಗೊಳ್ಳುವಂತಹವರ ಧ್ವನಿಯಾಗಿ ಮೂಡಿಬಂದಿದೆ. ಪ್ರತಿಯೊಂದು ಕಾಲಘಟ್ಟದಲ್ಲೂ ಮಹಿಳೆಯರು ಹಿಂಸೆ, ಅನ್ಯಾಯ, ಅಸಮಾನತೆಗಳ ವಿರುದ್ಧ ಆತ್ಮವಿಶ್ವಾಸದಿಂದ ಪ್ರತಿರೋಧ ಒಡ್ಡುತ್ತಲೇ ಬಂದಿದ್ದರೂ ಸಹ, ಆರ್ಥಿಕತೆಯೊಂದಿಗೆ ಧರ್ಮ, ಜಾತಿ ವ್ಯವಸ್ಥೆಯು ಕೈಜೋಡಿಸುವುದರಿಂದ ಮಹಿಳೆಯ ಮೇಲಿನ ಹಿಂಸೆಯ ಸ್ವರೂಪಗಳು ಹೆಚ್ಚು ಸಂಕೀರ್ಣಗೊಳ್ಳುತ್ತಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ. ಈ ಪುಸ್ತಕದಲ್ಲಿ ಕೊಪ್ಪಳ ಸಮಾವೇಶದ ವಿವರಗಳೊಂದಿಗೆ ಅಲ್ಲಿನ ಜ್ವಲಂತ ಸಮಸ್ಯೆಗಳಾದ ದೇವದಾಸಿ ಪದ್ಧತಿ, ಬಾಲ್ಯ ವಿವಾಹ, ಮುಟ್ಟಿನ ಮೌಢ್ಯ, ತಾಯಿಮರಣ, ಹೆಣ್ಣುಮಕ್ಕಳು ಕೆಲಸ ಮಾಡುವ ಜಾಗಗಳಲ್ಲಿ


Edited with the trial version of Foxit Advanced PDF Editor
To remove this notice, visit: www.foxitsoftware.com/shopping

ನಡೆಯುವ ಲೈಂಗಿಕ ದೌರ್ಜನ್ಯ ಇತ್ಯಾದಿಗಳ ಕುರಿತು ಜಾಗೃತಿ ಮೂಡಿಸುವ ಅಗತ್ಯ ಕುರಿತ ವಿಚಾರವು ಕೊಪ್ಪಳದ ಕಾರ್ಯಕ್ರಮಗಳಲ್ಲಿ ಮುನ್ನೆಲೆಗೆ ಬಂದಿದ್ದನ್ನು ದಾಖಲಿಸಲಾಗಿದೆ. ಹಾಗೆಯೇ ತಿಂಗಳುಗಳ ಕಾಲ ನಡೆಸಿದ ಅಭಿಯಾನದಲ್ಲಿ ಮಹಿಳೆಯರೊಂದಿಗೆ ಪುರುಷರೂ ಜೊತೆಗೂಡಿದ್ದು ಸಂತಸದ ವಿಷಯ. ಅಡಿಗೆ ಸಹಾಯಕಿಯರು, ಕಾರ್ಮಿಕ ಮಹಿಳೆಯರು ತಮ್ಮ ಕೂಲಿಯನ್ನು ಬಿಟ್ಟು ಸಮಾವೇಶಕ್ಕೆ ಬಂದಿದ್ದಲ್ಲದೇ ಅಲ್ಲಿ ಅಡುಗೆ ಕೆಲಸ ಮಾಡಿದ್ದಕ್ಕೆ ಕೂಲಿ ಪಡೆಯಲು ಸುತಾರಾಂ ಒಪ್ಪದೇ, 'ಹತ್ತು ರೂಪಾಯಿ ತಗೊಂಡ್ರೂ ಒಂದೇ, ನೂರು ರೂಪಾಯಿ ತಗೊಂಡ್ರೂ ಒಂದೇ. ನೀವು ಮಾಡೋ ಒಳ್ಳೇ ಕೆಲಸಕ್ಕೆ ನಾವು ಬೇರೇನೂ ಕೊಡಲಾರೆವು' ಎಂದು ಪ್ರೀತಿ ಅಭಿಮಾನದಿಂದ ಹೋಟೆಲ್ ಕಾರ್ಮಿಕ ಸಂಘದ ಅಣ್ಣತಮ್ಮಂದಿರು ಹೇಳಿದ್ದನ್ನು ಓದುವಾಗ ಒಳಗೊಳ್ಳುವಿಕೆಯ ಸಾರ್ಥಕ್ಯ ಅರಿವಿಗೆ ಬರುತ್ತದೆ.

ನಮ್ಮೊಳಗೆ ಹಲವು ವೈರುಧ್ಯಗಳು ಇರಬಹುದು. ಅದನ್ನು ಗಮನದಲ್ಲಿ ಇಟ್ಟುಕೊಂಡು, ಸಮಾನತೆಯನ್ನು ಅರಸುತ್ತಾ ನಡೆಯುವುದು ಮುಖ್ಯವಾಗಿದೆ. ಕೊಪ್ಪಳದ ಸಮಾವೇಶ ಇದನ್ನು ಪುಷ್ಟೀಕರಿಸುತ್ತದೆ. ಹಾಗೂ ಈ ಕೃತಿ ಅದನ್ನು ಸಮರ್ಥವಾಗಿ ದಾಖಲಿಸುತ್ತದೆ.

*('ಸಮತೆಯೆಡೆಗೆ ನಮ್ಮ ನಡಿಗೆ' ಪುಸ್ತಕ ಬಿಡುಗಡೆಯ ನುಡಿಗಳು)*

❖



Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಅತಿಥಿಗಳ ಪರಿಚಯ

❖ ಎಚ್. ಎಸ್. ಅನುಪಮಾ

**ಹಳ್ಳಿಗೆ ಹೋದ ನಗರದ ಜೋಡಿ**

ಪುಣೆಯ ಮನಿಶಾ ಮೂರನೇ ತಲೆಮಾರಿನ ಹೋರಾಟಗಾರರ ಮನೆತನದ ಹಿನ್ನೆಲೆಯವರು. ಅವರ ಅಜ್ಜ ನೀಲಕಾಂತ ಗುಪ್ತೆ ಗಾಂಧೀಜಿಯವರ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲೆಂದು ವಕೀಲಿ ವೃತ್ತಿ ತೊರೆದವರು. ತಮ್ಮ ಮಕ್ಕಳನ್ನೂ ಸಮಾಜಸೇವೆಗೈಯಲು ಪ್ರೋತ್ಸಾಹಿಸಿದವರು. ಮನಿಶಾ ಅವರ ತಾಯ್ತಂದೆಯರಾದ ವಸಂತ ಮತ್ತು ಶಾಲಿನಿ ಗುಪ್ತೆ ಸೋಶಿಯಲಿಸ್ಟ್ ಪಕ್ಷದ ಸದಸ್ಯರು ಮತ್ತು ಟ್ರೇಡ್ ಯೂನಿಯನ್ ಚಳುವಳಿಯ ವೇಳೆ ಪರಿಚಯವಾಗಿ ಉಟ್ಟ ಖಾದಿಬಟ್ಟೆಯಲ್ಲೇ ಸರಳ ವಿವಾಹವಾದವರು. ವಸಂತ ಗುಪ್ತೆ ಹಿಂದೂ ಮಜ್ದೂರ್ ಸಭಾದ ರಾಷ್ಟ್ರೀಯ ಕಾರ್ಯದರ್ಶಿಯಾಗಿದ್ದರು. ಹೀಗಾಗಿ ರಾಷ್ಟ್ರ ಸೇವಾದಳ, ಸಾಣೆ ಗುರೂಜಿ ಅವರ ಪ್ರಭಾವವಲಯದಲ್ಲಿಯೇ ಮನಿಶಾ ಬಾಲ್ಯ ಕಳೆಯಿತು. ಮಾನವಹಕ್ಕುಗಳ ಪರ ದನಿಯೆತ್ತುವುದು ಸಹಜವೆಂಬಂತೆ ಅವರಿಗೆ ಒಲಿಯಿತು.

ಮೈಕ್ರೋಬಯಾಲಜಿ ಎಂಎಸ್ಸಿ ಮಾಡುತ್ತಿದ್ದ ಮನಿಶಾಗೆ ಪ್ರಯೋಗಶಾಲೆಯಲ್ಲಿ ಮೈಕ್ರೋಸ್ಕೋಪಿನ ಅಡಿಯಲ್ಲಿ ನೋಡುವಾಗ ಇಡಿಯ ವಿಶ್ವವನ್ನೇ ಕಂಡಂತೆನಿಸುತ್ತಿತ್ತು. ಆದರೆ ಮಹಿಳಾ ಸಮಸ್ಯೆಗಳತ್ತ ನೋಡುವಾಗ ಅದಷ್ಟೆ ಸಾಲದು ಎನಿಸಿತು. ಮಹಿಳಾ ದೌರ್ಜನ್ಯ, ಬಾಲ್ಯವಿವಾಹ, ಮಹಿಳಾ ಹಕ್ಕುಗಳ ಕುರಿತು, ಪ್ರಜನನ ಆರೋಗ್ಯ ಹಕ್ಕುಗಳ ಕುರಿತು ಏನಾದರೂ ಮಾಡಲೇಬೇಕೆಂಬ ತುಡಿತ ಹುಟ್ಟಿತು.

ಅದು ಜಯಪ್ರಕಾಶ್ ನಾರಾಯಣ್ ಅವರ 'ಸಂಪೂರ್ಣ ಕ್ರಾಂತಿ' ದೇಶಾದ್ಯಂತ ತರುಣತರುಣಿಯನ್ನು ಸೆಳೆದ ಕಾಲ. ಸಮಾಜವಾದಿ ಕುಟುಂಬ ಹಿನ್ನೆಲೆಯ ಮನಿಶಾ ಜೆಪಿ ಚಳುವಳಿಯ ಛಾತ್ರ ಯುವ ವಾಹಿನಿ ಸೇರಿದರು. ಸಮಾಜಶಾಸ್ತ್ರ ಎಂಎ ಮುಗಿಸಿ ಪಿಎಚ್‌ಡಿ ಮಾಡತೊಡಗಿದರು. ಮುಂಬಯಿಯ ಸ್ಲಮ್ಮಿನಲ್ಲಿಯೂ ಕೆಲಸ ಮಾಡುತ್ತಿದ್ದರು. ಅದೇವೇಳೆ ಐಐಟಿ ಡೆಲ್ಲಿಯ ಪದವೀಧರ, ಅರ್ಥಶಾಸ್ತ್ರದ ಸ್ನಾತಕೋತ್ತರ ಪದವೀಧರ, ಪಾಕಿಸ್ತಾನದ ಪಂಜಾಬಿನಿಂದ ಭಾರತದ ವಿಭಜನೆ ವೇಳೆ ಗಡಿಯೀಚೆ ವಲಸೆ ಬಂದ ಕುಟುಂಬದ ಡಾ. ರಮೇಶ್ ಅವಸ್ಥಿ ಎಂಬ ತರುಣನೂ ಜೆಪಿ ಚಳುವಳಿಯಲ್ಲಿದ್ದ.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಮುಂಬಯಿ ಸ್ಲಮ್ಮಿನಲ್ಲಿ ಮನಿಶಾ–ರಮೇಶ್ ಪರಿಚಿತರಾದರು. 1982ರಲ್ಲಿ ಬಾಳಸಂಗಾತಿಗಳಾದರು. ಅಂದಿನಿಂದ 'ದ ವೀಕ್' ಪತ್ರಿಕೆಯ 'ಕಪಲ್ ಆಫ್ ದ ಇಯರ್ 2017' ಆಗುವವರೆಗಿನ ಅವರ ಪಯಣದ ದಾರಿ ಸ್ಫೂರ್ತಿದಾಯಕವಾಗಿದೆ.

'ನಿಜವಾದ ಭಾರತ ನೋಡಬೇಕಾದರೆ ಹಳ್ಳಿಗಳಿಗೆ ಹೋಗಿ. ದೇಶ ಬದಲಾಯಿಸಬೇಕಾದರೆ ಜನರ ಜೊತೆಗಿರಿ. ಕಡಿಮೆ ಮಾತನಾಡಿ, ಹೆಚ್ಚು ಕೇಳಿ, ಹೆಚ್ಚು ಗ್ರಹಿಸಿ. ಉತ್ತರಗಳ ಜೊತೆಗೆ ಹೋಗಬೇಡಿ, ಜನರ ನಾಡಿಮಿಡಿತ ಅರಿತರೆ ಉತ್ತರ ಅವರಿಂದಲೇ ಬರುತ್ತದೆ. ಜನರ ಜೊತೆ ಕೈಕೈ ಜೋಡಿಸಿ, ಜನರಿಂದ ದೂರ ಹೋಗಬೇಡಿ' ಎಂದು 'ಸಂಪೂರ್ಣ ಕ್ರಾಂತಿ' ಪ್ರತಿಪಾದಿಸಿದ ಜೆಪಿ ಹೇಳುತ್ತಿದ್ದರೆ, ಅವರ ಮಾತು ಈ ಯುವಜೋಡಿಯ ಮನದಾಳಕ್ಕಿಳಿದು ಪ್ರಭಾವಿಸಿತು.

ಆಗ ಭಾರತದ ಮೊದಲ ತಲೆಮಾರಿನ ಪ್ಲಾಸ್ಟಿಕ್ ಸರ್ಜನ್ ಡಾ ನೋಶಿರ್ ಹೋರ್ಮುಸ್ಜಿ ಅಂತಿಯಾ ಪುಣೆಯ ಖ್ಯಾತ ವೈದ್ಯರಾಗಿದ್ದರು. ವೈದ್ಯಕೀಯದ ಜೊತೆಗೆ ಸಮಾಜಸೇವೆಯಲ್ಲೂ ತೊಡಗಿಕೊಂಡಿದ್ದರು. ಕುಷ್ಠರೋಗಿಗಳ ಸೇವೆಗಾಗಿ ಸಂಸ್ಥೆ ಕಟ್ಟಿದ್ದರು. ಗ್ರಾಮೀಣ ಆರೋಗ್ಯ ಸೇವೆಯ ಎಲ್ಲ ಹಂತಗಳಲ್ಲೂ ಕೆಲಸ ಮಾಡುತ್ತಿದ್ದರು. ಹಲವು ಅಖಿಲಭಾರತ ಮಟ್ಟದ ಸಂಸ್ಥೆಗಳ ಹುಟ್ಟುಹಾಕಿದ್ದರು. ಅವರ ಸಂಪರ್ಕಿಸಿದ ಮನಿಶಾ–ರಮೇಶ್ ತಾವೂ ಹಳ್ಳಿಗೆ ಹೋಗಲು ಸಿದ್ಧವೆಂದು ಹೇಳಿದರು. ಮೈಯ ಕಣಕಣದಲ್ಲಿ ಏನಾದರೂ ಮಾಡಬೇಕೆಂಬ ಹುಕಿ ತುಂಬಿಕೊಂಡ ಅವರಿಬ್ಬರಿಗೆ ಡಾ. ಅಂತಿಯಾ ಒಂದು ಯೋಜನೆಯ ನೀಲನಕ್ಷೆ ಬರೆಯಲು ಹೇಳಿದರು. ಹೀಗೆ ರೂರಲ್ ಹೆಲ್ತ್ ಎಜುಕೇಷನ್ ಪ್ರಾಜೆಕ್ಟ್ ರೂಪುಗೊಂಡಿತು.

ರಮೇಶ್ ಮಿತಭಾಷಿ. ಮನಿಶಾ ಚಟಪಟನೆ ಅರಳು ಹುರಿದಂತೆ ಮಾತನಾಡುವವರು. ಸಾಕಷ್ಟು ಗುಣಸ್ವಭಾವದ ಭಿನ್ನತೆಗಳ ನಡುವೆಯೂ ಒಂದೇ ಗುರಿಯೆಡೆಗೆ ನಡೆದರು. ಗ್ರಾಮವಿಕಾಸದ ಕನಸು ಕಾಣುತ್ತಾ 1987ರಲ್ಲಿ ಪುಣೆಯಿಂದ 180 ಕಿಮೀ ದೂರದ ಮಾಲ್‌ಶಿರಸ್ ಎಂಬ ಹಳ್ಳಿಗೆ ಹೋದರು. ಆ ಗ್ರಾಮದಲ್ಲಿಲ್ಲದ ಕನಿಷ್ಠ ಸವಲತ್ತುಗಳು, ಕೌಟುಂಬಿಕ ದೌರ್ಜನ್ಯವೇ ಮೊದಲಾದ ಸಮಸ್ಯೆಗಳು ಅನುಭವಕ್ಕೆ ಬಂದವು. ಗ್ರಾಮವಾಸ್ತವ್ಯ ಹಲವು ವಾಸ್ತವಗಳ ಕಡೆಗೆ ಅವರ ಗಮನ ಸೆಳೆಯಿತು.

ಸಮಾಜ ಮತ್ತು ಸರ್ಕಾರ ತಾಯಿಯ ಆರೋಗ್ಯದ ಬಗೆಗೆ ಗಮನ ಹರಿಸುವಷ್ಟು ಮಹಿಳಾ ಆರೋಗ್ಯದ ಬಗೆಗೆ ಗಮನ ಹರಿಸುವುದಿಲ್ಲ. ಹೆಣ್ಣಿನ ಪ್ರಾಮುಖ್ಯತೆ, ಗಮನ ಎಲ್ಲ ಅವಳು ತಾಯಿಯಾದ ಮೇಲಷ್ಟೆ. ಸರ್ಕಾರದ ಯೋಜನೆಗಳೂ ಸಹ ಹೆಣ್ಣು ತಾಯಿಯಾದಾಗಲಷ್ಟೆ ಆರೋಗ್ಯ ಮುಖ್ಯ ಎಂದು ಹೇಳುತ್ತವೆ ಎಂಬ ಸತ್ಯ ಅರಿವಿಗೆ ಬಂತು. ಇಂಥ ಲೋಪಗಳಿಗೆ ದಾರಿ ಹುಡುಕುವ ಕನಸು ಹೊತ್ತು 'ಮಾಸೂಮ್' ಅಥವಾ 'ಮಹಿಳಾ ಸರ್ವಾಂಗೀಣ್ ಉತ್ಕರ್ಷ ಮಂಡಲ್' ರೂಪುಗೊಂಡಿತು.

ಮೊದಲು ಎಂಟು ಕೈಮಗ್ಗಗಳ ತಂದು ಒಂದು ಯೋಜನೆ ಪ್ರಾರಂಭಿಸಿದರು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಕೈಮಗ್ಗಗಳಲ್ಲಿ ಮಾಲ್ತಿರಸ್ ಮತ್ತು ಸುತ್ತಮುತ್ತಲ 18 ಗ್ರಾಮಗಳ ಮಹಿಳೆಯರು ಬಂದು ನೇಯತೊಡಗಿದರು. ಬೆಳಿಗ್ಗೆ ಒಂಭತ್ತರಿಂದ ಸಂಜೆ ಐದರ ತನಕ ಸಂಘದ ಕೆಲಸಗಳಾದರೆ ಸಂಜೆಯ ನಂತರ ಇತರೆ ಕೆಲಸಗಳು. ರಮೇಶ್ ಊರ ಜನರಿಗೆ ರೇಡಿಯೊ–ವಾಚು–ಟಿವಿ ರಿಪೇರಿ ಮಾಡಿಕೊಡುತ್ತ ಹತ್ತಿರವಾದರು. ಯಾರದಾದರೂ ಮನೆಗೆ ನುಗ್ಗಿದ ಹಾವು–ಚೇಳುಗಳ ಹಿಡಿದು, ಲಾಗ್‌ಬುಕ್‌ನಲ್ಲಿ ಬರೆದುಕೊಂಡು, ಕಾಡಿಗೆ ಬಿಡುತ್ತಲಿದ್ದರು. ವೈದ್ಯರ ಕುಟುಂಬದ ಅವರಿಗೆ ಸಣ್ಣಪುಟ್ಟ ಕಾಯಿಲೆಗಳಿಗೆ ಔಷಧಿ ಕೊಡುವುದು ಗೊತ್ತಿತ್ತು. ಆ ಗ್ರಾಮಕ್ಕೆ ಹತ್ತಿರವಿದ್ದ 3 ಪಿಎಚ್‌ಸಿಗಳ ಸಹಾಯದಿಂದ 5 ವರ್ಷ ಆರೋಗ್ಯ ಜಾಗೃತಿಯ ಕೆಲಸ ಮಾಡಿದರು. ಎರಡು ವರ್ಷ ಕಾಲ ಆಯ್ದ ಮಹಿಳೆಯರಿಗೆ ಆರೋಗ್ಯ ಸಹಾಯಕಿಯ ತರಬೇತಿ ನೀಡತೊಡಗಿದರು.

ಬರಿಯ ಆರೋಗ್ಯ ಕುರಿತ ಕಾಳಜಿಯಷ್ಟೇ ಸಾಕಾಗದು ಎಂದರಿತು ಕೌಟುಂಬಿಕ ದೌರ್ಜನ್ಯಕ್ಕೀಡಾದ ಮಹಿಳೆಯರಿಗೆ ಕೌನ್ಸೆಲಿಂಗ್ ಮಾಡಲು ಹಾಗೂ ಕಾನೂನು ಅರಿವು ಮೂಡಿಸಲು ಸಂವಾದ ಎಂಬ ಕೇಂದ್ರ ತೆರೆದರು. ಅದು ಪುಣೆ ಜಿಲ್ಲಾ ಕೋರ್ಟಿನ ಉಚಿತ ಕಾನೂನು ಸೇವಾ ಕೇಂದ್ರದೊಡನೆ ಕೆಲಸ ಮಾಡತೊಡಗಿತು. ಮನೆಮನೆಯ ದಿನನಿತ್ಯದ ಹಿಂಸೆ ತಡೆಗಟ್ಟಲು ವಾಲಂಟಿಯರ್ಸ್ ಅನ್ನು ತಯಾರು ಮಾಡಲಾಯಿತು. ನಿಧಾನವಾಗಿ ಹಳ್ಳಿಗಳು ಮಾಸೂಮ್ ಮಹಿಳೆಯರ ಆಶಯಗಳನ್ನು ಅರಿತುಕೊಂಡವು. ಪುರುಷರು ಇನ್ನು ಹಿಂಸೆ ನಡೆಯುವುದಿಲ್ಲವೆಂಬ ಸತ್ಯ ಅರಗಿಸಿಕೊಂಡರು. ಸುತ್ತಲ ಗ್ರಾಮಗಳ 'ಸಂವಾದ' ಕೇಂದ್ರಗಳಲ್ಲಿ ಬುಧವಾರ ಮತ್ತು ಶನಿವಾರ ವಕೀಲರು ಬಂದು ಕೇಸುಗಳ ಪರಿಶೀಲಿಸತೊಡಗಿದರು.

ಇದರ ಜೊತೆಗೆ ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬನೆಗಾಗಿ ಬಾಂಗ್ಲಾದೇಶದ ಮಹಮದ್ ಯೂನಸ್ ಅವರ ಮೈಕ್ರೋಫೈನಾನ್ಸಿಂಗ್ ವ್ಯವಸ್ಥೆಯನ್ನು ರಮೇಶ್ ಅವಸ್ಥಿ ಅಭ್ಯಸಿಸಿದರು. ಸೂಕ್ತ ಬದಲಾವಣೆಗಳೊಂದಿಗೆ ಸಾಲ–ಉಳಿತಾಯ ಯೋಜನೆಯ ಸ್ವಸಹಾಯ ಗುಂಪುಗಳ ರೂಪಿಸಿದರು. ಪ್ರತಿತಿಂಗಳೂ ಸ್ವಲ್ಪ ಹಣ ಉಳಿಸುವುದು ಮತ್ತು ಅವಶ್ಯ ಬಿದ್ದಾಗ ಸಾಲ ತೆಗೆದುಕೊಳ್ಳುವ ಯೋಜನೆ ಜನಪ್ರಿಯವಾಯಿತು. ಜೊತೆಗೆ ಗ್ರಾಮಸಭೆಗೆ ಮಹಿಳೆಯರು ಹೋಗುವಂತೆ ಮಾಡಲು, ಮಹಿಳಾ ಪ್ರಾತಿನಿಧ್ಯ ಅರ್ಥಪೂರ್ಣವಾಗುವಂತೆ ಮಾಡಲು ನಾನಾ ಕಾರ್ಯಕ್ರಮ ಹಾಕಿಕೊಂಡರು. ಸಮಾಜರಚನೆಯಲ್ಲಿ ತಾರತಮ್ಯಕ್ಕೆ ಮೂಲಕಾರಣವಾದ ಜಾತಿ, ವರ್ಗಗಳ ನೆಲೆಯಿಂದಲೂ ಕೆಲಸಗಳನ್ನು ವಿಸ್ತರಿಸಿಕೊಂಡರು. ಮಕ್ಕಳಿಗಾಗಿ ಗ್ರಂಥಾಲಯ, ಆಟೋಟ ಸ್ಪರ್ಧೆಗಳ ನಡೆಸಿದರು.

2010ರಲ್ಲಿ ಮನಿಶಾ ಮತ್ತು ರಮೇಶ್ ಮಾಸೂಮ್‌ನಿಂದ ತಮ್ಮ ನಾಯಕತ್ವ ಹಿಂತೆಗೆದುಕೊಂಡಿದ್ದಾರೆ. ಈಗಲ್ಲಿ ಆರು ಗುಂಪುಗಳು ಕೆಲಸ ಮಾಡುತ್ತಿವೆ. ಎರಡನೆಯ ತಲೆಮಾರಿನ ಮಹಿಳೆಯರು ಇದ್ದಾರೆ. 'ನಾವು ದಾನನೀಡಲು ಹೋಗಲಿಲ್ಲ. ಜನರು ಫಲಾನುಭವಿಗಳೂ ಆಗಿರಲಿಲ್ಲ. ಆದರೆ ಜನ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ತೊಡಗಿಕೊಂಡರು. ಹಿಂಸೆಯಿರದ, ಸ್ವತಂತ್ರ ಸಮಸಮಾಜ ಬಂದರೆ ಬದುಕು ಈಗಿಗಿಂತ ಹಸನಾಗುವುದೆಂದು ತಿಳಿಸಲು ಹೋಗಿದ್ದೆವು. ಅಂಥ ಬದಲಾವಣೆ ತರಲು ಹೋಗಿದ್ದೆವು. ಬದಲಾವಣೆ ಸಂಭವಿಸಲು ಮೊದಲಾದರೆ ನಮ್ಮ ಕೆಲಸ ಮುಗಿದಂತೆ. ನಮ್ಮ ಕೆಲಸ ಕಳೆದುಕೊಳ್ಳುವುದೇ ನಮ್ಮ ಕೆಲಸ. ಲೂಸಿಂಗ್ ಜಾಬ್ ಈಸ್ ಅವರ್ ಜಾಬ್' ಎಂದು ಈಗ ಹಿಂತಿರುಗಿ ನೋಡುತ್ತ ಆ ದಿನಗಳ ನೆನೆಯುತ್ತಾರೆ ಮನಿಶಾ.

ಈ ದಂಪತಿಗಳಿಗೆ ಪ್ರತೀಕ್ ಮತ್ತು ಪ್ರಿಯಾ ಎಂಬ ಇಬ್ಬರು ಮಕ್ಕಳು. ಪ್ರತೀಕ್ ಕೆನಡಾದಲ್ಲಿ ಕಾನೂನು ತಜ್ಞ, ಎಂಜಿನಿಯರ್ಸ್ ವಿದೌಟ್ ಬಾರ್ಡರ್ಸ್‌ನಲ್ಲಿ ಕೆಲಸ ಮಾಡುತ್ತಾರೆ. ಪ್ರಿಯಾ ಅಮೆರಿಕದಲ್ಲಿದ್ದಾರೆ. ದಕ್ಷಿಣ ಏಷ್ಯಾದ ಮಹಿಳೆಯರ ಸಂಘಟನೆ 'ಮನವಿ'ಯಲ್ಲಿ ಕೆಲಸ ಮಾಡುತ್ತಾರೆ.

ಮನಿಶಾ ಬರಹಗಾರ್ತಿಯೂ ಹೌದು. 'ಆನರ್ ಅಂಡ್ ವುಮೆನ್ಸ್ ರೈಟ್ಸ್', 'ಕಾನ್ಸೆಪ್ಟ್ ಅಂಡ್ ಪ್ರಾಕ್ಟೀಸ್ ಆಫ್ ಪೇಟ್ರಿಯಾರ್ಕಲ್ ಆನರ್ ಇನ್ ರೂರಲ್ ಮಹಾರಾಷ್ಟ್ರ', 'ಅಬಾರ್ಷನ್ ನೀಡ್ಸ್ ಆಫ್ ವುಮೆನ್ ಇನ್ ಇಂಡಿಯಾ' ಇತ್ಯಾದಿ ಪುಸ್ತಕಗಳ ಬರೆದಿದ್ದಾರೆ, ಸಂಪಾದಿಸಿದ್ದಾರೆ. ಜಾನ್ ಹಾಪ್ಕಿನ್ಸ್ ವಿ.ವಿ.ದಲ್ಲಿ ಡಿಪಾರ್ಟ್‌ಮೆಂಟ್ ಆಫ್ ಇಂಟರ್‌ನ್ಯಾಷನಲ್ ಹೆಲ್ತ್‌ನಲ್ಲಿ ವಿಸಿಟಿಂಗ್ ಫೆಲೋ ಆಗಿದ್ದಾರೆ.

**ಮಜ್ಲಿಸ್ ಎಂಬ ಕೈದೀಪ ಹಚ್ಚಿಟ್ಟ ಫ್ಲೇವಿಯಾ ಆಗ್ನೆಸ್**

ಫ್ಲೇವಿಯಾ ಆಗ್ನೆಸ್ ಮಂಗಳೂರು ಬಳಿಯ ಕದ್ರಿಯವರು. ಪ್ರೌಢಶಾಲೆಯವರೆಗೆ ಚಿಕ್ಕಮ್ಮನೊಡನೆ ಮಂಗಳೂರಿನಲ್ಲಿದ್ದು ವಿದ್ಯಾಭ್ಯಾಸ ಪಡೆಯುತ್ತಿದ್ದರು. ಅದೇ ವೇಳೆ ಯೆಮನಿನ ಆಡೆನ್ನಿನಲ್ಲಿದ್ದ ತಂದೆ ತೀರಿಕೊಂಡರು. ತಂದೆಯ ಅಕಾಲ ಮರಣದ ಬಳಿಕ ಟೈಪಿಸ್ಟ್ ಆಗಿ ಕೆಲಕಾಲ ವಿದೇಶದಲ್ಲಿ ದುಡಿದರು. ಕೊನೆಗೆ ಕುಟುಂಬ ಮಂಗಳೂರಿಗೆ ಮರಳಿತು. 20 ವರ್ಷಕ್ಕೇ ಅವರ ಮದುವೆಯಾಯಿತು. ಆದರೆ ಸಾಂಸಾರಿಕ ಬದುಕು ತೀರ ದುರ್ಭರವಾಗಿತ್ತು. ತನಗಿಂತ ಹಿರಿಯರಾಗಿದ್ದ ಪತಿಯಿಂದ ಸಾಕಷ್ಟು ದೌರ್ಜನ್ಯ ಅನುಭವಿಸಿದರು. ಮೂರು ಮಕ್ಕಳ ಸಾಕುತ್ತ 13 ವರ್ಷದ ವೈವಾಹಿಕ ಬದುಕಿನಲ್ಲಿ ಸಾಕಷ್ಟು ಹಿಂಸೆ ಅನುಭವಿಸಿದರು. ಕ್ರೈಸ್ತ ಧರ್ಮದ ಪ್ರಕಾರ ವಿಚ್ಛೇದನೆಯೂ ಸಿಗುವಂತಿರಲಿಲ್ಲ. ಯಾಕೆಂದರೆ ಆ ಧರ್ಮದ ಪ್ರಕಾರ ಕೌಟುಂಬಿಕ ದೌರ್ಜನ್ಯವು ವಿಚ್ಛೇದನಕ್ಕೆ ಕಾರಣವಾಗುವುದಿಲ್ಲ. ಕೊನೆಗೆ ಮುಂಬಯಿಗೆ ಹೋಗಿ, ಕೋರ್ಟಿನ ಮೊರೆ ಹೋದರು. ಕಾನೂನಾತ್ಮಕ ವಿಚ್ಛೇದನೆ ಪಡೆದರು. ಮಕ್ಕಳ ಕಸ್ಟಡಿ ಪಡೆದರು. ವೈವಾಹಿಕ ಬದುಕು, ವಿಚ್ಛೇದನೆ ಪಡೆಯುವ ಕಷ್ಟಗಳು, ಕೌಟುಂಬಿಕ ದೌರ್ಜನ್ಯವನ್ನು ಸಹಜವೆಂಬಂತೆ ಪರಿಗಣಿಸುವ ಸಮಾಜ  ಇವೆಲ್ಲ ಅನುಭವಗಳೇ ಅವರನ್ನು ಹೋರಾಟಗಾರ್ತಿಯಾಗಿ ರೂಪಿಸಿದವು.

ಮದುವೆಯಾಗುವಾಗ ಬರಿಯ ಎಸ್ಸೆಲ್ಸಿ ಪಾಸು ಮಾಡಿದ್ದವರು ನಂತರ ವಿದ್ಯಾಭ್ಯಾಸ ಮುಂದುವರೆಸಿದರು. ಶ್ರೀಮತಿ ನಾಥೂಬಾಯಿ ದಾಮೋದರ ಥ್ಯಾಕರ್ಸೆ (ಎಸ್‌ಎನ್‌ಡಿಟಿ) ಮಹಿಳಾ ವಿಶ್ವವಿದ್ಯಾಲಯದಲ್ಲಿ 1980ರಲ್ಲಿ ಸಮಾಜಶಾಸ್ತ್ರ ವಿಷಯವಾಗಿ ಡಿಗ್ರಿ ಮುಗಿಸಿದರು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

1988ರಲ್ಲಿ ಕಾನೂನು ಪದವಿ ಪಡೆದು ಮುಂಬೈ ಹೈಕೋರ್ಟಿನಲ್ಲಿ ವಕೀಲಿಕೆ ಶುರು ಮಾಡಿದರು. 1992ರಲ್ಲಿ ಸ್ನಾತಕೋತ್ತರ ಕಾನೂನು ಪದವಿ (ಎಲ್‌ಎಲ್‌ಎಂ) ಪಡೆದು ನಂತರ ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲಿನಲ್ಲಿ ಎಂ.ಫಿಲ್ ಮುಗಿಸಿ (1997) ಅಲ್ಲೇ ಗೌರವ ಪ್ರಾಧ್ಯಾಪಕರಾದರು. 'ಪಾಲಿಟಿಕ್ಸ್ ಆಫ್ ಪರ್ಸನಲ್ ಲಾಸ್ ಇನ್ ಡಿಫರೆಂಟ್ ರಿಲಿಜಿಯಸ್ ಕಮ್ಯುನಿಟೀಸ್' ಅವರ ಪಿಎಚ್‌ಡಿ ಪ್ರಬಂಧದ ವಿಷಯ. ನಂತರ ಆಕ್ಸ್‌ಫರ್ಡ್ ವಿವಿ ಪ್ರೆಸ್ ಅದನ್ನು ಪುಸ್ತಕವಾಗಿ ಪ್ರಕಟಿಸಿತು.

ಅವರು ಕೌಟುಂಬಿಕ, ವೈವಾಹಿಕ, ಆಸ್ತಿ ಕಾನೂನು ಪರಿಣಿತರು. ನಟಿ, ನಿರ್ದೇಶಕಿ, ಕಲಾವಿದೆ ಮಧುಶ್ರೀ ದತ್ತಾ ಅವರೊಡನೆ 1990ರಲ್ಲಿ 'ಮಜ್ಲಿಸ್' ಎಂಬ ಮಹಿಳೆ ಮತ್ತು ಕಾನೂನು ಸಲಹಾ ಕೇಂದ್ರ ನಡೆಸುತ್ತಿದ್ದಾರೆ. ಇದುವರೆಗೆ 50 ಸಾವಿರಕ್ಕೂ ಹೆಚ್ಚು ಹೆಣ್ಣು ಮಕ್ಕಳಿಗೆ ಆ ಸಂಸ್ಥೆ ಕಾನೂನು ಸಹಾಯ ನೀಡಿದೆ. ಅವರಲ್ಲಿ ಹೆಚ್ಚಿನವರು ಅನಾಥರು. ಇದರ ಮೂರುಪಟ್ಟು ಜನರಿಗೆ ಕಾನೂನು ಸಲಹೆ ನೀಡಿದ್ದಾರೆ. ನಿರ್ಭಯಾ ಪ್ರಕರಣ ಮತ್ತು ಶಕ್ತಿ ಮಿಲ್ ಅತ್ಯಾಚಾರ ಪ್ರಕರಣದ ವೇಳೆ ಆರೋಪಿಗಳಿಗೆ ಮರಣದಂಡನೆ ವಿಧಿಸಿದಾಗ ಫ್ಲೇವಿಯಾ ಅದನ್ನು ವಿರೋಧಿಸಿದರು. ಅಷ್ಟೇ ಅಲ್ಲ, ಮರಣದಂಡನೆ ಶಿಕ್ಷೆ ಪಡೆಯುವವರ ವರ್ಗ ಹಿನ್ನೆಲೆ ವಿಶ್ಲೇಷಿಸಿ ಅದು ರದ್ದಾಗಬೇಕೆಂದೂ ಕೋರಿದ್ದರು. ತ್ರಿವಳಿ ತಲಾಖ್ ಕುರಿತು, ಏಕರೂಪ ನಾಗರಿಕ ಸಂಹಿತೆ ಕುರಿತು ಹಿಂದೂತ್ವವಾದಿ ಪಕ್ಷವೇ ಏಕೆ ಮಾತನಾಡುತ್ತಿದೆ ಎಂಬುದನ್ನು ಆಳವಾಗಿ ವಿಶ್ಲೇಷಿಸುತ್ತ ಅವೆರೆಡನ್ನೂ ವಿರೋಧಿಸಿದ್ದರು. ಮುಂಬಯಿಯ ಬಾರ್ ಡ್ಯಾನ್ಸರುಗಳ ಪರವಾಗಿ ವಾದಿಸಿದ್ದರು. ಇವತ್ತಿಗೂ ಮಹಿಳಾ ಪರ ಕಾನೂನು ಕುರಿತ ಚರ್ಚೆ ಬಂದರೆ ಅಲ್ಲಿ ಎದ್ದು ಕಾಣುವ ಹೆಸರು ಅವರದು.

ಮಧುಶ್ರೀ ದತ್ತಾ ಅವರು ನಿರ್ದೇಶಿಸಿದ 'ಸ್ಕ್ರಿಬಲ್ಸ್ ಆನ್ ಅಕ್ಕ' ಎಂಬ ವಚನಕಾರ್ತಿ ಅಕ್ಕಮಹಾದೇವಿ ಕುರಿತ ಕಿರುಚಿತ್ರವನ್ನು ಅವರು ನಿರ್ಮಿಸಿದ್ದಾರೆ. ಒಂದೇಸಮ ಕೋರ್ಟ್ ಕೇಸು ನಡೆಸಿ ಬೇಸತ್ತು ಈಗ ಬರವಣಿಗೆಯತ್ತ ಮುಖ ಮಾಡಿದ್ದೇನೆ ಎಂದು ತಾವೇ ಹೇಳಿಕೊಳ್ಳುತ್ತಾರೆ. 'ಲಾ ಅಂಡ್ ಜೆಂಡರ್ ಇನಿಕ್ವಾಲಿಟಿ', 'ವುಮೆನ್ ಅಂಡ್ ಲಾ ಇನ್ ಇಂಡಿಯಾ', 'ಫ್ಯಾಮಿಲಿ ಲಾ' – ಸಂಪುಟ 1 ಮತ್ತು 2,' 'ಆಫ್ ಲಾಫ್ಟಿ ಕ್ಲೇಮ್ಸ್ ಅಂಡ್ ಮಫ್ಲ್ಡ್ ಲಾಸ್' ಮೊದಲಾದ ಮೌಲಿಕ, ಅಧ್ಯಯನಪೂರ್ಣ ಗ್ರಂಥಗಳನ್ನು ರಚಿಸಿದ್ದಾರೆ. 'ಮೈ ಸ್ಟೋರಿ, ಅವರ್ ಸ್ಟೋರಿ.. ಆಫ್ ರಿಬಿಲ್ಡಿಂಗ್ ಬ್ರೋಕನ್ ಲೈವ್ಸ್' ಎಂಬ ಆತ್ಮಚರಿತ್ರಾತ್ಮಕ ಪುಸ್ತಕ ಬರೆದಿದ್ದಾರೆ. ಅದು ಹಲವು ಭಾಷೆಗಳಿಗೆ ಅನುವಾದಗೊಂಡಿದೆ.

***

'ನನಗೆ ನಾನೇ ಬೆಳಕು' ಎಂದು ತನ್ನ ಬಿಡುಗಡೆಯ ದಾರಿಯ ಶೋಧಿಸಿಕೊಳ್ಳುತ್ತಲೆ ಪಕ್ಕದ ಹಣತೆ ಹಚ್ಚಿಡುವ ಇಂಥ ಹೆಣ್ಣುಜೀವಗಳೇ ಸೋದರಿತ್ವದ ನಿಜ ಶಕ್ತಿಯ ಪ್ರತೀಕಗಳಾಗಿವೆ. ಅಲ್ಲವೆ?

❖

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಸಂವಿಧಾನ ತಿರುಚಲು ನಾವು ಬಿಡುವುದಿಲ್ಲ

**ಸಾಯುವವರೆಗೂ ಇನ್ಯಾವುದೋ ಸಾಂಸ್ಕೃತಿಕ ಮೂಲಭೂತವಾದ ನನ್ನ ಸಂವಿಧಾನ ಬದಲಿಸುವುದನ್ನು ನೋಡಲು ಸಿದ್ಧಳಿಲ್ಲ.**

❖ **ಮನಿಶಾ ಗುಪ್ತೆ**

ನನ್ನ ಮಾತು ಆರಂಭಿಸುವ ಮೊದಲು ನಾನು ಬಹಳ ಬಲವಾಗಿ ಕ್ಷಮೆ ಕೋರಲು ಬಯಸುತ್ತೇನೆ; ಕನ್ನಡದಲ್ಲಿ ಮಾತನಾಡಲು ಸಾಧ್ಯವಾಗದಿರುವುದಕ್ಕಾಗಿ, ಇದು ಅಕ್ಷಮ್ಯ ಅಂತ ನನಗೆ ಗೊತ್ತಿದೆ, ಅಕ್ಷರಶಃ ಒಂದು ವಿದೇಶೀ ಭಾಷೆಯಲ್ಲಿ ಮಾತನಾಡುತ್ತಿರುವುದಕ್ಕಾಗಿ ನಿಮ್ಮ ಕ್ಷಮೆ ಕೇಳುತ್ತೇನೆ.

ಆದರೆ ನಾನು ಇಲ್ಲಿ ಹಿಂದಿಯಲ್ಲಿ ಮಾತನಾಡುವುದಕ್ಕಿಂತ ಇಂಗ್ಲೀಷ್‌ನಲ್ಲಿ ಮಾತನಾಡಿದರೆ ಹೆಚ್ಚು ಜನರಿಗೆ ಅರ್ಥವಾಗುತ್ತದೆ ಎಂದು ನನಗೆ ಹೇಳಿದರು. ಹೌದಾ? ನಾನು ಹಿಂದಿಗಿಂತ ಇಂಗ್ಲೀಷ್ ಮಾತನಾಡುವುದು ಒಳ್ಳೆಯದಾ? ಹಾಗಿದ್ದರೆ ಸರಿ. ನನ್ನ ಪರವಾಗಿ ಯಾರಾದರೂ ಕನ್ನಡದಲ್ಲಿ ದಯವಿಟ್ಟು ನನ್ನ ಕ್ಷಮಾಪಣೆಗಳನ್ನು ಸಭೆಗೆ ತಿಳಿಸಲು ವಿನಂತಿ.

ಮೊದಲನೆಯದಾಗಿ, ಎಲ್ಲರಿಗೂ ಅಂತಾರಾಷ್ಟ್ರೀಯ ದುಡಿವ ಮಹಿಳಾ ದಿನಾಚರಣೆಯ ಶುಭಾಶಯಗಳು. ನಾವು ಈ ದಿನ ಶೇ. 25ರ ರಿಯಾಯಿತಿಯಲ್ಲಿ ಮಾರಾಟವಾಗುವ ವಜ್ರಗಳಿಂದ ಹೇಗೆ ಮುಕ್ತಿ ಪಡೆಯುವುದು ಅಥವಾ ಫೇರ್ ಅಂಡ್ ಲೌವ್ಲಿ ಹಚ್ಚಿಕೊಂಡು ಸದಾ ಬೆಳ್ಳಗೆ ಕಾಣಬೇಕೆಂಬ ಆಮಿಷದಿಂದ ಹೇಗೆ ಬಿಡುಗಡೆಯಾಗುವುದು ಎಂಬ ಬಗ್ಗೆ ಚಿಂತಿಸಬೇಕು. ಅಮೆರಿಕದಲ್ಲಿ ದುಡಿಯುವ ವರ್ಗದ ಮಹಿಳೆಯರು ದಿನದ ಕೆಲಸದ ಅವಧಿ 14 ಗಂಟೆಗಳಿಗೆ ಬದಲಾಗಿ 8ರಿಂದ 10 ಗಂಟೆಗಳಷ್ಟೇ ಇರಬೇಕೆಂದು ನಡೆಸಿದ ಹೋರಾಟದ ಫಲವಾಗಿ ಸಿಕ್ಕಿದ ಯಶಸ್ಸನ್ನು ನಾವು ಮರುಹಕ್ಕುಸ್ಥಾಪಿಸಿಕೊಳ್ಳಲು ಬಳಸಿಕೊಳ್ಳಬೇಕು. ನಮಗೆ ಗೊತ್ತಿದೆ, ಈ ಹೋರಾಟ ದುಡಿಯುವ ವರ್ಗದ ಮಹಿಳೆಯರ ಹೋರಾಟವಾಗಿದ್ದದ್ದು ಮಾತ್ರವಲ್ಲ; ಅದರಲ್ಲಿ ಕಪ್ಪು ಮಹಿಳೆಯರು, ಉದ್ಯೋಗಸ್ಥ ಬಿಳಿ ಮಹಿಳೆಯರು, ವಲಸೆ ಕಾರ್ಮಿಕ ಮಹಿಳೆಯರು ಮೊದಲಾದ ಎಲ್ಲ ಬಗೆಯ ಹಿನ್ನೆಲೆಗಳ ಹೆಣ್ಣುಮಕ್ಕಳ ಪಾಲ್ಗೊಳ್ಳುವಿಕೆಯಿಂದಲೇ ಆದರ ಯಶಸ್ಸು ಸಾಧ್ಯವಾದದ್ದು! ಅದಾದ ನಂತರ ಅಲೆಕ್ಸಾಂದ್ರಾ ಕೊಲೊಂತಾಯ್, ಕ್ಲಾರಾ ಜೆಟ್ಕಿನ್ ಮೊದಲಾದ ಹೋರಾಟಗಾರ್ತಿಯರು ಲೆನಿನ್ ಅವರೊಂದಿಗೆ ಈ ಐತಿಹಾಸಿಕ ಹೋರಾಟ ನಡೆದ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ದಿನ ಮಾರ್ಚ್ 8ನ್ನು ಅಂತಾರಾಷ್ಟ್ರೀಯ ದುಡಿಯುವ ಮಹಿಳಾ ದಿನವನ್ನಾಗಿ ಏಕೆ ಆಚರಿಸಬಾರದು ಎಂದು ಚರ್ಚಿಸಿದರು. ಈ ವಿಚಾರ ಜಾಗತಿಕ ಕಮ್ಯುನಿಸ್ಟ್ ಚಳವಳಿಯ ಮೊದಲ ಅಂತಾರಾಷ್ಟ್ರೀಯ ಸಮಾವೇಶದಲ್ಲಿ ಚರ್ಚೆಗೆ ಬಂತು. ನಂತರ 20ನೇ ಶತಮಾನದ ಮೊಟ್ಟಮೊದಲ ದಶಕದಲ್ಲಿ ಮಾರ್ಚ್ 8ನ್ನು ಅಂತಾರಾಷ್ಟ್ರೀಯ ದುಡಿವ ಮಹಿಳಾ ದಿನವನ್ನಾಗಿ ಆಚರಿಸುವ ಪರಿಪಾಠ ಹುಟ್ಟಿಕೊಂಡಿತು. ಇಂದು ಇಲ್ಲಿ ಸೇರಿರುವ ನಾವೆಲ್ಲರೂ ಹೆಮ್ಮೆ ಪಡಬೇಕು, ಹಲವು ಜಾತಿಗಳಿಗೆ, ಧರ್ಮಗಳಿಗೆ, ಹಿನ್ನೆಲೆಗಳಿಗೆ ಸೇರಿದ ಮಹಿಳೆಯರು ನಾವು ಇಲ್ಲಿ ಹೀಗೆ ಒಟ್ಟುಗೂಡಲು ಸಾಧ್ಯವಾಗಿದೆ, ಮಹಿಳೆಯರು ಮಾತ್ರವಲ್ಲ ಸಾಕಷ್ಟು ಪುರುಷರು ಕೂಡಾ ಇಲ್ಲಿದ್ದಾರೆ. ಇಂದು ನಾವು ಪುರುಷರಿಗೂ ಹೇಳಲು ಸಾಧ್ಯವಾಗಿದೆ ಪುರುಷಾಧಿಪತ್ಯ ಮಹಿಳೆಯರಿಗೆ ಮಾತ್ರವಲ್ಲ ಇಡೀ ಮನುಷ್ಯ ಸಮಾಜಕ್ಕೇ ಅಪಾಯಕಾರಿ ಎಂದು; ಇವೆಲ್ಲವೂ ಸಂತೋಷದ ಸಂಗತಿಗಳು.

ಇಲ್ಲಿರುವ ನನ್ನ ಸ್ನೇಹಿತರೇ, ಸಹೋದರ ಸಹೋದರಿಯರೇ, ನಾವೆಲ್ಲ ಯೋಚಿಸಬೇಕಿರುವುದು ಹೇಗೆ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಮುಖ್ಯವಾಹಿನಿಗೆ ತರುವುದು ಎಂಬ ಬಗ್ಗೆ. ನಾನು ಆಗಲೇ ಹೇಳುತ್ತಿದ್ದ ಹಾಗೆ ಮಾರುಕಟ್ಟೆ ಶಕ್ತಿಗಳು ಮಾಡುತ್ತಿರುವ ರೀತಿಯಲ್ಲಲ್ಲ ಅಥವಾ ಪ್ರಭುತ್ವದ ವಿಧಾನದಲ್ಲೂ ಅಲ್ಲ. ನಮಗೆ ಬೇಕಾದಂತೆ, ಎಲ್ಲ ಸ್ತ್ರೀವಾದಿ ಹೋರಾಟಗಳೂ ಕೂಡ ಜಗತ್ತಿನ ಎಲ್ಲ ಬಗೆಯ ಚಳುವಳಿಗಳ ಭಾಗವಾಗುವಂತೆ ಮತ್ತು ಎಲ್ಲ ಜನಚಳುವಳಿಗಳ ಸಮಸ್ಯೆಗಳು ಸ್ತ್ರೀವಾದಿ ಚಳುವಳಿಯ ಭಾಗವಾಗುವಂತೆ ಮಾಡುವುದು ಹೇಗೆ ಎಂಬುದು ಈ ಸಮಯದಲ್ಲಿ ನಮ್ಮ ಮುಂದಿರುವ ಅತಿದೊಡ್ಡ ಸವಾಲು.

ನಾನು ಪೂನಾದಿಂದ ನಿಮಗೆ ಎರಡು ಸಂಘಟನೆಗಳ ಶುಭಾಶಯಗಳನ್ನು ತೆಗೆದುಕೊಂಡು ಬಂದಿದ್ದೇನೆ. ಮೊದಲನೇ ಸಂಘಟನೆ ಪೂನಾದ ಎಸ್. ಎನ್. ಜೋಶಿ ಸೋಷಿಯಲಿಸ್ಟ್ ಫೌಂಡೇಷನ್. ಈ ಸಂಘಟನೆಯಿಂದ ಕೆಲವು ಸಮಯದ ಹಿಂದೆ ಒಂದು ಅಪರೂಪದ ರಾಷ್ಟ್ರೀಯ ಸಮಾಜವಾದಿ ಮಹಿಳಾ ಸಮಾವೇಶವನ್ನು ಪೂನಾದಲ್ಲಿ ಸಂಘಟಿಸಲಾಗಿತ್ತು. ಸುಮಾರು 410 ಮಂದಿ ದೇಶದ ವಿವಿಧ ಭಾಗಗಳಿಂದ ಬಂದಿದ್ದ ಮಹಿಳಾ ಪ್ರತಿನಿಧಿಗಳ ಅರ್ಥಪೂರ್ಣ ಸಮ್ಮಿಲನ ಅದಾಗಿತ್ತು ಮತ್ತು ಅಲ್ಲಿ ಅಂದುಕೊಂಡಂತೆ ನಾವು ಎಲ್ಲಿಗೇ ಹೋದರೂ ಇಂತಹ ಕೆಲವು ವಿಚಾರಗಳನ್ನು ಚರ್ಚೆಗೆ ತರಬೇಕು ಎಂಬ ಪ್ರಯತ್ನ ನಮ್ಮದು. ಆ ಸಂಘಟನೆಯ ವತಿಯಿಂದ ಇಂದಿನ ಈ ಕಾರ್ಯಕ್ರಮಕ್ಕೂ ಕೆಲವು ಸ್ನೇಹಿತರು ಬಂದಿದ್ದಾರೆ. ಎರಡನೆಯದು ನಾನು ಪೂರ್ಣಾವಧಿ ಕಾರ್ಯಕರ್ತೆಯಾಗಿ ತೊಡಗಿಸಿಕೊಂಡಿರುವ ಗ್ರಾಮೀಣ ಕೂಲಿಕಾರ ಮಹಿಳೆಯರ ಸಬಲೀಕರಣಕ್ಕಾಗಿ ಕೆಲಸ ಮಾಡುವ 'ಮಾಸೂವ್' ಎಂಬ ಸಂಘಟನೆಯಿಂದಲೂ ಶುಭಾಶಯಗಳು.

ಈ 2018ನೇ ವರ್ಷದಲ್ಲಿ ನಾವು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಬಗ್ಗೆ ಮಾತಾಡುವುದಾದರೆ ಅದರ ಅರ್ಥ ಏನಾಗಿರುತ್ತದೆ? ಅಷ್ಟಕ್ಕೂ ಅದರ ನಿಜವಾದ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಅರ್ಥವೇನು? ರಾಜಕೀಯ ಸಂದರ್ಭದಲ್ಲಿ, ಆರ್ಥಿಕತೆಯಲ್ಲಿ, ಸಾಂಸ್ಕೃತಿಕ ಸನ್ನಿವೇಶದಲ್ಲಿ, ಧಾರ್ಮಿಕ ಸಾಂಸ್ಕೃತಿಕ ಅಸ್ಮಿತೆಯ ಹಿನ್ನೆಲೆಯಲ್ಲಿ, ಈ ಎಲ್ಲದರ ನಡುವೆ ಹೆಚ್ಚುತ್ತಿರುವ ವಿಭಜನೆಯ ಮತ್ತು ಮೂಲಭೂತವಾದದ ಸಂದರ್ಭದಲ್ಲಿ ಇದರ ಅರ್ಥವೇನು? ನಾನು ಬೆಳೆಯುತ್ತಿದ್ದ ಕಾಲದಲ್ಲಿ ನಾವು ಇಂತಹ ಅನೇಕ ವಿಚಾರಗಳ ಬಗ್ಗೆ ಬಹಳ ಮುಕ್ತವಾಗಿ, ಇಂದಿಗಿಂತ ಹೆಚ್ಚು ವಿಮರ್ಶಾತ್ಮಕವಾಗಿ ಮಾತನಾಡುತ್ತಿದ್ದೆವು. ನಾನು ಈಗಲೂ ಮಾತಾಡುತ್ತೇನೆ; ಅವರು ಹೆಚ್ಚೆಂದರೆ ಏನು ಮಾಡಬಹುದು? ನಮ್ಮನ್ನು ಕೊಲ್ಲಬಹುದು ಅಷ್ಟೆ. ನೋಡಿ, ಇಲ್ಲಿ ಈಕೆ ನಮ್ಮೊಂದಿಗಿದ್ದಾರೆ; ಅವರು ಎಲ್ಲೂ ಹೋಗಿಲ್ಲ, ಗೌರಿ ಲಂಕೇಶ್ ನಮ್ಮೊಂದಿಗಿದ್ದಾರೆ. ಆದ್ದರಿಂದ ಅವರು ನಮ್ಮನ್ನು ಕೊಂದರೆ, ನಾವು ಬದುಕಿದ್ದಕ್ಕಿಂತಲೂ ಇನ್ನೂ ಹೆಚ್ಚು ಅಪಾಯಕಾರಿಗಳಾಗುತ್ತೇವೆ. ಅವರು ನಮ್ಮ ದೇಹಗಳನ್ನು ಮಾತ್ರ ನಾಶ ಮಾಡಬಹುದು, ನಮ್ಮ ವಿಚಾರಗಳನ್ನಲ್ಲ. ಆದರೆ ಸ್ನೇಹಿತರೆ, ನಿಜವಾದ ಅಪಾಯವಿರುವುದು ನಾವು ಆಲೋಚನೆ ಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಿದ್ದೀವಲ್ಲ, ಅದರಲ್ಲಿ. ನಾವು ರಸ್ತೆಗಳ ಮೇಲೆ ನಡೆದಾಡುತ್ತಿರುವ ಶವಗಳಾಗಿದ್ದೇವೆ. ನಾವು ನಮ್ಮ ಬಾಯಿಮುಚ್ಚಿಕೊಂಡುಬಿಟ್ಟಿದ್ದೇವೆ, ನಮ್ಮನ್ನೇ ನಾವು ಮುಚ್ಚಿಕೊಂಡುಬಿಟ್ಟಿದ್ದೇವೆ. ಹೀಗೆ ನಾವು ಸಂಪೂರ್ಣವಾಗಿ ಆಲೋಚಿಸುವುದನ್ನು, ಪ್ರತಿಭಟಿಸುವುದನ್ನು ಬಿಟ್ಟುಬಿಟ್ಟರೆ, ಮುಂದಿನ ತಲೆಮಾರಿಗೆ ಏನು ಹೇಳುತ್ತೇವೆ? ಈ ಸಭಾಂಗಣದಲ್ಲಿ ನೋಡಿ ಎಷ್ಟು ಜನ ಎಳೆಯರಿದ್ದಾರೆ, ಅವರಿಗೆ ನಾವು 'ಸ್ನೇಹಿತರೇ, ಭಾರತದ ಸ್ವಾತಂತ್ರ್ಯ ಚಳುವಳಿಯ ನೆರಳಿನಲ್ಲಿ ಇಂತಹ ಜನರೂ ಹುಟ್ಟಿದ್ದರು......' ಎಂದು ಹೇಳುವುದನ್ನು ಬಿಟ್ಟರೆ; ನಾನು ಸ್ವಾತಂತ್ರ್ಯ ಹೋರಾಟಗಾರರಿಗೆ, ಸಮಾಜವಾದಿ ಪೋಷಕರಿಗೆ, ಟ್ರೇಡ್ ಯೂನಿಯನ್ ಕಾರ್ಯಕರ್ತರಾಗಿದ್ದ ತಂದೆತಾಯಿಗೆ ಹುಟ್ಟಿದವಳು ಮತ್ತು ನಾನು ಹುಟ್ಟಿದ್ದು 1966ಲ್ಲಿ. ಅದು ಅಕ್ಷರಶಃ ಸ್ವಾತಂತ್ರ್ಯದ ನೆರಳಿನಲ್ಲಿದ್ದ ಕಾಲಘಟ್ಟ. ಆ ಸಮಯದಲ್ಲಿ ಹುಟ್ಟಿದ ನಾವುಗಳು ತುರ್ತು ಪರಸ್ಥಿತಿ ವಿರೋಧೀ ಆಂದೋಲನದ ಭಾಗವಾಗಿದ್ದೆವು; ರೈತ ಚಳುವಳಿ, ದುಡಿಯುವ ವರ್ಗದ ಚಳುವಳಿಗಳ ಭಾಗವಾಗಿದ್ದೆವು; ಟ್ರೇಡ್ ಯೂನಿಯನ್‌ಗಳಲ್ಲಿ ಸಕ್ರಿಯವಾಗಿದ್ದೆವು. ಇಂತಹದ್ದನ್ನೆಲ್ಲ ನೋಡಿದ, ನಡೆಸಿದ ನಾವು ಒಂದು ವೇಳೆ ಈ ಎಳೆ ತಲೆಮಾರಿಗೆ ಮುಂದಕ್ಕೆ ಕೊಂಡೊಯ್ಯಲು ಏನನ್ನೂ ಕೊಡದಿದ್ದರೆ, ಅದರರ್ಥ ನಾವು ಅವರನ್ನು ವಂಚಿಸಿದ್ದೇವೆ ಎಂದು, ಅವರು ನಮ್ಮನ್ನು ಕೈಬಿಟ್ಟಿದ್ದಾರೆ ಎಂದಲ್ಲ! ಎಂದೇ ನಮ್ಮ ಭವಿಷ್ಯದ ದಿನಗಳನ್ನು ಅವರಿಗೆ ಹಸ್ತಾಂತರಿಸಬಹುದು. ಬದಲಿಗೆ ಅವರಿಂದ ನಮ್ಮ ಭವಿಷ್ಯದ ದಿನಗಳನ್ನು ಸಾಲ ಪಡೆಯಬಹುದು.

ಆದ್ದರಿಂದ ಇಂದಿನ ಅತಿದೊಡ್ಡ ಪ್ರಶ್ನೆ ನಾವು ಹೇಗೆ ಆಲೋಚಿಸುವುದನ್ನು ಮುಂದುವರೆಸುತ್ತೇವೆ, ಹೇಗೆ ಪ್ರಶ್ನಿಸುವುದನ್ನು ಮುಂದುವರೆಸುತ್ತೇವೆ, ಹೇಗೆ ಹಾಡುವುದನ್ನು ಕುಣಿಯುವುದನ್ನು ಮುಂದುವರೆಸುತ್ತೇವೆ ಎಂಬುದು. ನಾನು ಇವೆಲ್ಲದರ ಇತಿಹಾಸವನ್ನು ಸ್ವಲ್ಪ ಗುರುತಿಸಲು ಬಯಸುತ್ತೇನೆ. ಭಾರತದಲ್ಲಿ ಏನೆಲ್ಲ ಸಂಭವಿಸಿತು? ಸ್ವಾತಂತ್ರ್ಯ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಹೋರಾಟಗಾರರು ಭಾರತ ಹೇಗಿರಬೇಕೆಂದು ಬಯಸಿದ್ದರು? ಅವರು ಖಂಡಿತವಾಗಿ ಆಡಳಿತದ ಕುರ್ಚಿಯ ಮೇಲಿಂದ ಬಿಳಿ ಸಾಹೇಬರನ್ನ ಇಳಿಸಿ ಕಂದು ಸಾಹೇಬರನ್ನು ತಂದು ಕೂರಿಸಬೇಕೆಂದು ಬಯಸಿರಲಿಲ್ಲ. ಆದರೆ ನೋಡಿ ನಾವೆಲ್ಲಿಗೆ ಬಂದು ತಲುಪಿದ್ದೇವೆ?! ನಾವು ನಮ್ಮ ಪ್ರತಿನಿಧಿಗಳನ್ನು ಆರಿಸುತ್ತೇವೆ ಮತ್ತು ಅವರು ಅದೃಶ್ಯರಾಗುತ್ತಾರೆ. ಅವರಿಂದ ಕೆಲಸ ಮಾಡಿಸಿಕೊಳ್ಳುವುದು ಬಿಡಿ, ಬರಿಯ ನೋಡಬೇಕೆಂದರೂ ಕನಿಷ್ಠ 30–40 ಸಲ ಪ್ರಯತ್ನ ಮಾಡಬೇಕು. ಈ ದೇಶದ ಪ್ರತಿಯೊಬ್ಬ ಆಡಳಿತಗಾರರನ್ನು ಸಾಕುತ್ತಿರುವವರು ನಾವು ಜನಸಾಮಾನ್ಯರು. ನಮ್ಮ ತೆರಿಗೆಯ ಹಣದಿಂದ ಆಳುವ ಮಂತ್ರಿಗಳನ್ನು, ಆಫೀಸುಗಳಲ್ಲಿರುವ ಅಧಿಕಾರಿಗಳನ್ನು, ಆರೋಗ್ಯ ಕೇಂದ್ರಗಳಲ್ಲಿರುವ ವೈದ್ಯರನ್ನು, ಪೊಲೀಸ್ ಠಾಣೆಗಳಲ್ಲಿರುವ ಪೊಲೀಸರನ್ನು ನಾವು ಸಾಕುತ್ತಿದ್ದೇವೆ. ಆದರೆ, ನಮ್ಮ ದುಡ್ಡಿನಿಂದ ಈ ಎಲ್ಲರ ಪಾಲನೆ ನಡೆಯುತ್ತಿದ್ದರೂ, ಯಾವುದೇ ಒಬ್ಬ ಭಾರತೀಯ ಈ ಎಲ್ಲ ಸ್ಥಳಗಳೊಳಕ್ಕೆ ಸಲೀಸಾಗಿ ಪ್ರವೇಶಿಸಲು ಸಾಧ್ಯವೇ? ಅದರಲ್ಲೂ ಬಡವರು, ಮಹಿಳೆಯರು, ದಲಿತರು, ಆದಿವಾಸಿಗಳು, ಮುಸ್ಲಿಮರು, ಟ್ರಾನ್ಸ್‌ಜೆಂಡರ್ ವ್ಯಕ್ತಿಗಳು ಈ ಎಲ್ಲ ಸ್ಥಳಗಳೊಳಕ್ಕೆ ಮುಕ್ತವಾಗಿ ಹೋಗುವ ಸಾಧ್ಯತೆ ಇದೆಯೇ? ಈ ಸರ್ಕಾರಿ ಕಛೇರಿಗಳೊಡನೆ ನಿರ್ಭೀತಿಯಿಂದ ವ್ಯವಹರಿಸಲು ಸಾಧ್ಯವೆ? ಬಹಳಷ್ಟು ಜನಸಾಮಾನ್ಯರು ಒಂದು ವೇಳೆ ಅವರಿಗೆ ಆಯ್ಕೆಯಿದ್ದರೆ ಯಾರೋ ಒಬ್ಬ ಪುಡಿ ರೌಡಿಯನ್ನು ನಂಬಲು ಸಿದ್ಧರಿದ್ದಾರೆಯೇ ಹೊರತು ಪೊಲೀಸರನ್ನಲ್ಲ. ಯಾಕೆಂದರೆ, ನಾವು ಯಾವ ವಿಚಾರಗಳ ರಕ್ಷಣೆಗಾಗಿ ಈ ಸಂಸ್ಥೆಗಳೊಳಕ್ಕೆ ಹೋಗುತ್ತೇವೆಯೋ, ಅಲ್ಲಿ ಹೋದ ತಕ್ಷಣ ಆ ಹಕ್ಕುಗಳ ಸಂಪೂರ್ಣ ಉಲ್ಲಂಘನೆಯಾಗುವ ಸಾಧ್ಯತೆಯಿದೆ! ಒಬ್ಬ ಟ್ರಾನ್ಸ್ ವ್ಯಕ್ತಿಯನ್ನು ರಸ್ತೆಯ ಮೇಲೆ ಪೊಲೀಸರು ಲೈಂಗಿಕ ಅಪರಾಧಗಳಿಗೆಂದು ಬಂಧಿಸಬಹುದು ಅಥವಾ ಸುಮ್ಮನೆ ಟ್ರಾನ್ಸ್ ವ್ಯಕ್ತಿಯಾದದ್ದಕ್ಕೇ ಬಂಧಿಸಬಹುದು ಮತ್ತು ನಂತರ ಯಾವ ಆರೋಪಗಳನ್ನು ಅವರ ಮೇಲೆ ಹೊರಿಸಲಾಗಿತ್ತೋ ಅದೇ ಅಪರಾಧಗಳನ್ನು ಅವರ ಮೇಲೆಯೇ ಎಸಗಬಹುದು, ಠಾಣೆಗೆ ಕರೆದೊಯ್ದು ಅವರ ಮೇಲೆ ಅತ್ಯಾಚಾರ ನಡೆಸಬಹುದು.

ಇವೆಲ್ಲ ನೋಡಿದರೆ ಎಲ್ಲೋ ಏನೋ ತಪ್ಪಾಗುತ್ತಿದೆ ಎನ್ನಿಸುತ್ತದೆ. ಯಾಕೆ ಇಷ್ಟೊಂದು ವಿಷಯಗಳು ತಪ್ಪಾಗಿ ಜರುಗುತ್ತಿವೆ? ಇದರರ್ಥ ಇಡೀ ವ್ಯವಸ್ಥೆಯಲ್ಲಿ ನಾವು ಬದಲಾವಣೆ ತರಬೇಕಿದೆ. ನಮ್ಮ ಗಡಿಯಾರಗಳನ್ನು ಹೊಂದಿಸಿಕೊಳ್ಳಬೇಕಿದೆ – 24 ಗಂಟೆಗಲ್ಲ 48 ಗಂಟೆಗಳಿಗೆ. ಪ್ರತಿ ಒಂದು ಗಂಟೆ ಕೇವಲ ಒಂದು ಗಂಟೆಯಲ್ಲ, ನಾಲ್ಕು ಗಂಟೆಗಳ ಲೆಕ್ಕ. ಈ ವೇಗದಲ್ಲಿ ಬದಲಾವಣೆಗಾಗಿ ಕೆಲಸ ಮಾಡಿದರೆ ಮಾತ್ರ ಅರ್ಥಪೂರ್ಣವಾದದ್ದೇನಾದರೂ ಹೊರಹೊಮ್ಮಬಹುದು. ನಾವು ಒಬ್ಬರು ಇಬ್ಬರಾಗಬೇಕು, ಇಬ್ಬರು ನಾಲ್ಕು ಜನ ಆಗಬೇಕು. ಆಗ ಗಡಿಯಾರವನ್ನು ಬದಲಿಸಬಹುದು.

ಸಂವಿಧಾನದಲ್ಲಿ ಎರಡು ಪದಗಳು ಆರಂಭದಲ್ಲಿ ಇಲ್ಲದೇ ನಂತರದಲ್ಲಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಸೇರ್ಪಡೆಯಾದವು. 'ಸಮಾಜವಾದ' ಮತ್ತು 'ಜಾತ್ಯತೀತ' ಎಂಬ ಈ ಎರಡು ಪರಿಕಲ್ಪನೆಗಳನ್ನು ಇಂದಿರಾಗಾಂಧಿ ಸಂವಿಧಾನ ತಿದ್ದುಪಡಿಯ ಮೂಲಕ ಸೇರ್ಪಡೆ ಮಾಡಿದರು ಮತ್ತು ಆ ಮೂಲಕ ಸಂವಿಧಾನವನ್ನು ಇನ್ನಷ್ಟು ಶ್ರೀಮಂತಗೊಳಿಸಿದರೆಂದು ನಾನು ಭಾವಿಸುತ್ತೇನೆ. ನಾವು ಇಂದಿರಾಗಾಂಧಿಯನ್ನು ಕೆಲವು ಕಾರಣಗಳಿಗೆ ವಿರೋಧಿಸುತ್ತೇವೆ, ಆದರೆ ಅವರು ಸಂವಿಧಾನದಲ್ಲಿ ತಂದ ಈ ಬದಲಾವಣೆಗಳನ್ನು ಸ್ವಾಗತಿಸುತ್ತೇವೆ. ಸ್ವಾತಂತ್ರ್ಯ ಬಂದಾಗ ಹಲವು ಕಾರಣಗಳಿಂದಾಗಿ ಸಮಾಜವಾದಿ ರಾಷ್ಟ್ರ ಎಂಬ ಪರಿಕಲ್ಪನೆಯನ್ನು ಸಂವಿಧಾನಕ್ಕೆ ಸೇರಿಸುವ ಸಾಧ್ಯತೆ ಇರಲಿಲ್ಲ. ಆಗಿನ್ನೂ ಖಾಸಗಿ ಆಸ್ತಿ ಅಸ್ತಿತ್ವದಲ್ಲಿದ್ದದ್ದು ಮಾತ್ರವಲ್ಲ, ಬಹಳ ಪ್ರಬಲವಾಗಿತ್ತು. ಆದ್ದರಿಂದ ಇಂತಹ ಪರಿಕಲ್ಪನೆಗಳು ಸಂವಿಧಾನದ ಹೊರಗುಳಿದವು. ಆದರೂ ಕೂಡಾ ನಮ್ಮ ದೇಶದ ಸಂವಿಧಾನವು ಪ್ರಪಂಚದ ಅತ್ಯುತ್ತಮ 30–40 ಸಂವಿಧಾನಗಳಲ್ಲಿ ಒಂದಾದ ಮುಖ್ಯ ಸ್ಥಾನದಲ್ಲಿದೆ. ದಕ್ಷಿಣ ಆಫ್ರಿಕಾದ ಸಂವಿಧಾನ ಈಗಿನ ಮಟ್ಟಿಗೆ ಹೇಳಬೇಕೆಂದರೆ ಅತ್ಯಂತ ಮುಂದುವರಿದದ್ದಾಗಿದೆ. ಆದರೆ, ಅದು ನಮಗಿಂತ ಬಹಳ ತಡವಾಗಿ ಮತ್ತು ಹೆಚ್ಚು ಆಧುನಿಕ ಸಂದರ್ಭದಲ್ಲಿ ರಚನೆಯಾದದ್ದು. ಈ ಬಗೆಯ ಯಾವ ಅನುಕೂಲಗಳಿಲ್ಲದೆಯೂ ಭಾರತದ ಸಂವಿಧಾನ ಅತ್ಯಂತ ಕ್ರಾಂತಿಕಾರಿಯಾದದ್ದೆಂದು ಹೇಳಿದರೆ ತಪ್ಪಾಗಲಾರದು.

ಸಂವಿಧಾನ ರಚಿಸುವ ತಂಡದಲ್ಲಿ ಕೆಲವರು ಬಹಳ ಆಧುನಿಕ ವಿಚಾರವುಳ್ಳವರಾಗಿದ್ದರೆ ಇನ್ನೊಂದಿಬ್ಬರು ಅತ್ಯಂತ ಸಾಂಪ್ರದಾಯಿಕ ಮನಸ್ಥಿತಿಯುಳ್ಳವರಾಗಿದ್ದರು. ಇಂತಹ ಎಲ್ಲ ಬಗೆಯ ನೀತಿ ನಿಲುವುಳ್ಳವರನ್ನು ಅಂಬೇಡ್ಕರರು ಸರಿದೂಗಿಸಿಕೊಂಡು, ಅವರನ್ನೂ ಒಳಗೊಳ್ಳುತ್ತಾ ಸಂವಿಧಾನ ರಚನೆಯ ನಾವೆಗೆ ಹುಟ್ಟುಹಾಕಿ ಸರಿದಿಕ್ಕಿಗೆ ಒಯ್ಯಬೇಕಿತ್ತು. ನಂತರ 'ಇದು ಭಾರತದ ಸಂವಿಧಾನ' ಎಂದು ಒಂದು ಸ್ವರೂಪವನ್ನು ನೀಡಬೇಕಿತ್ತು. ಆದ್ದರಿಂದಲೇ ಆರಂಭದಲ್ಲಿ ಸಂವಿಧಾನವು ಶಿಕ್ಷಣದ ಹಕ್ಕು, ವಸತಿಯ ಹಕ್ಕು, ಆಹಾರದ ಹಕ್ಕು ಮೊದಲಾದವುಗಳನ್ನು ಮೂಲಭೂತ ಹಕ್ಕುಗಳನ್ನಾಗಿ ಹೊಂದಿರಲಿಲ್ಲ. 'ರೋಟಿ, ಕಪಡಾ ಔರ್ ಮಕಾನ್' ನಮ್ಮ ಸಂವಿಧಾನದಲ್ಲಿ ಮೂಲಭೂತವಾದವುಗಳಾಗಿರಲಿಲ್ಲ. ವರ್ಷಗಳುರುಳಿದಂತೆ ಇವೆಲ್ಲವೂ ಖಾಸಗೀಕರಣಗೊಂಡವು. ಖಾಸಗೀಕರಣ ಅಂದರೆ ಯಾವುದು ಈಗಾಗಲೇ ಸರ್ಕಾರಿ ವಲಯದಲ್ಲಿ ಇದೆಯೋ ಅದನ್ನು ಸಾರ್ವಜನಿಕ ಸ್ವಾಮ್ಯದಿಂದ ತೆಗೆದು ಖಾಸಗಿಯವರಿಗೆ ಹಸ್ತಾಂತರಿಸುವುದು. ಯಾವುದು ಖಾಸಗಿಯವರ ನಿಯಂತ್ರಣದಲ್ಲಿದೆಯೋ ಅದನ್ನು ಸಾರ್ವಜನಿಕ ವಲಯಕ್ಕೆ ತರುವುದನ್ನು ರಾಷ್ಟ್ರೀಕರಣ ಎನ್ನುತ್ತೇವೆ. ಇದನ್ನೂ ಇಂದಿರಾಗಾಂಧಿ ಮಾಡಿದರು. ಬ್ಯಾಂಕುಗಳನ್ನು ಸಾರ್ವಜನಿಕ ವಲಯಕ್ಕೆ ರಾಷ್ಟ್ರೀಕರಣಗೊಳಿಸಿದರು. ಈಗಿನ ಪ್ರಶ್ನೆ ಏನೆಂದರೆ ಕೆಲವು ಹಕ್ಕುಗಳನ್ನು, ಯಾವುದು ಎಲ್ಲ ನಾಗರಿಕರ ಮೂಲಭೂತ ಅಗತ್ಯಗಳಾಗಿವೆಯೋ ಅಂತಹವುಗಳನ್ನು ಖಾಸಗಿ ವಲಯಕ್ಕೆ ಬಿಟ್ಟುಬಿಡಬಹುದೇ? ಖಾಸಗಿ ವಲಯ ಇರುವುದು ಲಾಭಕ್ಕಾಗಿ ಎಂಬುದು ನಮಗೆ ಗೊತ್ತಿದೆ. ನಾನೇನೂ ತಪ್ಪು ಹೇಳುತ್ತಿಲ್ಲ. ಯಾರಾದರೂ ಖಾಸಗಿಯಾಗಿ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಯಾವುದಾದರೂ ಉದ್ದಿಮೆಗೆ ಕೈಹಾಕುವುದು ಲಾಭಕ್ಕಾಗಿಯೇ. ಒಮ್ಮೆ ಅದು ಖಾಸಗಿಯಾಯಿತೆಂದರೆ ಅದು ದುಬಾರಿಯಾಗುತ್ತದೆ ಹಾಗೂ ದುಬಾರಿಯಾದ ತಕ್ಷಣ ಅಂತಹ ಸವಲತ್ತುಗಳನ್ನು ಪಡೆಯುವುದರಿಂದ ವಂಚಿತರಾಗುವವರು ಯಾರು? ಶಿಕ್ಷಣ, ಆರೋಗ್ಯ, ರಕ್ಷಣೆಯಂತಹವು ಖಾಸಗೀಕರಣಗೊಂಡ ತಕ್ಷಣ ಆ ವಲಯದಿಂದ ಹೊರಗೆಸೆಯಲ್ಪಡುವವರು ಯಾರು? ಈಗ ಉನ್ನತ ಶಿಕ್ಷಣ ಎಷ್ಟು ದುಬಾರಿಯಾಗಿದೆಯೆಂದರೆ ಅದು ಸಾವಿರಾರು ರೂಪಾಯಿಗಳಲ್ಲ, ಬದಲಿಗೆ ಲಕ್ಷಗಟ್ಟಲೆ ಹಣವನ್ನು ನಮ್ಮ ಕೈಯಿಂದ ಖರ್ಚು ಮಾಡಿಸುತ್ತಿದೆ.

ಇದರಿಂದ ಶೇ.85ರಷ್ಟು ಭಾರತೀಯ ಜನಸಂಖ್ಯೆಯನ್ನು ನಾವು ಉನ್ನತ ಶಿಕ್ಷಣ ಪಡೆಯುವುದರಿಂದ ಹೊರತಳ್ಳುತ್ತಿದ್ದೇವೆ. ಬಹಳಷ್ಟು ಜನರಿಗೆ ಎಸ್.ಸಿ/ಎಸ್.ಟಿ ಮೀಸಲಾತಿ ಕೊಡುತ್ತಿರುವುದರ ಬಗ್ಗೆ ಅಪಾರ ಅಸಮಾಧಾನ ಇದೆ. ಯಾವುದಾದರೊಂದು ಜನವಿಭಾಗಕ್ಕೆ ಸುಮಾರು 4000 ವರ್ಷಗಳ ನಿರಂತರ ತಾರತಮ್ಯ ಮತ್ತು ಶೋಷಣೆ ಏನು ಹಾನಿ ಉಂಟುಮಾಡಬಹುದೆಂಬ ಅರಿವೇ ಅಂತಹವರಿಗೆ ಇಲ್ಲ ಎಂದಷ್ಟೇ ನಾನು ಹೇಳಬಹುದು. ಇಂತಹ ಶೋಷಿತ ಸಮುದಾಯ ಮೀಸಲಾತಿ ಪಡೆಯುವ ಬಗ್ಗೆ ಸಿಟ್ಟುಗೊಳ್ಳುವವರಿಗೆ ಈಗಿನ ಸಂದರ್ಭದಲ್ಲಿ ಶಿಕ್ಷಣ ಕೇವಲ ಹಣವುಳ್ಳವರಿಗೆ ಮಾತ್ರವೇ ಮೀಸಲಾಗಿದೆ ಎಂಬ ಪರಿಗಣನೆಯೇ ಇಲ್ಲ. ಕೇವಲ ಶ್ರೀಮಂತರು ಮಾತ್ರ ಆಸ್ಪತ್ರೆಗಳೊಳಕ್ಕೆ ಕಾಲಿಡಲು ಸಾಧ್ಯ ಅಥವಾ ಹಣವುಳ್ಳವರು ಮಾತ್ರ ಶಿಕ್ಷಣ ಪಡೆಯಲು ಸಾಧ್ಯ ಎಂಬುದು ಮೀಸಲಾತಿ ಅಲ್ಲವೇ? ಅದೂ ಮೀಸಲಾತಿಯೇ!

ದಲಿತ ಮೀಸಲಾತಿಗಳಿಂದ ಜಾತಿ ಮೀಸಲಾತಿಗಳಿಂದ ಬಂದವರು ಸರ್ಕಾರಿ ವಲಯದೊಳಗೆ ಅವಕಾಶ ಗಳಿಸುತ್ತಾರೆ. ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿಯೇ ಇಲ್ಲ. ಸರ್ಕಾರಿ ವಲಯದಲ್ಲಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅವರ ಉತ್ತರ ಪತ್ರಿಕೆಗಳು ಹೊರಗಡೆಯ ಮೌಲ್ಯಮಾಪಕರ ಕೈಸೇರುತ್ತವೆ ಮತ್ತು ಗುರುತು ಪತ್ತೆಯಾಗದ ರೀತಿಯಲ್ಲಿ ಅವುಗಳ ಮೌಲ್ಯಮಾಪನ ನಡೆಯುತ್ತದೆ. ಆದರೆ, ಪ್ರತಿಷ್ಠಿತ ಖಾಸಗಿ ಕಾಲೇಜುಗಳನ್ನು ಸೇರುವ ವಿದ್ಯಾರ್ಥಿಗಳನ್ನು ಆ ಕಾಲೇಜಿನ ಆಡಳಿತ ಮಂಡಳಿಗಳು ಪಾಸ್ ಮಾಡುತ್ತಲೇ ಹೋಗುತ್ತವೆ. ಅವರ ಪತ್ರಿಕೆಗಳ ಮೌಲ್ಯಮಾಪನ ಅದೇ ಕಾಲೇಜು/ವಿಶ್ವವಿದ್ಯಾಲಯದಲ್ಲಿ ಆಂತರಿಕವಾಗಿಯೇ ನಡೆಯುತ್ತದೆ. ಯಾವುದೇ ಉತ್ತರದಾಯಿತ್ವವಿಲ್ಲದ ಇಂತಹ ಕಾಲೇಜುಗಳಲ್ಲಿ ಓದಿದ ಶ್ರೀಮಂತ ಪದವೀಧರರರು ಕುಸಿಯುವ ಸೇತುವೆಗಳಿಗೆ, ವೈದ್ಯರ ಕಡಿಮೆ ಗುಣಮಟ್ಟದ ಸೇವೆಯಿಂದಾಗುವ ಸಾವು ನೋವುಗಳಿಗೆ ಹೊಣೆಗಾರರಾಗಿರುತ್ತಾರೆಯೇ ಹೊರತು ಮೀಸಲಾತಿಗಳಿಂದ ಬಂದ ವೃತ್ತಿಪರರಲ್ಲ!

ನಾನು ಇವೆಲ್ಲವನ್ನೂ ಯಾಕೆ ಹೇಳುತ್ತಿದ್ದೇನೆ? ಏಕೆಂದರೆ ಇವೆಲ್ಲವೂ ಮಹಿಳೆಯರ ಬದುಕಿನ ಮೇಲೆ ನೇರವಾದ ಪರಿಣಾಮ ಬೀರುತ್ತವೆ. ನಮ್ಮ ಸಂವಿಧಾನ ಸಮಾನತೆಯ ಬಗ್ಗೆ, ಬದುಕುವ ಹಕ್ಕಿನ ಬಗ್ಗೆ ಮಾತಾಡುತ್ತದೆ, ಆದರೆ ಅದೆಲ್ಲದರ ಹೊರತಾಗಿಯೂ ಮಹಿಳೆಯರು ಮನೆಯಿಂದ ಹೊರಗೆಸೆಯಲ್ಪಡುತ್ತಾರೆ, ದೇಶದ ಬಡವರಿಗೆ ಉತ್ತಮ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಆರೋಗ್ಯಸೇವೆ ನಿರಾಕರಿಸಲ್ಪಡುತ್ತದೆ. ನಾನು ಬೆಳೆಯುತ್ತಿದ್ದ ಕಾಲದಲ್ಲಿ ಸಾಮಾನ್ಯ ಮಧ್ಯಮವರ್ಗದ ಕುಟುಂಬಗಳ ಎಲ್ಲ ಆರೋಗ್ಯ ಸಂಬಂಧಿ ಅಗತ್ಯಗಳನ್ನೂ ಸರ್ಕಾರಿ ಆಸ್ಪತ್ರೆಗಳು ಪೂರೈಸುತ್ತಿದ್ದವು. ನಮ್ಮ ಎಲ್ಲ ಶಸ್ತ್ರಚಿಕಿತ್ಸೆಗಳೂ ಸರ್ಕಾರಿ ಆಸ್ಪತ್ರೆಗಳಲ್ಲೇ ನಡೆಯುತ್ತಿದ್ದವು, ಅಲ್ಲೇ ಅತ್ಯುತ್ತಮ ವೈದ್ಯರಿದ್ದದ್ದು ಮತ್ತು ಇದ್ದುದರಲ್ಲೇ ಉತ್ತಮ ಸವಲತ್ತುಗಳಿದ್ದದ್ದು. ಆದರೆ ಈಗ ನಾವು ಈ ಸರಪಳಿಯ ಭಾಗವಾಗಿಲ್ಲ. ನಮಗೆ ಖಾಸಗಿ ವೈದ್ಯರಿದ್ದಾರೆ, ನಮಗೆ ನಮ್ಮ ಆರೋಗ್ಯವಿಮೆಗಳಿವೆ. ಸರ್ಕಾರಿ ಆಸ್ಪತ್ರೆಗಳ ಸರದಿ ಸಾಲುಗಳಲ್ಲಿ ನಿಲ್ಲುವವರೆಲ್ಲ ತೀರಾ ಬಡವರೇ ಆಗಿದ್ದಾರೆ. ಹಾಗೆಯೇ, ನಮ್ಮ ಮಕ್ಕಳುಗಳೆಲ್ಲ ಖಾಸಗಿ ಶಾಲೆಗಳಿಗೆ ಹೋಗುತ್ತಾರೆ. ಸರ್ಕಾರಿ ಸೇವೆಗಳಿಗೆ ಏನಾದರೆ ಏನಂತೆ? ಅದನ್ನೆಲ್ಲ ಲೆಕ್ಕಕ್ಕೆ ತೆಗೆದುಕೊಳ್ಳುವವರಾದರೂ ಯಾರಿದ್ದಾರೆ?

ದಕ್ಷಿಣ ಅಮೇರಿಕಾದ ಕೊಲಂಬಿಯಾದ ಒಬ್ಬ ಲೇಖಕ ಹೇಳಿದ, "ಶ್ರೀಮಂತ ದೇಶವೆಂದರೆ ಎಲ್ಲರೂ ಕಾರುಗಳನ್ನು ಹೊಂದಿರುವ ದೇಶವಲ್ಲ; ಎಲ್ಲಿ ಎಲ್ಲರೂ ಸಾರ್ವಜನಿಕ ಸಾರಿಗೆಯನ್ನು ಬಳಸುತ್ತಿದ್ದಾರೋ ಆ ದೇಶ". ನಮ್ಮ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ, ನಮ್ಮ ಆಸ್ಪತ್ರೆಗಳಿಗೆ, ನಮ್ಮ ಸಾರ್ವಜನಿಕ ಶಾಲೆಗಳಿಗೆ ಏನಾಗುತ್ತಿದೆ? ನಾವು ಒಳಗೆ ಹೋಗಿ ನೋಡುತ್ತಲೂ ಇಲ್ಲ. ದೊಡ್ಡ ದೊಡ್ಡ ಖಾಸಗಿ ಆಸ್ಪತ್ರೆಗಳಲ್ಲಿ ದೊಡ್ಡ ಮೊತ್ತದ ಹಣವಿಲ್ಲದೆ ಎಷ್ಟೇ ತುರ್ತು ಪ್ರಕರಣವಿದ್ದರೂ ಒಳಕ್ಕೂ ಸೇರಿಸುವುದಿಲ್ಲ. ನೀವು ಬೇಕಾದರೆ ಇಂತಹ ಪ್ರತಿಷ್ಠಿತ ಆಸ್ಪತ್ರೆಗಳ ಮುಂದೆ ಸಾಯಬಹುದು, ಚಿಕಿತ್ಸೆ ದೊರೆಯುವುದಿಲ್ಲ. ನಮಗೆ ಸಂವಿಧಾನ ನೀಡಿದ ಹಕ್ಕುಗಳು ಈ ರೀತಿ ಕಳೆದುಹೋದರೆ, ಇಂತಹ ಪರಿಸ್ಥಿತಿ ಮಹಿಳೆಯರ ಬದುಕನ್ನು ನೇರವಾಗಿಯೂ, ಪರೋಕ್ಷವಾಗಿಯೂ ಪ್ರಭಾವಿಸುತ್ತದೆ.

ನಾನು ಈಗ ಮತ್ತೊಂದು ವಿಚಾರಕ್ಕೆ ಬರುತ್ತೇನೆ. ಯಾರೆಲ್ಲ ತಮ್ಮನ್ನು ತಾವು ಸಮಾಜವಾದಿಗಳೆಂದು ಕರೆದುಕೊಳ್ಳುತ್ತಿದ್ದರೋ, ಮಹಿಳಾವಾದಿಗಳೆಂದು ಕರೆದುಕೊಳ್ಳುತ್ತಿದ್ದರೋ ಅಥವಾ ಇನ್ನಾವುದೇ ಸಿದ್ಧಾಂತ ನಂಬುವವರಾದರೂ ಅವರಿಗೆಲ್ಲ ನೀವು ಡೈನೋಸಾರ್‌ಗಳ ಥರ ವಿನಾಶವಾಗುತ್ತಿದ್ದೀರಿ ಎಂದು ಹೇಳಲಾಗುತ್ತಿದೆ. ನೀವು ನಂಬಿದ ಸಿದ್ಧಾಂತ, ಅದು ಸಮಾಜವಾದವೇ ಇರಲಿ, ಸ್ತ್ರೀವಾದವೇ ಇರಲಿ ಅದಕ್ಕೆಲ್ಲ ಈ ಕಾಲದಲ್ಲಿ ಯಾವುದೇ ಅರ್ಥವಿಲ್ಲ ಎಂದು ಹೇಳಲಾಗುತ್ತಿದೆ. ಇಂತಹ ಮಾತುಗಳನ್ನು ಕೇಳಿದಾಗಲೆಲ್ಲ ನಾನು ನನಗೆ ನಾನೇ ಎರಡು ಪ್ರಶ್ನೆ ಕೇಳಿಕೊಳುತ್ತೇನೆ. ಸಮಾಜವಾದ ಮತ್ತು ಸ್ತ್ರೀವಾದ ಇವೆರಡೂ ಪರಿಕಲ್ಪನೆಗಳು ಇಂದಿನ ಮಟ್ಟಿಗೆ ಪ್ರಸ್ತುತವೇ? ಈ ಪ್ರಶ್ನೆಗಳಿಗೆ ನನಗೆ ನಾನೇ ಉತ್ತರ ಕೊಟ್ಟುಕೊಳ್ಳುವುದಾದರೆ, ನಾನು ಹೌದು ಎಂದು ಹೇಳುತ್ತೇನೆ. ಹೌದು ಎಂದು ಹೇಳುವುದು ಮಾತ್ರವಲ್ಲ, ಸ್ವತಂತ್ರ ಭಾರತದ ಇತಿಹಾಸದಲ್ಲಿ ಹಿಂದೆಂದೂ ಈ ಕಾಲಕ್ಕೆ ಪ್ರಸ್ತುತವಾಗಿರುವಷ್ಟು ಈ ಸಿದ್ಧಾಂತಗಳು ಪ್ರಸ್ತುತವಾಗಿರಲಿಲ್ಲ. ಅಷ್ಟೇ ಅಲ್ಲ, ಇಂದು ನಾವು ಇವುಗಳ ಪೂರ್ಣ ಉಪಯೋಗ ಪಡೆದುಕೊಳ್ಳದಿದ್ದರೆ ಸ್ನೇಹಿತರೇ, ಬಹುಶಃ ಮತ್ತೆ ಈ ದೇಶದಲ್ಲಿ ಶಾಂತಿ ನೆಲೆಸದೆ ಹೋಗಬಹುದು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಬದಲಾವಣೆ ಖಂಡಿತ ಬರುತ್ತದೆ; ಫೈಜ್ ಅಹಮದ್ ಫೈಜ಼್ ಹೇಳುತ್ತಾನೆ, "ನಾವೂ ನೋಡಿಯೇ ನೋಡುತ್ತೇವೆ, ಯಾವ ದಿನಗಳನ್ನು ಕಾಣುತ್ತೇವೆಂಬುದರ ಭರವಸೆ ನಮಗೆ ಕೊಡಲಾಗಿದೆಯೋ, ಯಾವ ದಿನಗಳನ್ನು ನಾವು ಕಾಣುವುದು ಕಲ್ಲಿನ ಮೇಲೆ ಬರೆದಂತೆ ಖಚಿತವಾಗಿದೆಯೋ, ಖಚಿತವಾಗಿ ನನಗೆ ಗೊತ್ತಿದೆ...ಆ ದಿನಗಳನ್ನು ನಾವು ನೋಡಿಯೇ ನೋಡುತ್ತೇವೆ". ಖಂಡಿತವಾಗಿ ಪರಿವರ್ತನೆ ಬರುತ್ತದೆ. ಆದರೆ ಹಾಗಾಗಬೇಕಾದರೆ, ಅದಕ್ಕಾಗಿ ನಾವು ಸಾಕಷ್ಟು ಪ್ರಯತ್ನಗಳನ್ನು ಮಾಡಬೇಕು. ಸಮಾಜವಾದಿಗಳಾಗಿ, ಸ್ತ್ರೀವಾದಿಗಳಾಗಿ ಮತ್ತು ಸಮಾಜವಾದಿ ಸ್ತ್ರೀವಾದಿಗಳಾಗಿ ನಮ್ಮ ಪ್ರಯತ್ನವನ್ನು ನಾವು ಶಕ್ತಿಯುತವಾಗಿ ಮಾಡಬೇಕು. ಸಮಾಜವಾದಿ ಸ್ತ್ರೀವಾದಿಯೆಂಬುದು ತನ್ನಂತೆ ತಾನೆ ಒಂದು ವಿಶಿಷ್ಟತೆ. ಅದು ಕೇವಲ ಆ ಎರಡು ಪದಗಳನ್ನು ಸೇರಿಸಿ ಹೇಳಿದಂತಲ್ಲ, ಅದಕ್ಕಿಂತ ಹೆಚ್ಚು. ಈಗ ನಾವು ಶಕ್ತಿಮೀರಿ ನಮ್ಮ ಕರ್ತವ್ಯವನ್ನು ಈಡೇರಿಸದಿದ್ದರೆ, ನಮ್ಮ ಜೀವಿತಾವಧಿಯಲ್ಲಿ ಮತ್ತೆ ಎಂದೂ ನಮಗೆ ಅವಕಾಶ ದೊರಕದೆ ಹೋಗಬಹುದು. ನಿಮಗೆ ಕೆಟ್ಟ ಸುದ್ದಿ ಹೇಳುವುದು ನನ್ನ ಉದ್ದೇಶವಲ್ಲ, ಆದರೆ ದೇಶದಾದ್ಯಂತೆ ಏನು ನಡೆಯುತ್ತಿದೆ ಎಂಬುದನ್ನು ನೀವು ನೋಡುತ್ತಿದ್ದೀರಿ. ಇದೆಲ್ಲದರ ನಡುವೆ ನಿಮ್ಮ ರಾಜ್ಯದ ಮೇಲೆ, ಈ ರಾಜ್ಯದ ಮೇಲೆ ಬಹಳ ಭರವಸೆ ಇಡಲಾಗಿದೆ. ದೇಶವಿರೋಧಿ ಶಕ್ತಿಗಳು ಏನು ಮಾಡಲು ಹೊರಟಿದ್ದಾರೆಂಬುದು ನಿಚ್ಚಳವಾಗಿ ಕಾಣುತ್ತಿದೆ. ಇವರು ಹೊರಟಿರುವ ದಾರಿಯ ಮಧ್ಯೆ ಅವರಿಗೆ ದೇಶಾದ್ಯಂತ ಮುಸ್ಲಿಮರು ಗುರಿಯಾಗಿದ್ದಾರೆ. ಇತರ ಅಲ್ಪಸಂಖ್ಯಾತರು, ಮುಖ್ಯವಾಗಿ ಕ್ರಿಶ್ಚಿಯನ್ನರು ಅವರ ಗುರಿಯಾಗಿದ್ದಾರೆ. ಅವರ ದಾರಿಯ ಮಧ್ಯೆ ಇದ್ದ ಧಾಬೋಲ್ಕರ್, ಪನ್ಸಾರೆ, ಕಲಬುರ್ಗಿ, ಗೌರಿ ಲಂಕೇಶ್ ಅಂತಹ ಮುಕ್ತ ಮನಸ್ಸುಗಳನ್ನು, ದಿಟ್ಟವಾಗಿ ಮಾತಾಡುವವರನ್ನು ಗುರಿಮಾಡಿದ್ದಾರೆ. ಇವರೆಲ್ಲ ಅವರು ಹೊರಟ ದಾರಿಯ ಮಧ್ಯದ ಗುರಿಗಳು. ಅವರ ನಿಜವಾದ ಉದ್ದೇಶ ಮತ್ತು ಗುರಿಯೇನು ಗೊತ್ತೇ? ಅವರ ನಿಜವಾದ ಗುರಿ ಸಂವಿಧಾನ. ಅದು ಅವರ ಖಚಿತ ಗುರಿ. ಅದಕ್ಕಾಗಿ ಅವರು ಈಗ ಲೋಕಸಭೆಯಲ್ಲಿ ಸಾಧಿಸಿರುವಂತೆಯೇ ರಾಜ್ಯ ಸಭೆಯಲ್ಲೂ ಬಹುಮತ ಗಳಿಸಲು ಪ್ರಯತ್ನಿಸುತ್ತಿದ್ದಾರೆ, ಆ ಮೂಲಕ ಸಂವಿಧಾನವನ್ನೇ ತೆಗೆದು ತಮಗೆ ಬೇಕಾದ ಹಿಂದುತ್ವ ಸಂವಿಧಾನವನ್ನು ತರಬಹುದೆಂಬುದು ಅವರ ಪ್ರಯತ್ನ. ಸಮಾಜವಾದಿ, ಜಾತ್ಯತೀತ, ಪ್ರಜಾತಾಂತ್ರಿಕ ಸಂವಿಧಾನವನ್ನು ಕಿತ್ತೆಸೆಯುವುದು ಅವರ ಉದ್ದೇಶ. ಈ ಮಾರ್ಗದಲ್ಲಿ ಎದುರಾಗುವ ಅಡ್ಡಿಗಳನ್ನೆಲ್ಲ ಒದ್ದು ಪಕ್ಕಕ್ಕೆ ತಳ್ಳುತ್ತಿದ್ದಾರೆ ಅಷ್ಟೆ.

ಈಗ ನಾವು ನಮ್ಮ ಸಂವಿಧಾನವನ್ನು ಉಳಿಸಿಕೊಳ್ಳಲು ಸಾಧ್ಯವಾಗದಿದ್ದರೆ, ಧರ್ಮದ ಮೇಲೆ ಆಧರಿತವಾದ ಒಂದು ಸಂವಿಧಾನವನ್ನು ತಂದಿಟ್ಟರೆ ಈ ದೇಶದ ಪರಿಸ್ಥಿತಿ ಏನಾಗಬಹುದು ಊಹಿಸಿಕೊಳ್ಳಿ. ನಮಗೆ ಇಂತಹ ಪಾಠಗಳು ಸಿಕ್ಕಿಲ್ಲವಾ? ಪ್ರಪಂಚದಾದ್ಯಂತ ನೋಡಿ, ಉದಾಹರಣೆಗೆ ಇಸ್ಲಾಂ ಮೂಲಭೂತವಾದ ಮೇಲುಗೈ ಆಗಿರುವ ದೇಶಗಳು. ಏನಾಗುತ್ತಿದೆ ಅಲ್ಲಿ? ಕ್ರಿಶ್ಚಿಯನ್ ಮೂಲಭೂತವಾದ ಇರುವ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ದೇಶಗಳು ಏನು ಮಾಡುತ್ತಿವೆ? ಅಷ್ಟೇಕೆ, ಬೌದ್ಧಧರ್ಮ ಎಂದಾದರೂ ಮೂಲಭೂತವಾಧಿ ಆಗಬಹುದು ಎಂದು ನಾವು ಊಹಿಸಿರಲಿಲ್ಲ. ಆದರೆ ಈಗ ಮಯನ್ಮಾರ್‌ನಲ್ಲಿ ಏನಾಗುತ್ತಿದೆ? ಶ್ರೀಲಂಕಾದಲ್ಲಿ ಬೀದಿಗೆ ಬಿದ್ದರುವ ಜನರನ್ನು ನೋಡಿ. ಎಲ್ಲಾ ಕಾಲದಲ್ಲೂ ಎಲ್ಲಾ ಧರ್ಮಗಳಲ್ಲೂ ಮೂಲಭೂತವಾದವನ್ನು ಅದರ ಅನಾಹುತಗಳನ್ನು ನಾವು ನೋಡಿದ್ದೇವೆ. ಅದರಿಂದ ಸಾಬೀತಾಗಿರುವ ಸತ್ಯ ಏನೆಂದರೆ ಧರ್ಮವನ್ನು ಯಾವಾಗಲೂ ಪ್ರಭುತ್ವದಿಂದ ಪ್ರತ್ಯೇಕವಾಗಿರಿಸಬೇಕು. ನಾನು ಯಾವುದೇ ಧರ್ಮದ ಆಚರಣೆ ಮಾಡುವುದಿಲ್ಲ. ಹೋರಾಟಗಾರ ತಂದೆ ತಾಯಿಗಳ ಮಗಳಾಗಿರುವುದರಿಂದ ನಾನು ಎಂದೂ ಯಾವ ಧರ್ಮವನ್ನೂ ಪಾಲಿಸಿಲ್ಲ. ಆದರೂ ನನಗೆ ನನ್ನ ಸವರ್ಣ ಹೆಸರಿನ ಕಾರಣಕ್ಕೆ ಅನೇಕ ಅನುಕೂಲಗಳು, ಸವಲತ್ತುಗಳು ಸಿಗುತ್ತವೆ, ಅದು ನನಗೆ ಗೊತ್ತಿದೆ. ನಾನು ವ್ಯಕ್ತಿಗತವಾಗಿ ಯಾವುದೇ ಧರ್ಮದ ಆಚರಣೆಗಳ ಪಾಲನೆ ಮಾಡದಿದ್ದರೂ, ಪ್ರತಿಯೊಬ್ಬ ವ್ಯಕ್ತಿಯೂ ತನ್ನಿಷ್ಟದ ಧರ್ಮವನ್ನು ಆಚರಿಸುವ ಹಕ್ಕುಗಳನ್ನು ಹೊಂದಿದ್ದಾರೆಂಬುದನ್ನು ನಾನು ಬಲವಾಗಿ ಪ್ರತಿಪಾದಿಸುತ್ತೇನೆ. ಯಾವುದಾದರೂ ಒಂದು ಧರ್ಮವನ್ನು ಆಚರಿಸುವುದು, ಏಕಕಾಲಕ್ಕೆ ಒಂದಕ್ಕಿಂತ ಹೆಚ್ಚು ಧರ್ಮಗಳನ್ನು ಆಚರಿಸುವುದು, ಖಾಸಗಿಯಾಗಿ ಒಂದು ಸಾರ್ವಜನಿಕವಾಗಿ ಒಂದು ಧರ್ಮವನ್ನು ಒಪ್ಪುವುದು.. ಹೀಗೆ ಯಾವ ರೀತಿಯಲ್ಲಿದ್ದರೂ ಅದು ತನ್ನಷ್ಟಕ್ಕೆ ತಾನಿರುವಷ್ಟು ಕಾಲ ಯಾವುದೇ ಸಮಸ್ಯೆ ಇಲ್ಲ. ಆದರೆ, ಧರ್ಮದ ಕಟ್ಟಳೆಗಳು ಪ್ರಭುತ್ವವನ್ನು ನಿರ್ದೇಶಿಸಲು ಆರಂಭಿಸಿದಾಗ ಸಮಸ್ಯೆಗಳು ಶುರುವಾಗುತ್ತವೆ. ಇದನ್ನು ನಾನು ಒಪ್ಪುವುದಿಲ್ಲ. ನೀವು ಜಗತ್ತಿನ ಯಾವುದೇ ದೇಶ ತೆಗೆದುಕೊಳ್ಳಿ, ಧಾರ್ಮಿಕ ಕಟ್ಟುಪಾಡು ಸರ್ಕಾರವನ್ನು ನಿಯಂತ್ರಿಸಲಾರಂಭಿಸಿದ ಕೂಡಲೇ ಅಂತಹ ಎಲ್ಲ ದೇಶಗಳೂ ತಮ್ಮ ಬೆಳವಣಿಗೆಯ ಗತಿಯಲ್ಲಿ ನೂರು ವರ್ಷಗಳಷ್ಟು ಹಿಂದಕ್ಕೆ ಹೋಗಿವೆ.

ನಾವು ಇಂದು ಈ ಸ್ಥಳದಿಂದ ಹೊರಡುವಾಗ ಒಂದು ಪ್ರತಿಜ್ಞೆ ಸ್ವೀಕರಿಸಬೇಕು; ಗಾಂಧೀಜಿಯವರು ಸ್ವೀಕರಿಸಿದ ಪ್ರತಿಜ್ಞೆಯಂತೆ. ಅವರು ದೇಶ ವಿಭಜನೆಯ ಮಾತು ಬಂದಾಗ, "ಈ ದೇಶ ವಿಭಜನೆಯಾಗುವುದಾದರೆ ನನ್ನ ಮೃತದೇಹದ ಮೇಲಾಗಬೇಕೇ ಹೊರತು ನಾನು ಬದುಕಿರುವಷ್ಟು ಕಾಲ ಅದಕ್ಕೆ ಅವಕಾಶ ಕೊಡುವುದಿಲ್ಲ" ಎಂದು ಪಣತೊಟ್ಟಿದ್ದರು. ಅದೇ ರೀತಿ ನಾವೂ ಒಂದು ಪಣತೊಡಬೇಕು: "ನನ್ನ ದೇಹದಲ್ಲಿ ಪ್ರಾಣ ಇರುವವರೆಗೂ, ನಾನು ಬದುಕಿರುವ ತನಕ ಯಾವುದೇ ಕಾರಣಕ್ಕೂ ಈ ದೇಶದ ಸಂವಿಧಾನವನ್ನು ಧ್ವಂಸಗೊಳಿಸಲು ಬಿಡುವುದಿಲ್ಲ; ನನ್ನ ಸಂವಿಧಾನ ನನಗೆ ಪ್ರಾಣಕ್ಕಿಂತ ಮುಖ್ಯ". ನಾನು ಸಂವಿಧಾನ ಮೂಲಭೂತವಾದಿಯಲ್ಲ; ಸಂವಿಧಾನಕ್ಕೆ ತಿದ್ದುಪಡಿಯೇ ಬೇಕಿಲ್ಲ ಎಂದು ನಾನು ಹೇಳುತ್ತಿಲ್ಲ. ಸಂವಿಧಾನದ ತಿದ್ದುಪಡಿಯ ಮೂಲಕವೇ ಹಲವು ಬಗೆಯ ಸುಧಾರಣೆಗಳು ಮೀಸಲಾತಿ ನೀತಿಗಳಲ್ಲಿ ಬಂದವು. ಸಂವಿಧಾನ ತಿದ್ದುಪಡಿಯ ಮೂಲಕವೇ ಆದಿವಾಸಿ ಸಮುದಾಯಗಳು ತಮ್ಮ ಭೂಮಿಯ ಮೇಲೆ ಮತ್ತು ಅರಣ್ಯದ ಮೇಲೆ ಹಕ್ಕು ಪಡೆದರು. ಸಂವಿಧಾನವು ಯಾರೋ ಕಾಲಾತೀತ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಶಕ್ತಿ ಎಲ್ಲೋ ಕೂತು ಎಲ್ಲಾ ಕಾಲಕ್ಕೂ ಬೇಕಾದಂತೆ ರಚಿಸಿದ ಪವಿತ್ರ ಗ್ರಂಥವಲ್ಲ; ಆದ್ದರಿಂದ ತಿದ್ದುಪಡಿಗಳೇ ಬೇಡ ಎನ್ನುವುದು ಸರಿಯಲ್ಲ. ಆದರೆ ನಾನು ಸಂವಿಧಾನವು ಬದಲಾಗುವುದಾದರೆ ಅದು ಇನ್ನಷ್ಟು ಉತ್ತಮಗೊಳ್ಳಬೇಕು, ಸಂವಿಧಾನಕ್ಕೆ ತಿದ್ದುಪಡಿ ಬರುವುದಾದರೆ ಅದು ದೇಶದ ಸಮಾನತೆ ಮತ್ತು ಸಮಾಜವಾದಿ ನೀತಿಗಳಿಗೆ ಬಲ ತುಂಬುವುದಕ್ಕಾಗಿ ಮಾತ್ರ ಬರಬೇಕು ಎಂದು ದೃಢವಾಗಿ ನಂಬಿದ್ದೇನೆ.

ಹಾಗಾದರೆ ಏನಿದು ಸಮಾಜವಾದ ಎಂದರೆ? ಸಮಾಜವಾದ ಎಂಬುದನ್ನು ನಾನು ಅರ್ಥಮಾಡಿಕೊಂಡಿರುವುದು ಅದು ಎಲ್ಲ ಬಗೆಯ ಅಸಮಾನತೆಗಳ ವಿರೋಧಿ ಎಂದು. ಅದು ಆರ್ಥಿಕ ಅಸಮಾನತೆಯನ್ನು ವಿರೋಧಿಸುತ್ತದೆ, ಆದ್ದರಿಂದಲೇ ಸರ್ಕಾರವೇ ತನ್ನದೇ ಆದ ಶಿಕ್ಷಣ ಸಂಸ್ಥೆಗಳನ್ನು, ಆರೋಗ್ಯ ಸೇವೆಯನ್ನು, ಜನಸಾಮಾನ್ಯರಿಗೆ ಬೇಕಾದ ಎಲ್ಲ ಮೂಲಭೂತ ಸವಲತ್ತುಗಳನ್ನು ತನ್ನ ಉಸ್ತುವಾರಿಯಲ್ಲಿ ಒದಗಿಸಬೇಕೆಂದು ಸಮಾಜವಾದಿ ತತ್ವ ಬಯಸುತ್ತದೆ. ಖಾಸಗಿ ಮಾರುಕಟ್ಟೆ ಶಕ್ತಿಗಳನ್ನು ನಿಯಂತ್ರಿಸಲು ಒತ್ತಾಯಿಸುತ್ತದೆ. ಸಮಾಜವಾದಿ ತತ್ವಗಳ ಪ್ರಕಾರ ಸಮಾನತೆ ಅಂದರೆ, ಪ್ರಜಾತಂತ್ರ ಅಂದರೆ ಇವೆಲ್ಲವೂ, ಆದರೆ ಇದಿಷ್ಟೇ ಅಲ್ಲ, ಅದು ಸಾಂಸ್ಕೃತಿಕ ರಂಗದ ಪ್ರಜಾತಂತ್ರವನ್ನೂ ಕೂಡಾ ಮಾತಾಡುತ್ತದೆ. ಭಿನ್ನಮತಕ್ಕೆ ಅವಕಾಶ ಇರಬೇಕು ಎಂದು ಭಾವಿಸುತ್ತದೆ. ಭಿನ್ನಮತ ಎಂದರೇನು? ಒಬ್ಬ ಭಾರೀ ಶ್ರೀಮಂತನ ಒಂದು ದಿನದ ಖರ್ಚು ಒಂದು ಇಡೀ ಜಿಲ್ಲೆಯ ಹಣಕಾಸಿನ ಅಗತ್ಯಕ್ಕೆ ಸಮನಾಗುವುದಾದರೆ ಅದನ್ನು ಸಮಾಜವಾದಿ ಸಿದ್ಧಾಂತ ಒಪ್ಪುವುದಿಲ್ಲ. ಅಂಥದ್ದನ್ನು ವಿರೋಧಿಸುವುದೇ ನಮ್ಮ ಭಿನ್ನಮತವನ್ನು ಅಭಿವ್ಯಕ್ತಿಸುವ ಕ್ರಮ. ಇದಕ್ಕೆ ಪ್ರಜಾತಂತ್ರದಲ್ಲಿ ಅವಕಾಶ ಇರಬೇಕು ಎಂದು ಸಮಾಜವಾದ ಹೇಳುತ್ತದೆ.

ಸ್ತ್ರೀವಾದ ಎಂದರೇನು? ಮಹಿಳಾಪರವಾದ ವಿಚಾರಗಳನ್ನಿಟ್ಟುಕೊಂಡು ಕೆಲಸ ಮಾಡುವುದು ಎಂದು ಸರಳವಾಗಿ ಹೇಳಬಹುದು. ಆದರೆ ಸ್ತ್ರೀವಾದ ಎಂದರೆ ಅಷ್ಟೇ ಅಲ್ಲ. ಅದು ಎಲ್ಲ ಮಹಿಳೆಯರಿಗೂ, ಮತ್ತು ಪುರುಷರಿಗೂ ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೂ ಮತ್ತು ಎಲ್ಲ ಬಗೆಯ ಅಸ್ಮಿತೆಗಳ ಜನರಿಗೂ ಸೇರಿದ್ದು. ಮಹಿಳಾಪರವಾದ ವಿಚಾರಗಳ ಮೇಲೆ ಕೆಲಸ ಮಾಡುವುದರ ಜೊತೆಗೆ ಸ್ತ್ರೀವಾದ ಸಮಾಜವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ, ಸ್ತ್ರೀವಾದ ಎಂದರೆ ಗಂಡಸರನ್ನು ವಿರೋಧಿಸುವುದಲ್ಲ. ವ್ಯವಸ್ಥೆಯಲ್ಲಿ ಆಳವಾದ ವಿಭಜನೆಯನ್ನು ಮೂಡಿಸಿರುವ ಪಿತೃಪ್ರಧಾನ ರಚನೆಯನ್ನು ಸ್ತ್ರೀವಾದ ಸರಿಯಾಗಿ ಗ್ರಹಿಸಿದೆ. ಪಿತೃಪ್ರಧಾನತೆಯು ಗಂಡಸರಿಗೆ–ಎಲ್ಲಾ ಗಂಡಸರಿಗೂ ಒಂದೇ ಪ್ರಮಾಣದಲ್ಲಿ ಅಲ್ಲದಿರಬಹುದು, ಗಂಡಸರು ಅಂದಾಕ್ಷಣ ಅವರೆಲ್ಲ ಒಂದೇ ಅಲ್ಲ, ಅಲ್ಲಿ ಹಲವು ಸ್ತರಗಳಿವೆ–ಆಸ್ತಿವಂತ ವರ್ಗಗಳ, ಮೇಲ್ಜಾತಿಗಳ ಅಥವಾ ಬಲಾಢ್ಯ ಹಿನ್ನೆಲೆಯ ಮತ್ತು ಹುಟ್ಟಿನಲ್ಲಿ ಮೊದಲು ಹುಟ್ಟಿದವರಿಗೆ ಅತ್ಯಂತ ಅಸಮರ್ಪಕವಾದ ರೀತಿಯಲ್ಲಿ ಅತಿಹೆಚ್ಚಿನ ಅಧಿಕಾರಗಳನ್ನು ನೀಡುತ್ತದೆ. ಪುರುಷಾಧಿಪತ್ಯ ಮನೆಯೊಳಗೂ ಮತ್ತು ಹೊರಗೂ ಎರಡೂ ಕಡೆ ಕೆಲಸ ಮಾಡುತ್ತದೆ. ಆದರೆ,

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮಹಿಳೆಯರ ಬದುಕನ್ನು ಮಾತ್ರ ಮನೆಯೊಳಗಿನ ಬದುಕು ಮತ್ತು ಹೊರಗಿನ ಬದುಕು ಎಂದು ಕೃತಕವಾಗಿ ವಿಭಜಿಸಿ ಇಡಲಾಗಿದೆ. ಮನೆಯೊಳಗಿನ ಸುದೀರ್ಘ ಕಾಲದ ಶೋಷಣೆಯನ್ನು ಇಂದು ಹೊರಗೆ ಹೇಳಿಕೊಳ್ಳಲು ಸಾಧ್ಯವಿದೆ ಎಂಬುದು ನಮಗೆ ಗೊತ್ತಿದೆ. ಆದರೆ ದುರದೃಷ್ಟವಶಾತ್ ಸಂವಿಧಾನ, ಕಾನೂನು ಮತ್ತು ನ್ಯಾಯ ಪರಿಕಲ್ಪನೆಗಳು ಕುಟುಂಬಗಳೊಳಗಿನ ಸ್ಥಳಗಳನ್ನು ಪ್ರವೇಶಿಸಲು ಹೆದರಿಕೊಂಡಿವೆ. ಮನೆಯೊಳಗೆ ಏನು ನಡೆಯುತ್ತದೆ ಎಂಬುದನ್ನು ಮರ್ಯಾದೆಯ ಹೆಸರಿನಲ್ಲೇ ಗೋಡೆಗಳೊಳಗೇ ಅಡಗಿಸಿಡಲಾಗುತ್ತದೆ. ಮಹಿಳೆಯರಿಗೆ ಹೆಚ್ಚು ಸಂಬಂಧಿಸಿದ ಕೌಟುಂಬಿಕ ಹಿಂಸೆ ವಿರೋಧಿ ಕಾಯ್ದೆಯಿರಲಿ, ಆಸ್ತಿ ಹಕ್ಕಿನ ಕುರಿತ ಕಾನೂನುಗಳ ರಚನೆಯಿರಲಿ ಇಂತಹದ್ದರಲ್ಲಿ ಮಹಿಳೆಯರಿಗೆ ಅವಕಾಶಗಳು ಬಹಳ ಕಡಿಮೆ. ಈ ಬಗ್ಗೆ ಪುರುಷರು ಏನು ಮಾತನಾಡಿಕೊಳ್ಳುತ್ತಾರೆಂದು ಕೇಳುವುದನ್ನೂ ಕೂಡಾ ನಿರ್ಬಂಧಿಸಲಾಗುತ್ತದೆ. ಸ್ತ್ರೀವಾದವು ಈ ಕೃತಕ ನಿರ್ಬಂಧಗಳು ಮತ್ತು ವಿಭಜನೆಗಳನ್ನು ಮುರಿಯುವಂಥದ್ದಾಗಿದೆ.

ಬಹಳಷ್ಟು ಸಲ ಇನ್ನೂ ಹಲವು ಬಗೆಯ ಚಳವಳಿಗಳಲ್ಲಿ ಸಕ್ರಿಯರಾಗಿರುವ ಪುರುಷ ಸಂಗಾತಿಗಳಿಗೆ ತಮ್ಮ ಮಹಿಳೆಯರನ್ನು ಮನೆಯಿಂದ ಹೊರಕರೆತರುವುದು ಮಾತ್ರ ಇಷ್ಟವಿರುವುದಿಲ್ಲ. ಎಷ್ಟೋ ಬಾರಿ ಚಳವಳಿಗಳಲ್ಲಿರುವವರೂ ಕೂಡಾ ಲೈಂಗಿಕ ಹಿಂಸಾಚಾರಗಳಲ್ಲಿ ತೊಡಗಿರುವ ಉದಾಹರಣೆಗಳಿವೆ. ಇಂತಹವುಗಳಿಗೆ ಸ್ತ್ರೀವಾದದಲ್ಲಿ ಅವಕಾಶವಿಲ್ಲ. ಆದ್ದರಿಂದ ಸ್ತ್ರೀವಾದ ಎಂದರೆ ಪುರುಷವಿರೋಧಿತನವಲ್ಲ ಬದಲಿಗೆ ಪುರುಷಾಧಿಪತ್ಯದ ರಚನೆಗಳನ್ನು ಕಳಚುವುದು ಎಂದರ್ಥ. ಡಾ. ಅಂಬೇಡ್ಕರ್ ಅವರು ಸರಿಯಾಗಿ ಹೇಳಿದಂತೆ, ಪುರುಷಾಧಿಪತ್ಯ ಮತ್ತು ಜಾತಿ ಒಂದರೊಳಗೊಂದು ಸೇರಿಕೊಂಡು ಒಂದನ್ನೊಂದು ಬಲಪಡಿಸುತ್ತಿವೆ. ಮದುವೆ ಎಂಬ ವಿಷಯಕ್ಕೆ ಬಂದರೆ, ಹೆಣ್ಣುಮಕ್ಕಳು ಒಂದೇ ಜಾತಿಯ ಕೆಲವು ಸಂಬಂಧದ ಎಳೆಗಳಲ್ಲಿ ಮಾತ್ರವೇ ಮದುವೆಯಾಗಲು ಅವಕಾಶವಿರುತ್ತದೆ. ಈ ಅಂತರ್ವಿವಾಹ ಪದ್ಧತಿಯಿಂದಾಗಿಯೇ ಜಾತಿ ವ್ಯವಸ್ಥೆ ಯಥಾಸ್ಥಿತಿಯಲ್ಲಿ ಉಳಿದುಕೊಂಡು ಬಂದಿದೆ. ಅದಕ್ಕಾಗಿಯೇ ಎಲ್ಲ ಸಮಾಜ ಸುಧಾರಕರೂ ಹೇಳಿದರು, ಅಂತರ್ಜಾತಿ ಮದುವೆಗಳನ್ನು ಮಾಡಿಕೊಳ್ಳಿ, ಅಂತರ್ಧರ್ಮೀಯ ಮದುವೆಗಳನ್ನು ಮಾಡಿಕೊಳ್ಳಿ ಎಂದು. ಒಂದು ವೇಳೆ ಈ ಕಟ್ಟುಪಾಡುಗಳನ್ನು ಮೀರಿ ಮದುವೆ ಅಥವಾ ಇನ್ನಿತರ ಬಗೆಯ ಸಂಬಂಧಗಳು ಏರ್ಪಟ್ಟರೆ ಕೂಡಲೇ ಮಹಿಳೆಯರನ್ನು 'ಕೆಟ್ಟ ಹೆಂಗಸು' ಎಂದು ಹಣೆಪಟ್ಟಿ ಅಂಟಿಸಲಾಗುತ್ತದೆ. ಸ್ನೇಹಿತರೇ, ಈ ಒಳ್ಳೆ ಮಹಿಳೆ ಅಥವಾ ಕೆಟ್ಟ ಮಹಿಳೆ ಎಂಬುದಕ್ಕೂ ಲಿಂಗಕ್ಕೂ ಏನೂ ಸಂಬಂಧವಿಲ್ಲ. ಒಳ್ಳೆ ಮಹಿಳೆ ಅಥವಾ ಕೆಟ್ಟ ಮಹಿಳೆ ಎಂಬುದು, ಒಳ್ಳೆ ಮನುಷ್ಯರು ಅಥವಾ ಕೆಟ್ಟ ಮನುಷ್ಯರು ಎಂಬುದಷ್ಟೇ, ಅಲ್ಲಿ ನಮ್ಮ ಲಿಂಗತ್ವಕ್ಕೆ ಏನೂ ಕೆಲಸವಿಲ್ಲ. ಹೀಗೆ ನಮ್ಮನ್ನು ಒಳ್ಳೆಯವರು ಕೆಟ್ಟವರು ಎಂಬ ಹಣೆಪಟ್ಟಿ ಅಂಟಿಸಿ ವಿಭಜಿಸುವುದು, ಪುರುಷಾಧಿಪತ್ಯದ ಒಂದು ತಂತ್ರ ಮಾತ್ರ. ಇದು ಹೇಗೆಂಬುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನಾನು ಒಮ್ಮೆ ಮುಂಬೈಯ ಒಂದು ರಸ್ತೆಯ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ತುದಿಯಲ್ಲಿ ಏನೋ ಕೆಲಸದ ಮೇಲೆ ನಿಂತುಕೊಂಡಿದ್ದೆ. ನನ್ನ ಮುಂದೆ ಒಂದು ಕಾರ್ ಹಾದುಹೋಯಿತು, ಮತ್ತೆ ಹಿಂದೆ ಬಂದು ನನ್ನ ಮುಂದೆ ನಿಂತಿತು, ಅದರೊಳಗೆ ಇಬ್ಬರು ಗಂಡಸರಿದ್ದರು, ಒಬ್ಬ ನನ್ನನ್ನು ಕೇಳಿದ 'ಬರ್ತೀಯಾ'. ನಾನು 'ಇಲ್ಲ' ಎಂದೆ.. ನಾನಲ್ಲಿ ನಿಂತಿರುವಂತೆಯೇ ಹಲವು ವಾಹನಗಳು ನಿಲ್ಲಿಸಿ ನನ್ನ ಕರೆದು ಹೋದವು. ಕೊನೆಗೊಬ್ಬ ನಿಲ್ಲಿಸಿದ, ಕರೆದ, ನನ್ನ ಮುಖಭಾವ ನೋಡಿ 'ಇವಳು ಅವರಂಥವಳಲ್ಲ, ಬನ್ನಿ' ಎಂದ. ನಾನವನಿಗೆ ಹೇಳಿದೆ, 'ನಾನು 'ಅವರ'ಂಥವಳೇ. ಆದರೆ ನನಗೆ ಬೇಡ, ಅಷ್ಟೆ.' ಅವರು ಕಕ್ಕಾಬಿಕ್ಕಿಯಾಗಿ ಹೋದರು. ನೋಡಿ, ಇದಕ್ಕೆ ಹಲವು ಒಳಾರ್ಥಗಳಿವೆ: 'ಅಂಥವರಿಗೆ' ಆಯ್ಕೆಯ ಅವಕಾಶ ಇಲ್ಲ. ಕರೆದವರೊಟ್ಟಿಗೆ ಹೋಗಬೇಕು. ಲೈಂಗಿಕ ಕಾರ್ಯಕರ್ತರ ಮೇಲಿನ ದೌರ್ಜನ್ಯಕ್ಕೆ ಇದು ಒಂದು ಕಾರಣ. ಮತ್ತೊಂದು ಆಯಾಮವಿದೆ: ಹೆಂಗಸರು 'ಅವರು' ಅಲ್ಲವೆಂದರೆ ಯಾವುದೋ ಗಂಡಿನ ಆಸ್ತಿಯಾಗಿರುತ್ತಾರೆ, ಅವರ ಮೇಲೆ ಬೇರೆ ಗಂಡು ಅಧಿಕಾರ ಸ್ಥಾಪಿಸಲಾಗುವುದಿಲ್ಲ. ಅದಕ್ಕೇ ಅವರಿಗೆ ನನ್ನ ಉತ್ತರ ತೀರ ಕಸಿವಿಸಿ ಹುಟ್ಟಿಸಿರಬಹುದು.

ಪ್ರಜಾತಂತ್ರ ಎಂದರೆ ಅದು ಸಮಾನತೆಯ ಜೊತೆಗೇ ಇದೆ. ಎಲ್ಲರ ಸಮಾನತೆ. ಸಮಾನತೆಯಿಲ್ಲದ ಪ್ರಜಾಪ್ರಭುತ್ವ ಪ್ರಜಾಪ್ರಭುತ್ವವೇ ಅಲ್ಲ. ಸಮಾನತೆಯೆಂಬುದು ಒಬ್ಬರು ಇನ್ನೊಬ್ಬರಿಗೆ ಕೊಡುವಂಥದ್ದಲ್ಲ. ಅದು ನೀವು ಏನು ಎಂಬುದನ್ನು ನಾನು ಅರ್ಥಮಾಡಿಕೊಳ್ಳುವಂಥದ್ದು, ಅದು ಇನ್ಯಾರದೋ ಅಗತ್ಯವಲ್ಲ, ನನ್ನದೇ ಸ್ವಂತ ಅಗತ್ಯ. ಯಾವಾಗ ನೀವು ಯಾರು ಮತ್ತು ಇಲ್ಲಿ ಸಮಾನತೆ ಹೇಗೆ ತರಬೇಕು ಎಂಬುದನ್ನು ನಾನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇನೋ ಆಗ ನಾನು ನನ್ನನ್ನು ನಾನು ಅರಿಯುತ್ತೇನೆ. ಹಾಗೆಯೇ ಸಮಾನತೆಯನ್ನು ಜಾರಿ ಮಾಡಲು ಪ್ರಯತ್ನಿಸಿದಾಗ ನಿಮ್ಮನ್ನು ಅರಿಯುತ್ತೇನೆ. ಆದ್ದರಿಂದ ಸಮಾನತೆ, ಪ್ರಜಾತಂತ್ರ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ನಡೆಯುವ ಹೋರಾಟ ಒಂದರ ಜೊತೆಗೊಂದು ಸಾಗಬೇಕಾಗಿರುವಂಥವು. ಮತ್ತು ಇದರಲ್ಲಿ ಯಾವುದೂ ಕಳೆದು ಹೋಗದಂತೆ–ಪ್ರಜಾತಂತ್ರ ಮತ್ತು ಸಾಮಾಜಿಕ ನ್ಯಾಯದ ಭರವಸೆ ಯಾವುದೂ ತಪ್ಪಿಹೋಗದಂತೆ ಕಾಪಾಡಬೇಕಾದದ್ದು ನಮ್ಮ ಕರ್ತವ್ಯ.

ಸ್ತ್ರೀವಾದಿ ಗುಂಪುಗಳು ಅಮೆರಿಕಾದಲ್ಲಿ 'ಬ್ರೆಡ್ ಮತ್ತು ಗುಲಾಬಿಗಳು' ಎಂಬ ಒಂದು ಕಾರ್ಯಕ್ರಮ ಆಯೋಜಿಸುತ್ತವೆ. ಅಂದರೆ ನಮಗೆ ಆಹಾರದಂತಹ ಮೂಲಭೂತ ಅಗತ್ಯಗಳು ಮಾತ್ರವಲ್ಲ, ಇಡೀ ಜಗತ್ತಿನ ಶಾಂತಿ ಬೇಕು, ಪ್ರೀತಿ ಬೇಕು ಮತ್ತು ಮಮತೆ, ಕಾರುಣ್ಯ ಬೇಕು ಎಂದು ಸ್ತ್ರೀವಾದಿಗಳು ಒತ್ತಾಯಿಸುತ್ತಾರೆ. ಆ ನಂತರ ನಾವು ಸ್ಥಾಪಿತ ರಚನೆಗಳನ್ನು ಪ್ರಶ್ನಿಸಬೇಕು. ನಾವು ಲಿಂಗ ಅಸಮಾನತೆಯನ್ನು ಮಾತ್ರವಲ್ಲ, ಎಲ್ಲ ಬಗೆಯ ಅಸಮಾನ ರಚನೆಗಳನ್ನೂ ಪ್ರಶ್ನಿಸಬೇಕು. ಅಸ್ಪೃಶ್ಯತೆಯನ್ನು ಮಾತ್ರವಲ್ಲ, ಇಡೀ ಜಾತಿ ವ್ಯವಸ್ಥೆಯನ್ನೇ ಪ್ರಶ್ನಿಸಬೇಕು. ಉದಾಹರಣೆಗೆ, ಜನರು ಬೇರೆ ಬೇರೆ ಧರ್ಮಗಳನ್ನು ಆಚರಿಸುತ್ತಾರೆ, ನೀವು ಯಾವುದೇ ಧರ್ಮದ ಅನುಯಾಯಿಯನ್ನು ಕೇಳಿದರೂ ಅವರು ತಮ್ಮದೇ ಧರ್ಮ ಶ್ರೇಷ್ಠ ಎನ್ನುತ್ತಾರೆ. ಆದರೆ ಜಾತಿ ಅಥವಾ ಲಿಂಗ ತಾರತಮ್ಯದ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ವಿಚಾರ ಹಾಗಲ್ಲ. ನೀವು ಯಾವುದೇ ಸಾಮಾನ್ಯ ಮಹಿಳೆಯನ್ನೇ ಕೇಳಿ, ಅಥವಾ ಪುರುಷರನ್ನೇ ಕೇಳಿ ಯಾರು ಮೇಲು ಎಂದು, ಅವರಿಬ್ಬರೂ ಪುರುಷರೇ ಮೇಲು ಎನ್ನುತ್ತಾರೆ. ಜಾತಿಯೂ ಅಷ್ಟೆ, ಒಬ್ಬ ಸವರ್ಣ ವ್ಯಕ್ತಿಯನ್ನೂ, ದಲಿತ ವ್ಯಕ್ತಿಯನ್ನೂ ಯಾವ ಜಾತಿ ಶ್ರೇಷ್ಠ ಎಂದು ಕೇಳಿದರೆ, ಇಬ್ಬರೂ ಸಾಮಾನ್ಯವಾಗಿ ಸವರ್ಣ ಜಾತಿ ಶ್ರೇಷ್ಠ ಎಂದು ಉತ್ತರಿಸುತ್ತಾರೆ. ಇಟಾಲಿಯನ್ ಮಾರ್ಕ್ಸ್‌ವಾದಿ ಅಂಟಾನಿಯೋ ಗ್ರಾಮ್ಷಿ ಹೇಳುತ್ತಾನೆ, "ಮನುಷ್ಯರನ್ನು ನಿಯಂತ್ರಿಸಲು ಆಳುವವರು ಸದಾ ಕಾಲ ಹಿಂಸೆಯನ್ನು ಬಳಸಿದರೆ ಜನರು ಬಂಡಾಯವೇಳುತ್ತಾರೆ. ಅದಕ್ಕಾಗಿ ಪ್ರಭುತ್ವ ಜನರ ಮನೋಭೂಮಿಕೆಯನ್ನೇ ಈ ವ್ಯವಸ್ಥೆಗೆ ತಕ್ಕಂತೆ ಹೊಂದಿಸಲು ನೋಡುತ್ತದೆ. ಆಳಲ್ಪಡುವವರ ಒಪ್ಪಿಗೆಯಿಲ್ಲದೆ ದೀರ್ಘಕಾಲ ಆಳ್ವಿಕೆ ಮುಂದುವರೆಯಲು ಸಾಧ್ಯವಿಲ್ಲ. ಆದ್ದರಿಂದ ಈ 'ಕಲ್ಚರಲ್ ಹೆಜೆಮನಿ'ಯನ್ನು ಜನರು ಒಪ್ಪುವಂತೆ ಅದನ್ನು ವಿನ್ಯಾಸಗೊಳಿಸಲಾಗಿರುತ್ತದೆ" ಎನ್ನುತ್ತಾನೆ. ಅಂದರೆ, ಒಬ್ಬ ಮಹಿಳೆಯನ್ನು ಕುಟುಂಬ ವ್ಯವಸ್ಥೆಯ ಕಟ್ಟುಪಾಡಿನಲ್ಲಿ ಇರಿಸಲು ನೀವು ಆಕೆ ಮಗುವನ್ನು ಹೆತ್ತಾಗ ಅದನ್ನು ವೈಭವೀಕರಿಸಿ ಸಂಭ್ರಮಿಸಬೇಕಾಗುತ್ತದೆ ಮತ್ತು ಅದರಲ್ಲೂ ಗಂಡು ಮಗುವೇ ಶ್ರೇಷ್ಠ ಎಂದು ಆಕೆಯನ್ನೇ ಮೊದಲು ಮರುಳುಗೊಳಿಸಬೇಕಾಗುತ್ತದೆ. ಬೇರೆ ಯಾರಿಗಾದರೂ ಸೇರಿದ ಒಂದು ವಸ್ತುವನ್ನು ನೀವು ಅವರಿಂದ ಕಸಿದರೆ ಪ್ರತಿರೋಧ ಬಂದೇ ಬರುತ್ತದೆ. ಹಾಗೆ ಬರಬಾರದೆಂದರೆ ನೀವು ಅವರನ್ನು ಆ ವಸ್ತು ಮೂಲತಃ ನಿಮಗೇ ಸೇರಿದ್ದು ಎಂದು ಒಪ್ಪಿಸಿಟ್ಟಿರಬೇಕಾಗುತ್ತದೆ.

ಆದ್ದರಿಂದ ನಮ್ಮ ಕೆಲಸ ಬಿಳಿ ದೊರೆಗಳ ಜಾಗದಲ್ಲಿ ಕಂದು ದೊರೆಗಳನ್ನು ಒಪ್ಪಿಕೊಳ್ಳುವುದಲ್ಲ. ಹಾಗೆ ಮಾಡಿದರೆ ಅದು ಯಾಜಮಾನ್ಯವನ್ನು ವಿರೋಧಿಸುವ ಕ್ರಿಯೆಯಲ್ಲ. ಗ್ರಾಮ್ಷಿ ಹೇಳುವ ಈ ಸಾಂಸ್ಕೃತಿಕ ಅಧಿಪತ್ಯವನ್ನು ನಾವು ಪ್ರಶ್ನಿಸಬೇಕಿದೆ. ನಮ್ಮ ಇಡೀ ಕೆಲಸವೇ ಯಾಜಮಾನ್ಯ ವಿರೋಧಿ ಕೆಲಸ. ಅಧಿಕಾರವನ್ನು ಪ್ರಶ್ನಿಸುವುದು, ಅಧಿಕಾರವನ್ನು ಪ್ರಜಾತಾಂತ್ರೀಕರಿಸುವುದು, ಅಧಿಕಾರವನ್ನು ಹಂಚುವುದು ಮತ್ತು ವಿಕೇಂದ್ರೀಕರಿಸುವುದು – ಇವೇ ನಮ್ಮ ಕೆಲಸ. ನಾವು ನಮ್ಮ ನಡುವಿನ ಕೃತಕ ವಿಭಜನೆಗಳನ್ನು ಒಪ್ಪಿಕೊಳ್ಳುವುದಿಲ್ಲ; ಒಳ್ಳೆಮಹಿಳೆ ಅಥವಾ ಕೆಟ್ಟ ಮಹಿಳೆ, ಮನೆಯೊಳಗೆ ಮತ್ತು ಹೊರಗಿನ ವ್ಯತ್ಯಾಸಗಳು, ಜಾತಿ ವಿಭಜನೆಗಳು–ಇವ್ಯಾವುವೂ ನಮಗೆ ಒಪ್ಪಿತವಲ್ಲ. 'ಓ ಅವನೊಬ್ಬ ಒಳ್ಳೆಯ ಹೋರಾಟಗಾರ, ಒಂದೇ ವಿಷಯವೆಂದರೆ ಅವನು ತನ್ನ ಹೆಂಡತಿಯನ್ನು ಹೊಡೆದು ಹಿಂಸಿಸುತ್ತಾನೆ' – ಇಲ್ಲ, ಇದನ್ನು ನಾವು ಒಪ್ಪುವುದಿಲ್ಲ. ಸ್ತ್ರೀವಾದಿ ಚಿಂತನೆಯಲ್ಲಿ, ಸಾಮಾಜಿಕ ಚಳುವಳಿಯಷ್ಟೇ ವ್ಯಕ್ತಿಗತ ತತ್ವನಿಷ್ಠೆ ಮುಖ್ಯವಾದದ್ದು, ಬಹಳ ಮುಖ್ಯವಾದದ್ದು. ಆದ್ದರಿಂದ ನಾವು ನಮ್ಮ ಹೋರಾಟವನ್ನು ಗುರುತಿಸುತ್ತೇವೆ, ಯಾವುದೇ ಹಂತದಲ್ಲೂ ಅದನ್ನು ಬಿಟ್ಟುಕೊಡುವುದಿಲ್ಲ.

ನಮ್ಮ ಹೋರಾಟವು ಎಲ್ಲ ಮಹಿಳೆಯರಿಗೂ, ಎಲ್ಲ ಹಕ್ಕುಗಳಿಗೂ, ಎಲ್ಲಾ ಬಗೆಯ ಸಮಸ್ಯೆಗಳಿಗೂ ಉಪಯುಕ್ತವಾಗಿರಬೇಕು. ಮಹಿಳೆಯರ ಮಧ್ಯೆ ವ್ಯತ್ಯಾಸಗಳಿವೆ. ಒಬ್ಬ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಬಡ ಮುಸ್ಲಿಂ ಮಹಿಳೆ, ಒಬ್ಬ ಶ್ರೀಮಂತ ಮುಸ್ಲಿಂ ಮಹಿಳೆ ಒಂದೇ ಆಗಿರುವುದಿಲ್ಲ. ಅದೇ ರೀತಿ ಒಬ್ಬ ಹಿಂದೂ ಸವರ್ಣ ಮಹಿಳೆ ಮತ್ತು ಶೋಷಿತ ಸಮುದಾಯಗಳ ಮಹಿಳೆ ಒಂದೇ ಅಲ್ಲ. ದಕ್ಷಿಣ ಭಾರತ ಮತ್ತು ಉತ್ತರ ಭಾರತ ಒಂದೇ ಅಲ್ಲ. ಟ್ರಾನ್ಸ್‌ಜೆಂಡರ್ ಸಮುದಾಯಗಳ ಪರಿಸ್ಥಿತಿ ಮತ್ತು ಸಮಸ್ಯೆಗಳು ಬೇರೆಯೇ ಬಗೆಯವು. ಇವೆಲ್ಲ ನಮ್ಮ ವಾಸ್ತವಗಳು. ಇವು ಭಿನ್ನವಾದ ವಾಸ್ತವಗಳು. ಇದರಲ್ಲಿ ಸರಿಯಾದದ್ದು ಮತ್ತು ತಪ್ಪಾದದ್ದು ಎಂದು ವಿಂಗಡಿಸಲು ನಾವು ಯಾರು? ನಮಗೆ ಏನು ಹಕ್ಕಿದೆ? ಇಂತಹ ಸಂಕೀರ್ಣ ಸನ್ನಿವೇಶದಲ್ಲಿ ನಾವು ನಮ್ಮ ವೇದಿಕೆಯನ್ನು ಹೇಗೆ ಸಿದ್ಧಪಡಿಸಬೇಕು ಎಂಬ ಸವಾಲು ನಮ್ಮ ಮುಂದಿದೆ. ಯಾರು ಈ ಸಂಕೀರ್ಣ ವ್ಯವಸ್ಥೆಯ ಶ್ರೇಣಿಗಳಿಂದ ದೀರ್ಘಕಾಲ ಆಳಿಸಿಕೊಂಡಿದ್ದಾರೋ, ದೀರ್ಘಕಾಲ ಯಾರ ಪ್ರಶ್ನೆಗಳನ್ನು ಎತ್ತಿಕೊಂಡು ಮಾತನಾಡಿಲ್ಲವೋ, ಯಾರ ದನಿ ಕೇಳಿಲ್ಲವೋ ಅಂತಹವರು ಇದೆಲ್ಲದರ ಮುಂದಾಳುಗಳಾಗಬೇಕು. ಇನ್ಯಾರಿಗೋ ನಾವು ದನಿ ಕೊಡುವ ಅಗತ್ಯವಿಲ್ಲ, ಅವರ ಮಾತುಗಳನ್ನು ಕೇಳಿಸಿಕೊಂಡರೆ ಸಾಕು. ನಾನು ನನ್ನ ಮಾತುಗಳ ಮೂಲಕ ಹಲವು ದನಿಗಳನ್ನು ಮೌನಕ್ಕೆ ತಳ್ಳಿದ್ದೇನೆ ಎಂಬುದು ನನಗೆ ಅರಿವಿರಬೇಕು, ನನ್ನ ಮಾತುಗಳು ಕೇಳುತ್ತಾವಾದ ಕಾರಣಕ್ಕೆ, ನನಗೆ ಶಿಕ್ಷಣ ಪಡೆಯುವ ಅವಕಾಶ ದೊರೆತಿದೆ ಅದಕ್ಕೆ ನಾನು ಹಲವು ದನಿಗಳನ್ನು ಕಸಿದುಕೊಂಡಿರಬಹುದು, ಸುಮ್ಮನಾಗಿಸಿರಬಹುದು. ಬಹಳ ಸಂಕೀರ್ಣ ಸನ್ನಿವೇಶಗಳಲ್ಲಿ ಬದುಕು ಮತ್ತು ವಾಸ್ತವಗಳನ್ನು ಎದುರಿಸಿದ ಜನರು ನನಗೆ ಅನೇಕ ವಿಚಾರಗಳನ್ನು ಕಲಿಸಿಕೊಡುತ್ತಾರೆ; ನಾನು ಸುಮ್ಮನೆ ಕುಳಿತು ಅವರ ಮಾತುಗಳನ್ನು ಕೇಳಬೇಕು ಮತ್ತು ನನ್ನ ಪಯಣದ ಮರು ಅವಲೋಕನಕ್ಕೆ ತೊಡಗಬೇಕು.

ಮುಗಿಸುವ ಮುಂಚೆ ನಾನು ಒಂದು ವಿಚಾರ ಹೇಳಲು ಬಯಸುತ್ತೇನೆ. ಎಲ್ಲ ಜನರು ನಮ್ಮ ಹೋರಾಟದ ಭಾಗವಾಗದಿದ್ದರೆ, ಸ್ತ್ರೀವಾದಿ ಚಳುವಳಿ ಎಲ್ಲ ಮಹಿಳೆಯರ ಸಮಸ್ಯೆಗಳ ಕುರಿತು ಮಾತನಾಡುವುದನ್ನು ಆರಂಭಿಸದಿದ್ದರೆ ಯಾವುದೇ ಬದಲಾವಣೆ ತರುವುದು ಸಾಧ್ಯವಿಲ್ಲ. 10,000 ಮಹಿಳೆಯರು ಕೆಲಸ ಕಳೆದುಕೊಳ್ಳುತ್ತಾರೆ, ಈ ವಿಚಾರವನ್ನು ನಾವು ಕಾರ್ಮಿಕ ಸಂಘಟನೆಯ ಕೆಲಸ ಎಂದು ನೋಡಿದರೆ, ಅತ್ಯಾಚಾರದ ವಿರುದ್ಧದ ಹೋರಾಟ ಕೇವಲ ಮಹಿಳಾ ಸಂಘಟನೆಗಳು ಮಾಡಬೇಕಾದ್ದು ಎಂದು ಅವರು ಭಾವಿಸಿದರೆ, ನಾವು ಎಲ್ಲಿಗೂ ತಲುಪುವುದಿಲ್ಲ. ನಮ್ಮ ಚಳವಳಿಯಲ್ಲೇ ಅಂಚಿಗೊತ್ತಲ್ಪಟ್ಟವರು ಇದರಲ್ಲಿ ಮುಂಚೂಣಿಗೆ ಬರುವುದು ಹೇಗೆ ಮತ್ತು ಇನ್ನಿತರ ಎಲ್ಲ ಚಳುವಳಿಗಳಲ್ಲಿ ಗಂಡಸರ ನಾಯಕತ್ವದಲ್ಲಿರುವ ಹೋರಾಟಗಳಲ್ಲಿ ಮಹಿಳೆಯರು ಕೇಂದ್ರಭಾಗಕ್ಕೆ ಬರುವುದು ಹೇಗೆ – ಇವು ನಮ್ಮ ಬಹುಮುಖ್ಯ ಪ್ರಶ್ನೆಗಳು. ಸುಮ್ಮನೆ ಒಂದು ಉದಾಹರಣೆ ಕೊಡುವುದಾದರೆ, ಹಾಗೇ ನೋಡಿದರೆ ಪ್ರಧಾನವಾಗಿ ಮಹಿಳಾ ಚಳುವಳಿಯೆಂಬುದು ಸವರ್ಣ ಮಹಿಳೆಯರ ಚಳುವಳಿ; ಬೇರೆ ರೀತಿಯಲ್ಲಿ ನೋಡದಿದ್ದರೆ ದಲಿತ ಚಳುವಳಿ ಎಂಬುದು ಪ್ರಧಾನವಾಗಿ ದಲಿತ ಪುರುಷರ ಚಳವಳಿ. ಇದು ಅಲ್ಪಸಂಖ್ಯಾತ ಮೊದಲಾದ ಶೋಷಿತ ಸಮುದಾಯಗಳ ಚಳುವಳಿಗಳಲ್ಲೂ ಅಷ್ಟೆ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಈಗ ಒಬ್ಬ ದಲಿತ ಅಥವಾ ಶೋಷಿತ ಮಹಿಳೆಯನ್ನು ಪರಿಗಣಿಸಿ. ಆಕೆ ಎಲ್ಲಿ ಸೇರಿಕೊಳ್ಳಬೇಕು? ಬಹುತೇಕ ಸವರ್ಣರೇ ತುಂಬಿರುವ ಮಹಿಳಾ ಚಳುವಳಿಯಲ್ಲಾ? ಅಥವಾ ಬಹುತೇಕ ಪುರುಷರೇ ತುಂಬಿರುವ ದಲಿತ ಅಥವಾ ಶೋಷಿತರ ಚಳುವಳಿಯಲ್ಲಾ? ಆದ್ದರಿಂದ ಮಹಿಳಾ ಚಳವಳಿಯಲ್ಲಿ ನಾವು ಶೋಷಿತ ಮಹಿಳೆಯರಿಂದ ಕಸಿದುಕೊಂಡಿರುವ ಸ್ಥಳಾವಕಾಶವನ್ನು ಮತ್ತೆ ಪುನಃ ಅವರಿಗೆ ಮಾಡಿಕೊಡುವ ಮೂಲಕವೇ ನಾವು ಸಂಪೂರ್ಣವಾಗಿ ಎಲ್ಲರನ್ನೂ ಒಳಗೊಳ್ಳಲು ಸಾಧ್ಯ. ಸಮಾಜವಾದಿ ಸ್ತ್ರೀವಾದ ಇದನ್ನೇ ನಂಬುತ್ತದೆ. ಅದು ಪರಸ್ಪರ ಕೊಡುಕೊಳುವ ಮತ್ತು ಒಂದರೊಳಗೊಂಡು ಸೇರಿ ನಡೆಯುವ ತತ್ವದಲ್ಲಿ ನಂಬಿಕೆ ಇರಿಸಿದೆಯೇ ಹೊರತು, ಯಾವುದೇ ಬಗೆಯ ಶ್ರೇಣೀಕರಣದಲ್ಲಿ ನಂಬಿಕೆ ಇಟ್ಟಿಲ್ಲ. ಅದು ಮಾನವ ಹಕ್ಕು ಎಂಬುದನ್ನು ಒಂದು ಸಮಗ್ರತೆಯಲ್ಲಿ ಅರ್ಥಮಾಡಿಕೊಳ್ಳುತ್ತದೆ; ಮಾನವ ಹಕ್ಕುಗಳನ್ನು ವಿಭಜಿಸಿ ನೋಡುವುದಿಲ್ಲ.

ಕೊನೆಯದಾಗಿ, ಒಂದು ದುರ್ಬಲ ಪ್ರಜಾತಂತ್ರಕ್ಕೆ ಸರಿಯಾದ ಸಂಪೂರ್ಣ ಪರ್ಯಾಯವೆಂದರೆ ಒಂದು ಪ್ರಬಲ ಪ್ರಜಾತಂತ್ರ; ಒಂದು ಶಕ್ತಿಶಾಲಿ ಸ್ಫೂರ್ತಿದಾಯಕ ಪ್ರಜಾತಂತ್ರ. ನನ್ನ ಎಳೆಯ ಗೆಳೆಯರೇ, ನಾವು ನಿಮ್ಮಲ್ಲಿ ಭರವಸೆ ಮೂಡಿಸಿಲ್ಲದಿರಬಹುದು, ನಿಮಗೆ ನಮ್ಮನ್ನು ನೋಡಿ ಅನಿಸಿರಬಹುದು ಪ್ರಜಾತಂತ್ರ ವಿಫಲಗೊಂಡಿದೆ ಎಂದು. ಆದರೆ ಅದು ಸತ್ಯವಲ್ಲ. ಒಂದು ವೇಳೆ ಪ್ರಜಾತಂತ್ರ ವಿಫಲಗೊಂಡಂತೆ ನಿಮಗೆ ಅನಿಸಿದರೆ ಅದು ನಮ್ಮ ತಪ್ಪೇ ಹೊರತು ಪ್ರಜಾತಂತ್ರದ್ದಲ್ಲ. ಯಾವುದೇ ಸಂದರ್ಭದಲ್ಲೂ ಒಬ್ಬ ಸರ್ವಾಧಿಕಾರಿ ಅಥವಾ ಒಂದು ಸರ್ವಾಧಿಕಾರಿ ಆಳ್ವಿಕೆ ಪ್ರಜಾತಂತ್ರಕ್ಕಿಂತ ಉತ್ತಮವಾಗಿರುವುದು ಸಾಧ್ಯವಿಲ್ಲ. ಎಷ್ಟೇ ಉತ್ತಮ ಸರ್ವಾಧಿಕಾರಿಯಾದರೂ – ಉತ್ತಮ ಸರ್ವಾಧಿಕಾರಿ ಎಂಬುದೊಂದಿರಲು ಸಾಧ್ಯವಿಲ್ಲ, ಇತಿಹಾಸದಲ್ಲಿ ಕೆಟ್ಟ, ಅತಿಕೆಟ್ಟ ಸರ್ವಾಧಿಕಾರಿಗಳು ಮಾತ್ರವೇ ಆಗಿಹೋಗಿದ್ದಾರೆ – ನಿಜವಾಗಿ ಜನರಿಗಾಗಿ ಇರಲು ಸಾಧ್ಯವಿಲ್ಲ; ಸರ್ವಾಧಿಕಾರವು ಜನರ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲ; ಸರ್ವಾಧಿಕಾರ ಯಾವ ಕಾರಣಕ್ಕೂ ಉತ್ತರವಲ್ಲ ಬದಲಿಗೆ ಜನರೇ ಉತ್ತರವಾಗಿದ್ದಾರೆ. ಜನರು ಮಾತ್ರವೇ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಲ್ಲರು ಮತ್ತು ಅದೇ ನಿಜವಾದ ಪ್ರಜಾತಂತ್ರ. ಆ ಮೌಲ್ಯಗಳೇ ಇಂದು ನಮ್ಮನ್ನು ಇಲ್ಲಿಯವರೆಗಾದರೂ ತಂದಿರುವುದು. ಆದ್ದರಿಂದ, ಜನರನ್ನು ಹೋರಾಟಕ್ಕೆ ತರುವ ಕೆಲಸ ಮಾಡಬೇಕಿದೆ. ನಾನು ಈ ಸಂವಿಧಾನವನ್ನು ಉಳಿಸಲು ಹೋರಾಡುತ್ತೇನೆ. ಸಂವಿಧಾನ ವಿರೋಧಿ ಅಂಶಗಳನ್ನು ನಾನು ಬದುಕಿರುವವರೆಗೂ ವಿರೋಧಿಸುತ್ತೇನೆ. ಯಾವುದೇ ಸಂದರ್ಭದಲ್ಲೂ ಈ ಸಂವಿಧಾನಕ್ಕೆ ಬದಲಾಗಿ ಬೇರಾವುದೇ ಆಳ್ವಿಕೆಯನ್ನು ನಾನು ಒಪ್ಪುವುದಿಲ್ಲ; ನಾನು ಸಾಯುವವರೆಗೂ ನನ್ನ ಸಂವಿಧಾನವನ್ನು ಇನ್ಯಾವುದೋ ಸಾಂಸ್ಕೃತಿಕ ಮೂಲಭೂತವಾದಿ ಕಟ್ಟಳೆ ಬದಲಿಸುವುದನ್ನು ನೋಡಲು ಸಿದ್ಧಳಿಲ್ಲ.

***(ದಿಕ್ಸೂಚಿ ಭಾಷಣ: ಕನ್ನಡ ಬರಹ ರೂಪಾಂತರ – ಮಲ್ಲಿಗೆ ಸಿರಿಮನೆ)***

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಅಂಬೇಡ್ಕರ್ ಸಂವಿಧಾನ ಮತ್ತು ಲಿಂಗರಾಜಕಾರಣ

❖ ವಿನಯಾ

ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಕಾರ್ಯಕ್ರಮದ ಭಾಗವಾಗಿ ನಡೆಯುತ್ತಿರುವ ವಿಚಾರ ಸಂಕಿರಣದಲ್ಲಿ ಅಂಬೇಡ್ಕರ್, ಸಂವಿಧಾನ ಮತ್ತು ಲಿಂಗರಾಜಕಾರಣದ ವಿಷಯುವನ್ನು ಮುನ್ನೆಲೆಗೆ ತಂದಿರುವ ಎಲ್ಲರಿಗೂ ನಮಸ್ಕಾರ. ಇಂದು ಸಂವಿಧಾನವಿರೋಧಿ ವಿದ್ಯಮಾನಗಳು ಬೆಳೆಯುತ್ತಿವೆ. ಹೆಣ್ಣಿನ ಸ್ವತಂತ್ರ ನಿಲುವುಗಳು ಬಹಿಷ್ಕಾರಕ್ಕೆ ಒಳಗಾಗುತ್ತಿವೆ. ಅಸಾಂವಿಧಾನಿಕ ಪಿತೃ ಸಂಹಿತೆಗಳು ಚಾಲ್ತಿಗೆ ಬರುತ್ತಿವೆ. ಇಂಥ ಬಿಕ್ಕಟ್ಟಿನ ಕಾಲದಲ್ಲಿ ಸಂವಿಧಾನದ ಆಶಯಗಳು ರೂಪಗೊಂಡ ಕಥನವನ್ನು ಮಂಡಿಸುವುದು ನನ್ನ ನಿಲುವು.

ಸ್ವತಂತ್ರ ಭಾರತ ತನ್ನನ್ನು ತಾನು ಅಭಿನಂದಿಸಿಕೊಳ್ಳಬಹುದಾದ ಅತ್ಯಂತ ಮಹತ್ವದ ಚಹರೆಯೆಂದರೆ ಅದು ಭಾರತದ ಸಂವಿಧಾನ. ಮೂಕಭಾರತ ತನ್ನೆಲ್ಲ ಅನುಭವ ದ್ರವ್ಯದಲ್ಲಿ ಅದ್ದಿ ತೆಗೆದ ತೂಕದ ಮಾತುಗಳು ಸಂವಿಧಾನದ ಪುಟಗಳಲ್ಲಿವೆ. ಆಧುನಿಕ ಭಾರತದ ಮಹಿಳೆಯನ್ನು ರೂಪಣಗೊಳಿಸುವ ಹಕ್ಕೊತ್ತಾಯಗಳು ಇಲ್ಲಿವೆ. ಇಂದಿನ ಮಹಿಳಾ ಪ್ರಜ್ಞೆ ದಣಿದು ಒರಗಿಕೊಂಡಾಗ, ಆಸರೆ ಕೊಟ್ಟು ಚೇತನ ತುಂಬುವ ಬೆನ್ನ ಹಿಂದಿನ ಆಧಾರದಂತಿದೆ. ಅಭಿಮಾನದ ವಿಷಯವೆಂದರೆ ಲಿಂಗರಾಜಕಾರಣದ ಬೀಜಗಳು ಸಂವಿಧಾನದ ನೇಯ್ಗೆಯ ಎಳೆಗಳಲ್ಲೇ ಇದೆ. ಲಿಂಗಸೂಕ್ಷ್ಮತೆಯಿಂದ ಬದುಕನ್ನು ಪರಾಮರ್ಶಿಸಬೇಕಾದದ್ದು ಒಂದು ಸಹಜಧರ್ಮ ಎಂಬ ನೈತಿಕತೆಯನ್ನು ಎಚ್ಚರಿಸುವ ವಿಧಾನವನ್ನೂ ಸಂವಿಧಾನ ಒಳಗೊಂಡಿದೆ.

ಸಂವಿಧಾನದ ಕುರಿತು ಆಡುವ ಮಾತುಗಳು ಅನಿವಾರ್ಯವಾಗಿ ತಲುಪುವುದು ಡಾ. ಬಾಬಾಸಾಹೇಬ ಅಂಬೇಡ್ಕರರ ಸೂಕ್ಷ್ಮಜ್ಞತೆಗೆ. 'ನಮ್ಮ ಸಂವಿಧಾನ ಏನು ಹೇಳುತ್ತಿದೆ ಎಂದರೆ..' ಎಂದು ಅದೆಷ್ಟೇ ಶಿಷ್ಟಾಚಾರದ ಸುಪರ್ದಿಯಲ್ಲಿ ಮಾತನಾಡುವಾಗಲೂ ಅದರ ಅಂತರಾರ್ಥ "ಅಂಬೇಡ್ಕರರು ಏನು ನಿಷ್ಕರ್ಷಿಸುತ್ತಾರೆಂದರೆ. .." ಎಂದೇ ಆಗುತ್ತದೆ. ಅಂಬೇಡ್ಕರ್ ಮತ್ತು ಸಂವಿಧಾನ ಆಧುನಿಕ ಭಾರತದ ಅಭಿನ್ನ ರೂಪಕವಾಗುತ್ತದೆ. ಈ ವಿದ್ಯಮಾನವನ್ನು ಹೀಗೆ ನಿರ್ವಚಿಸುವುದು ತಪ್ಪಲ್ಲ ಎನ್ನಲು ಎರಡು ಚಾರಿತ್ರಿಕ ಸಂದರ್ಭಗಳನ್ನು ಗಮನಿಸಬಹುದು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

1. ಸಂವಿಧಾನ ಕರಡು ಸಲ್ಲಿಕೆಯ ಚಾರಿತ್ರಿಕ ಚರ್ಚೆಯಲ್ಲಿ ಸಂಸತ್ತಿನಲ್ಲಿ ಅಂಬೇಡ್ಕರರ ಭಾಷಣ: ಸಂವಿಧಾನದ ಕರಡು ಪ್ರತಿಯ ಸಿದ್ಧತೆಗೆ ಸುದೀರ್ಘ ಕಾಲಾವಕಾಶ ಮತ್ತು ಬಹುದೊಡ್ಡ ಮೊತ್ತದ ಸಾರ್ವಜನಿಕ ಹಣ ಪೋಲಾಗಿದೆ ಎಂಬ ಆರೋಪಕ್ಕೆ ಅಂಬೇಡ್ಕರ್ ನೀಡಿದ ಪ್ರತಿಕ್ರಿಯಾತ್ಮಕ ಉತ್ತರ ಇದಾಗಿತ್ತು. ಸಂವಿಧಾನ ರಚನಾ ಸಮಿತಿಯ ಸಭೆ ಮೊದಲು ಸೇರಿದ್ದು 9–12–1949 ರಂದು. ಕರಡು ರಚನೆಯು ಸಂಪನ್ನಗೊಳ್ಳಲು 2 ವರ್ಷ 11 ತಿಂಗಳು 17 ದಿನಗಳು ಬೇಕಾದವು. 11 ಸಭೆಗಳು ಜರುಗಿದವು. ಅವುಗಳಿಗೆ 165 ದಿನಗಳು ಬೇಕಾಯಿತು. ಕರಡು ಪ್ರತಿ ಪರಿಶೀಲನೆಗೆ 114 ದಿನಗಳು ಬೇಕಾದವು. ಕರಡು ರಚನೆಗೆ 141 ದಿನಗಳು ಹಿಡಿದವು. ಪ್ರಸ್ತುತ ಸಂವಿಧಾನದಲ್ಲಿ 395 ವಿಧಿ, 13 ಅನುಸೂಚಿಗಳಿವೆ. 2473 ತಿದ್ದುಪಡಿಗಳಿವೆ. 'ವಿಳಂಬದ ಆಪಾದನೆಯನ್ನು ಮಾಡುವವರು ಕೆನಡಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ಅಮೇರಿಕಾ ದೇಶಗಳ ಉದಾಹರಣೆಯನ್ನು ನೀಡುತ್ತಾರೆ. ಭಾರತದ ಸಾಮಾಜಿಕ ಸೂಕ್ಷ್ಮತೆಯ ಬಿಕ್ಕಟ್ಟನ್ನು ಆ ದೇಶಗಳು ಎದುರಿಸುವುದಿಲ್ಲ. ಕರಡು ಚರ್ಚೆಯ ಸುದೀರ್ಘತೆ ಮತ್ತು ತಿದ್ದುಪಡಿಗಳ ಸಂಖ್ಯೆಯನ್ನು ಪರಿಶೀಲಿಸಿದರೆ ನನ್ನ ಅಭಿಪ್ರಾಯ ಸ್ಪಷ್ಟವಾಗುತ್ತದೆ' ಎಂದಿದ್ದರು ಅಂಬೇಡ್ಕರ್. ಸಂಸತ್ತಿನ ಅಧ್ಯಕ್ಷರು ಅಭಿನಂದನಾ ಭಾಷಣದಲ್ಲಿ ಅಂಬೇಡ್ಕರರ ಶ್ರಮ ಮತ್ತು ಕ್ಷಮತೆಯನ್ನು ವಿಶೇಷವಾಗಿ ಉಲ್ಲೇಖಿಸುವುದನ್ನೂ ಗಮನಿಸಬೇಕಿದೆ.
2. ತ್ರಿವೇಂದ್ರಂನಲ್ಲಿ ಮಾಡಿದ ಭಾಷಣ: ಸಂವಿಧಾನವು ಅನುಮೋದನೆಗೊಂಡ 5 ವರ್ಷಗಳ ಬಳಿಕ ಅಂಬೇಡ್ಕರರು ತ್ರಿವೇಂದ್ರಂನಲ್ಲಿ 'ಸಂವಿಧಾನ ನೀತಿ ಪಾಲಿಸಿ' ಎಂಬ ವಿಷಯುವಾಗಿ ಮಾತನಾಡುತ್ತಾರೆ. "ಸಂವಿಧಾನ ಸಿದ್ಧಪಡಿಸುವಲ್ಲಿ ನನ್ನ ಪಾತ್ರ ಮಹತ್ವದ್ದಾಗಿತ್ತು. ಈಗ ಕೆಲವರು ಹೇಳುತ್ತಿದ್ದಾರೆ, ಕಾರಕೂನರು ಸಿದ್ಧಪಡಿಸಿದರು, ಅಂಬೇಡ್ಕರರು ಸಹಿ ಹಾಕಿದರು ಎಂದು. ನನ್ನೊಡನಿದ್ದ ಸದಸ್ಯರು ಯಾರು ಎಲ್ಲಿ ಹೇಗೆ ನಾಪತ್ತೆಯಾಗುತ್ತಿದ್ದರೆಂಬ ಅಧ್ಯಾಯವನ್ನು ಎಂದಾದರೂ ಹೇಳುತ್ತೇನೆ. ಅವು ಗಮ್ಮತ್ತಿನ ಸಂಗತಿಗಳು. ಆತ್ಮಕಥೆ ಬರೆಯುವಾಗ ಅವುಗಳನ್ನು ಬರೆಯುತ್ತೇನೆ" ಎಂದಿದ್ದರು

ಈ ಎರಡೂ ನಿದರ್ಶನಗಳು ಸಂವಿಧಾನ ಸಿದ್ಧತೆಯಲ್ಲಿ ಅಂಬೇಡ್ಕರ್, ತಮ್ಮ ಅಧ್ಯಯನ, ಸಾಮರ್ಥ್ಯ, ಜ್ಞಾನ, ಸಾಮಾಜಿಕ ನ್ಯಾಯದ ಖಚಿತ ತಿಳಿವನ್ನು ಸತತವಾಗಿ ಎರೆದರೆಂಬುದರ ಪುರಾವೆಗಳಾಗಿವೆ. ಬೇರೆ ಯಾರೆಲ್ಲರ ಯೋಗದಾನ ಇಲ್ಲಿ ಸಲ್ಲಿಕೆಯಾಗಿದ್ದರೂ ಬಾಬಾಸಾಹೇಬರಿಗೆ ಮಾತ್ರ ಇದು ಜೀವನ್ಮರಣದ ಸವಾಲಾಗಿತ್ತು. ಅದಕ್ಕೇ ಏನೋ ಸಂವಿಧಾನ ಮತ್ತು ಪ್ರಜಾತಂತ್ರ ವ್ಯವಸ್ಥೆಯ ಸಂರಕ್ಷಣೆಯ ವಿಷಯದಲ್ಲವರು ಬಹಳ ಸಲ ಭಾವೋದ್ವೇಗಕ್ಕೆ ಒಳಗಾಗುತ್ತಿದ್ದರು. ನಮ್ಮ ರಕ್ತದ ಕೊನೆಯ ಹನಿಯನ್ನು ತರ್ಪಣ ಕೊಟ್ಟಾದರೂ ಈ ಎರಡನ್ನೂ ರಕ್ಷಿಸಬೇಕು ಎನ್ನುತ್ತಿದ್ದರು.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಜಡ, ಅಮಾನವೀಯ ಸಂಪ್ರದಾಯಗಳ ರೋಗಕ್ಕೆ ಬಲಿಯಾಗಿ ವಿಲಿಗುಡುತ್ತಿರುವ ಭಾರತದ ಸ್ವಾಭಿಮಾನದ ರಕ್ಷಣೆ ಸಂವಿಧಾನದ ಪಾಲನೆಯಿಂದ ಮಾತ್ರ ಸಾಧ್ಯ ಎಂಬ ವಿಶ್ವಾಸ ಅವರದ್ದು. ಹೆಣ್ಣಿನ ಹಕ್ಕು ಬಾಧ್ಯತೆಗಳ ಬಗ್ಗೆ ಅಂಬೇಡ್ಕರ್ ಅವರು ಹೊಂದಿದ್ದ ಖಚಿತ ಅಭಿಪ್ರಾಯದ ಕಾರಣಕ್ಕಾಗಿಯೇ ಸಂವಿಧಾನವು ಲಿಂಗರಾಜಕಾರಣವನ್ನು ನಿರ್ವಹಿಸಲು ಸಮರ್ಥವಾಯಿತು.

**ಪುಟಗೌರಿಯ ನವುಲು:**

'ವಿ ದ ಪೀಪಲ್ ಆಫ್ ಇಂಡಿಯಾ', ಭಾರತದ ಜನಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಮತ್ತು ಅದರ ಸಮಸ್ತ ನಾಗರಿಕರಿಗೆ – ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ; ವಿಚಾರ ಅಭಿವ್ಯಕ್ತಿ ವಿಶ್ವಾಸ ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ, ಸ್ಥಾನಮಾನ ಹಾಗೂ ಅವಕಾಶ ಸಮಾನತೆ ದೊರೆಯುವಂತೆ ಮಾಡಲು ಮತ್ತು ವ್ಯಕ್ತಿಗೌರವವನ್ನು, ರಾಷ್ಟ್ರದ ಏಕತೆ ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅದರಲ್ಲಿ ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ– ನಮ್ಮ ಸಂವಿಧಾನ ಸಭೆಯಲ್ಲಿ 1946 ನವೆಂಬರ್ 26 ರ ಈ ದಿನ ಸಂವಿಧಾನವನ್ನು ಅಂಗೀಕರಿಸಿ ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ– ಎಂಬ ನಮ್ಮ ಸಂವಿಧಾನದ ಪ್ರಿಯಾಂಬಲ್ ದೇಶದ ಘನತೆಯ ಸ್ವಾಯತ್ತ ಸ್ವಾಭಿಮಾನದ ಸಂಕಥನವಾಗಿದೆ.

ಅಟ್ಲಾಂಟಿಕ್ ಸಾಗರದಲ್ಲಿರುವ ಒಂದು ವಿಶಿಷ್ಟ ಜಾತಿಯ ಮೀನು ನೀರಿನೊಳಗೇ ಹಾದಿಹಿಡಿದು ಮಿಂಚಿನಂತೆ ನೂರಾರು ಕಿ.ಮೀ. ದೂರ ಕ್ರಮಿಸಿಬಿಡುತ್ತದಂತೆ. ಚಲನೆಯ ಸದ್ದೂ ಇಲ್ಲದೆ ತಣ್ಣಗೆ. ನಮ್ಮ ಸಂವಿಧಾನದ ಪಥಕ್ರಮವೂ ಹೀಗೆಯೇ. ಮನುಧರ್ಮಶಾಸ್ತ್ರದಂತಹ ಅಮಾನವೀಯ ಸಂಹಿತೆಯಿಂದ ದಮನಿತರಾದವರನ್ನು ಕೈಹಿಡಿದು, ಸಾಂವಿಧಾನಿಕ ಗೌರವವನ್ನು ಒದಗಿಸಿದ್ದು ನೀರಿನಾಳದಲ್ಲಿ ಯುಗಾಂತರವನ್ನೇ ದಾಟಿಬಂದಂತಹ ಸಾಹಸಯಾತ್ರೆಯಾಗಿತ್ತು. ಈ ಸಾಹಸದಲ್ಲಿ ಹೆಣ್ಣನ್ನೂ ಒಳಗೊಳ್ಳಲಾಗಿತ್ತೆಂಬುದು ಚೇತೋಹಾರಿ ವಿದ್ಯಮಾನವೇ ಸರಿ. ವಿ ದ ಪೀಪಲ್ ಎಂಬ ಪದ ಸಂಘಟನೆಯಲ್ಲಿ ಹೆಣ್ಣಿನ ಇರುವಿಕೆಯಿರುವುದು ಎಂದರೆ, ಭಾರತೀಯ ಮಹಿಳೆ ಪುರೋಹಿತಶಾಹಿಯ ನಿರ್ವಚನೆಯಿಂದ ಹೊರಬಂದು ಉಸಿರಾಡುವ ಪ್ರಕ್ರಿಯೆಯಾಗಿತ್ತು. ನೂರಾರು ವರ್ಷಗಳಿಂದ ರೂಪಿಸಿ ರೂಢಿಗತವಾಗಿಸಿದ್ದ ಮನುಧರ್ಮಶಾಸ್ತ್ರ; ಪುರುಷರಿಗಿಂತ ಸ್ತ್ರೀಯರಲ್ಲಿ ಎರಡು ಪಟ್ಟು ಹಸಿವು, ನಾಲ್ಕು ಪಟ್ಟು ಬುದ್ಧಿ, ಆರುಪಟ್ಟು ಧೈರ್ಯ, ಎಂಟು ಪಟ್ಟು ಕಾಮ ಎಂಬ ಕಲ್ಪಿತಗಳನ್ನು ಹುಟ್ಟಿಸಿ ಸಾಮಾಜಿಕತೆಯನ್ನು ಭ್ರಮಾಧೀನಗೊಳಿಸುತ್ತಿದ್ದ ಚಾಣಕ್ಯನ ಅರ್ಥಶಾಸ್ತ್ರದಂತಹ ತುರುಚಿ ಬಳ್ಳಿಯನ್ನು ಕತ್ತರಿಸಿ ಹೆಣ್ಣನ್ನು ಮನುಷ್ಯ ಸಹಜತೆಯ ವಾಸ್ತವಕ್ಕೆ ತರುವುದು ಸಾಮಾನ್ಯ ಸಂಗತಿಯಾಗಿರಲಿಲ್ಲ. ನಮ್ಮ ಸಂವಿಧಾನ ಅಂತಹದೊಂದು ಅನುಭೂತಿಯನ್ನು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಒದಗಿಸಿತು. ಹೆಣ್ಣನ್ನು 'ಪ್ರಜೆ' ಎಂದು, 'ನಾಗರಿಕಳು' ಎಂದು ಸ್ವೀಕರಿಸುವುದೆಂದರೆ, ಅದು ತನ್ನಿಂದ ತಾನೇ ಹೆಣ್ತನದ ಹರಲಿಗಳಿಂದ ಪಾರುಗಾಣಿಸುವ ಸ್ಪಷ್ಟ ಲಿಂಗರಾಜಕಾರಣದ ನಡೆಯಾಗಿತ್ತು.

ಒಡಲಾಳ ಕೃತಿಯಲ್ಲಿ ಪುಟಗೌರಿ ನವುಲು ಬರೆಯುತ್ತಾಳೆ. ನವುಲು ಬರೆಯಲು ಪೂರಕವಾದ ಪರಿಕರಗಳಿಲ್ಲದ್ದನ್ನು, ಪರಿಸ್ಥಿತಿಯಿಲ್ಲದ್ದನ್ನು ದಿವ್ಯ ನಿರ್ಲಕ್ಷ್ಯದಿಂದ ಉಪೇಕ್ಷಿಸಿ, ನವುಲು ಬರೆದ ಬೆರಗನ್ನು ಶಿವು ಕಣ್ಣು ಬಾಯಿ ಬಿಟ್ಟುಕೊಂಡು ನೋಡುತ್ತಿದ್ದ. ಪುಟಗೌರಿ ನವುಲಿನ ಕಾಲನ್ನು ಮೊದಲು ಬರೆದಳು. ತಲೆಯಿಂದ ಚಿತ್ರ ಬರೆವ ಸಂಪ್ರದಾಯವನ್ನು ಉಲ್ಲಂಘಿಸುತ್ತೇನೆಂಬ ಜರ್ಬಿನಲ್ಲಿ. ಅದಕ್ಕೇ ಏನೋ ಚಿತ್ರ ಮುಗಿದಾದ ಮೇಲೆ ಶಿವೂಗೆ ನವುಲು ಕುಣೀತಿದ್ದಾಂಗೆ ಕಾಣುತ್ತದೆ. 'ಎಸ್ಟ ಚಂದಾಗದೆ' ಎಂದು ಉದ್ಗರಿಸುತ್ತಾನೆ. ಸಂವಿಧಾನದ ರಚನಾ ಕ್ರಮದಲ್ಲಿ ಹೀಗೆ ರೂಢಿಗತ ಅನುಕ್ರಮಣಿಕೆಯನ್ನು ಮೀರುವ ಚೆಲುವಿದೆ. ಅದರ ಒಂದು ನೂಲು ಹೆಣ್ಣಿನ ಸಮಾನತೆಯ ಅರಿವಿನದಾಗಿತ್ತು.

**ಸಂವಿಧಾನ ನಿರ್ವಚಿಸುವ ಲಿಂಗಸೂಕ್ಷ್ಮದ ಎಳೆಗಳು:**

ಭಾರತದ ಸಂವಿಧಾನವು ಹೆಣ್ಣಿನ ಬದುಕಿನ ಹಕ್ಕನ್ನು ಪ್ರತಿಪಾದಿಸುವ ವಿಧಾನ ಒಂದು ಮುಖವಾದರೆ, ಅಂತಹ ನಿರ್ಧಾರಗಳ ಹಿಂದೆ ನಡೆದ ವಾದ–ವಿವಾದ, ಪೂರ್ವಾಗ್ರಹ ಮತ್ತು ವೈಚಾರಿಕತೆಯ ಸಂಘರ್ಷದ ಚರಿತ್ರೆಗೆ ಒಳಮುಖವೂ ಇದೆ. ನಿದರ್ಶನಕ್ಕಾಗಿ, ಮತದಾನ ಹಕ್ಕಿನ ಚರ್ಚೆಯನ್ನು ಗಮನಿಸಬಹುದು. ಇಂಗ್ಲೆಂಡಿನಂಥ ದೇಶದಲ್ಲಿ ಮತದಾನದ ಹಕ್ಕನ್ನು ಹೋರಾಡಿ ಪಡೆದರು. ಆದರೆ ಭಾರತದ ಹೆಣ್ಣುಗಳು ಇಂತಹದೊಂದು ಸವಾಲನ್ನು ಎದುರಿಸಬೇಕಾಗಲಿಲ್ಲ. ಮತದಾನದ ಹಕ್ಕನ್ನು ಸಂವಿಧಾನದೊಂದಿಗೇ ಪಡೆದರು ಎಂಬ ಅಂಶವು ಸರ್ವವಿದಿತವಾದುದು. ಆದರೆ ಸಂವಿಧಾನ ಸಿದ್ಧತೆಯ ಪೂರ್ವಭಾವಿ ದಿನಗಳಲ್ಲಿ ಅಂಬೇಡ್ಕರರು ಈ ಚರ್ಚೆಯನ್ನು ನಿರ್ವಹಿಸಿದ ರೀತಿ ಗಮನಾರ್ಹವಾಗುವುದು ಅವರ ಖಚಿತ ಲಿಂಗಸಮಾನತೆಯ ದೃಷ್ಟಿಗಾಗಿ. ಭಾರತೀಯ ಮಹಿಳೆಯರ ಮತದಾನ ಹಕ್ಕಿನ ಬ್ರಿಟಿಷ್ ಸಮಿತಿಯ ಪರವಾಗಿ ಲೇಡಿಲೇಟನ್, ಮಿಸೆಸ್ ಸ್ಟ್ರಾಸಿ ಮತ್ತು ಸರ್ ಫಿಲಿಪ್ ಹ್ಯಾರ್ಟೋಗ್ ಅವರು ಅಂಬೇಡ್ಕರರೊಂದಿಗೆ ನಡೆಸಿದ ಮಾತುಕತೆಯು ಚಾರಿತ್ರಿಕವಾದುದು. ಮತದಾನದ ಹಕ್ಕನ್ನು ಪ್ರಾತಿನಿಧಿಕವಾಗಿ ಮಹಿಳೆಯರಿಗೆ ನೀಡಬೇಕು ಎನ್ನುವುದು ಸಮಿತಿಯ ಒತ್ತಾಯವಾಗಿತ್ತು. ಪ್ರಾತಿನಿಧಿತ್ವವನ್ನು ನಿರ್ಧರಿಸಲು ಶಿಕ್ಷಣ ಮತ್ತು ಆಸ್ತಿಯನ್ನು ಮಾನದಂಡಗಳಾಗಿಸಿಕೊಳ್ಳಬೇಕು ಎನ್ನಲಾಯಿತು. ಈ ಪ್ರಾತಿನಿಧಿತ್ವದ ಪ್ರಶ್ನೆಯೇ ಅಮಾನವೀಯವಾದದ್ದು ಎಂಬ ಸ್ಪಷ್ಟತೆ ಅಂಬೇಡ್ಕರರದ್ದಾಗಿತ್ತು. ಶ್ರೀಮಂತ ವರ್ಗದ ಮಹಿಳೆಯರು ಮಾತ್ರ ಆದ್ಯತೆ ಪಡೆದುಕೊಳ್ಳುವುದು ಅವರಿಗೆ ಸಮ್ಮತವಿರಲಿಲ್ಲ. ಆದರದನ್ನು ಅಂಬೇಡ್ಕರ್ ಅತ್ಯಂತ ಜಾಣ್ಮೆಯಿಂದ ನಿರ್ವಹಿಸುತ್ತಾರೆ. ಆದ್ಯತೆಯನ್ನು ಗುರುತಿಸುವ ವಿಧಾನದ ಚರ್ಚೆಯನ್ನು ಮಾಡುತ್ತ, ಹಾಗಿದ್ದರೆ ಭಾರತದ ಒಂದು ವರ್ಗದ ಮಹಿಳೆಯರನ್ನು ಮಾತ್ರ ಒಳಗೊಳ್ಳಬೇಕೇ? ಎಂದು ಪ್ರಶ್ನಿಸುತ್ತಾರೆ.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಸಾಮಾನ್ಯವಾಗಿ, ಮಹಿಳಾ ವಿಷಯವನ್ನು ಚರ್ಚೆ ಮಾಡುವಾಗ ಸ್ವಾತಂತ್ರ್ಯ ಹೋರಾಟಕ್ಕೆ ಮಹಿಳೆಯರನ್ನು ಒಳಗೊಂಡ ಮಹಾತ್ಮ ಗಾಂಧೀಜಿಯನ್ನು ನೆನೆಯುತ್ತೇವೆ. ಸರಿಸುಮಾರು ಅದೇ ಅವಧಿಯಲ್ಲಿ– ಭಾರತೀಯ ಮಹಿಳೆಯರಿಗೆ ಸಾಂವಿಧಾನಿಕ ಅಧಿಕಾರವನ್ನು ದೊರಕಿಸಿಕೊಡಲೇಬೇಕು ಎಂಬ ಜನತಂತ್ರ ಹೋರಾಟದಲ್ಲಿ ಅಂಬೇಡ್ಕರ್ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

**ಮೂಲಭೂತ ಹಕ್ಕುಗಳ ಕುರಿತ ಚರ್ಚೆ**

ಮೂಲಭೂತ ಹಕ್ಕುಗಳನ್ನು ಸಂವಿಧಾನವು ಕೊಟ್ಟಿದ್ದು ವ್ಯಕ್ತ ಸಮಾನತೆಯ ನೆಲೆಯಲ್ಲಿ. ಯಾವುದೇ ವ್ಯಕ್ತಿಗೆ ಕಾನೂನಿನ ಮುಂದೆ ಸಮಾನತೆ ಅಥವಾ ಕಾನೂನುಗಳಿಂದ ಸಮಾನ ಸಂರಕ್ಷಣೆಯನ್ನು ಒದಗಿಸುವ ಹಿನ್ನೆಲೆಯಲ್ಲಿ ಮೂಲಭೂತ ಹಕ್ಕುಗಳ ಪ್ರಸ್ತಾಪವಿದೆ. ರಾಜ್ಯವು ನಾಗರಿಕರ ವಿರುದ್ಧ ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳ ಅಥವಾ ಯಾವುದೇ ಆಧಾರದ ಮೇಲೆ ತಾರತಮ್ಯ ಮಾಡತಕ್ಕದ್ದಲ್ಲ ಎಂಬ ನಿರ್ದೇಶನವಿದೆ. ಈ ಅನುಚ್ಛೇದಕ್ಕೆ ಸಂವಿಧಾನವು, ಹೆಂಗಸರು ಮತ್ತು ಮಕ್ಕಳಿಗಾಗಿ ವಿಶೇಷ ಉಪಬಂಧಗಳನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ ಎಂಬ ಸೂಚನೆಯನ್ನು ಸೇರಿಸುತ್ತದೆ. ಹಾಗೆಯೇ ಸ್ವಾತಂತ್ರ್ಯದ ಹಕ್ಕನ್ನು ವಿವರಿಸುವ ಅನುಚ್ಛೇದದಲ್ಲಿ ಪ್ರತಿಯೊಬ್ಬ ಭಾರತೀಯ ಪ್ರಜೆಗೂ ವಾಕ್, ಅಭಿವ್ಯಕ್ತಿ, ಸಂಘಟನೆ, ಸಂಚಾರ, ವ್ಯಾಪಾರ, ವಾಸಗಳ ಸ್ವಾತಂತ್ರ್ಯವನ್ನು ನೀಡುತ್ತದೆ. ಈ ಅನುಚ್ಛೇದಕ್ಕೆ ಕೊಟ್ಟ ಸೂಚನೆಯಲ್ಲಿ– ಹೆಂಗಸರು, ಶಿಶು ಮತ್ತು ಬುಡಕಟ್ಟು ಜನರ ಹಿತಕ್ಕೆ ಇದರಿಂದ ಅಡ್ಡಿಯಾಗಬಾರದು ಎಂದಿದೆ.

ಇಲ್ಲಿ ಗಮನಿಸಬೇಕಾದ ವಿಷಯವಿದೆ. ಭಾರತೀಯ ಸಮಾಜ ಪಿತೃತ್ವದಾಳಿಕೆಯಲ್ಲಿ ಹೂತುಹೋಗಿರುವಂಥದು. ಸಾಮಾಜಿಕವಾದ ಯಾವುದೇ ಅಭಿಪ್ರಾಯವು ಹೆಣ್ಣನ್ನು ಒಳಗೊಳ್ಳುವ ರೂಢಿಯಿಲ್ಲದ್ದು. ಯಾವ ಹೆಣ್ಣುಮಕ್ಕಳಿಗೆ ತಮ್ಮ ಮನೆಯಲ್ಲಿಯೇ ಸಮಾನತೆಯ ಸ್ಪರ್ಶವಿರಲಿಲ್ಲವೋ, ಯಾವ ಹೆಣ್ಣುಮಕ್ಕಳಿಗೆ ಮಾತು ಅಪರಾಧವಾಗಿತ್ತೋ, ಸ್ವತಂತ್ರವಾಗಿ ಯೋಚಿಸುವ ಕಲ್ಪನೆ ಇರಲಿಲ್ಲವೋ ಅವರುಗಳನ್ನು ಸ್ವಅಸ್ಮಿತೆಯ ವ್ಯಕ್ತಿಗಳಾಗಿ ನಿರ್ವಚಿಸಿದ್ದೊಂದು ಕ್ರಾಂತಿಕಾರಕ ಮುನ್ನುಡಿಯೇ ಆಗಿತ್ತು. ಮೂಲಭೂತ ಹಕ್ಕುಗಳ ಅನುಚ್ಛೇದದಲ್ಲಿ ಮತ್ತು ಸ್ವಾತಂತ್ರ್ಯದ ಅನುಚ್ಛೇದದಲ್ಲಿ ಸೇರ್ಪಡೆ ಮಾಡಿರುವ ವಿಸ್ತರಣೆಗಳನ್ನು ಗಮನಿಸಿದರೆ, ಅವು ಮಹಿಳಾ ದೃಷ್ಟಿಯಿಂದ ಮರುಪರಿಶೀಲನೆಗೆ ಒಳಪಡಿಸಿದಂತೆ ಕಾಣುತ್ತವೆ. ಇಂತಹದೊಂದು ಸೂಕ್ಷ್ಮತೆಯೇ ಮುಂದಿನ ಮಹಿಳಾಪರ ಚಿಂತನೆಗೆ ಹಾದಿ ತೋರಿದಂತಾಯಿತು.

ರಾಜ್ಯನೀತಿ ನಿರ್ದೇಶಕ ತತ್ತ್ವಗಳ ಸಂದರ್ಭದಲ್ಲಿಯೂ ಈ ಲಿಂಗಸೂಕ್ಷ್ಮ ನಡೆ ಢಾಳಾಗಿ ಕಾಣುತ್ತದೆ. ಪ್ರಭುತ್ವದ ಹಿತಕ್ಕಾಗಿ ರಾಜ್ಯವನ್ನೂ ಜನತೆಯನ್ನೂ ಬಳಸಿಕೊಳ್ಳುವ ಕಾಲದಿಂದ, ಜನತೆಯ ಹಿತಕ್ಕಾಗಿ ರಾಜ್ಯ ಮತ್ತು ಪ್ರಭುತ್ವಗಳು ಕೆಲಸವನ್ನು ಮಾಡಬೇಕು ಎನ್ನುವ ನಿರ್ದೇಶಕ ತತ್ತ್ವಗಳ ಹಂತವಿದು. ಇಲ್ಲಿಯ ಪ್ರತಿಯೊಂದು ಮಾರ್ಗನಿರ್ದೇಶಕ ತತ್ವಗಳಿಗೂ ಮಹಿಳಾ ಸಂವೇದನೆಯ ವಿವರಣೆಯನ್ನು ಒದಗಿಸಿರುವುದು ಅಚ್ಚರಿಯ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಸಂಗತಿಯಾಗಿದೆ. ಉದಾಹರಣೆಗೆ ನಾಗರಿಕರು ಪುರುಷರೇ ಆಗಿರಲಿ... ಸ್ತ್ರೀಯರೇ ಆಗಿರಲಿ... ಆಸ್ತಿಯನ್ನು ಪಡೆವ ಅಧಿಕಾರ... ವಚನಕಾರರು ವೈದಿಕ ರಚನೆಗಳನ್ನು ನಿರಚನೆ ಮಾಡುವಾಗ ಕೊಡುವ ವಿವರಣೆಯ ರೀತಿಯಂತಿದೆ. ಭಾಷೆಯೊಂದರಲ್ಲಿ ಬೇರೂರಿರುವ ಪಿತೃತ್ವ ರಚನೆಯನ್ನು ಒಡೆಯುವಾಗ ಈ ವಿವರಣಾ ಭಾಷೆಯ ಜರೂರತ್ತಿರುತ್ತದೆ. ಇಷ್ಟು ತೀವ್ರವಾದ ಲಿಂಗಸೂಕ್ಷ್ಮತೆಯು ಬೆರಕೆಯಾಗಿರದಿದ್ದರೆ, ಇಂದಿಗೂ ಮಹಿಳಾ ಪರವಾಗಿ ಸಮಾಜವನ್ನು ಪುನಃಶ್ಚೇತನಗೊಳಿಸುವುದು ಎಂದರೇನೆಂದೇ ಅರ್ಥವಾಗುತ್ತಿರಲಿಲ್ಲ.

**ಮಸೂದೆಗಳಾಗುವ ಸಂಗತಿಗಳ ಚರ್ಚೆ ಮತ್ತು ಫಲಿತಗಳು**

ಸಂವಿಧಾನವು ಯಾವೆಲ್ಲ ಆದರ್ಶಗಳನ್ನು ತನ್ನ ಮುಂದಿಟ್ಟುಕೊಂಡಿದೆಯೋ ಅವು ಮಸೂದೆಗಳಾಗುವ ಸನ್ನಿವೇಶದಲ್ಲಿ ನಡೆದ ಬಹಳಷ್ಟು ಚರ್ಚೆಗಳು ಅಂಬೇಡ್ಕರರ ಸ್ತ್ರೀಪರ ಸ್ಪಷ್ಟ ನಿಲುವಿಗೆ ಪುರಾವೆಗಳಾಗಿವೆ. ಹಿಂದೂ ಕೋಡ್ ಬಿಲ್ ಕುರಿತ ಚರ್ಚೆ ಇದಕ್ಕೊಂದು ಪ್ರಬಲ ನಿದರ್ಶನ. ವಿಚ್ಛೇದನದ ಅವಕಾಶವನ್ನು ಹಿಂದೂ ಕೋಡ್ ಬಿಲ್ ಪ್ರತಿಪಾದಿಸಿತು. ಅದಕ್ಕೆ ವಿರೋಧ ಬಂದಾಗ 10% ರಷ್ಟಿರುವ ಹಿಂದೂಗಳ ಅಭಿಪ್ರಾಯವನ್ನು 90% ರಷ್ಟು ಜನರ ಮೇಲೆ ಹೇರುವುದು ಸರಿಯೇ ಎಂದು ವಾದಿಸುತ್ತಾರೆ. ಹಿಂದೂ ಕೋಡ್ ಬಿಲ್‌ನ ಹೊಸ ಪರಿಷ್ಕರಣದ ಬಗ್ಗೆ ಅಂಬೇಡ್ಕರರಿಗೆ ತೀವ್ರವಾದ ಆಸಕ್ತಿಯಿತ್ತು. ಯಾಕೆಂದರೆ ಲಗ್ನ ಮತ್ತು ದತ್ತು ಸ್ವೀಕಾರದ ನಿಯಮಗಳನ್ನಿಲ್ಲಿ ಬದಲಿಸಲಾಗಿತ್ತು. ಹಳೆಯ ಹಿಂದೂ ಕೋಡ್ ಪ್ರಕಾರ ಲಗ್ನ ಮತ್ತು ದತ್ತು ಸ್ವೀಕಾರವನ್ನು ಬೇರೆ ಜಾತಿಯವರೊಂದಿಗೆ ನಡೆಯಿಸಿದರೆ, ಹಳೆಯ ಸಂಬಂಧಗಳಲ್ಲಿ ಯಾವುದೇ ಅಧಿಕಾರ ಉಳಿಯುತ್ತಿರಲಿಲ್ಲ. ಆದರೆ, ಹೊಸ ಹಿಂದೂ ಕೋಡ್ ಬಿಲ್ ಜಾತಿಯ ಕಟ್ಟುಪಾಡುಗಳನ್ನು ಸಡಿಲಿಸುತ್ತಿತ್ತು. ಜೊತೆಗೆ ಬಹುಪತ್ನಿತ್ವದ ವಿರೋಧ, ಸ್ತ್ರೀಧನವನ್ನು ಹೊರತುಪಡಿಸಿಯೂ ಮಹಿಳೆಯರಿಗೆ ಆಸ್ತಿಯ ಹಕ್ಕು ಹೀಗೆ ತೀರಾ ಸ್ಪಷ್ಟವಾದ ಲಿಂಗರಾಜಕಾರಣದ ನಿಲುವುಗಳು ಈ ಬಿಲ್‌ನಲ್ಲಿದ್ದವು. ಸತತ ನಾಲ್ಕು ವರ್ಷಗಳ ಕಾಲ ಈ ಬಿಲ್‌ನ್ನು ಚರ್ಚೆಗೆ ತೆಗೆದುಕೊಂಡರೂ ಕೂಡ ಅದನ್ನು ಜಾರಿಗೆ ತರಲು ಸಂಸತ್ತು ಒಪ್ಪಿಗೆ ನೀಡಲಿಲ್ಲ. (ಇಲ್ಲಿಯ ಹಲವು ವಿಷಯಗಳು ಆನಂತರದ ಕಾಲದಲ್ಲಿ ಮಸೂದೆಗಳಾಗಿ ಅನ್ವಯಿತಗೊಂಡವು. ಭಾರತದ ಮಹಿಳೆಯರೀಗ ಈ ಮಸೂದೆಗಳ ಫಲಾನುಭವಿ ವರ್ಗಗಳಾಗಿದ್ದಾರೆ. ಆದರೆ ಇಂತಹ ಮಹಿಳಾಪರ ಮಸೂದೆಗಳ ಹಿಂದೆ ಅಂಬೇಡ್ಕರರ ಚಿಂತನಾಧಾರೆ ಇತ್ತು ಎನ್ನುವುದನ್ನು ಮರೆಯಬಾರದು) ಅಂಬೇಡ್ಕರರು ಹೊಸ ಹಿಂದೂ ಕೋಡ್ ಬಿಲ್ಲ್‌ನ್ನು ಜಾರಿಗೆ ತರಲು ಯಶಸ್ವಿಯಾಗದೇ ಇದ್ದಾಗ, ನನ್ನ ದೇಶದ ಮಹಿಳೆಯರು ತಮ್ಮ ಮನೋದೌರ್ಬಲ್ಯವನ್ನು ಬಿಟ್ಟು ಬರಬೇಕೆಂದು ಕರೆಕೊಡುತ್ತಾರೆ. 1952ರಲ್ಲಿ ಅವರು ಇಂತಹ ಮಾತುಗಳನ್ನಾಡಿದ್ದರ ದಾಖಲೆಯಿದೆ. ಹೊಸ ಹಿಂದೂ ಕೋಡ್‌ಬಿಲ್ ಹಿಂದೂ ಧರ್ಮದ ವೈಯಕ್ತಿಕ ಸ್ವಾತಂತ್ರ್ಯದೊಳಕ್ಕೆ ಹಸ್ತಕ್ಷೇಪ ಮಾಡುತ್ತದೆಯಾದ್ದರಿಂದ ಅದನ್ನು ಕೈಬಿಡಬೇಕು ಎಂಬ ಮನವಿಯನ್ನು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಒಂದು ಮಹಿಳಾ ಸದಸ್ಯೆಯರ ನಿಯೋಗವು ಅಂಬೇಡ್ಕರರಿಗೆ ಅಪೀಲು ಸಲ್ಲಿಸಿತು. 'ಆ ಬಿಲ್ಲಿನ ಕರಡು ಪ್ರತಿಯನ್ನು ಓದಿದ್ದೀರಾ?' ಎಂದು ಅಂಬೇಡ್ಕರ ಪ್ರಶ್ನಿಸುತ್ತಾರೆ. ನಿಯೋಗದ ಮುಖ್ಯಸ್ಥೆ ಕೊಟ್ಟ ಉತ್ತರ ಅಂಬೇಡ್ಕರ ಅವರನ್ನು ಬೆಚ್ಚಿ ಬೀಳಿಸಿತ್ತು. ಅವರ ಗಂಡ, ಹೀಗೆ ಪ್ರತಿರೋಧ ಸಲ್ಲಿಸದಿದ್ದರೆ ಇನ್ನೊಂದು ಮದುವೆ ಮಾಡಿಕೊಳ್ಳುವುದಾಗಿ ಹೆದರಿಸಿದ್ದನಂತೆ. ಈ ಘಟನೆಯನ್ನು ಉಲ್ಲೇಖಿಸಿ, ಅಂಬೇಡ್ಕರರು "ಸ್ತ್ರೀಯರು ತಮ್ಮ ಹಕ್ಕುಗಳ ರಕ್ಷಣೆಗಾಗಿ ಮನೋದೌರ್ಬಲ್ಯವನ್ನು ಬಿಟ್ಟು ಹೊರಬರಬೇಕಿದೆ" ಎನ್ನುತ್ತಾರೆ.

ಮಹಿಳಾ ಮಸೂದೆಗಳ ವಿಷಯದಲ್ಲಿ ಅಂಬೇಡ್ಕರ್ ಎಂದೂ ತನ್ನದೇ ಸರಿಯೆಂಬ ಹಠವಾದಿಯಾಗಿ ವರ್ತಿಸಲಿಲ್ಲ. ಸಾಮಾಜಿಕ ಬದುಕಿಗೆ ಮಹಿಳೆಯನ್ನು ಕರೆತರುವುದು ಹೊಸ ಪ್ರಯೋಗ ಮತ್ತು ಈ ಪ್ರಕ್ರಿಯೆಯನ್ನು ನಿರಂತರ ಚಲನಶೀಲವಾಗಿ ಇಡಬೇಕು ಎಂಬ ನಿಲುವು ಅವರದಾಗಿತ್ತು. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಗಣಿಗಾರಿಕೆಯಲ್ಲಿ ಮಹಿಳಾ ತೊಡಗಿಕೊಳ್ಳುವಿಕೆಯ ಕುರಿತು ಮಸೂದೆ ಮತ್ತು ಅದರ ತಿದ್ದುಪಡಿಗಳು. ಗಣಿಗಾರಿಕೆಯಲ್ಲಿ ಮಹಿಳೆಯರಿಗೂ ಅವಕಾಶ ನೀಡಬೇಕು ಎಂದು ಅಂಬೇಡ್ಕರರು ಒತ್ತಾಯಿಸುವಾಗ ಅವರೆದುರು ಇದ್ದ ಕನಸು ಸಮಾನ ದುಡಿಮೆ ಮತ್ತು ಸಮಾನ ವೇತನದ್ದು. ಆ ಸಂದರ್ಭದಲ್ಲಿ ಐದೂವರೆ ಅಡಿಗಿಂತ ಕಡಿಮೆ ವಿಸ್ತೀರ್ಣದ ಜಾಗದಲ್ಲಿ ಮಹಿಳೆಯರನ್ನು ಆಳಗಣಿಗಾರಿಕೆಗೆ ಇಳಿಸಬಾರದು ಮತ್ತು ಹೆಣ್ಣುಮಕ್ಕಳಿಗೆ ವಾರಕ್ಕೆ ಎಂಟಾಣೆ ಕೂಲಿಯಲ್ಲಿ ಎಂಟು ವಾರಗಳ ಹೆರಿಗೆ ರಜೆಯನ್ನು ನೀಡುವ ಸಹನಿಯಮಗಳನ್ನೂ ಮಾಡಲಾಯಿತು. ಆದರೆ ಕೆಲವೇ ಕಾಲದಲ್ಲಿ ಗಣಿಗಾರಿಕೆಯಲ್ಲಿ ಮಹಿಳೆಯರು ವಿಪರೀತ ಶ್ರಮವಹಿಸಬೇಕಾಗುತ್ತದೆ ಎಂದು ತಿಳಿದು, ಆಳಗಣಿಗಾರಿಕೆಯಿಂದ ಮಹಿಳೆಯರನ್ನು ಹೊರಗಿಡುವ ಮಸೂದೆಯನ್ನು ಪಾಸು ಮಾಡಲಾಯಿತು. ಇಂತಹ ನಿರಂತರ ಪ್ರಯತ್ನಶೀಲತೆಯಲ್ಲಿಯೇ ಅಂಬೇಡ್ಕರರ ಮಹಿಳಾ ಸಂವೇದನೆಯ ಎಚ್ಚರದ ಎಳೆಗಳಿವೆ.

**ನಾನು ನನ್ನ ಕುರುಡು ಜನತೆಯ ಕೋಲು**

ಆ ಕಾಲದ ಭಾರತ ದಲಿತ ಬದುಕಿನ ಭಯಾನಕತೆಯ ಅಲಗು ಹೊಕ್ಕಾಡುವ ದುರಂತದಲ್ಲಿತ್ತು. ಮನುಷ್ಯರಾಗಿರುವುದೇ ಕಠಿಣ ಎನ್ನಿಸಿದ ಆ ಜನಗಳಿಗೆ ಬದುಕಿನ ಹಕ್ಕನ್ನು ಒದಗಿಸುವ ತೀವ್ರ ಒತ್ತಡದಲ್ಲಿದ್ದರು ಅಂಬೇಡ್ಕರ್. ನಾನು ನನ್ನ ಕುರುಡು ಜನತೆಯ ಕೋಲು ಎಂದವರು ಹೇಳಿಕೊಳ್ಳುತ್ತಿದ್ದರು. ಸಮುದ್ರದ ಅಲೆಗಳ ರಭಸದಲ್ಲೂ ತಲೆಯೆತ್ತಿ ನಿಂತಿರುವ ಬಂಡೆಗಲ್ಲಿನಂತೆ ನಾನು ಎನ್ನುತ್ತಿದ್ದರು. ಅವರ ಕಾಲ ಕೆಳಗಿನ ಬೆಂಕಿ, ಮಹಿಳಾ ವಿಷಯವನ್ನು ಹೆಚ್ಚು ವ್ಯವಧಾನದಿಂದ ಪರಿಶೀಲಿಸುವ ಸಮಯವನ್ನು ಕೊಡಲಿಲ್ಲ. ಆದರೆ ಅಂತಹ ಕ್ವಚಿತ್ ಸಂದರ್ಭಗಳಲ್ಲಿ ಅಂಬೇಡ್ಕರ್ ಸ್ಪಂದಿಸಿದ ವಿಧಾನ ವಿಶಿಷ್ಟವಾಗಿತ್ತು. ಅವರ ಪ್ರಾಮಾಣಿಕ ಕಳಕಳಿಗೆ ದ್ಯೋತಕವಾಗಿತ್ತು. ಮಹಾಡ್‌ನಲ್ಲಿ ದಲಿತರ ಸಭೆ ನಡೆದ ಒಂದು ಘಟನೆಯಿದೆ. 1927ನೇ ಇಸ್ವಿ ದಲಿತ ಮಹಿಳೆಯರೂ ಸಾವಿರಾರು ಸಂಖ್ಯೆಯಲ್ಲಿದ್ದರು. ಮಹಿಳೆಯರನ್ನು ಉದ್ದೇಶಿಸಿ ಮಾತನಾಡುವ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಪೂರ್ವಸಿದ್ಧತೆಯೇನೂ ಇರಲಿಲ್ಲ. ಆದರೆ ಅಲ್ಲಿ ಸೇರಿದ್ದ ಮಹಿಳೆಯರು ತಮ್ಮ ಬಗ್ಗೆ ಹೊಂದಿದ್ದ ಆರ್ದ್ರಗೌರವ ಅವರ ಕಣ್ಣುಗಳಲ್ಲಿ ಫಲಿಸುತ್ತಿತ್ತು. ಅಂಬೇಡ್ಕರ್ ಅವರುಗಳನ್ನು ಮಧ್ಯಾಹ್ನದ ನಂತರ ಮಾತನಾಡೋಣವೇ ಎಂದು ಕೇಳುತ್ತಾರೆ. ಮುಗಿಯಬೇಕಿದ್ದ ಸಭೆ ಮುಂದುವರಿಯುತ್ತದೆ. ಅಂಬೇಡ್ಕರರು ಮಹಿಳೆಯರೊಂದಿಗೆ ಮಾತನಾಡುತ್ತಾರೆ. ನೀವು ಹೆತ್ತ ಮಕ್ಕಳ ದುರಂತ ಕಂಡು ಮನಸ್ಸು ಮರುಗುತ್ತಿದೆಯೇ? ಎನ್ನುತ್ತಾರೆ. ನೀವು ಹೀಗಿರಬೇಡಿ. ನಿಮ್ಮ ಸೀರೆಯುಡುವ ವಿಧಾನ ಬದಲಿಸಿ. ತಾಮ್ರದ ಆಭರಣಗಳನ್ನು ಬಳಸಬೇಡಿರಿ. ಒಂದೆರಡು ಒಳ್ಳೆಯ ಬಟ್ಟೆ ತೆಗೆದುಕೊಳ್ಳಲು ಸಾಧ್ಯವಾದರೆ ತೆಗೆದುಕೊಳ್ಳಿ ಎನ್ನುತ್ತಾರೆ. ಸಭೆ ಮುಗಿಸಿದ ನಂತರ ಆ ಮಹಿಳೆಯರು ಬೇರೆ ರೀತಿ ಸೀರೆಯುಟ್ಟು ಮನೆಗಳಿಗೆ ಹೋಗುತ್ತಾರೆ. ಇನ್ನೊಂದು 1936ರ ಕಾಮಾಟಿಪುರದ ಸಭೆ. "ಇದು ಅತ್ಯಂತ ಶ್ರೇಷ್ಠ ಸಭೆ. ಯಾಕೆಂದರೆ ಅತ್ಯಂತ ಹೀನವೃತ್ತಿಯ ಜನರೊಂದಿಗೆ ನಾನಿದ್ದೇನೆ" ಎಂದಿದ್ದರು. ಅಂಬೇಡ್ಕರರು ಬೌದ್ಧಧರ್ಮಕ್ಕೆ ಮತಾಂತರಗೊಳ್ಳಲು ಸಿದ್ಧರಾಗಿದ್ದ ಅವರಿಗೆ "ನೀವು ನಿಮ್ಮ ವೃತ್ತಿಯನ್ನು ಬಿಟ್ಟು, ಬದಲಿ ವ್ಯವಸ್ಥೆ ಇಲ್ಲದ, ಹೆಚ್ಚು ಶ್ರಮಪಡಲು ಸಿದ್ಧರಾಗಿ ಬರಬೇಕು" ಎಂದು ನಿರ್ಬಂಧಿಸುತ್ತಾರೆ. ಈ ತಳಮಟ್ಟದ ಅನುಭವಗಳು ಸಂವಿಧಾನವನ್ನು ಸಿದ್ಧಪಡಿಸುವ ಹಿಂದಿನ ಎಚ್ಚರವಾಗಿ ಅವರನ್ನು ಕಾಡಿದೆ.

ಸಂವಿಧಾನದ ಶ್ರೇಷ್ಠತೆ ಅಥವಾ ಕನಿಷ್ಠತೆಯು ನಿರ್ಧಾರವಾಗುವುದು ಅದು ಹೇಗೆ ಅನ್ವಯಗೊಳ್ಳುತ್ತದೆ ಎಂಬ ವಿಧಾನದ ಮೂಲಕ. ಯಾವುದೇ ಸಂವಿಧಾನವು ತನ್ನಿಂದ ತಾನೇ ದುರ್ಬಲವೋ, ಸಬಲವೋ ಆಗಿರುವುದಿಲ್ಲ ಎನ್ನುವುದು ಅಂಬೇಡ್ಕರರ ಮಾತು. ಆದರೆ ನಮ್ಮ ಸಂವಿಧಾನವಿಂದು ಮೂಲಭೂತವಾದಿಗಳ ಕೆಂಗಣ್ಣಿಗೆ ಗುರಿಯಾಗಿ, ಅದರ ಸತ್ವವನ್ನು ನಿಷ್ಕ್ರಿಯಗೊಳಿಸಬೇಕು ಎಂಬ ಹುನ್ನಾರ ನಡೆದಿರುವಾಗ ಈ ಮರು ಅಧ್ಯಯನದಿಂದ ಸಂವಿಧಾನದ ನಿಜಸತ್ವವು ಅರಿವಿಗೆ ಬಂದು ಹೆಮ್ಮೆಯೆನಿಸುತ್ತದೆ. ಮೊದಲು ಪ್ರಜಾಸತ್ತೀಯ ವ್ಯವಸ್ಥೆಯ ಮೇಲೆ ಹಲ್ಲೆ ನಡೆದು ಅದನ್ನು ದುರ್ಬಲಗೊಳಿಸಲಾಗುತ್ತದೆ. ನಂತರ ಸರ್ವಾಧಿಕಾರಿಯ ಲಕ್ಷಣಗಳು ಗೋಚರಿಸುತ್ತವೆ. ಮುಂದಿನ ಹಂತವೇ ಪ್ರಜಾಸತ್ತೀಯ ಮೌಲ್ಯಗಳನ್ನು ಎತ್ತಿಹಿಡಿಯುವ ಸಂವಿಧಾನವನ್ನು ಅಪ್ರಸ್ತುತಗೊಳಿಸುವ ಪ್ರಯತ್ನ. ಈ ಕೆಡುಕಿನ ಹಾದಿ ತೆರೆದಿರುವ ದಿಗಿಲಿನ ಕಾಲದಲ್ಲಿ, ಮಹಿಳೆಯ ವ್ಯಕ್ತಿತ್ವಗೌರವದ ಚಹರೆ ಮೂಡಿಸಿದ ಸಂವಿಧಾನವನ್ನು ರಕ್ಷಿಸಿಕೊಳ್ಳಬೇಕಿರುವ ದೊಡ್ಡ ಜವಾಬ್ದಾರಿ ಇಂದಿನ ಜನಾಂಗದ ಮೇಲಿದೆ.

❖

## ಪ್ರತಿಕ್ರಿಯೆಗಳು

### ಹೆಣ್ಣು ಮಗುವಿನೆಡೆಗೆ ಎಲ್ಲರಿಗೂ 'ಪ್ಯಾರ್ಗೇ' ಆಗ್ಬಿಡಲಿ: ವೀಣಾ ಭಟ್

ವಿನಯ ಅವರು ಮಾತನಾಡುತ್ತಾ ಹೇಳಿದರು ಮಹಿಳೆಯರ ಅಸ್ಮಿತೆಗೆ ಒಂದು ಅದ್ಭುತವಾದ ಕೊಡುಗೆ ಸಂವಿಧಾನ ಅಂತ. ಮನೀಷಾ ಗುಪ್ತೆ ಅವರು ಹೇಳಿದರು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ದುರ್ಬಲ ಸಂವಿಧಾನಕ್ಕೆ ಸಬಲ ಸಂವಿಧಾನವೇ ಉತ್ತರ ಅಂತ. ಬಹಳಷ್ಟು ಹಕ್ಕುಗಳ ಬಗ್ಗೆ ಹೇಳಿದರು. ಮತದಾನದ ಹಕ್ಕು, ಆಯ್ಕೆಯ ಹಕ್ಕು, ವಾಕ್ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಇತ್ಯಾದಿ. ಆದರೆ ಬದುಕಲು ಹೊರಬರುವ ಮೊದಲೇ, ಅಂದರೆ ಹೊಟ್ಟೆಯೊಳಗೆ ಭ್ರೂಣವಾಗಿರುವಾಗಲೇ ಆ ಮಗುವಿನ ಬದುಕುವ ಹಕ್ಕನ್ನು ಕಸಿಯುವ ಯತ್ನ ಆಗ್ತಾ ಇದೆಯಲ್ಲ...!

ಲಿಂಗ ತಾರತಮ್ಯದ ಪರಾಕಾಷ್ಠೆ ಅಂದರೆ ಸ್ತ್ರೀ ಭ್ರೂಣ ಹತ್ಯೆ. ಈ ಪರಾಕಾಷ್ಠೆಗೆ ಸ್ತ್ರೀರೋಗ ತಜ್ಞರು ಸಾಕ್ಷಿ ಆದಷ್ಟು ಬೇರೆ ಯಾವ ವ್ಯಕ್ತಿಯೂ ಸಾಕ್ಷಿ ಆಗಲಾರರು ಅಂತ ನನ್ನ ಅನಿಸಿಕೆ. ಕಳೆದ 25 ವರ್ಷಗಳಿಂದ ಸ್ತ್ರೀರೋಗ ತಜ್ಞೆಯಾಗಿ ಕೆಲಸ ಮಾಡ್ತಾ ಇದ್ದೇನೆ. ದಿನವೂ ಬೆಳಗ್ಗೆಯಿಂದ ಸಂಜೆ ತನಕ ಹಲವಾರು ಜನ ಭ್ರೂಣದ ಲಿಂಗ ಯಾವುದು ಅಂತ ಕೇಳೋಕೆ ಬರ್ತಾರೆ. ಮೊದಲನೇ ಹೆರಿಗೆ ಆದ್ರೂ ತುಂಬಾ ಕುತೂಹಲ; “ಮೇಡಂ ನಮಗೆ ಯಾವುದಾದರೂ ಅಡ್ಡಿ ಇಲ್ಲ, ಆದರೂ ಒಂದು ಸಾರಿ ಯಾವುದು ಅಂತ ನೋಡಿ ಹೇಳಿಬಿಡಿ” ಅಂತ. ಮೊದಲನೆಯದು ಹೆಣ್ಣಾದ ಮಹಿಳೆಯ ಎರಡನೇ ಹೆರಿಗೆ ಆದರಂತೂ ದಿನವೂ “ಇವತ್ತು ಸ್ಕ್ಯಾನ್ ಮಾಡಿ ಮೇಡಂ, ಇವತ್ತು ಸ್ಕ್ಯಾನ್ ಮಾಡಿ” ಅಂತ ಹೇಳ್ತಾನೆ ಇರ್ತಾರೆ. ಯಾಕೆಂದರೆ ಮಗು ಯಾವುದು ಅಂತ ಗೊತ್ತಾದರೆ ಆರಾಮವಾಗಿ ಇರಬಹುದಲ್ಲ ಅಂತ ಅವರ ಆಲೋಚನೆ. ಎರಡನೇ ಅಥವಾ ಮೂರನೆಯ ಹೆರಿಗೆಯಲ್ಲಿ ಮಗು ಹೆಣ್ಣಾದರೆ ಎದೆಯಲ್ಲಿ ಹಾಲೇ ಬರೋದಿಲ್ಲ ಕೆಲವು ತಾಯಂದಿರಿಗೆ. “ಮೇಡಂ ಟಾನಿಕ್ ಬರೆದುಕೊಡಿ” ಅಂತ ಬರುತ್ತಾರೆ. ಸಿಸೇರಿಯನ್ ಆದರಂತೂ ಅವರ ನೋವು ದುಪ್ಪಟ್ಟು. ಮರುದಿನ ರೌಂಡ್ಸ್‌ಗೆ ಹೋದಾಗ ಕಣ್ಣೀರು ಹರಿಯುತ್ತಾ ಇರುತ್ತೆ. ಅದೇ ಗಂಡು ಹುಟ್ಟಿದರೆ ಮುಖದಲ್ಲಿ ನಗು. ಯಾವ ನೋವು ಇಲ್ಲ, ಸುಸ್ತು ಇಲ್ಲ. ಹೀಗೆ ಯಾಕೆ ಅಂದರೆ ಅದು ಆ ಮಹಿಳೆಯರ ತಪ್ಪಲ್ಲ. ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನ ಹಾಗಿದೆ. ಹೆಣ್ಣು ಮಕ್ಕಳಿಗೆ ವರದಕ್ಷಿಣೆ ಕೊಡಬೇಕು, ರಕ್ಷಣೆ ಕೊಡಬೇಕು. ಈ ಸಮಾಜದಲ್ಲಿ ಹೆಣ್ಣು ದ್ವಿತೀಯ ದರ್ಜೆ ಪ್ರಜೆಯಾಗಿ ಉಳಿದಿರುವುದರಿಂದ ಮಹಿಳೆಯರಿಗೆ ಹೆಣ್ಣು ಹುಟ್ಟಿದರೆ ಚಿಂತೆ.

ಹೆಣ್ಣಿನ ಬದುಕುವ ಹಕ್ಕನ್ನೇ ಕಸಿದುಕೊಳ್ಳುವ ಸ್ತ್ರೀ ಭ್ರೂಣಹತ್ಯೆಯಂಥಾ ಬರ್ಬರವಾದ ಕೃತ್ಯ ತಪ್ಪು ಅಂತ ಸಂವಿಧಾನದಲ್ಲಿ ಇದೆ. ತಡೆಗಟ್ಟಲು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಸಾವಿರದ 1994 ರಲ್ಲೇ ಪಿಎನ್‌ಡಿಡಿ ಆಕ್ಟ್ ಬಂತು. ಇತ್ತೀಚೆಗೆ ಸ್ಕ್ಯಾನಿಂಗ್ ಮಾಡಬೇಕು ಅಂದ್ರೆ ಆನ್ಲೈನ್ ರಿಜಿಸ್ಟ್ರೇಷನ್ ಮಾಡಿಸಬೇಕು. ಎಫ್ ಫಾರ್ಮ್ ಡೌನ್ಲೋಡ್ ಮಾಡಬೇಕು. ಆಧಾರ್ ಸಂಖ್ಯೆ ಸಮೇತವಾಗಿ ಎಲ್ಲಾ ವಿವರಗಳನ್ನು ಅದರಲ್ಲಿ ತುಂಬಬೇಕು. ಇಲ್ಲ ಅಂದರೆ ಸ್ಕ್ಯಾನಿಂಗ್ ಮಾಡಬಾರದು ಅಂತ ಕಾನೂನು ಬಂತು. ಸ್ತ್ರೀ ಭ್ರೂಣಹತ್ಯೆ ತಡೆಯಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆಯಾದರೂ ಪರಿಸ್ಥಿತಿ ಸುಧಾರಣೆ ಆಗಿಲ್ಲ. ನೀವು ಚಾಪೆ ಕೆಳಗೆ ನುಸುಳಿದರೆ ನಾವು ರಂಗೋಲಿ ಕೆಳಗೆ ನುಸುಳ್ತೀವಿ ಅಂತ ನಮ್ಮ ಜನರು ಭ್ರೂಣಲಿಂಗ ಪತ್ತೆಗೆ ವಿಜ್ಞಾನದ ಕೂಸಾದ ತಂತ್ರಜ್ಞಾನದ ಏನೇನೋ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ದಾರಿ ಹುಡುಕುತ್ತಿದ್ದಾರೆ.

ಮೊನ್ನೆಯಷ್ಟೇ ನಡೆದ ಒಂದು ಘಟನೆ ಹೇಳುತ್ತೇನೆ. ಒಬ್ಬ ಮಹಿಳೆ ನನ್ನ ಹತ್ತಿರ ಮೂರನೇ ಹೆರಿಗೆಗೆ ಬಂದಳು. ಅವಳು ರಕ್ತಹೀನತೆಯಿಂದ ಬಳಲುತ್ತಿದ್ದಳು. ಆರೋಗ್ಯದ ಹಕ್ಕು ಇದ್ದರೂ ಕೂಡ ನಮ್ಮ ದೇಶದ 70 ಪರ್ಸೆಂಟ್ ಮಹಿಳೆಯರಿಗೆ ಸ್ವಾತಂತ್ರ್ಯ ಬಂದು 70 ವರ್ಷದ ನಂತರವೂ ರಕ್ತಹೀನತೆಯಂಥ ಸಾಮಾನ್ಯ ಸಮಸ್ಯೆಯಿಂದ ಹೊರಬರಲು ಆಗಲೇ ಇಲ್ಲ. ಆ ರಕ್ತಹೀನತೆಯ ನಡುವೆಯೂ ತನ್ನ ಮೂರನೇ ಹೆರಿಗೆಯಲ್ಲಿ ಕೂಗುತ್ತಾ ಇದ್ದಾಳೆ, "ಮಗುನ ತೆಗೆದ ಮೇಲೆ ಕಟ್ ಮಾಡಿಬಿಡಿ ಮೇಡಂ, ಇದು ಹೆಣ್ಣಾದರೆ ಮತ್ತೊಂದು ಹಡೆಯಲಿಕ್ಕೆ ಹೇಳುತ್ತಾರೆ. ಇಲ್ಲದಿದ್ದರೆ ಸಿಸೇರಿಯನ್ ಮಾಡಿ ತೆಗೆದು ಬಿಡಿ" ಅಂತ. "ಇಲ್ಲಮ್ಮ, ನಿನಗೆ 6 ಗ್ರಾಂ ರಕ್ತ ಮಾತ್ರ ಇದೆ. ಆಪರೇಷನ್ ಮಾಡೋದು ತುಂಬಾ ರಿಸ್ಕು" ಅಂತ ನಾನು ಹೇಳಿದರೂ ಅವಳು ಆಪರೇಷನ್ ಮಾಡಿ ಅಂತ ಕಿರುಚುತ್ತಿದ್ದಳು. ನಾಲ್ಕು ಜನ ಬಾಗಿಲ ಬಳಿ ನಿಂತಿದ್ದಾರೆ. ಅವರಿಗೆ ಕಾತುರ ಏನು ಮಗು ಆಗುತ್ತೆ ಅಂತ. ಹಾಗೂ ಹೀಗೂ ನಾರ್ಮಲ್ ಹೆರಿಗೆ ಆಯ್ತು. ಮಗು ಹೊರಗೆ ಬಂತು. ಆಗಲೇ ಆ ಮಹಿಳೆ ಕೇಳುತ್ತಾಳೆ "ಏನ್ ಮಗು ಮೇಡಂ" ಅಂತ. ನಾನು ಮಗುವಿಗೆ ಅಲ್ಲಿ ಉಸಿರಾಡಲು ಕಷ್ಟ ಆಗುತ್ತಿದೆ ಅಂತ ಅಂಬು ಬ್ಯಾಗ್ ಹಿಡ್ಕೊಂಡು ಆಚೆ ಹೊರಟಿದ್ದೆ. ಅಷ್ಟು ಹೊತ್ತಿಗೆ ನಾಕು ಜನ ಮಹಿಳೆಯರು ಬಂದು ಕೇಳ್ತಾ ಇದ್ರು, "ಏನಾಯ್ತು, ಏನಾಯ್ತು, ಎಂತ ಮಗು?" ಅಂತ. ಅದಕ್ಕೆ ನಾನು ಹೇಳಿದೆ. "ಅಯ್ಯೋ, ಮನುಷ್ಯ ಜಾತಿ ಮಗು ಕಣ್ರೀ. ದನ, ಕರು, ಎಮ್ಮೆ, ಕೋಣ ಏನೂ ಹುಟ್ಟಿಲ್ಲ. ದಯವಿಟ್ಟು ಹೊರಗೆ ಹೋಗಿ" ಅಂತ. ಮಹಿಳೆಗೆ ರಕ್ತಸ್ರಾವ ಆಗ್ತಾ ಇದೆ. ಆ ರಕ್ತಸ್ರಾವ ತಡೆಗಟ್ಟಲು ನರ್ಸ್ ಇಂಜೆಕ್ಷನ್ ಕೊಡ್ತಾ ಇದ್ದಾರೆ. ನಾನು ಇನ್ನೊಬ್ಬ ಡಾಕ್ಟರ್‌ನ ಸಹಾಯ ತೆಗೆದುಕೊಳ್ಳುತ್ತಾ ಇದ್ದೇನೆ. ಇದಾವುದರ ಪರಿವೆಯೇ ಇಲ್ಲದೆ "ಯಾವ ಮಗು, ಯಾವ ಮಗು" ಅಂತ ಕೇಳ್ತಾ ಇದ್ರು. ಹೇಗೆ ಹೇಗೋ ಕಷ್ಟಪಟ್ಟು ಸೂಚರ್ ಹಾಕಿ, ಮಗುನ ವಾರ್ಮರ್‌ನಲ್ಲಿ ಇಟ್ಟು, ಆಕ್ಸಿಜನ್ ಕೊಟ್ಟು, ಹಸಿವೆ ಆಗ್ತಾ ಇತ್ತು. 3:00 ಗಂಟೆ. ಆಗಲೂ ಒಂದಿಷ್ಟು ಜನ ಒಪಿಡಿಯಲ್ಲಿ ಕಾಯ್ತಾ ಇದ್ದರು. ಅವರನ್ನ ನೋಡೋಕೆ ಶುರು ಮಾಡಿದರೆ, ಒಂದಿಷ್ಟು ಜನ ನುಗ್ಗಿದರು. ಹೆಂಗಸರು ಗಂಡಸರು ಎಲ್ಲಾ ಸೇರಿ. "ಮೇಡಂ, ನೀವೇ ನಮ್ಮ ಫ್ಯಾಮಿಲಿ ಡಾಕ್ಟರ್ ಅಲ್ವಾ, ಮೂರನೇದು ಹೆಣ್ಣಾದ್ರುನು ಯಾಕೆ ಹೇಳಿಲ್ಲ? ನಮಗೆ ನೀವು ಹೀಗೆ ಮಾಡಬಹುದಾ? ನಿಮ್ಮ ಮೇಲೆ ನಂಬಿಕೆ ಇಟ್ಟಿದ್ದಕ್ಕೆ ಇಷ್ಟೇನಾ ನೀವು ಮಾಡೋದು?" ಅಂದ್ರು. ಹೊರಗಡೆ ಒಂದು ಗುಂಪು ಮಾತಾಡ್ತಾ ಇತ್ತು. ಮೂರನೇದು ಹೆಣ್ಣು ಆಯಿತು, ಇವನಿಗೆ ಇನ್ನೊಂದು ಮದುವೆ ಮಾಡೋಣ, ಅಂತ. ಅವರಿಗೆ ಹೇಗೆ ಹೇಳೋದು ಗಂಡಾಗೋದು, ಹೆಣ್ಣಾಗೋದು ಗಂಡಸಿನಿಂದಲೇ ಅಂತ. ಅದನ್ನೆಲ್ಲ ವಿವರಿಸಿ ಹೇಳಿದರೆ ಕೇಳಿಸಿಕೊಳ್ಳುವ ವ್ಯವಧಾನವೇ ಇರಲಿಲ್ಲ ಅವರಿಗೆ. ಹಸಿವಾಗ್ತಿದೆ ಅಂತ ಊಟಕ್ಕೆ ಹೊರಟೆ. ಹೋಗುವಾಗ ಹೆರಿಗೆ ಆದ ಮಹಿಳೆಯ ಕಡೆಗೆ ನೋಡಿದೆ. ಅಲ್ಲಿ ಆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮಹಿಳೆಯ ಎರಡನೇ ಮಗಳು, ಐದು ವರ್ಷದ ಹುಡುಗಿ. ಆಗಷ್ಟೇ ಹುಟ್ಟಿದ ಮಗುವಿನ ಹತ್ತಿರ ಬಂದು 'ಪ್ಯಾರ್ಗೆ ಆಗ್ಬಿಟ್ಟೈತೆ. ನಮ್ದುಕ್ಕೆ ಪ್ಯಾರ್ಗೆ ಆಗ್ಬಿಟ್ಟೈತೆ' ಅಂತ ಹಾಡು ಹೇಳ್ತಾ ಇದ್ದಳು. ಸಂತೋಷದಿಂದ ಮೂರನೇ ಮಗುವನ್ನು ಅಪ್ಪಿಕೊಳ್ತಾ ಇದ್ದಳು. ಎಂಥ ಸಂತೋಷದ ಸಂಗತಿ ಅಲ್ಲವೇ ಅದು. ಆ ಸಂದರ್ಭದಲ್ಲಿ ನನಗೆ ಶಿವಮೊಗ್ಗದವರೇ ಆದ ಸವಿತಾ ನಾಗಭೂಷಣ ಅವರ 'ತಂಗಿ ಹುಟ್ಟಿದಳು' ಕವನ ನೆನಪಾಯ್ತು.

*ಸಂಭ್ರಮವಿಲ್ಲ ಸಡಗರವಿಲ್ಲ*

*ಮನೆಯೊಳಗೆ ಸೂತಕದ ಛಾಯೆ*

*ಆಸೆಯಂತೆ ಬತ್ತಿಹೋಗಿದೆ ಎದೆಹಾಲು*

*.....*

*ಹಿಡಿಯಷ್ಟಿರುವ ತಂಗಿಯನ್ನು*

*ಮುಡಿಯಷ್ಟಿರುವ ಅಕ್ಕ ಅಪ್ಪುವಳು.*

ಅಂತ ಕವಿತೆ ಮುಗಿಸುತ್ತಾರೆ. ಈ ಸಮಾಜ ಕೂಡ ಹೆಣ್ಣನ್ನು ಹೀಗೆ ಸಂಭಾಳಿಸಿದರೆ, ಸಮಾಜದ ಎಲ್ಲರೂ ಹೆಣ್ಣಿಗೆ 'ಪ್ಯಾರ್ಗೆ ಆಗ್ಬಿಟ್ಟೈತೆ' ಅಂತ ಹೇಳುವ ಹಾಗಾದರೆ ಮಾತ್ರ ಈ ಸ್ತ್ರೀ ಸ್ವಾತಂತ್ರ್ಯ, ಮಹಿಳಾವಾದ ಎಲ್ಲದಕ್ಕೂ ಅರ್ಥ ಬರುತ್ತೆ. ಹೊಟ್ಟೆಯಲ್ಲಿ ಹೊಸಕಿಹಾಕದೆ, ಆ ಮಗುವನ್ನು ಹೊರ ಪ್ರಪಂಚಕ್ಕೆ ಬರಲು ಬಿಡಿ. ಅವಳು ಮಹಿಳೆಯಾಗಿ ತನ್ನ ಸಾಮರ್ಥ್ಯವನ್ನು ಸಾಬೀತು ಪಡಿಸುತ್ತಾಳೆ. ಹಾಗೆಯೇ ಇವತ್ತು ಮಹಿಳೆಯರು ತಮ್ಮ ಬಗ್ಗೆ ಕಾಳಜಿ ವಹಿಸಬೇಕು. ಅವರ ಆರೋಗ್ಯದ ಕಡೆ ಗಮನ ಕೊಡಬೇಕು. ಬರೀ ಗಂಡ, ಮಗು, ಕೆಲಸ ಅಂತ ನೋಡದೆ, ತಮ್ಮ ದೈಹಿಕ ಮಾನಸಿಕ ಭಾವನಾತ್ಮಕ ಆರೋಗ್ಯ ಪಡೆಯುವ ಬಗ್ಗೆಯೂ ಸಕ್ರಿಯವಾಗಿ, ಅವಳನ್ನು ಅವಳು ಅರಿತುಕೊಳ್ಳಬೇಕು ಅಂತ ಹೇಳುತ್ತಾ ನನ್ನ ಮಾತು ಮುಗಿಸುತ್ತೇನೆ.

## ಹೆಣ್ಣೆಂದರೆ ವೆಜಿನಾ ಅಲ್ಲ: ನಿಶಾ ಗೂಳೂರು.

ಸಂವಿಧಾನವೇ ನಮಗೆ ಭಗವದ್ಗೀತೆ, ಸಂವಿಧಾನವೇ ನಮಗೆ ಬೈಬಲ್, ಸಂವಿಧಾನವೇ ನಮಗೆ ಕುರಾನ್. ಇಂತಹ ಪವಿತ್ರವಾದ ಸಂವಿಧಾನ ಇರುವುದರಿಂದಲೇ ನಾವು ಸಂಘಟಿತರಾಗಲು ಮತ್ತು ಧೈರ್ಯವಾಗಿ ಮಾತನಾಡಲು ಸಾಧ್ಯವಾಗುತ್ತಿದೆ. ಮಹಿಳಾ ಸಂಘಟನೆಯಾಗಲಿ, ದಲಿತ ಸಂಘಟನೆಯಾಗಲಿ, ಶೋಷಿತ ಸಮುದಾಯಕ್ಕೆ ಸಂಬಂಧಪಟ್ಟ ಸಂಘಟನೆಯಾಗಲಿ, ನಾವು ಕಳೆದ ಇಪ್ಪತ್ತು ವರ್ಷದಿಂದ ಮಾಡಿಕೊಂಡು ಬರುತ್ತಿರುವ ಟ್ರಾನ್ಸ್‌ಜೆಂಡರ್ ಸಂಘಟನೆಯಾಗಲಿ, ನಾವುಗಳು ಸಂಘಟಿತರಾಗಿ ನಮ್ಮ ಲಿಂಗತ್ವವನ್ನು ಪ್ರತಿಪಾದಿಸಲು ಮತ್ತು ಸ್ವಲ್ಪವಾದ್ರೂ ಮಾತನಾಡಲು ಸಾಧ್ಯವಾದದ್ದು ಸಂವಿಧಾನ ನಮ್ಮ ಬೆನ್ನ ಹಿಂದೆ ಇದೆ ಎನ್ನುವ ಧೈರ್ಯದಿಂದಲೆ. ಇಂತಹ ಸಂವಿಧಾನವನ್ನು ಒಬ್ಬ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಪುರೋಹಿತಶಾಹಿ ವರ್ಗಕ್ಕೆ ಸೇರಿದ ಕೇಂದ್ರ ಸಚಿವರೊಬ್ಬರು ಎರಡು ತಿಂಗಳುಗಳ ಹಿಂದೆ, ಅವರ ಸ್ವಾರ್ಥಕ್ಕಾಗಿ ಇದನ್ನು ಬದಲಾಯಿಸುತ್ತೇವೆಂದು ಹೇಳಿಕೆ ಕೊಟ್ಟಿರುವುದನ್ನು ನಾವು ಖಂಡಿಸಲೇಬೇಕಾಗಿದೆ ಮತ್ತು ಸ್ವಲ್ಪ ಮಟ್ಟಿಗೆ ಎಚ್ಚೆತ್ತುಕೊಳ್ಳಬೇಕಾಗಿದೆ. ಇದನ್ನು ಅವರ ಸ್ವಾರ್ಥಕ್ಕೋಸ್ಕರ ಬದಲಾವಣೆ ಮಾಡಲು ನಾವು ಬಿಡಲೇಬಾರದು, ಈ ನಿಟ್ಟಿನಲ್ಲಿ ನಾವು ಎಲ್ಲರೂ ಒಗ್ಗಟ್ಟಾಗಿ ಸಂವಿಧಾನದ ಉಳಿವಿಗೋಸ್ಕರ ಹೋರಾಟ ಮಾಡುವ ಅನಿವಾರ್ಯತೆ ಬಂದೊದಗಿದೆ.


ಅಂಬೇಡ್ಕರರು ನಮಗೆ ಸಂವಿಧಾನಕೊಟ್ಟು ಹಲವು ದಶಕಗಳು ಕಳೆದ ಮೇಲೂ ಅದು ಈ ಸಮಾಜದಲ್ಲಿನ ಲಿಂಗ ತಾರತಮ್ಯವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಸಾರ್ಥಕ ಆಗಿದೆಯಾ? ನನಗೆ ಇಲ್ಲ ಅನ್ನಿಸುತ್ತದೆ, ಏಕೆಂದು ನನ್ನ ಅನುಭವಗಳ ಮೂಲಕವೇ ನಿಮಗೆ ತಿಳಿಸುತ್ತೇನೆ. ನಾನು ನನ್ನ ಹದಿನೈದನೇ ವಯಸ್ಸಿನಲ್ಲಿ ನನ್ನ ಲಿಂಗತ್ವವನ್ನು ಪ್ರತಿಪಾದಿಸಿದ್ದಕ್ಕೆ ನನ್ನ ಎಜುಕೇಷನ್ ಡ್ರಾಪ್ ಆಯಿತು. ಎಜುಕೇಷನ್ ಡ್ರಾಪ್ ಆಗಿದ್ದರಿಂದಲೇ ಜಾಬ್ ಆಪರ್ಚುನಿಟಿ ಹೋಯ್ತು. ಜಾಬ್ ಅಪಾರ್ಚುನಿಟಿ ಹೋಗಿದ್ದಕ್ಕಾಗಿನೇ ನಾನು ಸಿಗ್ನಲ್‌ನಲ್ಲಿ ಬೆಗ್ಗಿಂಗ್ ಮಾಡಬೇಕಾಗಿ ಬಂತು. ಅದರಿಂದಾಗಿ ನಾನು ಸೊಸೈಟಿಯಲ್ಲಿ ರಿಜೆಕ್ಷನ್‌ಗೆ ಒಳಗಾದೆ. ಎಲ್ಲಿದೆ ಅಭಿವ್ಯಕ್ತಿ ಸ್ವಾತಂತ್ರ್ಯ ನನಗೆ..? ನನ್ನಂಥವರಿಗೆ ನನ್ನ ಲಿಂಗತ್ವವನ್ನು ಪ್ರತಿಪಾದಿಸಲು ಆಗುತ್ತಿಲ್ಲ ಅಂತ ಅಂದರೆ ಸಂವಿಧಾನ ಸಾಕಾರಗೊಳ್ತಾ ಇದಿಯಾ..? ಅಥವಾ ಆ ನಿಟ್ಟಿನಲ್ಲಿ ನಾವು ಇನ್ನೂ ಹೆಚ್ಚಿನ ಕೆಲಸ ಮಾಡಬೇಕಾಗಿದೆಯಾ? ಇದನ್ನು ನಾವು ಆಲೋಚಿಸಬೇಕಾಗಿದೆ.

ಹಾಗೆ ನಾನು ಮಹಿಳಾವಾದದ ಬಗ್ಗೆ ನಿಮ್ಮೊಂದಿಗೆ ಕೆಲವು ವಿಚಾರಗಳನ್ನು ಹಂಚಿಕೊಳ್ಳಲು ಇಷ್ಟಪಡುತ್ತೇನೆ. ಮಹಿಳಾವಾದಿಗಳು ಆಗಬೇಕಾದರೆ ಅಥವಾ ಮಹಿಳಾವಾದವನ್ನು ಪ್ರತಿಪಾದಿಸಬೇಕಾದರೆ ನಾನು ದೈಹಿಕವಾಗಿ ಹೆಣ್ಣಾಗ ಬೇಕಾಗಿಲ್ಲ. ಮನೋಹರ್ ಎಲವರ್ತಿಯವರ ಮಾತುಗಳಲ್ಲಿ ಮಹಿಳಾ ವಾದವನ್ನು ನೋಡ್ತೀನಿ, ರಾಜೇಶ್ ಶ್ರೀನಿವಾಸ್ ಅವರ ಕೆಲಸದ ವೈಖರಿಯಲ್ಲಿ ನಾನು ಮಹಿಳಾ ವಾದವನ್ನು ನೋಡ್ತೀನಿ, ಹರ್ಷಕುಮಾರ್ ಕುಗ್ವೆ ಅವರ ವಾಟ್ಸಾಪ್ ಪೋಸ್ಟ್‌ಗಳಲ್ಲಿ ನಾನು ಮಹಿಳಾ ವಾದವನ್ನು ನೋಡುತ್ತೇನೆ. ಅವರು ಯಾರು ದೈಹಿಕವಾಗಿ ಮಹಿಳೆಯರಲ್ಲ. ಮಹಿಳಾವಾದವನ್ನು ಪ್ರತಿಪಾದಿಸಬೇಕಾದರೆ ನನಗೆ ವೆಜಿನಾ ಇರಬೇಕಾಗಿಲ್ಲ, ಗರ್ಭಚೀಲ ಇರಬೇಕಾಗಿಲ್ಲ ಮತ್ತು ಒಂದು ಮಗುವಿಗೆ ಜನ್ಮ ನೀಡಿರಬೇಕಾಗಿಲ್ಲ. ಇವತ್ತು ನಿಮ್ಮ ಮುಂದೆ ಮಾತನಾಡುತ್ತಿರುವ ನಿಶಾ ಗೂಳೂರುವಾದ ನಾನು, ವೆಜಿನ ಇಲ್ಲದ ಮಹಿಳೆ, ಸ್ತನ ಇಲ್ಲದ ಮಹಿಳೆ, ಗರ್ಭಚೀಲ ಇಲ್ಲದ ಮಹಿಳೆ, ಮಗುವಿಗೆ ಜನ್ಮ ನೀಡಲಾಗದ ಮಹಿಳೆ. ಆದರೆ ನಾನು ಹೆಮ್ಮೆಯಿಂದ ಹೇಳಿಕೊಳ್ತೀನಿ, ನಾನೊಬ್ಬಳು ಮಹಿಳೆ. ಸ್ನೇಹಿತರೇ, ಶಕುನ್ ಅವರು ಹಲವಾರು ಸಭೆ ಸಮಾರಂಭಗಳಲ್ಲಿ ಮತ್ತು ತರಗತಿಗಳಲ್ಲಿ ಹೇಳ್ತಾ ಇರ್ತಾರೆ, ಯಾರು ಜಗತ್ತನ್ನು ಮಹಿಳಾ ದೃಷ್ಟಿಕೋನದಲ್ಲಿ ನೋಡುತ್ತಾರೋ ಅವರೆಲ್ಲರೂ ಮಹಿಳಾವಾದಿಗಳು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ನಮ್ಮ ಇವತ್ತಿನ ವಿಷಯ 'ಲಿಂಗ ರಾಜಕಾರಣ ಮತ್ತು ಸಂವಿಧಾನ'ಕ್ಕೆ ಬರುವುದಾದರೆ, ನನ್ನ ಲಿಂಗತ್ವವನ್ನು ಪ್ರತಿಪಾದಿಸಲು ನನಗೆ ಎಲ್ಲಿ ಅವಕಾಶ ಸಿಕ್ತು? ನಾನು ನನ್ನ ಲಿಂಗತ್ವವನ್ನು ಪ್ರತಿಪಾದಿಸಿದ್ದಾಗಿ ನಾನು ನನ್ನ ಕುಟುಂಬದಿಂದ ಹೊರಬರಬೇಕಾಯ್ತು, ನನ್ನ ಸಮಾಜದಿಂದ ಹೊರಬರಬೇಕಾಯ್ತು, ಶಿಕ್ಷಣದಿಂದ ವಂಚಿತನಾದೆ, ಉದ್ಯೋಗದಿಂದ ವಂಚಿತನಾದೆ, ಉತ್ತಮ ಬದುಕಿನಿಂದ ವಂಚಿತನಾದೆ, ಸಮಾಜದಲ್ಲಿ ಎಲ್ಲರಂತೆ ಬದುಕಲು ಕಷ್ಟ ಆಯಿತು. ಇದನ್ನೆಲ್ಲ ನೋಡಿದರೆ ಅಂಬೇಡ್ಕರರ ಸಂವಿಧಾನ ಜಾರಿಯಲ್ಲಿ ಇದಿಯಾ? ಇಂತಹ ಸಂದರ್ಭದಲ್ಲಿ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ 'ಲಿಂಗ ತಾರತಮ್ಯ ಮತ್ತು ಸಂವಿಧಾನ' ಎಂಬ ವಿಶಯದ ಮೇಲೆ ಚರ್ಚೆಯನ್ನು ಇಟ್ಟುಕೊಂಡಿರುವುದು ಇಂದಿನ ಅತ್ಯಂತ ತುರ್ತು ಅಂತ ನಾನು ಭಾವಿಸುತ್ತೇನೆ.

❖



Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಸಂವಿಧಾನ ಮತ್ತು ದುಡಿಯುವ ಮಹಿಳೆ

❖ **ಶೈಲಜಾ ಟಿ.,** ಮೈಸೂರು.

**ಭಾ**ರತದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರು 48.5% ಇದ್ದಾರೆ. ಒಟ್ಟು ದುಡಿಯುವ ವರ್ಗದಲ್ಲಿ ಸುಸ್ಥಿರ ಸಂಬಳ ಪಡೆಯುವ ಮಹಿಳೆಯರ ಸಂಖ್ಯೆ 13.4%. ನಗರ ಪ್ರದೇಶದ ಒಟ್ಟು ಕಾರ್ಮಿಕರಲ್ಲಿ 16.2% ಮಹಿಳೆಯರಿದ್ದಾರೆ. 2001ರ ಸೆನ್ಸಸ್ ಪ್ರಕಾರ ಭಾರತದ 96% ಮಹಿಳಾ ಕಾರ್ಮಿಕರು ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ನಗರಗಳಲ್ಲಿ ಇಟ್ಟಿಗೆ ಮಾಡುವುದು, ಬುಟ್ಟಿ ಹೆಣೆಯುವುದು, ನಾರುಹೆಣೆಯುವುದು, ಚರ್ಮ ಹದಮಾಡುವುದು, ತಂಬಾಕು, ಗೋಡಂಬಿ, ಸಿದ್ಧ ಉಡುಪು, ಕೆಲವು ಸಣ್ಣ ಗೃಹಕೈಗಾರಿಕೆಗಳು ಇತ್ಯಾದಿಗಳಲ್ಲಿ ಕೆಲಸ ಮಾಡುತ್ತಾರೆ. ಇದಲ್ಲದೆ ಮನೆಗೆಲಸ ಮಾಡುವ ಮಹಿಳೆಯರು ದೊಡ್ಡ ಪ್ರಮಾಣದಲ್ಲಿದ್ದಾರೆ. ತರಕಾರಿ, ಕಸಬರಿಕೆ, ಬುಟ್ಟಿ, ಚಾಪೆ, ಬಟ್ಟೆ, ಸೊಪ್ಪು, ಬಳೆ, ಅಲಂಕಾರದ ವಸ್ತುಗಳು ಇವುಗಳ ಮಾರಾಟಗಾರರಿದ್ದಾರೆ, ರಸ್ತೆಬದಿಯಲ್ಲಿ ಟೀ, ವಡೆ, ತಿಂಡಿ ಮಾಡಿ ಮಾರುವವರೂ ಇದ್ದಾರೆ. ಅವರಲ್ಲಿ ಶೇಕಡಾ 30ರಷ್ಟು ಮಂದಿ ತಮ್ಮ ಮನೆಗಳ ಏಕೈಕ ಅನ್ನದಾತರು. ಗಾರ್ಮೆಂಟ್ ಉದ್ಯಮದಲ್ಲಿ ಬಹಳಷ್ಟು ಮಹಿಳೆಯರು ಕೆಲಸಮಾಡುತ್ತಾರೆ. ಇವರಲ್ಲಿ ವಲಸೆ ಕಾರ್ಮಿಕರೇ ಹೆಚ್ಚು. ಹಲವರು ಕಟ್ಟಡದ ಕಾರ್ಮಿಕರು. ಅವರಲ್ಲಿ ಹೆಚ್ಚಿನವರು ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದವರು. ಮಲ ಸ್ವಚ್ಛಗೊಳಿಸುವ ಮ್ಯಾನ್ಯುಯಲ್ ಸ್ಕ್ಯಾವೆಂಜಿಗ್ ಕ್ಷೇತ್ರದಲ್ಲಿಯೂ ಹೆಣ್ಣುಮಕ್ಕಳು ಕೆಲಸ ಮಾಡುತ್ತಿದ್ದಾರೆ. ಅವರೆಲ್ಲರೂ ಪರಿಶಿಷ್ಟಜಾತಿಯ ಹೆಣ್ಣುಮಕ್ಕಳು. ಹೋಟೆಲ್ಲುಗಳಲ್ಲಿ ತೊಳೆಯುವ ಮತ್ತು ಬಳಿಯುವ ಕೆಲಸ ಮಾಡುತ್ತಾರೆ. ಬೀಡಿ ಮತ್ತು ಊದುಬತ್ತಿ ಹೊಸೆಯುವ ಉದ್ಯಮಗಳಲ್ಲಿ ಬರೀ ಮಹಿಳೆಯರೇ ಇದ್ದಾರೆ.

ಮಹಿಳಾ ಕಾರ್ಮಿಕರ ಬಾಹುಳ್ಯವಿರುವ ಮತ್ತೊಂದು ಕ್ಷೇತ್ರ ಕೃಷಿ. 2011ರ ಸೆನ್ಸಸ್ ಇದನ್ನು ಪುಷ್ಟೀಕರಿಸುತ್ತದೆ. ಇದರಲ್ಲಿ ಶೇಕಡಾ 63ರಷ್ಟು ಕೂಲಿ ಕಾರ್ಮಿಕರು. 2001ರಿಂದ 2011ರ ಅವಧಿಯಲ್ಲಿ ಇವರ ಸಂಖ್ಯೆ ಶೇಕಡಾ 24ರಷ್ಟು ಹೆಚ್ಚಾಗಿದೆ. ಆದರೆ ದೇಶದ ವಾರ್ಷಿಕ ಜಿಡಿಪಿಯಲ್ಲಿ ಕೃಷಿಯ ಪಾಲು ಶೇಕಡಾ 22ರಿಂದ ಶೇಕಡಾ 14ಕ್ಕೆ ಇಳಿದಿದೆ. ಸ್ವಂತ ಭೂಮಿಯಲ್ಲಿ ಕೃಷಿ ಮಾಡುತ್ತಿರುವ ಮಹಿಳೆಯರ ಸಂಖ್ಯೆ ಶೇಕಡಾ 10ರಷ್ಟು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಕಡಿಮೆಯಾಗಿದೆ. ಕೃಷಿ ಭೂಮಾಲಿಕರಾಗಿದ್ದ ರೈತ ಮಹಿಳೆಯರು ಭೂರಹಿತ ಅರೆಕಾಲಿಕ ಕೃಷಿ ಕಾರ್ಮಿಕರಾಗುತ್ತಿರುವುದನ್ನು ಈ ವರ್ಷದ ಕೇಂದ್ರ ಬಜೆಟ್‌ಗೆ ಮೊದಲು ಪ್ರಕಟಿಸಿದ ಆರ್ಥಿಕ ಸಮೀಕ್ಷೆ ಗುರುತಿಸಿದೆ.

ಸಂಘಟಿತ ಮತ್ತು ಅಸಂಘಟಿತ ವಲಯದ ಮಹಿಳಾ ಕಾರ್ಮಿಕರನ್ನು ಕುರಿತ ಲಿಂಗತಾರತಮ್ಯದ ಧೋರಣೆ ಬೇರೆಬೇರೆ ರೀತಿಯಲ್ಲಿ ವ್ಯಕ್ತವಾಗುತ್ತಲೇ ಇದೆ. ಅಸಮಾನತೆಯ ಪಿಡುಗಿಗೆ ಅವರು ವಿಭಿನ್ನ ರೀತಿಗಳಲ್ಲಿ ತುತ್ತಾಗುತ್ತಲೇ ಇದ್ದಾರೆ. ಇದು ವಿಶ್ವದ ಎಲ್ಲೆಡೆ ಬೇರೆ ಬೇರೆ ಸ್ವರೂಪಗಳಲ್ಲಿ ವ್ಯಕ್ತವಾಗುತ್ತಿದೆ. ಸಮಾನ ಅವಕಾಶ ಮತ್ತು ಸಾಮಾಜಿಕ ಸುರಕ್ಷೆಯಿಂದ ಅವರು ವಂಚಿತರಾಗುತ್ತಲೇ ಇದ್ದಾರೆ. ಸಂಘಟಿತ ವಲಯದ ಮಹಿಳಾ ಕಾರ್ಮಿಕರು ಕಟ್ಟುನಿಟ್ಟಾದ ಕಾನೂನಿನ ಪರಿಧಿಗೆ ಒಳಪಡುವುದರಿಂದ ಕೊನೇಪಕ್ಷ ಕೆಲವೊಂದಿಷ್ಟು ಸೌಲಭ್ಯಗಳಾದರೂ ತಾರತಮ್ಯವಿಲ್ಲದೇ ದೊರಕುತ್ತವೆ. ಒಂದಿಷ್ಟು ಕಾನೂನು ಹಾಗೂ ಸಾಮಾಜಿಕ ಸುರಕ್ಷೆ ಅವರಿಗಿದೆ. ಆದರೆ ಅಸಂಘಟಿತ ಮಹಿಳಾ ಕಾರ್ಮಿಕರ ಪಾಡು ಹಾಗಲ್ಲ. ಅವರು ಹತ್ತು ಹಲವು ಕಡೆಗಳಲ್ಲಿ ಹೆಣ್ಣು ಎಂಬ ಕಾರಣಕ್ಕಾಗಿಯೇ ಕಡಿಮೆ ಕೂಲಿಯನ್ನು ಪಡೆಯುತ್ತಾರೆ ಮತ್ತು ಹೆಚ್ಚು ದುಡಿಯುತ್ತಾರೆ. ಸಮಾನ ಕೆಲಸಕ್ಕೆ ಅಸಮಾನ ವೇತನ ಪಡೆಯುತ್ತಾರೆ. ಅವರಲ್ಲಿ ಹೆಚ್ಚಿನವರು ಅಜ್ಞಾನಿಗಳು, ಅನಕ್ಷರಸ್ಥರು ಮತ್ತು ಬಡವರು. ಹಾಗಾಗಿ ಸುಲಭವಾಗಿ ಶೋಷಣೆಗೊಳಗಾಗುತ್ತಾರೆ. ಹೆಚ್ಚಿನವರಿಗೆ ಸಾಮಾಜಿಕ ಸುರಕ್ಷೆ ಇಲ್ಲವೇ ಇಲ್ಲ. ಹೀಗಾಗಿ ಬಗೆಬಗೆಯ ಆರೋಗ್ಯದ ಸಮಸ್ಯೆಗಳು ಮತ್ತು ಅಪೌಷ್ಠಿಕತೆಯಿಂದ ಬಳಲುತ್ತಾರೆ. ಶುದ್ಧೀಕರಣದಲ್ಲಿರುವ ಮಹಿಳೆಯರಿಗೆ ಚರ್ಮವ್ಯಾಧಿಗಳು, ಕೈಕಾಲುಗಳಲ್ಲಿ ಹುಣ್ಣು, ಮುಂತಾದ ಸಮಸ್ಯೆಗಳು ಕಾಡುತ್ತವೆ. ಮನೆಗೆಲಸ ಮಾಡುವ ಮಹಿಳೆಯರನ್ನು ಸಾಮಾನ್ಯವಾಗಿ ಬೆನ್ನುನೋವು, ಮೈನೋವು, ರಕ್ತಹೀನತೆ (ತುಂಬಾ ದೊಡ್ಡ ಸಮಸ್ಯೆ) ಉಸಿರಾಟದ ಸಮಸ್ಯೆಗಳು, ಅಜೀರ್ಣ ಕಾಡುತ್ತವೆ. ಇನ್ನು ಮೂತ್ರನಾಳದ ಸೋಂಕು, ಬಿಳಿಸೆರಗು ಹೋಗುವುದು ಇವು ಸರ್ವೇಸಾಮಾನ್ಯ. ಹದಿಹರೆಯದಲ್ಲಿ ಮತ್ತು ಗರ್ಭಿಣಿಯರಾಗಿದ್ದಾಗಸೂಕ್ತವಾದ ಪರಿಸರವಿಲ್ಲದೆಡೆ ದುಡಿಯುವುದರಿಂದ ಹಲವು ಸಮಸ್ಯೆಗಳನ್ನು ಎದುರಿಸುತ್ತಾರೆ. ಅವುಗಳ ಪರಿಣಾಮ ಗರ್ಭಸ್ಥ ಶಿಶುವಿನ ಮೇಲೆಯೂ ಆಗುತ್ತದೆ. ಇದಲ್ಲದೆ ಲೈಂಗಿಕ ಶೋಷಣೆಗೆ ಒಳಗಾಗುತ್ತಾರೆ. ಅಷ್ಟೇ ದೊಡ್ಡ ಪ್ರಮಾಣದಲ್ಲಿ ಜಾತಿಯ ಕಿರುಕುಳಕ್ಕೂ ಒಳಗಾಗುತ್ತಾರೆ. ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಪುರುಷರ ವಲಸೆಯ ಸಮಸ್ಯೆ ಮಹಿಳಾ ಕೃಷಿ ಕಾರ್ಮಿಕರ ದೈಹಿಕ, ಮಾನಸಿಕ ಆರೋಗ್ಯ ಮತ್ತು ಆಹಾರಭದ್ರತೆಯ ಮೇಲೆ ತುಂಬಾ ದುಷ್ಪರಿಣಾಮ ಬೀರುತ್ತಿದೆ. ಇಂಟರ್‌ನ್ಯಾಷನಲ್ ಲೇಬರ್ ಆರ್ಗನೈಜೇಷನ್ ಪ್ರಕಾರ 2010ರಲ್ಲಿ ಭಾರತದಲ್ಲಿ 2.5 ಮಿಲಿಯನ್ ಮನೆಗೆಲಸ ಮಾಡುವ ಮಹಿಳೆಯರಿದ್ದಾರೆ. ಉಳಿದೆಲ್ಲಾ ಅಸಂಘಟಿತ ಕಾರ್ಮಿಕರಿಗಿಂತ ಅವರು ಹೆಚ್ಚು ಅಪಾಯ, ಹಿಂಸೆ ಮತ್ತು ತೊಂದರೆ ಅನುಭವಿಸುತ್ತಿದ್ದಾರೆ. ಅವರನ್ನು ಅಧಿಕೃತವಾಗಿ ಕೆಲಸಗಾರರ ಪಟ್ಟಿಯಲ್ಲೇ ಸೇರಿಸಿಲ್ಲ. ಹಾಗಾಗಿ ಯಾವುದೇ ಕಾನೂನಿನ ವ್ಯಾಪ್ತಿಗೂ ಅವರು ಒಳಪಡುವುದಿಲ್ಲ.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ತುಂಬಾ ಕಡಿಮೆ ಕೂಲಿ ಪಡೆಯುತ್ತಾರೆ. ತುಂಬಾ ಅವಮಾನಕ್ಕೆ ಮತ್ತು ಬೆದರಿಕೆಗೆ ಒಳಗಾಗುತ್ತಾರೆ. ಅವರಿಗೆ ಹೆರಿಗೆ, ಆರೋಗ್ಯ ಅಷ್ಟೇ ಏಕೆ ವಾರದ ರಜೆಯ ಸೌಲಭ್ಯವೂ ಇಲ್ಲ.

ಒಟ್ಟಾರೆ ಅಸಂಘಟಿತ ಮಹಿಳೆಯರ ಸ್ಥಿತಿ ಹೀಗಿರುವಾಗ ಇವರಿಗೆಲ್ಲಾ ಸುಸ್ಥಿರವಾದ ಕೆಲಸ, ಸೂಕ್ತವಾದ ವಾತಾವರಣ ಮತ್ತು ಸಾಮಾಜಿಕ ಸುರಕ್ಷೆಗಳನ್ನು ಒದಗಿಸಲು ಸಾಧ್ಯವಿರುವುದು ಸ್ವಾತಂತ್ರ್ಯ, ಸಮಾನತೆ, ಸೋದರತೆಗಳನ್ನೇ ಮೂಲ ಬುನಾದಿಯಾಗಿ ಹೊಂದಿರುವ ನಮ್ಮ ಸಂವಿಧಾನ ಮತ್ತು ಅದರ ಆಶಯಗಳನ್ನು ಜಾರಿಗೊಳಿಸುವ ಪ್ರಭುತ್ವ ಮತ್ತು ಸರ್ಕಾರಕ್ಕೆ. ಸ್ವಾತಂತ್ರ್ಯ, ಸಮಾನತೆ, ಸೋದರತೆಗಳನ್ನೇ ಆಧರಿಸಿರುವ ನಮ್ಮ ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳು ದುಡಿಯುವ ವರ್ಗಕ್ಕೆ ಸಂಬಂಧಿಸಿದ ಕಾನೂನು ಮತ್ತು ಕಾಯಿದೆಗಳಿಗೆ ಬೆನ್ನೆಲುಬಾಗಿವೆ. ಸಾಮಾಜಿಕ ಸುರಕ್ಷೆ ಒದಗಿಸುವುದನ್ನು ಸಂವಿಧಾನ ಒಂದು ಮೂಲಭೂತ ಹಕ್ಕೆನ್ನುತ್ತದೆ. ಆರ್ಟಿಕಲ್ 14 ಮತ್ತು 16 ಸಮಾನತೆಯ ತತ್ವವನ್ನು ಗಟ್ಟಿಯಾಗಿ ಎತ್ತಿಹಿಡಿಯುತ್ತವೆ. ಕೆಲಸಮಾಡುವ ಪರಿಸರ, ಪ್ರಾವಿಡಂಟ್ ಫಂಡ್, ಕೆಲಸಗಾರರಿಗೆ ಪರಿಹಾರ, ಪಿಂಚಣಿ, ಮತ್ತು ಹೆರಿಗೆ ಸೌಲಭ್ಯ ಇವುಗಳನ್ನು ರಾಜ್ಯ ಮತ್ತು ಕೇಂದ್ರಸರ್ಕಾರಗಳು ನಿಯಮಗಳು ಮತ್ತು ಕಾನೂನುಗಳನ್ನು ರೂಪಿಸಿ ಜಾರಿಗೊಳಿಸಬೇಕೆಂದು ಸೂಚಿಸುತ್ತದೆ. ತುಂಬಾ ಮುಖ್ಯವಾದ ಕಾಯಿದೆಗಳನ್ನು ಸಂಸತ್ತು ಜಾರಿಗೊಳಿಸಿದೆ. ಸಂಪೂರ್ಣ ಸಾಮಾಜಿಕ ಸುರಕ್ಷೆಯನ್ನು ಉದ್ಯೋಗದಾತರು ಕಡ್ಡಾಯವಾಗಿ ನೀಡಲೇಬೇಕೆನ್ನುತ್ತದೆ. ಹಾಗಿಲ್ಲವಾದಲ್ಲಿ ಒಡೆಯ ಮತ್ತು ಕಾರ್ಮಿಕ ಇಬ್ಬರೂ ಒಟ್ಟಾಗಿ ಅದಕ್ಕೆ ಕೊಡುಗೆ ನೀಡಬೇಕು ಎನ್ನುತ್ತದೆ. ಕಾರ್ಮಿಕರು ಮತ್ತು ಕಾರ್ಮಿಕ ಕಲ್ಯಾಣಕ್ಕೆ ಕುರಿತ ವಿಚಾರಗಳೆಲ್ಲವನ್ನೂ ಸಂವಿಧಾನದ 246 ಆರ್ಟಿಕಲ್ ಪ್ರಕಾರ ಮೂರನೇ ಪಟ್ಟಿ ಅಂದರೆ ಉಭಯ ಹಕ್ಕಿನ (ಕನ್ಕರೆಂಟ್) ಪಟ್ಟಿಯಲ್ಲಿ ನಿರ್ವಹಿಸಲಾಗುತ್ತದೆ. ಒಟ್ಟಾರೆಯಾಗಿ 47 ಕೇಂದ್ರ ಕಾರ್ಮಿಕ ಕಾನೂನುಗಳಿವೆ ಮತ್ತು 200 ರಾಜ್ಯ ಕಾರ್ಮಿಕ ಕಾನೂನುಗಳಿವೆ.

ದುಡಿಯುವ ವರ್ಗಕ್ಕೆ ಅದರಲ್ಲೂ ಅಸಂಘಟಿತ ವಲಯದ ದುಡಿಯುವ ವರ್ಗಕ್ಕೆ ತನ್ನ ಹಲವು ಅಧಿಸೂಚನೆಗಳ (ಆರ್ಟಿಕಲ್ಲುಗಳ) ಮೂಲಕ ಸೌಲಭ್ಯಗಳನ್ನು ಮತ್ತು ಸುರಕ್ಷೆಯನ್ನೂ ಸಂವಿಧಾನ ಒದಗಿಸಿದೆ. ಅವುಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲು ಮಾರ್ಗದರ್ಶಿ ಸೂಚನೆಗಳನ್ನು ನೀಡಿದೆ. ಮೂರನೆಯ ಅಧ್ಯಾಯದ 16, 19, 21, 23, 24 ಮತ್ತು ನಾಲ್ಕನೆಯ ಅಧ್ಯಾಯದ 39, 39–ಎ, 41, 42, 43, 43ಎ 46, 47 ಇವು ಸಂವಿಧಾನದ ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳ ಆಶಯಕ್ಕೆ ಅನುಗುಣವಾಗಿ ಸರ್ಕಾರದ ಚಟುವಟಿಕೆಗಳು ಹೇಗಿರಬೇಕು ಎನ್ನುವುದಕ್ಕೆ ದಿಕ್ಸೂಚಿಯನ್ನು ನೀಡುತ್ತವೆ. ಆರ್ಟಿಕಲ್ 39 (ಡಿ) ಸ್ತ್ರೀ ಮತ್ತು ಪುರುಷರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆನ್ನುತ್ತದೆ. ಆರ್ಟಿಕಲ್ 24 ಬಾಲಕಾರ್ಮಿಕ ಪದ್ಧತಿಗೆ ತಡೆಯೊಡ್ಡುತ್ತದೆ. ಅಂತೆಯೇ ಕಾರ್ಮಿಕರ ಆರೋಗ್ಯಕ್ಕೆ ಸಂಬಂಧಿಸಿದಂತೆ, ಕೆಲಸ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮಾಡಲು ಸೂಕ್ತವಾದ ಮತ್ತು ಮಾನವೀಯವಾದ ಪರಿಸ್ಥಿತಿಯನ್ನು ನಿರ್ಮಿಸಲು ಮತ್ತು ಆರ್ಥಿಕ ಒತ್ತಡದ ಅನಿವಾರ್ಯತೆಯಿಂದಾಗಿ ತಮ್ಮ ವಯಸ್ಸು ಮತ್ತು ತಮ್ಮ ಶಕ್ತಿಗೆ ಹೊಂದದ ಕೆಲಸಗಳಲ್ಲಿ ಪ್ರಜೆಗಳು ಮಾಡಬೇಕಾಗಿಲ್ಲ. ಇದಕ್ಕೆ ಕಾನೂನಿನಲ್ಲಿ ಅವಕಾಶ ಕಲ್ಪಿಸಿಕೊಟ್ಟಿದೆ. ಕ್ಯಾಷುಯಲ್ ಆಧಾರದ ಮೇಲೆ ಅಥವಾ ಮಸ್ಟರ್ ರೋಲ್ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಮಹಿಳೆಯರು ಹೆರಿಗೆ ರಜೆ ಸೌಲಭ್ಯಕ್ಕೆ ಅರ್ಹರೆಂದು ಆರ್ಟಿಕಲ್ 41ರ ಆಶಯಗಳನ್ನು ಒಳಗೊಂಡಿರುವ 1961ರ ಹೆರಿಗೆ ಸೌಲಭ್ಯ ಕಾಯಿದೆ ಪರಿಗಣಿಸುತದೆ.ರೈಟ್ ಟು ಲೈಫ್ ಎಂದರೆ ಅದು ಕೇವಲ ಭೌತಿಕ ಅಸ್ತಿತ್ವಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಅದು ಮಾನವ ಘನತೆಯೊಂದಿಗೆ ಜೀವಿಸುವ ಹಕ್ಕು ಎಂದು ವ್ಯಾಖ್ಯಾನಿಸುತ್ತದೆ. ಪೀಪಲ್ಸ್ ಯೂನಿಯನ್ ಫಾರ್ ಡೆಮಾಕ್ರೆಟಿಕ್ ರೈಟ್ಸ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಮೊಕದ್ದಮೆಯಲ್ಲಿ ಕಾರ್ಮಿಕರಿಗೆ ಮಾನವ ಘನತೆಯಿಂದ ಕೆಲಸ ಮಾಡಲು ಅವಕಾಶ ಮಾಡಿಕೊಡದೆ, ಅದಕ್ಕೆ ಬೇಕಾದ ಅನುಕೂಲಗಳು ಮತ್ತು ಹಕ್ಕುಗಳನ್ನು ಕಲ್ಪಿಸಿಕೊಡದೇ ಇದ್ದರೆ, ಅದು ಆರ್ಟಿಕಲ್ 21ರ ಉಲ್ಲಂಘನೆ ಎಂದೇ ಅರ್ಥ.

ಈ ನಿಟ್ಟಿನಲ್ಲಿ ಜಾರಿಗೊಂಡ 2002ರ ಅಸಂಘಟಿತ ಕಾರ್ಮಿಕರ ಮಸೂದೆಯ ಪ್ರಕಾರ, ಪ್ರತಿಯೊಬ್ಬ ಅಸಂಘಟಿತ ಕಾರ್ಮಿಕರಿಗೆ ದಿನಕ್ಕೆ ಒಂಭತ್ತು ಗಂಟೆಗಳ ಕೆಲಸ, ವಾರಕ್ಕೆ ಒಂದು ದಿನದ ರಜೆ, ಸಾಂದರ್ಭಿಕ ಅಥವಾ ಖಾಯಿಲೆ ರಜೆ, ವರ್ಷಕ್ಕೆ ಹದಿನೈದು ದಿನಗಳ ಗಳಿಕೆ ರಜೆಯ ಸೌಭ್ಯಕ್ಕೆ ಅರ್ಹತೆ ಇದೆ. ಅಸಂಘಟಿತ ಕಾರ್ಮಿಕರ ಸುರಕ್ಷತಾ ಕಾಯಿದೆ 2008 ಇಡೀ ಭಾರತಕ್ಕೆ ಅನ್ವಯಿಸುತ್ತದೆ. ಅದರ ಪ್ರಕಾರ ಕಾಲದಿಂದ ಕಾಲಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೂಕ್ತವಾದ ಕಲ್ಯಾಣ ಕಾರ್ಯಕ್ರಮಗಳನ್ನು ಬದುಕು ಮತ್ತು ಡಿಸ್‌ಎಬಿಲಿಟಿ ಕವರ್, ಆರೋಗ್ಯ ಮತ್ತು ಹೆರಿಗೆ ಸೌಲಭ್ಯಗಳು, ವೃದ್ಧಾಪ್ಯ ಸುರಕ್ಷೆ, ಕೇಂದ್ರ ಸರ್ಕಾರ ತೀರ್ಮಾನಿಸುವ ಇನ್ನ್ಯಾವುದೇ ಬೇರೆ ಅನುಕೂಲಗಳಿಗೆ ಸಂಬಂಧಿಸಿದಂತೆ ಕಾನೂನುಗಳನ್ನು ರೂಪಿಸಬೇಕು.

ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು 2009ರಲ್ಲಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಸುರಕ್ಷೆ ಬೋರ್ಡ್ ಸ್ಥಾಪಿಸಿತು. ಅದರ ವ್ಯಾಪ್ತಿಗೆ ದರ್ಜಿಗಳು, ದೋಭಿಗಳು, ಹಮಾಲಿಗಳು, ಚಾಲಕರು, ಹೋಟೆಲ್ ಮತ್ತು ವರ್ಕ್‌ಶಾಪುಗಳ ಕಾರ್ಮಿಕರು ಒಳಪಡುತ್ತಾರೆ. ಕೃಷಿ ಕಾರ್ಮಿಕರು, ಮನೆಗೆಲಸದ ಕಾರ್ಮಿಕರನ್ನು ಅದು ಒಳಗೊಳ್ಳಬೇಕೆಂಬ ಬೇಡಿಕೆಯಿದೆ. ಕರ್ನಾಟಕ ಕಾಫಿ ಟೀ ಮತ್ತು ಗೋಡಂಬಿ ಪ್ಲಾಂಟೇಷನ್ನಿನ 5 ಲಕ್ಷ ಕಾರ್ಮಿಕರನ್ನು ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಡಿ ತರುವ ಪ್ರಯತ್ನ ನಡೆಯುತ್ತಿದೆ. ಆದರೆ ಅದು ಕೇಂದ್ರದ ಪರಿಮಿತಿಗೆ ಬರುವುದರಿಂದ ಕೇಂದ್ರದೊಂದಿಗೆ ಮಾತುಕಥೆ ಪ್ರಾರಂಭವಾಗಿದೆ (2011). ಬಿಲ್ಡರ್ಸ್‌ನಿಂದ ಸಂಗ್ರಹಿಸಿದ ಒಂದು ಪರ್ಸೆಂಟ್ ಸೆಸ್‌ನಿಂದ ಕಟ್ಟಡ ಕಾಮಗಾರಿ ಕೆಲಸಗಾರರ ಬೋರ್ಡ್ ಸ್ವಲ್ಪ ಗಟ್ಟಿಯಾಗಿ ನೆಲೆಯೂರಿ, ಕಟ್ಟಡ ಕಾರ್ಮಿಕರಿಗೆ ಸ್ವಲ್ಪ ಮಟ್ಟಿನ ಸುರಕ್ಷೆ ದೊರಕುತ್ತಿದೆ. ಆದರೆ ಇದರ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಪ್ರಮಾಣ ತುಂಬಾ ಕಡಿಮೆ. ನ್ಯಾಷನಲ್ ಸ್ಯಾಂಪಲ್ ಸರ್ವೆ 47.41 ಕೋಟಿ ಜನರನ್ನು ಕುರಿತು ನಡೆಸಿದ ಸಮೀಕ್ಷೆಯ ಪ್ರಕಾರ ಸುಮಾರು 39.14 ಕೋಟಿ ಮಂದಿ ಅಸಂಘಟಿತ ವಲಯದಲ್ಲಿ ಕೆಲಸಮಾಡುತ್ತಿದ್ದಾರೆ. ಅವರ್‍ಯಾರಿಗೂ ಸಾಮಾಜಿಕ ಸುರಕ್ಷೆ ಇಲ್ಲ.

ವಾಸ್ತವವಾಗಿ ಹೇಳಬೇಕೆಂದರೆ ಇದ್ಯಾವುದೂ ಎದುರಿಸಲಾಗದ ಮತ್ತು ಪರಿಹರಿಸಲಾಗದಂತಹ ಸವಾಲೇನಲ್ಲ. ನಮ್ಮ ಈ ಸಾಮಾಜಿಕ ಹಾಗೂ ಸಮಾನತೆಯ ಕಾಳಜಿಯುಳ್ಳ ಸಂವಿಧಾನ ಮತ್ತು ಅದನ್ನು ಅಷ್ಟೇ ಅರ್ಥಪೂರ್ಣವಾಗಿ ಕಾರ್ಯಗತಗೊಳಿಸುವ ಇಚ್ಛಾಶಕ್ತಿಯ ಪ್ರಭುತ್ವ ಮತ್ತು ಸರ್ಕಾರ ಇವಿಷ್ಟು ಸಾಕು ಈ ಸವಾಲನ್ನೆದುರಿಸಲು. ಆದರೆ ಇಂದು ಇವನ್ನೆಲ್ಲಾ ಆಗಮಾಡಬೇಕಿರುವ ನಮ್ಮ ಈ ಸಂವಿಧಾನ, ಅದರ ಆಶಯ ಹಾಗೂ ನಿರ್ದೇಶನಗಳನ್ನು ಜಾರಿಗೊಳಿಸಬೇಕಾದ ಪ್ರಭುತ್ವ ಮತ್ತು ಸರ್ಕಾರಗಳು ನಿಧಾನವಾಗಿ ತಮ್ಮ ಪಾತ್ರ ಮತ್ತು ನೆಲೆಯನ್ನು ಕಳೆದುಕೊಳ್ಳುತ್ತಿರುವುದರಿಂದ ಪ್ರಜಾಪ್ರಭುತ್ವ ಮತ್ತು ಅದು ಪ್ರತಿಪಾದಿಸುವ ಎಲ್ಲ ಬಗೆಯ ಸಮಾನತೆಯ ಮೌಲ್ಯಗಳು ಅರ್ಥಹೀನವಾಗುತ್ತಿವೆ.

1991ರಲ್ಲಿ ಜಾಗತೀಕರಣ, ಉದಾರೀಕರಣದ ಪ್ರಕ್ರಿಯೆ ಪ್ರಾರಂಭವಾದಾಗಿನಿಂದ ಪ್ರಜಾಪ್ರಭುತ್ವದ ಅಡಿಗಲ್ಲುಗಳಾದ ಸಮಾನತೆ, ಭ್ರಾತೃತ್ವ, ಸ್ವಾತಂತ್ರ್ಯ ಎಂಬ ಮೌಲ್ಯಗಳು ಸ್ವಲ್ಪಸ್ವಲ್ಪವೇ ಅಲುಗಾಡುತ್ತಾ, ಬಿರುಕು ಬಿಡಲಾರಂಭಿಸಿದವು. ನಿಧಾನವಾಗಿ ಖಾಸಗೀಕರಣ, ಅರ್ಹತೆ, ಪ್ರತಿಭೆ, ಸಾಮರ್ಥ್ಯ, ಕಾರ್ಯಕ್ಷಮತೆ, ಹೆಚ್ಚು ಯಾಂತ್ರೀಕರಣ, ಸೇವಾವಲಯ ಎನ್ನುವ ಚರ್ಚೆಗಳು ಮುನ್ನೆಲೆಗೆ ಬರಲಾರಂಭಿಸಿದವು. ಸರ್ಕಾರಕ್ಕಿಂತ ಖಾಸಗಿ ಹೆಚ್ಚು ಸಮರ್ಥ ಎನ್ನುವ ವಾದ ಹೆಚ್ಚು ಜೋರಾಗಿ ಬರಲಾರಂಭಿಸಿತು. ಈಗ ನವ ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಪರಿಸ್ಥಿತಿ ಇನ್ನೂ ಹದಗೆಡುತ್ತಿದೆ. ಇಲ್ಲಿ ಎರಡು ಅಂಶಗಳನ್ನು ಗಮನಿಸಬೇಕು. ನವಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಗೆ ಸಿಲುಕುವ ಆರ್ಥಿಕತೆಗಳು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ (ಫೈನಾನ್ಸ್ ಕ್ಯಾಪಿಟಲ್‌ನ) ಲಹರಿಗೆ ಮತ್ತು ಅದು ಇಷ್ಟಪಡುವ ನೀತಿಗಳಿಗೆ ತಲೆಬಾಗಲೇಬೇಕಾಗುತ್ತದೆ. ಇದರ ಪರಿಣಾಮಗಳು ಹಲವು. ಮೊಟ್ಟ ಮೊದಲನೆಯದಾಗಿ ಇದು ಪ್ರಭುತ್ವದ ಸ್ವರೂಪವನ್ನೇ ಬದಲಿಸುತ್ತದೆ. ಪ್ರಭುತ್ವವೆನ್ನುವುದು ವರ್ಗದ ಹಿತಾಸಕ್ತಿಗಳನ್ನು ಮೀರಿ ನಿಂತು ದುರ್ಬಲ ವರ್ಗಗಳೂ ಸೇರಿದಂತೆ ಎಲ್ಲರ ಹಿತಾಸಕ್ತಿಗಳನ್ನೂ ರಕ್ಷಿಸಬೇಕು. ಆದರೆ ಪ್ರಭುತ್ವ ಇಂದು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಜೊತೆಗೆ ಸಂಬಂಧ ಹೊಂದಿರುವ ಕಾರ್ಪೋರೇಟ್ ಹಣಕಾಸು ಏಕಸ್ವಾಮ್ಯದ ಹಿತಾಸಕ್ತಿಗಳನ್ನು ನೇರವಾಗಿ ಹಾಗೂ ಮುಕ್ತವಾಗಿ ಕಾಪಾಡುತ್ತಿದೆ. ಬರುಬರುತ್ತಾ ತನ್ನ ಸಮಾಜದ ಕಲ್ಯಾಣಕ್ಕಾಗಿ ಮಾಡಬೇಕಾದ ವೆಚ್ಚವನ್ನು ಕಡಿಮೆಮಾಡಿಕೊಳ್ಳುತ್ತಾ ಬರುತ್ತದೆ. ಸಬ್ಸಿಡಿ ಅಪರಾಧವೆನಿಸತೊಡಗುತ್ತದೆ. ಸಣ್ಣಉದ್ದಿಮೆಗಳಿಗೆ ಮತ್ತು ಕೃಷಿಗೆ ಬೆಂಬಲ ಕಡಿಮೆಯಾಗುತ್ತದೆ. ಅದು ಆದ್ಯತೆಯ ಕ್ಷೇತ್ರಗಳಾಗುವುದಿಲ್ಲ. ಚುನಾವಣೆ ಹತ್ತಿರವಾಗುತ್ತಿದ್ದಂತೆ ಮಾತ್ರ ರೈತಸ್ನೇಹಿ ಮಾತುಗಳು ಕೇಳಿಸುತ್ತವೆ. ಆದರೆ ಶ್ರೀಮಂತರ ಏಕಸ್ವಾಮ್ಯಕ್ಕೆ, ಅವರ ಲಾಭಕ್ಕೆ ಯಾವುದೇ ಧಕ್ಕೆಯೂ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಇಲ್ಲದೇ ಇರುವುದರಿಂದ ಆದಾಯ ಮತ್ತು ಸಂಪತ್ತಿನ ಅಸಮಾನತೆಯು ಏರುತ್ತಾ ಹೋಗುತ್ತದೆ. ಉದ್ಯೋಗಾವಕಾಶಗಳು ಕಡಿಮೆಯಾಗುತ್ತಾ ಹೋಗುತ್ತವೆ.

ಈಗ ಭಾರತದಲ್ಲಿಯೇ 1% ಜನ ಇಡೀ ದೇಶದ ಎಲ್ಲವನ್ನೂ ನಿಯಂತ್ರಿಸುತ್ತಿದ್ದಾರೆ. ಹೀಗೆ ನಿಯಂತ್ರಿಸುತ್ತಿರುವವರು ಖಾಸಗಿ ವಲಯದವರೇ. ಇದರಿಂದ ಸರ್ಕಾರದ ಪಾತ್ರ ಕ್ರಮೇಣ ಕಡಿಮೆಯಾಗುತ್ತಾ ಹೋಗುತ್ತದೆ. ಎಲ್ಲವೂ ಖಾಸಗೀಕರಣದತ್ತ ಸಾಗುತ್ತದೆ. ಬ್ಯಾಂಕು, ಶಿಕ್ಷಣ, ಆರೋಗ್ಯ ಎಲ್ಲವೂ ಖಾಸಗೀಕರಣವಾಗಬೇಕೆಂಬ ಕೂಗು ಹೆಚ್ಚುತ್ತದೆ. ಅದನ್ನು ಎಲ್ಲದಕ್ಕೂ ಪರಿಹಾರವಾಗಿ ಸೂಚಿಸಲಾಗುತ್ತದೆ. ಇದು ಇಡೀ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೂಲ ಆಶಯಗಳಿಗೇ ವ್ಯತಿರಿಕ್ತವಾದ ಪ್ರವೃತ್ತಿ. ಏಕೆಂದರೆ ಖಾಸಗಿ ವಲಯಕ್ಕೆ, ಸಾಮಾಜಿಕ ಸುರಕ್ಷೆ, ಸಾಮಾಜಿಕ ನ್ಯಾಯ, ಲಿಂಗ ಸಮಾನತೆ ಆರ್ಥಿಕ ಸಮಾನತೆ, ಸಮಾನ ಶಿಕ್ಷಣ ಮುಂತಾದ ಯಾವುದೇ ಸಾಂವಿಧಾನಿಕ ಮೌಲ್ಯಗಳೂ ಮುಖ್ಯವಲ್ಲ. ಅವರಿಗೆ ನೈತಿಕತೆ ಮುಖ್ಯವಾದ ಮೌಲ್ಯವೇ ಅಲ್ಲ. ಲಾಭವೇ ಅವರ ಏಕೈಕ ಗುರಿ. ಹಾಗಾಗಿ ಇಂದು ಸಂವಿಧಾನವನ್ನು ಜಾರಿಗೊಳಿಸಬೇಕಾದ ಸರ್ಕಾರ ತನ್ನ ದನಿ ಕಳೆದುಕೊಂಡು, ಲಾಭಕೋರ, ಕ್ರೂರ ಶ್ರೀಮಂತರಿಗೆ ಅಧಿಕಾರವನ್ನು ನೀಡುತ್ತಿದೆ. ಯಾವುದೋ ಒಂದು ನೆಪವೊಡ್ಡಿ ಸಾರ್ವಜನಿಕ ಉದ್ಯಮಗಳನ್ನೆಲ್ಲಾ ಮುಚ್ಚುತ್ತಿದೆ. ಇಲ್ಲವೇ ನಷ್ಟದ ನೆಪ ಹೇಳಿಕೊಂಡು ಖಾಸಗಿಯವರ ಮಡಿಲಿಗೆ ಹಾಕುತ್ತಿದೆ. ಉದಾಹರಣೆಗೆ ಈಗಷ್ಟೇ ಕೋಲ್ ಇಂಡಿಯಾ ಲಿಮಿಟೆಡ್ ಕಂಪನಿಯನ್ನು ನಷ್ಟದ ಕಾರಣ ಹೇಳಿ, ಖಾಸಗಿಯವರಿಗೆ ವಹಿಸಿತು. ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ಹಾಗೂ ಇನ್ಶೂರೆನ್ಸ್ ಕಂಪನಿಗಳನ್ನು ಮತ್ತೆ ಖಾಸಗೀಕರಣಗೊಳಿಸಿ, ಯಾರೆಲ್ಲಾ ಆರ್ಥಿಕ ಸ್ಕ್ಯಾಮುಗಳ ಹಿಂದಿದ್ದಾರೋ ಅವರ ತಕ್ಕೆಗೇ ನೀಡಹೊರಟಿದೆ. ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸುವ ಬದಲು ವಿಮೆಯ ನೀಡುವುದರ ಮೂಲಕ ಖಾಸಗೀ ಆಸ್ಪತ್ರೆಗಳನ್ನು ಬೆಳೆಸಲು ಸರ್ಕಾರಗಳು ಮುಂದಾಗಿವೆ. ಇಂದಿನ ಶ್ರೀಮಂತಪರ ಮತ್ತು ಬಂಡವಾಳಶಾಹಿಪರ ಸರ್ಕಾರದ ನೀತಿ ಪ್ರಾವಿಡೆಂಟ್ ಫಂಡ್ ಮೇಲಿನ ಬಡ್ಡಿದರವನ್ನು ಕ್ರಮೇಣ ಇಳಿಸುತ್ತಿರುವುದರಲ್ಲಿ ಬಿಂಬಿತವಾಗುತ್ತದೆ. ಪೆನ್ಷನ್ ಬೆನಿಫಿಟ್ ಸ್ಕೀಮುಗಳಿಗೆ ಬದಲಾಗಿ ಕಾಂಟ್ರಿಬ್ಯೂಟರಿ ಸ್ಕೀಮುಗಳನ್ನು ಜಾರಿಗೆ ತರಲು ಉತ್ಸುಕರಾಗಿವೆ. ಹೀಗೆ ಕಾರ್ಮಿಕರ ಕೊಡುಗೆಯನ್ನಷ್ಟೇ ಆಧರಿಸುವ ಸಾಮಾಜಿಕ ಸುರಕ್ಷೆಯ ಕ್ರಮ ವಿಫಲವಾಗಿಬಿಡುತ್ತದೆ.

ಈ ಬೆಳವಣಿಗೆಯಿಂದಾಗಿ ಸಾರ್ವಜನಿಕ ಸಂಘಟಿತ ವಲಯದಲ್ಲಿ ಉದ್ಯೋಗಗಳು ಕಡಿಮೆಯಾಗಿ ಮೊದಲಿಗಿಂತ ಹೆಚ್ಚಿನ ಜನ ಅಸಂಘಟಿತ ವಲಯಕ್ಕೆ ಬರುತ್ತಿದ್ದಾರೆ. ಇದರಿಂದ ಅಸಂಘಟಿತ ಕಾರ್ಮಿಕರ ಚೌಕಾಸಿಯ ಶಕ್ತಿ ಇನ್ನೂ ಕಡಿಮೆ ಆಗ್ತಾ ಇದೆ. ಇಂತಹ ಆರ್ಥಿಕ ವ್ಯವಸ್ಥೆಯಲ್ಲಿ ಮುಂದುವರೆದ ದೇಶದ ಕಾರ್ಮಿಕರಿಗೂ ತಮ್ಮ ಕೂಲಿಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗೋದಿಲ್ಲ. ಏಕೆಂದರೆ ಬಂಡವಾಳದ ಚಲನೆಯಿರುವ ಪ್ರಪಂಚದಲ್ಲಿ ಅವರು ಮೂರನೇ ಪ್ರಪಂಚದ ಅಗಾಧ ಕಾರ್ಮಿಕ ಮೀಸಲು ಪಡೆಯೊಡನೆ ಸ್ಪರ್ಧಿಸಲಾಗುವುದಿಲ್ಲ. ಈ ಹೊರಗುತ್ತಿಗೆ ಚಟುವಟಿಕೆಗಳು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ನಡೆಯುತ್ತಿರುವ ದೇಶಗಳ ಕಾರ್ಮಿಕರಿಗೂ ತಮ್ಮ ಕೂಲಿಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಹೊರಗುತ್ತಿಗೆಯಿಂದ ಕಾರ್ಮಿಕರ ಸಂಖ್ಯೆ ಇನ್ನೂ ಹೆಚ್ಚಾಗುತ್ತೆ. ಭೂಮಿಯನ್ನು ಕಳೆದುಕೊಳ್ಳುವ ಸಣ್ಣ ಹಿಡುವಳಿದಾರರು, ಸಣ್ಣ ಉತ್ಪಾದಕರು ಮತ್ತು ರೈತರು ಇದಕ್ಕೆ ಸೇರ್ಪಡೆಯಾಗ್ತಾರೆ. ಈ ಇಡೀ ಬೆಳವಣಿಗೆ ಭಾಗವಾಗಿ ಬೆಳೆಯೋ ಬಂಡವಾಳದ ಜಾಗತೀಕರಣ ಮತ್ತು ಅದಕ್ಕೇ ತಳುಕು ಹಾಕ್ಕೊಂಡಿರೋ ಸಾರ್ವಜನಿಕ ಸ್ವಾಮ್ಯದ ಸಂಘಗಳ ಖಾಸಗೀಕರಣದ ಪ್ರಕ್ರಿಯೆಗಳು ಕಾರ್ಮಿಕ ಚಳುವಳಿಗಳನ್ನು ಮತ್ತು ಅವುಗಳ ಮುಷ್ಕರ ಮಾಡುವ ಶಕ್ತಿಯನ್ನು ದುರ್ಬಲಗೊಳಿಸುತ್ತವೆ. ಅಭಿವೃದ್ಧಿ ಹೊಂದಿದ ಮತ್ತು ಹೊಂದುತ್ತಿರುವ ದೇಶಗಳಲ್ಲಿ ಒಬ್ಬ ಕಾರ್ಮಿಕ ಹಿಂದೆ ಏನು ಉತ್ಪಾದಿಸುತ್ತಿದ್ದನೋ ಅದಕ್ಕಿಂತ ಹೆಚ್ಚು ಉತ್ಪಾದಿಸುತ್ತಾನೆ (ಲೇಬರ್ ಪ್ರೊಡಕ್ಟಿವಿಟಿ). ಆದರೆ ನಿಜವಾದ ಕೂಲಿ ಹೆಚ್ಚುವುದಿಲ್ಲ. ಹಾಗಾಗಿ ಅವರ ಕೊಳ್ಳುವ ಶಕ್ತಿ ಕ್ರಮೇಣ ಕುಗ್ಗುತ್ತದೆ. ಮೂರನೇ ಪ್ರಪಂಚದ ದೇಶಗಳಲ್ಲಿ ಅವರ ಆರ್ಥಿಕತೆ ನಾಶವಾಗಿ ಹೋಗಿ (ಈಗಾಗುತ್ತಿರುವಂತೆ) ಭೌತಿಕ ದಾರಿದ್ರ್ಯ ಮತ್ತು ಅಪೌಷ್ಠಿಕತೆ ತುಂಬಾ ತೀವ್ರವಾಗಿ ಹೆಚ್ಚುತ್ತದೆ.

ನವಉದಾರವಾದಿ ಆರ್ಥಿಕತೆಯಲ್ಲಿ ಉತ್ಪಾದನೆಗಿದ್ದ ಒತ್ತು ಹಣಕಾಸಿನ ಕಡೆಗೆ ಹೊರಳಿ ಬ್ಯಾಂಕಿಂಗ್, ವಿಮೆ, ರಿಯಲ್ ಎಸ್ಟೇಟ್ ಇವು ತುಂಬಾ ಪ್ರಾಮುಖ್ಯ ಪಡೆಯಲಾರಂಭಿಸಿವೆ. ಒಟ್ಟಾರೆಯಾಗಿ FIRE ಎಂದು ಕರೆಯಲ್ಪಡುವ ಇವು ನಮ್ಮ ಪ್ರಜಾಪ್ರಭುತ್ವದ ಮೌಲ್ಯಗಳನ್ನೆಲ್ಲಾ ಕಾಳ್ಗಿಚ್ಚಿನಂತೆ ಸುಡುತ್ತಿವೆ. ಇವೆಲ್ಲಾ ಸಟ್ಟಾ ವ್ಯವಹಾರಗಳು. ನೀರಿನ ಗುಳ್ಳೆಗಳಂತೆ ಪ್ರಗತಿಯ ಭ್ರಮಾತ್ಮಕ ಬಬ್ಬಲ್‌ಗಳನ್ನು ಸೃಷ್ಟಿಸುತ್ತಿರುತ್ತದೆ. ಆದರೆ ಅವು ಯಾವುವೂ ಸ್ಥಿರವಾದ ಒಂದು ಆರ್ಥಿಕ ಬೆಳವಣಿಗೆ ಆಗಿರುವುದಿಲ್ಲ. ಓಹೋ ಆಹಾ ಎನ್ನುವಂತೆ ಮಾಡಿ ಒಡೆದುಹೋಗುತ್ತದೆ ಒಟ್ಟಾರೆ ಅರ್ಥ ವ್ಯವಸ್ಥೆ ತರಗುಟ್ಟುತ್ತಿರುತ್ತದೆ. ಹೊಸ ಹೊಸ ಬಿಕ್ಕಟ್ಟುಗಳು ಹುಟ್ಟಿಕೊಳ್ಳುತ್ತಿರುತ್ತವೆ. ಈ ಸ್ಥಿತಿಯಲ್ಲಿ ದುಡಿಮೆಯ ಬೆಲೆ ಮತ್ತು ಅದಕ್ಕಿರುವ ಗೌರವ ಎರಡೂ ಕಡಿಮೆಯಾಗಿ, ಇದರ ಪರಿಣಾಮವಾಗಿ ದುಡಿಯುವ ಜೀವಗಳಿಗೆ ಬೆಲೆ ಇರುವುದಿಲ್ಲ. ಆ ಜೀವಗಳ ಸಾವು ಬದುಕು ಲೆಕ್ಕಕ್ಕಿಲ್ಲದ, ಕೇವಲ ಪರಿಹಾರ ನೀಡಿ ಸರಿಪಡಿಸಿಕೊಳ್ಳಬಹುದಾದ ವಸ್ತುವಾಗಿಬಿಡುತ್ತದೆ. ಖಾಯಂ ಕೆಲಸಗಳಿಗೆ ಜನಗಳನ್ನು ನೇಮಿಸಿಕೊಂಡು, ಸಾಮಾಜಿಕ ಸುರಕ್ಷೆ, ಸಾಮಾಜಿಕ ಹಾಗೂ ಲಿಂಗಾಧಾರಿತ ನ್ಯಾಯಕ್ಕೆ ಅವಕಾಶ ಮಾಡಿಕೊಟ್ಟು, ಸಮಾಜದ ದುರ್ಬಲ ವರ್ಗದ ಸಬಲೀಕರಣಕ್ಕೆ ಎಡೆ ಮಾಡಿಕೊಡುವ ಬದಲು, ದಿನ ಗುತ್ತಿಗೆಗೆ ನೇಮಕ ಮಾಡಿಕೊಳ್ಳುವ ಪದ್ಧತಿ ಹೆಚ್ಚಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಸ್ಪರ್ಧಾತ್ಮಕತೆಯ ದೃಷ್ಟಿಯಿಂದ ಹೀಗೆ ಮಾಡಲೇಬೇಕಾಗುತ್ತದೆ ಎಂದು ಉತ್ಪಾದಕರು ಅದನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಆದರೆ ಆ ಸಮರ್ಥನೆಯ ಹಿಂದೆ ಸಾಮಾಜಿಕ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ, ಸಾಮಾಜಿಕ ನ್ಯಾಯಕ್ಕೆ ತಿಲಾಂಜಲಿ ಇಕ್ಕುವ, ಲಿಂಗಸಮಾನತೆಯನ್ನು ಗಾಳಿಗೆ ತೂರುವ ಲಾಭಬಡುಕತನದ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮನಃಸ್ಥಿತಿ ಇದೆ. ಹಾಗಾಗಿಯೇ ಈ ಜಾಗತೀಕರಣ ವ್ಯವಸ್ಥೆ ದಲಿತ ಬಹುಜನರ ಪಾಲಿಗೆ ಹೆಚ್ಚು ಘೋರ ಏಕೆಂದರೆ, ದೇಸೀ ಶ್ರಮ ಕೇಂದ್ರಿತ ಕೌಶಲಗಳಿಗೆ (labour-centred skills) ಇಲ್ಲಿ ಮಾರುಕಟ್ಟೆಯೇ ಇಲ್ಲ (ಐಲಯ್ಯ).

ಈ ಆರ್ಥಿಕತೆಯಲ್ಲಿ ಮೇಲ್ನೋಟಕ್ಕೆ ಹೆಂಗಸರಿಗೆ ಹೆಚ್ಚು ಕೆಲಸ ದೊರಕುತ್ತಿದೆ ಎನಿಸಿದರೂ ಸ್ವಲ್ಪ ಕೆದಕಿ ನೋಡಿದಾಗ ಸತ್ಯದರ್ಶನವಾಗುತ್ತದೆ. ಯಾವ ಕೆಲಸ ಸಿಗುತ್ತಿದೆ? ಅದಕ್ಕೆ ನ್ಯಾಯವಾಗಿ ಅದಕ್ಕೆ ಎಷ್ಟು ಕೂಲಿ/ಸಂಬಳ ದೊರಕಬೇಕಿತ್ತು? ಉಳಿದಂತೆ ಯಾವ ಬಗೆಯ ಸಾಮಾಜಿಕ ಸುರಕ್ಷೆ ದೊರಕುತ್ತಿದೆ? ಇವೆಲ್ಲ ಪ್ರಶ್ನೆಗಳನ್ನು ಕೇಳಿಕೊಂಡಾಗ ಸಿಗುವ ಚಿತ್ರವೇ ಬೇರೆ. ಮಹಿಳೆಯರನ್ನು ಕುರಿತು ಇರುವ ಪಿತೃಪ್ರಧಾನ ಧೋರಣೆ ಇಲ್ಲಿ ವೇಷ ಬದಲಿಸಿ ಬಂದಿದೆ ಅಷ್ಟೇ. ಹಿಂದೆ ಹೆಣ್ಮಕ್ಕಳನ್ನು ಹಣವಿಲ್ಲದೇ ದುಡಿಸಿಕೊಳ್ಳಬಹುದಾಗಿತ್ತು. ಈಗ ಕಡಿಮೆ ಹಣ ಕೊಟ್ಟು ದುಡಿಸಿಕೊಳ್ಳಬಹುದು. ಮಹಿಳೆಯರು ಬಹು ಬೇಗ ಸಂಘಟಿತರಾಗುವುದಿಲ್ಲ, ತುಂಬಾ ಚೌಕಾಸಿ ಮಾಡುವುದಿಲ್ಲ, ಕಷ್ಟವಾದರೂ ಗೊಣಗುವುದಿಲ್ಲ, ಹೇಳಿದ ಕೆಲಸ ಸುಮ್ನೆ ಮಾಡ್ತಾರೆ, ಪ್ರತಿರೋಧ ವ್ಯಕ್ತಪಡಿಸೋಲ್ಲ ಅನ್ನೋ ಕಾರಣಕ್ಕೆ ಅವರಿಗೆ ಕೆಲಸ ಕೊಡುತ್ತಿದ್ದೀವಿ ಅನ್ನೋದನ್ನು ಉದ್ಯೋಗದಾತರೇ ಹತ್ತು ಹಲವು ಸಂದರ್ಭಗಳಲ್ಲಿ ಹೇಳಿದ್ದಾರೆ.

ಈ ಬಿಕ್ಕಟ್ಟಿನ ಮತ್ತೊಂದು ಅಪಾಯಕಾರಿ ಅಭಿವ್ಯಕ್ತಿ ಧಾರ್ಮಿಕ ಮೂಲಭೂತವಾದ. ಭಾವನೆಯ ಉನ್ಮಾದವನ್ನು ಆಧರಿಸಿರುವ ಇದು ಬರೀ ದ್ವೇಷವನ್ನೇ ಬಿತ್ತುತ್ತದೆ ಮತ್ತು ಹಿಂಸೆಯನ್ನು ಪ್ರಚೋದಿಸುತ್ತದೆ. ಈಗಾಗಲೇ ಅರ್ಥಿಕ ವಲಯದಲ್ಲಿ ಅಪಾರ ಹತಾಶೆ ಅನುಭವಿಸಿ, ನಿರಾಶೆಯ ಮಡುವಿನಲ್ಲಿ ಸಿಲುಕಿ ದುರ್ಬಲಗೊಂಡಿರುವ ಕಾರ್ಮಿಕವರ್ಗದ ಕೆಲವು ಗುಂಪುಗಳು ಕೂಡ ಇದರ ಭಾಗವಾಗಿಬಿಡಬಹುದು. ಹೀಗೆ ಸೇರಿಕೊಳ್ಳುವ ಗುಂಪುಗಳನ್ನು ಕಾರ್ಪೊರೇಟ್ ಹಣಕಾಸು ಏಕಸ್ವಾಮ್ಯವನ್ನು ಪೋಷಿಸಿ, ಉಳಿದ ಕಾರ್ಮಿಕ ವರ್ಗದಿಂದ ತಮ್ಮ ಪ್ರಾಬಲ್ಯಕ್ಕೆ ಸವಾಲು ಬಾರದಂತೆ ತಡೆಯಲು ಬಳಸಿಕೊಳ್ಳುತ್ತಾರೆ. ಇಲ್ಲೆಲ್ಲಾ ಕಾರ್ಪೊರೇಟ್ ಗುಂಪುಗಳು ಅಧಿಕಾರಕ್ಕೆ ಬಾರದಿರಬಹುದು. ಆದರೆ ಇಂತಹ ವಿಷದಿಂದ ವಾತಾವರಣವನ್ನು ಕಲುಷಿತಗೊಳಿಸಿ, ಪ್ರಜಾಪ್ರಭುತ್ವದ ಬುನಾದಿಯನ್ನೇ ಹಾಳುಗೆಡವುತ್ತಾರೆ. ಇದು ಪ್ರಬಲಗೊಂಡಂತೆಲ್ಲಾ ಹಿಂಸೆ, ಲಿಂಗತಾರತಮ್ಯ, ಹೆಣ್ಣುಭ್ರೂಣಹತ್ಯೆ ಹೆಚ್ಚುತ್ತದೆ. ಮಹಿಳೆಯರು, ದಲಿತರು ಮತ್ತು ದಮನಿತರ ಮೇಲಿನ ಕ್ರೌರ್ಯ ಹೆಚ್ಚುತ್ತದೆ. ಉದಾಹರಣೆಗೆ ರಾಜಸ್ತಾನ, ಹರಿಯಾಣ, ಗುಜರಾತ್, ಉತ್ತರಪ್ರದೇಶ ರಾಜ್ಯಗಳತ್ತ ಕಣ್ಣುಹರಿಸಬಹುದು. ಇಂತಹ ಮೂಲಭೂತವಾದ ಒಟ್ಟಾರೆಯಾಗಿ ಮಹಿಳಾ ಅಸ್ಮಿತೆಗೇ ಧಕ್ಕೆಯುಂಟುಮಾಡುತ್ತದೆ, ಜೊತೆಗೆ ಅವರ ಕೆಲಸಗಳನ್ನು ಇನ್ನೂ ಹೆಚ್ಚು ಅಪಮೌಲ್ಯಗೊಳಿಸುತ್ತಾ ಹೋಗುತ್ತದೆ. ಅವಳಿಗಿರುವ ಅವಕಾಶಗಳನ್ನು ಮತ್ತಷ್ಟು ಸಂಕುಚಿತಗೊಳಿಸುತ್ತವೆ. ಕೆಲಸದಲ್ಲಿ ಭಾಗವಹಿಸುತ್ತಿರುವ ಒಟ್ಟು ಮಹಿಳೆಯರ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಿದೆ. 2004–05ರಲ್ಲಿ 37% ಇದ್ದದ್ದು 2016ರಲ್ಲಿ 28% ಆಗಿದೆ. ಗ್ರಾಮೀಣ ಪ್ರದೇಶದಲ್ಲಿ 1972–73ರಲ್ಲಿ 31.8%

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಇದ್ದ ಮಹಿಳೆಯರ ಸಂಖ್ಯೆ 2015–16ರಲ್ಲಿ 26.7% ಆಗಿದೆ. ಅದೂ ಕೂಡ ಹಿಂದಿಗಿಂತ ಕಡಿಮೆಯಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ತರುವ ಕಾರ್ಮಿಕ ಮಸೂದೆಗಳೆಲ್ಲವೂ ಕಣ್ಣು ಒರೆಸುವಂತಿರುತ್ತವೆ. ಉದಾಹರಣೆಗೆ 14 ಆಗಸ್ಟ್, 2016ರಲ್ಲಿ ಇಎಸ್‌ಐ ಯೋಜನೆಯನ್ನು ಮನೆಕೆಲಸದವರಿಗೆ ಅನ್ವಯಿಸುವುದಾಗಿ ಕೇಂದ್ರ ಕಾರ್ಮಿಕ ಸಚಿವ ಬಂಡಾರು ದತ್ತಾತ್ತ್ರೇಯ ಹೈದರಾಬಾದಿನಲ್ಲಿ ಘೋಷಿಸಿದರು. ಯೋಜನೆಯ ಪ್ರಕಾರ ಮನೆಗೆಲಸ ಮಾಡುವ ಕಾರ್ಮಿಕರು ತಮ್ಮ ಉದ್ಯೋಗದಾತರಿಂದ ಐಡೆಂಟಿಟಿ ಕಾರ್ಡ್ ತರಬೇಕಂತೆ. ಸರಿ, ಕೊಡುವವರ್‍ಯಾರು? ಈ ವಲಯದಲ್ಲಿ ಕೆಲಸ ಮಾಡುತ್ತಿರುವವರಲ್ಲಿ 90% ಮಂದಿ ಹೆಂಗಸರು. ಆದರೆ ಈ ಯೋಜನೆಯಲ್ಲಿ ಹೆರಿಗೆ ರಜೆಯ ಸೌಲಭ್ಯವೇ ಇಲ್ಲ! ಇದೇ ಸೋಮವಾರ 19/03/2018ರಂದು ಭಾರತದ ಶ್ರೇಷ್ಠ ನ್ಯಾಯಾಲಯ ತನ್ನ 57 ಪುಟಗಳ ತೀರ್ಪಿನಲ್ಲಿ ಕಟ್ಟಡ ಕಾಮಗಾರಿಯಲ್ಲಿನ ಮಹಿಳೆ ಮತ್ತು ಮಕ್ಕಳಿಗೆ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ಒದಗಿಸುತ್ತಿಲ್ಲ, ಈ ಕಾರ್ಮಿಕರಿಗಾಗಿ ಇದ್ದ 28,000 ಕೋಟಿ ಹಣ ರಾಜ್ಯಗಳ ಖಜಾನೆಯಲ್ಲಿ ಸುಮ್ಮನೆ ಕೊಳೆಯುತ್ತಾ ಬಿದ್ದಿದೆ ಎಂದು ತೀವ್ರ ವಿಷಾದ ವ್ಯಕ್ತಪಡಿಸಿದೆ.

ಹೀಗೆ ಎಲ್ಲವೂ ಅತ್ಯಂತ ನಿರಾಶಾದಾಯಕವಾಗಿದೆ ಎನ್ನುವ ಹತಾಶೆ ಕಾಡಬಹುದಾದ ಸನ್ನಿವೇಶ ಇದು. ಆದರೆ ಬಹುಶಃ ಚಳುವಳಿಯನ್ನು ಗಟ್ಟಿಯಾಗಿ ಕಟ್ಟಲು ಇಂತಹ ತೀವ್ರ ಬಿಕ್ಕಟ್ಟಿನ ಹೊತ್ತೇ ಬಹು ಪ್ರಶಸ್ತ ಘಳಿಗೆ ಕೂಡ. ಇಂದು ಚಳುವಳಿ ಕೇವಲ ಸಮಾನ ಕೂಲಿ ಅಥವಾ ಸಮಾನ ಅವಕಾಶಗಳಿಗಾಗಿ ಮಾತ್ರ ಆದಲ್ಲಿ ಅದು ಸಫಲವಾಗದಿರಬಹುದು. ನಾವಿದನ್ನು ಕೇವಲ ದುಡಿಯುವ ಜನರ ಸಮಸ್ಯೆಯಾಗಿ ಮಾತ್ರ ಗ್ರಹಿಸಿ ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ಯೋಚಿಸಿದರೆ ಬದಲಾವಣೆಯೇ ಸಾಧ್ಯವಾಗದಿರಬಹುದು. ಇದು ನಮ್ಮ ಸುತ್ತ ನಡೆಯುತ್ತಿರುವಎಲ್ಲ ಬಗೆಯ ಅಸಮಾನತೆಯ ವಿರುದ್ಧದ ಬೃಹತ್ ಹೋರಾಟದ ಭಾಗ ಕೂಡ ಆಗಬೇಕು. ಏಕೆಂದರೆ ಅಸಂಘಟಿತ ದುಡಿಯುವ ಮಹಿಳೆಯರು ಎದುರಿಸುತ್ತಿರುವ ತಾರತಮ್ಯ ಏನಿದೆಯೋ ಅದು ಜಾತಿ, ಧರ್ಮ, ಲಿಂಗತಾರತಮ್ಯ ಮತ್ತು ಆರ್ಥಿಕ ಅಸಮಾನತೆಗಳು, ಪರಿಸರ ನಾಶ, ಪಿತೃಪ್ರಧಾನ ಧೋರಣೆ, ಪ್ರಜಾಸತ್ತಾತ್ಮಕ ಮೌಲ್ಯಗಳ ನಾಶ, ಸರ್ಕಾರ ದುರ್ಬಲವಾಗುವಿಕೆ ಹಾಗೂ ಧಾರ್ಮಿಕ ಮೂಲಭೂತವಾದ ಇವೆಲ್ಲದರೊಡನೆ ತಳಕುಹಾಕಿಕೊಂಡಿದೆ. ಇವುಗಳಿಗೆ ಸಂಬಂಧಿಸಿದ ಎಲ್ಲಾ ಹೋರಾಟಗಳೊಡನೆ ನಾವು ಗುರುತಿಸಿಕೊಂಡು ನಮ್ಮ ಹೋರಾಟದ ಬುಡವನ್ನು ವಿಸ್ತರಿಸಿಕೊಳ್ಳದೇ ಹೋದಲ್ಲಿ, ನಮ್ಮ ಹೋರಾಟ ಸೋಲುತ್ತದೆ. ಈ ವಿಶಾಲವಾದ ಹೋರಾಟಕ್ಕೆ ಅಮರ್ತ್ಯ ಸೇನ್ ಮತ್ತು ಡ್ರೇಜ಼್ (1989) ಹೇಳುವಂತೆ ಪಬ್ಲಿಕ್ ಆಕ್ಷನ್ ಬೇಕು. "ಪಬ್ಲಿಕ್ ಆಕ್ಷನ್ ಎಂದರೆ, ಸಾರ್ವಜನಿಕ ಸರಬರಾಜು ಮತ್ತು ಪ್ರಭುತ್ವದ ತೊಡಗುವಿಕೆ ಅಥವಾ ಪ್ರವರ್ತನ ಶಕ್ತಿ ಎಂದು ಮಾತ್ರ ಅರ್ಥವಲ್ಲ. ಅದು ಸಾರ್ವಜನಿಕರು ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಇದು ಸಾರ್ವಜನಿಕರಿಗೆ ಪ್ರಭುತ್ವ ಏನು ಮಾಡುತ್ತದೆ ಎನ್ನುವುದನ್ನು ಮಾತ್ರ ಒಳಗೊಳ್ಳುವುದಿಲ್ಲ, ಸಾರ್ವಜನಿಕರು ಸ್ವತಃ ತಮಗೇ ಏನು ಮಾಡಿಕೊಳ್ಳುತ್ತಾರೆ ಎನ್ನುವುದನ್ನೂ ಒಳಗೊಳ್ಳುತ್ತದೆ. ಸಾಮಾಜಿಕ ಅವಕಾಶಗಳನ್ನು ಜನಸಮುದಾಯಕ್ಕೆ ಸುಲಭವಾಗಿ ನಿಲುಕುವಂತೆ ಮಾಡುವಲ್ಲಿಯೂ ಪಬ್ಲಿಕ್ ಆಕ್ಷನ್ ತುಂಬಾ ನಿರ್ಣಾಯಕ ಪಾತ್ರ ವಹಿಸಬಲ್ಲುದು. ಹಾಗೆಯೇ ಸಾಮಾಜಿಕ ಸುರಕ್ಷೆಯನ್ನು ಸಾಕಷ್ಟು ವಿಸ್ತರಿಸುವಲ್ಲಿ ಮಾತ್ರವಲ್ಲದೆ, ಅದರ ಕೆಲಸವನ್ನು ಗಮನಿಸಿ ನಿಯಂತ್ರಿಸುವಲ್ಲಿಯೂ ನಿರ್ಣಾಯಕ ಪಾತ್ರ ವಹಿಸಬಲ್ಲುದು." ಇದು ಬರೀ ಕನಸಷ್ಟೇ ಅಲ್ಲ, ನನಸಾಗಬಲ್ಲ ಕನಸು ಎನ್ನುವುದನ್ನು ಮಾರ್ಚ್ 12ರ ಮಹಾರಾಷ್ಟ್ರದ ರೈತಬಂಡಾಯ ಮತ್ತು ಅದರಲ್ಲಿ ಸಮುದಾಯದ ಪ್ರೀತಿಪೂರ್ವಕ ಪಾಲ್ಗೊಳ್ಳುವಿಕೆ ಈಗಷ್ಟೇ ಸಾಬೀತು ಪಡಿಸಿದೆ.

❖

## ಪ್ರತಿಕ್ರಿಯೆಗಳು

### ಒಂದೇ ಶಕ್ತಿಯಾಗಬೇಕಿದೆ: ಟಿ. ಪದ್ಮಶ್ರೀ, ಮೈಸೂರು

ನಾವಿಲ್ಲಿ ಎಲ್ಲರೂ ದುಡಿಯುವ ಜೀವಗಳೇ ಸೇರಿರುವುದರಿಂದ ನಮಗೆಲ್ಲರಿಗೂ ಅನ್ವಯಿಸುವಂತೆ ಬ್ರೆಕ್ಟ್ ಅವರ ಹಾಡಿನಿಂದ ನಮ್ಮ ಮಾತನ್ನು ಆರಂಭಿಸುತ್ತೇನೆ, ಬ್ರೆಕ್ಟ್ ಬರೀತಾರೆ,

*ನಾವು ಬೆವರನ್ನು ಸುರಿಸಿ ದುಡಿಯುವ ಜನ*
*ನಮ್ಮ ಬೆವರಿನ ಪಾಲನ್ನು ಕೇಳುವೆವು*
*ತುಂಡು ಭೂಮಿಯಲ್ಲ ಒಂದು ದೇಶವಲ್ಲ*
*ಇಡೀ ಭೂಗೋಳವನೆ ಕೇಳುವೆವು.*

*ಸಾವಿರ ಸಾವಿರ ಮುತ್ತುಗಳಿವೆ*
*ಇಲ್ಲಿ ಪರ್ವತ ಪರ್ವತ ವಜ್ರಗಳು*
*ಈ ಸಂಪತ್ತೆಲ್ಲಾ ನಮ್ಮದೇ*
*ಇಡೀ ಖಜಾನೆಯನ್ನೇ ಕೇಳುವೆವು..*

ಈ ಕವನ ಈ ದೇಶದ ಎಲ್ಲಾ ದುಡಿಯುವ ವರ್ಗದವರಿಗೆ ಅನ್ವರ್ಥವಾಗಿದೆ. ನಮ್ಮ ದೇಶದಲ್ಲಿ ಮಾಲೀಕ ವರ್ಗ ದುಡಿಯುವ ವರ್ಗದ ಎಲ್ಲ ಶ್ರಮವನ್ನು ಪಡೆದು ಹೆಚ್ಚು ಹೆಚ್ಚು ಶ್ರೀಮಂತ ಆಗ್ತಾ ಹೋಗ್ತಾ ಇದೆ. ಮತ್ತೆ ದುಡಿಯುವ ವರ್ಗ ಅಥವಾ ಕಾರ್ಮಿಕ ವರ್ಗ ದುಡಿದು ದುಡಿದು ದಿನೇ ದಿನೇ ಬಡವರಾಗ್ತಾ ಇರುವ ಈ ಸಮಯದಲ್ಲಿ, ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಮಹಿಳಾ ದಿನಾಚರಣೆಯಂದು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಬರೀ ಮಹಿಳಾ ದುಡಿಯುವ ವರ್ಗ ಅಂತ ಗುರುತಿಸದೆ ಬರೀ ದುಡಿಯುವ ವರ್ಗ ಅಂತ ಹೇಳಿ, ಚರ್ಚೆಯ ವಿಷಯವಾಗಿ ತಗೊಂಡಿರುವುದು ಸ್ವಾಗತಿಸುವ ವಿಚಾರ. ಯಾಕೆಂದರೆ ದುಡಿಯುವ ವರ್ಗ ಅಂತ ಅಂದರೆ ಮಹಿಳೆ ಆಗಿರಬಹುದು ಪುರುಷರಾಗಿರುವುದು ಯಾರಾದ್ರೂ ಆಗಿರುವುದು. ಶೋಷಣೆಗೊಳಪಡಬೇಕಾಗಿರುವುದು ಈಗ ಕಾನೂನು ಆಗಿದೆ.

ಶೈಲಜಾ ಮೇಡಂ ಮಾತಾಡುತ್ತಾ ರಾಜ್ಯ ನಿರ್ದೇಶಕ ತತ್ವ, ಸಮಾನ ಕೂಲಿಗೆ ಸಮಾನ ವೇತನ ಮತ್ತು ಎಲ್ಲದರ ಬಗೆಯನ್ನು ಮಾತಾಡಿದ್ದಾರೆ. ನಾನು ಮತ್ತೆ ಅದರ ಬಗ್ಗೆ ಮಾತನಾಡಲ್ಲ. ನಾನು ಪೌರಕಾರ್ಮಿಕರ ಬಗ್ಗೆ ನನ್ನ ಸಂಶೋಧನೆಯನ್ನು ಕೈಗೊಂಡಿದ್ದರಿಂದ ಅವರ ಬಗ್ಗೆ ಒಂದು ನಾಲ್ಕು ಮಾತನಾಡಲು ಬಯಸುತ್ತೇನೆ. ಪೌರ ಕಾರ್ಮಿಕ ಮಹಿಳೆಯರು ಸಾಮಾನ್ಯವಾಗಿ ಕೆಲಸದ ಒತ್ತಡ ಮತ್ತು ಕೆಲಸದ ಪರಿಸ್ಥಿತಿಯಿಂದಾಗಿ ತಮ್ಮ ನೈಜ ವಯಸ್ಸಿಗಿಂತ ಹೆಚ್ಚಿನ ವಯಸ್ಸಿನವರ ಹಾಗೆ ಕಾಣಿಸುತ್ತಾರೆ. ಅಂದರೆ ಮೂವತ್ತು ವರ್ಷದ ಒಬ್ಬ ಪೌರಕಾರ್ಮಿಕ ಮಹಿಳೆ ನೋಡಲು ಅರುವತ್ತು ವರ್ಷದ ವಯಸ್ಸಿನ ಹೆಂಗಸಿನ ತರಹ ಕಾಣಿಸುತ್ತಾರೆ. ಶೈಲಜಾ ಮೇಡಂ ಮಾತಾಡುತ್ತಾ ತರಕಾರಿ ಮಾರೋ ಹೆಂಗಸರ ಕಷ್ಟಗಳ ಬಗ್ಗೆ ಹೇಳಿದ್ರು. ಅದೇ ತರಹ ಪೌರ ಕಾರ್ಮಿಕ ಮಹಿಳೆಯರ ಪರಿಸ್ಥಿತಿಯೂ ಇದೇ. ಬೆಳಗ್ಗೆ ಆರು ಗಂಟೆ ಎದ್ದು ಅಟೆಂಡೆನ್ಸ್ ಪಾಯಿಂಟ್ ಹತ್ರ ಹೋಗಬೇಕು. ಅಲ್ಲಿಂದ ಅಟೆಂಡೆನ್ಸ್ ಹಾಕ್ಬಿಟ್ಟು ಕೆಲಸ ಶುರು ಮಾಡ್ಬೇಕು. ಕೆಲಸ ಮುಗಿಸಿ ಮನೆಗೆ ಹೋಗೋದು ಹತ್ತುವರೆ ಹನ್ನೊಂದು ಗಂಟೆ ಆಗುತ್ತೆ. ಬೆಳಗ್ಗೆ ಮನೆಯಿಂದ ಹೊರಟು ಮತ್ತೆ ಮನೆಗೆ ಬರುವ ತನಕ ಅವರು ಎಲ್ಲೂ ಶೌಚವನ್ನು ಮಾಡಲಿಕ್ಕೆ ಸಾಧ್ಯವೇ ಇಲ್ಲ. ಹೇಗ್ ಮಾಡ್ತಾರೆ? ಬೆಳಿಗ್ಗೆ ಅವರು ಕೆಲಸ ಮಾಡುವ ಹೊತ್ತಲ್ಲಿ ಯಾವುದೇ ಸಾರ್ವಜನಿಕ ಶೌಚಾಲಯ ತೆರೆದಿರುವುದಿಲ್ಲ. ಕೆಲವು ಏರಿಯಾಗಳಲ್ಲಿ ಶೌಚಾಲಯವೇ ಇಲ್ಲ. ಮೈಸೂರಿನಂಥ ಮಹಾನಗರದಲ್ಲಿ ಮಹಿಳೆಯರು ಬಯಲಿಗೆ ಹೋಗಲಿಕ್ಕೆ ಸಾಧ್ಯವಿಲ್ಲ. ಇದೆಲ್ಲಾ ಅವರ ಆರೋಗ್ಯದ ಮೇಲೆ ಎಂತಹ ಪರಿಣಾಮ ಬೀರುತ್ತದೆ ಅಂತ ಸರ್ಕಾರಗಳು ಯೋಚನೆ ಮಾಡೊದೇ ಇಲ್ಲ. ಅವರ ಅಟೆಂಡೆನ್ಸ್ ಪಾಯಿಂಟ್ ಹತ್ರ ಅವರಿಗೆ ಶೌಚಾಲಯ, ಬಟ್ಟೆ ಬದಲಾಯಿಸಲಿಕ್ಕೆ ಒಂದು ಕೊಠಡಿ, ಕೈ ಕಾಲು ತೊಳೆಯಲು ಒಂದು ಜಾಗ ಇರಬೇಕು ಅಂತ ಕಾನೂನಿದ್ದರೂ, ಅದನ್ನು ಸಾಕಾರ ಮಾಡಲಿಕ್ಕೆ ಸಾಧ್ಯವಾಗಿರಲಿಲ್ಲ. ಇತ್ತೀಚೆಗೆ ಪೌರಕಾರ್ಮಿಕರ ಹೋರಾಟಗಳ ನಂತರ ಸಾಧ್ಯವಾಗಿದೆ. ಇದು ಏನು ತೋರಿಸುತ್ತದೆ ಅಂದರೆ ಪೌರ ಕಾರ್ಮಿಕರ ಶ್ರಮದ ಫಲ ಮಾತ್ರ ಬೇಕು, ಆದರೆ ಅವರಿಗೆ ಯಾವುದೇ ಮೂಲಭೂತ ಸೌಲಭ್ಯ ಕೊಡಲಿಕ್ಕೆ ನಮ್ಮ ಸರ್ಕಾರಕ್ಕೆ ಮನಸ್ಸಿಲ್ಲ.

ಯಾವುದೇ ಕಾರ್ಮಿಕರಿಗೆ ಒಂದು ದೊಡ್ಡ ಶತ್ರು ಅಂತ ಇದ್ರೆ ಅದು ಗುತ್ತಿಗೆ ಪದ್ಧತಿ. ಸಂವಿಧಾನದಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ ಅಂತ ಇದೆ. ಕಾನೂನಿನ ಮುಂದೆ ಎಲ್ಲರೂ ಒಂದೇ ಅಂತ ಇದೆ. ಆದರೆ ಗುತ್ತಿಗೆ ಪದ್ಧತಿ ಇದೆಲ್ಲದಕ್ಕೂ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ವಿರುದ್ಧವಾಗಿದೆ. ಗುತ್ತಿಗೆ ಪದ್ಧತಿಯಲ್ಲಿ ಸಂವಿಧಾನದ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ, ಸಮಾನ ಕೂಲಿ ಮುಂತಾದ ಯಾವುದೇ ಅಂಶಗಳು ಇಲ್ಲ. ಈ ಗುತ್ತಿಗೆ ಪದ್ಧತಿಯಿಂದಾಗಿ ಪೌರಕಾರ್ಮಿಕರಂತಹ ಕಾರ್ಮಿಕರಿಗೆ ಕನಿಷ್ಠ ಕೂಲಿಯೂ ಸಿಗ್ತಾ ಇಲ್ಲ. ಗುತ್ತಿಗೆ ಪದ್ಧತಿಯಿಂದಾಗಿ ಕಾರ್ಮಿಕರಿಗೆ ಸಿಗಬೇಕಾಗಿರುವ ಕನಿಷ್ಟ ಮೂಲ ಸೌಲಭ್ಯಗಳು ಸಿಗುತ್ತಿಲ್ಲ. ನಿಜವಾಗಿ ನೋಡಿದರೆ ಒಬ್ಬ ಕಾರ್ಪೊರೇಷನ್ ಕಮಿಷನರ್‌ಗೂ ಪೌರಕಾರ್ಮಿಕರಿಗೂ ಕೂಲಿಯಲ್ಲಿ ಅಂತಹ ವ್ಯತ್ಯಾಸ ಇರಬಾರದು. ಯಾಕೆಂದರೆ ಅವನು ಮಾಡುವುದಕ್ಕಿಂತ ಹೆಚ್ಚಿನ ಕೆಲಸವನ್ನು ಒಬ್ಬ ಪೌರಕಾರ್ಮಿಕ ಮಹಿಳೆ ಮಾಡ್ತಾಳೆ. ಆತನಿಗಿರುವ ವೇತನಕ್ಕೂ ಇವಳಿಗಿರುವ ವೇತನಕ್ಕೂ ಹೆಚ್ಚಿನ ವ್ಯತ್ಯಾಸ ಇರಬಾರದು ಎನ್ನುವುದು ನನ್ನ ಅಭಿಪ್ರಾಯ.

ಯಾಕೆ ಹೀಗೆ? ಗುತ್ತಿಗೆದಾರರು ಅಥವಾ ಸರ್ಕಾರ ಕಾರ್ಮಿಕರ ಮೇಲೆ ಶೋಷಣೆ ಮಾಡಲು ಸಾಧ್ಯ ಆಗ್ತಾ ಇರುವುದು ಎಲ್ಲಾ ತರಹದ ಕಾರ್ಮಿಕರು ಒಗ್ಗಟ್ಟಾಗಿ ಇರದ ಕಾರಣಕ್ಕೆ. ನಮ್ಮಲ್ಲಿ ಅಂಗನವಾಡಿ ಕಾರ್ಯಕರ್ತರ ಸಂಘ ಇದೆ. ಗಾರ್ಮೆಂಟ್ ನೌಕರರ ಸಂಘ ಇದೆ. ಪೌರಕಾರ್ಮಿಕರ ಸಂಘ ಇದೆ. ಕಾರ್ಮಿಕರ ಸಂಘಗಳು ಬಿಡಿಬಿಡಿಯಾಗಿ ಹೋರಾಟಗಳನ್ನು ಮಾಡ್ತಾ ಇದಾವೆ. ಅದಕ್ಕೆ ನಮ್ಮ ಹೋರಾಟಗಳು ಗುರಿಮುಟ್ಟಲು ಸಾಧ್ಯ ಆಗುತ್ತಿಲ್ಲ. ಇದಕ್ಕಾಗಿಯೇ ಸರ್ಕಾರಗಳು ದುಡಿಯುವ ಜನರ ವಿರುದ್ಧವಾಗಿ ಗುತ್ತಿಗೆದಾರರು ಅಥವಾ ಬಂಡವಾಳಶಾಹಿ ಪರವಾಗಿ ನಿಯಮಗಳನ್ನು ಜಾರಿಗೆ ತರಲು ಸಾಧ್ಯವಾಗುತ್ತದೆ. ಕಾರ್ಮಿಕರೆಲ್ಲರದ್ದು ಒಂದೇ ಸಮಸ್ಯೆ ಅಂತ ನಾವು ಅರ್ಥ ಮಾಡ್ಕೊಂಡು ನಾವೆಲ್ಲರೂ ಕೆಲಸ ಮಾಡಬೇಕಾಗಿದೆ. ನಮಗೆ ಸಮಾನತೆ ಬೇಕು, ಸ್ವಾತಂತ್ರ್ಯ ಬೇಕು, ವ್ಯಕ್ತಿ ಸ್ವಾತಂತ್ರ್ಯ ಬೇಕು, ಆಯ್ಕೆ ಸ್ವಾತಂತ್ರ್ಯ ಬೇಕು, ಅಭಿವ್ಯಕ್ತಿ ಸ್ವಾತಂತ್ರ್ಯ ಬೇಕು. ಇದಕ್ಕೆಲ್ಲ ಬಂಡವಾಳಶಾಹಿಗಳಿಂದ ಧಕ್ಕೆ ಆಗುತ್ತಿದೆ. ಆದ್ದರಿಂದ ನಾವೆಲ್ಲರೂ ಒಂದೇ ಶಕ್ತಿಯಾಗಿ ಹೋರಾಟ ಮಾಡಬೇಕು.

## ದುಡಿಮೆಯೊಂದಿಗೆ ಶಿಸ್ತು: ಭಾಗಿರಥಿ, ಚರಕ, ಹೆಗ್ಗೋಡು

ಈ ಮಹಿಳಾ ದಿನಾಚರಣೆ ದಿನ ನಾವೆಲ್ಲ ದುಡಿಯುವ ಮಹಿಳೆಯರು ಇಲ್ಲಿ ಒಟ್ಟಾಗಿ ಸೇರಿದ್ದೇವೆ, ನಾವು ಸೇರಿದ್ದೇವೆ ನಿಜ ಆದ್ರೆ ನಾವು ಇಲ್ಲಿಗೆ ಬರುವಾಗ ಅಷ್ಟು ಸುಲಭವಾಗಿ ಯಾರೂ ಮನೆಯಿಂದ ಆಚೆ ಬಂದವರಲ್ಲ. ಎಷ್ಟೋ ಕಷ್ಟಗಳನ್ನು ಅನುಭವಿಸಿ, ಬೆಳೆದು, ಅನುಭವಗಳನ್ನು ತಿಳ್ಕೊಂಡು ಇಂಥ ಒಂದು ದೊಡ್ಡ ಸಮ್ಮೇಳನದಲ್ಲಿ ನಾವೆಲ್ಲರೂ ಒಟ್ಟಿಗೆ ಕೂತು ಮಾತನಾಡುವಂತಹ, ಕೇಳಿಸಿಕೊಳ್ಳುವಂತಹ, ಅನುಭವಗಳನ್ನು ಹಂಚಿಕೊಳ್ತಾ ನಮ್ಮ ಮುಂದಿನ ಹಾದಿಯನ್ನು ತಿಳಿದುಕೊಳ್ಳುವಂತಾಗಿದ್ದೇವೆ. ನಮಗೆಲ್ಲ ತಿಳಿದಿದೆ ಒಬ್ಬ ಮಹಿಳೆ ಸಾಮಾಜಿಕವಾಗಿ ತನ್ನನ್ನು ತಾನು ತೊಡಗಿಸಿಕೊಳ್ಳುವುದು ಅಂತ ಅಂದ್ರೆ ಎಷ್ಟು ಕಷ್ಟ ಅಂತ, ಒಬ್ಬ ಮಹಿಳೆ ಸಾಮಾಜಿಕವಾಗಿ ತನ್ನನ್ನು ತೊಡಗಿಸಿಕೊಂಡು ಬೆಳೆಯುವುದು ಅಂದ್ರೆ ಒಂದು ಚಿಕ್ಕ ಮಗು ಬೆಳೆದು ದೊಡ್ಡ ಆದ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಹಾಗೆ, ಒಂದು ಮಗು ಹೇಗೆ ತಾನು ಹುಟ್ಟಿ ಅಂಬೆಗಾಲಿಡುತ್ತಾ ಬೆಳೆದು ನಡೆಯುವುದನ್ನ ಕಲಿತು, ಆಮೇಲೆ ತೊದಲುತ್ತ ಮಾತಾಡೋದನ್ನ ಕಲಿತು, ಹೇಗೆ ಅದು ಬೆಳೆದು ಯುವಕ ಅಥವಾ ಯುವತಿಯಾಗಿ ಪ್ರಪಂಚದಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುತ್ತದೊ ಹಾಗೆ ಮಹಿಳೆಯರು ಸಾಮಾಜಿಕವಾಗಿ ಬೆಳೆಯುತ್ತಾರೆ. ಇಂಥ ಹಲವಾರು ಕಷ್ಟಗಳನ್ನು ಅನುಭವಿಸಿ ಈ ಸಮ್ಮೇಳನದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಮಹಿಳೆಯೂ ಕೂಡಾ ಇಂದಿನ ಮಹಿಳಾ ಚಳವಳಿಗೆ ಅದ್ಭುತವಾದ ಮಾರ್ಗದರ್ಶಕಳು ಅಂತ ನನ್ನ ಅನಿಸಿಕೆ.

ಇಂದು ಈ ದುಡಿಯುವ ಮಹಿಳೆ ಸಮಾಜದಲ್ಲಿ ಎಷ್ಟು ಕಷ್ಟಗಳನ್ನು ಅನುಭವಿಸುತ್ತಾಳೆ ಅನ್ನುವುದನ್ನು ನಿಮ್ಮ ಮುಂದೆ ಎರಡು ಮಾತುಗಳಲ್ಲಿ ಹಂಚಿಕೊಳ್ಳಲು ಬಯಸುತ್ತೇನೆ. ಒಬ್ಬ ಮಹಿಳೆ ಏನನ್ನಾದರೂ ಸಾಧನೆ ಮಾಡ್ಬೇಕು ಅಂತ ಹೊರಟರೆ ಒಬ್ಬಳೆ ಎಲ್ಲವನ್ನು ಸಾಧಿಸಲು ಸಾಧ್ಯವಿಲ್ಲ. ಈ ಸಮಾಜದ ವಿವಿಧ ಸ್ತರಗಳ ಜನರು ಅವಳಿಗೆ ಸಹಕಾರ ಕೊಟ್ಟರೆ ಮಾತ್ರ ಅವಳು ಏನನ್ನಾದರೂ ಸಾಧಿಸಲು ಸಾಧ್ಯ. ಈಗ ಬಂಡವಾಳ ಬೇಕು ಅಂತ ಅಂದ್ರೆ ಬ್ಯಾಂಕ್‌ನಲ್ಲಿರುವ ಅಧಿಕಾರಿಗಳು, ದಾಖಲಾತಿಗಳು ಬೇಕು ಅಂತ ಅಂದ್ರೆ ಸರ್ಕಾರಿ ಅಧಿಕಾರಿಗಳು, ಅಕ್ಕಪಕ್ಕದಲ್ಲಿ ಇರುವವರ ನೈತಿಕ ಬೆಂಬಲ ಇವೆಲ್ಲವೂ ಬೇಕು. ಆದರೆ ಮಹಿಳೆಯರಾದ ನಾವು ಇಂತಹ ಸಂದರ್ಭಗಳಲ್ಲಿ ದೌರ್ಜನ್ಯಕ್ಕೆ ಒಳಗಾಗುವುದು ಜಾಸ್ತಿ. ಇದನ್ನು ನಾನು ಉದಾಹರಣೆಗಳ ಮೂಲಕ ಹೇಳಬೇಕು ಅಂತ ಅಂದ್ರೆ ನಾವು ಯಾವುದೇ ಕೆಲಸ ಬೇಕು ಅಂತ ಅಂದ್ರೆ ಅಧಿಕಾರಿಗಳ ಹತ್ತಿರ ಹೊಗುತ್ತೇವೆ. ಅಧಿಕಾರಿಗಳು ನಮ್ಮನ್ನು ಅವರ ಕಚೇರಿಗೆ ನೂರಾರು ಸಾರಿ ಅಲೆಸುತ್ತಾರೆ. ಬೆಳಗ್ಗೆ ಹತ್ತು ಗಂಟೆಗೆ ಹೋದರೆ ಅಧಿಕಾರಿಗಳು ಇನ್ನೂ ಬಂದಿರೋದಿಲ್ಲ. ಹನ್ನೆರಡೂವರೆಗೆ ಹೋದ್ರೆ ಊಟಕ್ಕೆ ಹೋಗಿರುತ್ತಾರೆ. ಮೂರುವರೆ ನಾಲ್ಕು ಗಂಟೆಗಳ ನಂತರ ನಮಗೆ ಇರೋಕೆ ಆಗಲ್ಲ. ಈ ತರಹದ ಚಿಕ್ಕಚಿಕ್ಕ ವಿಷಯಗಳೆ ಪ್ರತಿಯೊಬ್ಬ ದುಡಿಯುವ ಮಹಿಳೆಗೆ ಆಗುವಂತಹ ಹಿಂಸೆ. ಗಂಡು ಮಕ್ಕಳಾದರೆ ಇಂತಹ ಸಂದರ್ಭಗಳಲ್ಲಿ ಎಷ್ಟು ಹೊತ್ತಾದರು ಇದ್ದು ಕೆಲಸ ಮುಗಿಸಿಕೊಂಡು ಬರಬಹುದು. ಆದರೆ ಹೆಣ್ಣುಮಕ್ಕಳಿಗೆ ಹಾಗೆ ಆಗಲ್ಲ. ಅವರು ಹಲವಾರು ಮಿತಿಗಳೊಂದಿಗೆ ಕೆಲಸ ಮಾಡಬೇಕಾಗುತ್ತದೆ. ಅದಕ್ಕೆ ಪ್ರತಿಯೊಬ್ಬ ದುಡಿಯುವ ಮಹಿಳೆಗೂ ನಾನು ಹೇಳ ಬಯಸುತ್ತೇನೆ, 'ನೀವು ಯಾವುದೇ ಕೆಲಸ ಮಾಡಿ. ಆದರೆ ನಿಮ್ಮ ಶಿಸ್ತನ್ನ ಯಾವುದೇ ಕಾರಣಕ್ಕೂ ಕೈಯಿಂದ ಹೊರ ಚೆಲ್ಲಬೇಡಿ.' ಇದು ನನ್ನ ವೈಯಕ್ತಿಕ ಕಾಳಜಿಯಿಂದ ಹೇಳುತ್ತಿದ್ದೇನೆ.


## ಹೋರಾಟವೊಂದೇ ದಾರಿ: ಲಚುಮಮ್ಮ ಹಿರೇಮನೆ

ನಾವು ದುಡಿಯುವ ಮಹಿಳೆಯರು ಕೇಳ್ತೇವೆ ಸರ್ವರಿಗೆ ಸಮಪಾಲು ಸಮಬಾಳು ಅಂತ. ಆದರೆ, ನಮ್ಗೆ ಪುರುಷರಿಗಿಂತ ಸಂಬಳ ಬಹಳನೇ ಕಮ್ಮಿ. ಪುರುಷರಿಗೆ 250–300 ಕೊಟ್ರೆ ನಮಗೆ 150 ಕೊಡ್ತಾರೆ. ಅರ್ಧಕ್ಕರ್ಧ ಕಮ್ಮಿ. ನನ್ನ ಅನುಭವ ಹೇಳ್ತಾ ಇದೀನಿ. ನಮ್ಮ ಹಳ್ಳಿಕಡೆ ಹೀಗೆ ನಡೆಯುತ್ತೆ. ಇದು ತುಂಬ ಅನ್ಯಾಯ. ಮಹಿಳಾ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ದೌರ್ಜನ್ಯ ವಿರೋಧಿ ಒಕ್ಕೂಟ ಹೋರಾಟದಲ್ಲಿ ಸಮಪಾಲು ಸಮಬಾಳು ಅನ್ನೋದನ್ನ ನಿಜವಾಗಿಸಲಿ. ನಾವೂ ಕೂಡ ಹೋರಾಟ ಮಾಡ್ತೀವಿ. ಮತ್ತೆ ನಾನು ಸುಮಾರು ಕಡೆ ಹೋರಾಟದ ಮೂಲಕ ಕರ್ನಾಟಕ ಎಲ್ಲ ಸುತ್ತಿ ನೋಡಿದೀನಿ. ದುಡಿಯುವ ಮಹಿಳೆಯರು ಅಂದ್ರೆ, ಎಲ್ಲ ಕಡೆನೂ ತುಂಬಾ ಅನ್ಯಾಯ. ಕೆಲವರು ಬಡವರು ಹೊರಗೇ ಬರಕ್ಕೆ ಸಾಧ್ಯ ಇಲ್ಲ. ಇನ್ನು ಹೋರಾಟ ಮಾಡ್ಬೇಕು ನಾವು. ನಾನು ಓದಿದ್ದು ನಾಲ್ಕನೇ ಕ್ಲಾಸು, ಆದರೆ ನಾಲ್ಕು ಸ್ಕೂಲಿಗೆ ಅಧ್ಯಕ್ಷಳಿದ್ದೀನಿ. ಅದೇ ನೋಡಿ. ನಾವು ತಂಡಗಳನ್ನ ಮಾಡಿಕೊಂಡು ಅಭಿಯಾನದ ಮೂಲಕ ಇವತ್ತು ಸರ್ಕಾರದ ಬಜೆಟ್‌ನಲ್ಲಿ ನಮಗೆ ಅನುದಾನ ಕೊಡೋಹಾಗೆ ಮಾಡಿದ್ದೇವೆ. ಓದಿದ್ದು ನಾಲ್ಕನೇ ಕ್ಲಾಸಾದರೂ ನಾನು ಹೋರಾಟದ ಮೂಲಕನೇ ಇಲ್ಲಿತನಕ ಬಂದಿದೀನಿ. ನಾನು ಹೋರಾಟಗಾರ್ತಿ ಎನ್ನುವುದು ನನಗೆ ಬಹಳ ಖುಷಿಯಿದೆ. ಅರೆ ಅಲೆಮಾರಿ ವಿಶೇಷ ಪ್ಯಾಕೇಜ್ ಒಂದು ಬಿಡುಗಡೆ ಆಗಿದೆ ಈಗ. ನಮ್ಮ ಹಕ್ಕುಗಳನ್ನು ನಾವು ಹೋರಾಟದ ಮೂಲಕನೇ ತಗೋಬೇಕು. ಮಹಿಳೆಯರು ತಮ್ಮ ಹಕ್ಕನ್ನು ತಾವು ತಗೋಬೇಕು. ಸಂವಿಧಾನದಲ್ಲಿ ಇದೆಲ್ಲ ಇದೆಯೇ ಹೊರತು ಅದು ಬೆಳಕಿಗೆ ಬರ್ತಾ ಇಲ್ಲ. ಮಹಿಳೆಯರು ಹೋರಾಟದ ಮೂಲಕನೇ ನಮ್ಮ ಹಕ್ಕುಗಳನ್ನು ನಾವು ಪಡ್ಕೊಳಣ. ದುಡಿಯುವ ಮಹಿಳೆಗೆ ಸಮಪಾಲು, ಸಮಬಾಳು ಸಿಗಬೇಕು.

❖



Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಸಂವಿಧಾನ ಮತ್ತು ಧರ್ಮ

❖ **ರೇಷ್ಮಾ**, ಶಿವಮೊಗ್ಗ

**ಭಾ**ರತದ ಮಹಿಳೆಯರ ಸ್ಥಿತಿಗತಿಯನ್ನು ಗಮನಿಸಿ ನ್ಯಾಯಮೂರ್ತಿಗಳಾದ ರಾಮಸ್ವಾಮಿಯವರು ನೀಡಿರುವ ಅಭಿಪ್ರಾಯಗಳು ಹೀಗಿವೆ: "ಸ್ವಹಿತವನ್ನು ತ್ಯಾಗಮಾಡುವುದು, ತನಗೆ ಸಲ್ಲಬೇಕಾದುದನ್ನು ಬಿಟ್ಟುಬಿಡುವುದು ಅವರ (ಮಹಿಳೆಯರ) ಉದಾತ್ತಗುಣ ಮತ್ತು ಸ್ಥೈರಣೆಯನ್ನು ತೋರಿಸುತ್ತದೆ. ಆದರೂ ಅವರು ಎಲ್ಲಾ ರೀತಿಯ ಅಸಮಾನತೆ, ಹೀನಾಯಸ್ಥಿತಿಗೆ ಒಳಗಾಗಿ ತಾರತಮ್ಯವನ್ನು ಅನುಭವಿಸುತ್ತಾರೆ."

**ಭಾರತದ ಸಂವಿಧಾನ ಮತ್ತು ಮಹಿಳೆಯರ ಸಂರಕ್ಷಣೆ**

ನಮ್ಮ ಭಾರತದ ಸಂವಿಧಾನ 1956ರ ಜನವರಿ 26ರಂದು ಜಾರಿಗೆ ಬಂದಿದ್ದು ಸರ್ಕಾರದ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಮೂಲಕ ಒಳ್ಳೆಯ ಆಡಳಿತಕ್ಕೆ ಬೇಕಾದ ಚೌಕಟ್ಟನ್ನು ಹಾಕಿಕೊಟ್ಟಿದೆ. ದೇಶದ ಕಾನೂನುಗಳು ಮತ್ತು ನಿಯಮಗಳು ಸಂವಿಧಾನಕ್ಕೆ ಬದ್ದವಾಗಿರಬೇಕು ಮತ್ತು ಸಂವಿಧಾನದ ಮೂಲತತ್ವಗಳಿಗೆ ಬದ್ಧವಾಗದ ಅಸಮರ್ಪಕ ಕಾನೂನುಗಳು ಅನೂರ್ಜಿತವಾಗುತ್ತವೆ. ಇದು ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಮುಂತಾದ ತತ್ವಗಳನ್ನೊಳಗೊಂಡ ಒಂದು ಸಮಗ್ರ ದಾಖಲೆ. ಸಂವಿಧಾನದ ಪೀಠಿಕಾಭಾಗವಾದ ಪ್ರಸ್ತಾವನೆ, ಸಂವಿಧಾನದ ಮೂರನೇ ಭಾಗದಲ್ಲಿರುವ ಮೂಲಭೂತ ಹಕ್ಕುಗಳು ಮತ್ತು ನಾಲ್ಕನೇ ಭಾಗದಲ್ಲಿನ ರಾಜ್ಯ ನೀತಿ ನಿರ್ದೇಶಕ ತತ್ವಗಳಲ್ಲಿ ಸಂವಿಧಾನದ ಆಶಯ ಮತ್ತು ಧ್ಯೇಯೋದ್ದೇಶಗಳನ್ನು ಸ್ಪಷ್ಟವಾಗಿ, ನಿರ್ದಿಷ್ಟವಾಗಿ ತಿಳಿಸಲಾಗಿದೆ. ಇದರಂತೆ ಯಾವುದೇ ಧರ್ಮ, ಜನಾಂಗ, ಜಾತಿ, ಲಿಂಗ ಮತ್ತು ಹುಟ್ಟಿದ ಸ್ಥಳ ಇತ್ಯಾದಿ ಬಗ್ಗೆ ತಾರತಮ್ಯವಿಲ್ಲದೇ ಸಂವಿಧಾನದಡಿ ರಕ್ಷಣೆ ದೊರೆಯುತ್ತದೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ದೇಶದಲ್ಲಿ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಲಾಭವನ್ನು ಪಡೆಯಲು ಕೆಲವು ನಿರ್ದಿಷ್ಟ ವರ್ಗಗಳ ವ್ಯಕ್ತಿಗಳಿಗೆ ವಿಶೇಷ ರಕ್ಷಣೆಯನ್ನು ಒದಗಿಸುತ್ತದೆ ಮತ್ತು ಮಹಿಳೆಯರನ್ನು ವಿಶೇಷ ರಕ್ಷಣೆಯ ಅಗತ್ಯವಿರುವ ದುರ್ಬಲ ಗುಂಪಿನವರೆಂದು ವರ್ಗೀಕರಿಸಿದೆ.

ಅನಾದಿಕಾಲದಿಂದಲೂ ತಾರತಮ್ಯನೀತಿಗೆ ಒಳಗಾದ ಮಹಿಳೆಯರ ಸ್ಥಿತಿಗತಿಯನ್ನು ಗಮನದಲ್ಲಿಟ್ಟುಕೊಂಡು ಸಂವಿಧಾನ ರಚನಾಕಾರರು ಮಹಿಳೆಯರ ಪರಿಸ್ಥಿತಿಯನ್ನು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಉತ್ತಮಗೊಳಿಸಲು ಮತ್ತು ಅವರಿಗೆ ಲಿಂಗಸಮಾನತೆ ದೊರಕಿಸಿಕೊಡಲು ಕೆಲವು ಸಾಮಾನ್ಯ ಮತ್ತು ನಿರ್ದಿಷ್ಟ ನಿಯಮ-ನಿಬಂಧನೆಗಳನ್ನು ಸಂವಿಧಾನದಲ್ಲಿ ಸೇರ್ಪಡೆಗೊಳಿಸಿದ್ದಾರೆ. ಸಾಮಾನ್ಯ ನಿಯಮಗಳಡಿಯಲ್ಲಿ ಪುರುಷರಿಗೆ ಸಮಾನವಾದ ಹಕ್ಕುಗಳನ್ನು ಮಹಿಳೆಯರಿಗೆ ಖಾತರಿಗೊಳಿಸಲಾಗಿದೆ ಮತ್ತು ವಿಶೇಷ ನಿಯಮಗಳಡಿಯಲ್ಲಿ ಮಹಿಳೆಯರಿಗಾಗಿ ಕೆಲವು ಪ್ರತ್ಯೇಕವಾದ ಅನುಕೂಲಗಳನ್ನು ಒದಗಿಸುವ ಬಗ್ಗೆ ಮತ್ತು ವಿಶೇಷ ಹಕ್ಕುಗಳ ರಕ್ಷಣೆ ಬಗ್ಗೆ ಭರವಸೆ ನೀಡಲಾಗಿದೆ. ಸಂವಿಧಾನದ ಪೀಠಿಕಾಭಾಗವಾದ ಪ್ರಸ್ತಾವನೆ, ಮೂಲಭೂತ ಹಕ್ಕುಗಳು(ಭಾಗ-3) ಮತ್ತು ರಾಜ್ಯ ನಿರ್ದೇಶಕ ತತ್ವಗಳಲ್ಲಿ ಮಹಿಳೆಯರ ಹಕ್ಕುಗಳ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ.

ಪ್ರಜಾಸತ್ತಾತ್ಮಕ ರಾಜ್ಯಾಡಳಿತ ವ್ಯವಸ್ಥೆಯ ಒಳಗೆ ನಮ್ಮ ಕಾನೂನುಗಳು, ಅಭಿವೃದ್ಧಿ ನೀತಿಗಳು, ಯೋಜನೆಗಳು ಮತ್ತು ಕಾರ್ಯಕ್ರಮಗಳು ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಹಿಳೆಯರಿಗೆ ಸಮಾನಹಕ್ಕುಗಳನ್ನು ದೊರೆಯುವಂತೆ ಮಾಡುವ ಉದ್ದೇಶದ, ಅಂತಾರಾಷ್ಟ್ರೀಯ ಒಡಂಬಡಿಕೆಗಳಿಗೆ ಮತ್ತು ಮಾನವ ಹಕ್ಕುಗಳ ಮಾನದಂಡಗಳಿಗೆ ಭಾರತವು ಸಮ್ಮತಿಸಿದೆ. ಇವುಗಳಲ್ಲಿ ಪ್ರಮುಖವಾದುದೆಂದರೆ ಮಹಿಳೆಯರ ವಿರುದ್ಧದ ಎಲ್ಲಾ ರೀತಿಯ ತಾರತಮ್ಯದ ನಿವಾರಣೆಗಾಗಿ 1993 ರಲ್ಲಿ ಅಂಗೀಕರಿಸಿದ Convention on Elimination of All Forms of Discriminations Against Women (CEDAW)

**ಸಂವಿಧಾನಾತ್ಮಕ ಅವಕಾಶಗಳು**

ನಮ್ಮ ಸಂವಿಧಾನದ ಮೂಲಭೂತ ತತ್ವಗಳು, ಆಶಯಗಳು ಮತ್ತು ಸಿದ್ಧಾಂತಗಳನ್ನು ಸಾರಾಂಶರೂಪದಲ್ಲಿ ತಿಳಿಸುವ ಪ್ರಸ್ತಾವನೆ "ಭಾರತದ ಜನತೆಯಾದ ನಾವು..." ಎಂದು ಪ್ರಾರಂಭವಾಗುತ್ತದೆ. ನಾವು ಎಂದರೆ ಎಲ್ಲಾ ಜಾತಿ, ಧರ್ಮ, ವರ್ಗ, ಜನಾಂಗ ಮತ್ತು ಪುರುಷರು ಮತ್ತು ಮಹಿಳೆಯರು ಎಂಬ ಲಿಂಗಭೇದವಿಲ್ಲದೇ ಎಲ್ಲರೂ ಒಳಗೊಳ್ಳುತ್ತಾರೆ. ಇದರಂತೆ ಪುರುಷರು ಮತ್ತು ಮಹಿಳೆಯರಿಗೆ ಸಮಾನ ಸ್ಥಾನಮಾನ, ಅವಕಾಶಗಳು ಮತ್ತು ಘನತೆಯನ್ನು ಖಾತರಿಪಡಿಸಲಾಗಿದೆ. ಇದರಲ್ಲಿ ಕುಟುಂಬ, ಉತ್ತರಾಧಿಕಾರ, ಪೋಷಣೆಯ ಹಕ್ಕು, ಉದ್ಯೋಗದ ಹಕ್ಕು ಇತ್ಯಾದಿ ಮಹಿಳೆಯರ ಸ್ಥಾನಮಾನ, ಹಕ್ಕುಗಳು ಮತ್ತು ಘನತೆಯನ್ನು ಕಾಪಾಡುವ ಹಕ್ಕುಗಳ ಬಗ್ಗೆ ಕಾನೂನುಗಳು ರಚನೆಯಾಗಿ ಜಾರಿಗೆ ಬಂದಿವೆ.

ಸಂವಿಧಾನದ ಭಾಗ- 3 ರಲ್ಲಿರುವ ಕಾನೂನಿನಡಿ ಎಲ್ಲರೂ ಸಮಾನರು ಎಂಬ ಹಕ್ಕು ಸ್ವಾಭಾವಿಕ ನ್ಯಾಯವನ್ನಾಧರಿಸಿದೆ. ಸಂವಿಧಾನದ ಅನುಚ್ಛೇದ 14ರಂತೆ ಭಾರತದ ಭೌಗೋಳಿಕ ಪ್ರದೇಶದೊಳಗೆ ಎಲ್ಲರೂ ಸಮಾನರು, ಕಾನೂನಿನಂತೆ ಸಮಾನ ರಕ್ಷಣೆಯನ್ನು ನಿರಾಕರಿಸುವಂತಿಲ್ಲ ಎಂದು ಹೇಳಲಾಗಿದೆ. ಸಂವಿಧಾನದ ಅನುಚ್ಛೇದ 15ರಂತೆ ಧರ್ಮ, ಜನಾಂಗ, ಜಾತಿ, ಲಿಂಗ, ಹುಟ್ಟಿದ ಸ್ಥಳದ ಆಧಾರದ ಮೇಲೆ ಯಾವುದೇ ರೀತಿಯ ಪಕ್ಷಪಾತ ಮಾಡುವುದನ್ನು ನಿಷೇಧಿಸಿದೆ. ಇದು ಸಂವಿಧಾನದ ಮೂಲ ಗುಣಲಕ್ಷಣವಾಗಿದ್ದು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಯಾವುದೇ ತಿದ್ದುಪಡಿಯ ಮೂಲಕ ಇದನ್ನು ತೆಗೆದುಹಾಕಲು ಸಾಧ್ಯವಿಲ್ಲ. ಇದು ಭಾರತದ ಪೌರರಿಗೆ, ಪೌರರಲ್ಲದಿರುವವರಿಗೂ ಸಮಾನವಾಗಿ ಅನ್ವಯಿಸುತ್ತದೆ. ಮನೇಕಾಗಾಂಧಿ ವಿರುದ್ಧ ಕೇಂದ್ರ ಸರ್ಕಾರ –ಈ ಪ್ರಕರಣದಲ್ಲಿ ಸಂವಿಧಾನದ ಅನುಚ್ಛೇದ 21 ರಂತೆ ಖಾತರಿಗೊಳಿಸಲ್ಪಟ್ಟಿರುವ ಮೂಲಭೂತ ಹಕ್ಕಿನ ಉಲ್ಲಂಘನೆಯಾದ ಬಗ್ಗೆ ದಾಖಲಿಸಿದ ಪ್ರಕರಣದಲ್ಲಿ 'ಜೀವಿಸುವ ಹಕ್ಕು' ಕೇವಲ ಭೌತಿಕವಾಗಿ ಇರುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಅದರಲ್ಲಿ ಅಂತರ್ಗತವಾದ 'ಘನತೆಯಿಂದ ಬದುಕುವ ಹಕ್ಕು' ಸಹ ಎಂದು ಹೊಸ ದೃಷ್ಟಿಕೋನದ ತೀರ್ಪನ್ನು ನೀಡಲಾಗಿದೆ.

ಭಾರತದ ಸಂವಿಧಾನವು ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡುವುದರೊಂದಿಗೆ ಅವರಿಗೆ ಸಂಚಿತವಾಗಿ ಆಗಿರುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅನ್ಯಾಯಗಳನ್ನು ನಿವಾರಿಸಲು ಸಕಾರಾತ್ಮಕವಾಗಿ ಕಾನೂನುಗಳನ್ನು ರಚಿಸಿದೆ. (ಸಕಾರಾತ್ಮಕವಾಗಿ ಪಕ್ಷಪಾತದ ನಿಲುವುಗಳನ್ನು ತೆಗೆದುಕೊಂಡು) ಈ ಕಾನೂನುಗಳಲ್ಲಿ ಸಂವಿಧಾನದ ಅನುಚ್ಛೇದ 14, 15, 15(3), 16, 39(ಎ), 39(ಬಿ), 39(ಸಿ) ಮತ್ತು 42 ಪ್ರಮುಖವಾದವು.

* ಎಲ್ಲ ವ್ಯಕ್ತಿಗಳು ಕಾನೂನಿನ ದೃಷ್ಟಿಯಲ್ಲಿ (ಮಹಿಳೆಯರೂ ಸೇರಿದಂತೆ) ಸಮಾನರು (ಅನುಚ್ಛೇದ 14)
* ಧರ್ಮ, ಜನಾಂಗ, ಜಾತಿ, ಲಿಂಗ ಮತ್ತು ಹುಟ್ಟಿದ ಸ್ಥಳದ ಆಧಾರದ ಮೇಲೆ ತಾರತಮ್ಯ ಮಾಡುವುದನ್ನು ನಿಷೇಧಿಸಿದೆ. (ಅನುಚ್ಛೇದ 15(ಇ))
* ಮಹಿಳೆಯರು ಮತ್ತು ಮಕ್ಕಳ ಪರವಾಗಿ ವಿಶೇಷ ಅವಕಾಶಗಳನ್ನು ಮಾಡಿಕೊಡುವುದು (ಅನುಚ್ಛೇದ 15(3))
* ಎಲ್ಲಾ ಪೌರರಿಗೆ ಉದ್ಯೋಗ ಪಡೆಯಲು ಸಮಾನ ಹಕ್ಕು (ಅನುಚ್ಛೇದ 16)
* ಭಾರತದ ಎಲ್ಲಾ ಪ್ರಜೆಗಳಿಗೆ –ಪುರುಷರಿಗೆ ಮತ್ತು ಮಹಿಳೆಯರಿಗೆ– ಜೀವನೋಪಾಯಕ್ಕಾಗಿ ಸಾಕಷ್ಟು ಸಂಪನ್ಮೂಲಗಳು ಒದಗುವುದನ್ನು ನಿಶ್ಚಿತಗೊಳಿಸುವುದು. ಎಲ್ಲರಿಗೂ ನ್ಯಾಯ ಪಡೆಯುವುದಕ್ಕಾಗಿ ಉಚಿತ ಕಾನೂನಿನ ನೆರವನ್ನು ನೀಡುವುದು. (ರಾಜ್ಯ ನೀತಿ ನಿರ್ದೇಶಕ ತತ್ವಗಳು– ಅನುಚ್ಛೇದ 39(ಎ)) ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನ ಖಾತರಿಗೊಳಿಸುವುದು (ಅನುಚ್ಛೇದ 39(ಡಿ))
* ಕೆಲಸದ ಸ್ಥಳದಲ್ಲಿ ಮಾನವೀಯವಾದ ವಾತಾವರಣವನ್ನು ಖಾತರಿಪಡಿಸುವುದು, ಹೆರಿಗೆ ಸೌಲಭ್ಯಗಳನ್ನು ಖಾತರಿಗೊಳಿಸುವುದು, (ಅನುಚ್ಛೇದ 42)
* ದುರ್ಬಲವರ್ಗದವರ ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ವಿಶೇಷವಾದ ರಕ್ಷಣೆ ಒದಗಿಸುವುದು. ಎಲ್ಲಾ ರೀತಿಯ ಶೋಷಣೆಯಿಂದ ರಕ್ಷಣೆ ಒದಗಿಸುವುದು. (ಅನುಚ್ಛೇದ 46)

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

* ಜೀವನಮಟ್ಟವನ್ನು ಹೆಚ್ಚಿಸುವುದು ಮತ್ತು ಹೆಚ್ಚಿನ ಪೋಷಕಾಂಶಗಳು ದೊರೆಯುವಂತೆ ಮಾಡುವುದು (ಅನುಚ್ಛೇದ 47)
* ಭಾರತದ ಎಲ್ಲಾ ಜನರಲ್ಲಿ ಸಾಮರಸ್ಯ ಮತ್ತು ಭ್ರಾತೃತ್ವದ ಭಾವನೆಯನ್ನು ಉತ್ತೇಜಿಸುವುದು ಮತ್ತು ಮಹಿಳೆಯರ ಘನತೆಗೆ ಕುಂದಾಗದಂತೆ ನಡೆದುಕೊಳ್ಳುವುದು.(ಅನುಚ್ಛೇದ 51 (ಎ) )
* ಸ್ಥಳೀಯ ಸಂಸ್ಥೆಗಳಲ್ಲಿ –ಪಂಚಾಯತ್ ಹಾಗೂ ಮುನಿಸಿಪಾಲಿಟಿಗಳಲ್ಲಿ– ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಸ್ಥಾನಗಳು, ಅಧ್ಯಕ್ಷರ ಕಚೇರಿಯೂ ಸೇರಿದಂತೆ ಮೂರನೇ ಒಂದು ಭಾಗಕ್ಕೆ ಕಡಿಮೆ ಇಲ್ಲದಂತೆ ಮೀಸಲಿಡುವುದು.(ಅನುಚ್ಛೇದ 243 ಡಿ(3,4), 243 ಟಿ(3,4))

ಸಾಂವಿಧಾನಿಕ ಜನಾದೇಶವನ್ನು ಎತ್ತಿಹಿಡಿಯಲು, ಸಮಾನಹಕ್ಕುಗಳನ್ನು ಖಾತರಿಗೊಳಿಸಲು, ಸಾಮಾಜಿಕ ತಾರತಮ್ಯವನ್ನು ನಿವಾರಿಸಲು ಮತ್ತು ವಿವಿಧ ರೀತಿಯ ಹಿಂಸೆ ಮತ್ತು ದೌರ್ಜನ್ಯವನ್ನು ತಡೆಗಟ್ಟಲು, ವಿಶೇಷವಾಗಿ ಉದ್ಯೋಗಸ್ಥ ಮಹಿಳೆಯರಿಗೆ ಬೆಂಬಲ ನೀಡಲು ಹಲವಾರು ಕಾನೂನುಗಳನ್ನು ಜಾರಿಗೆ ತರಲಾಗಿದೆ. ಮಹಿಳೆಯರ ವಿರುದ್ಧದ ಅಪರಾಧಗಳಲ್ಲಿ ಅತ್ಯಾಚಾರ, ಕೊಲೆ, ದರೋಡೆ, ಮೋಸ ಮಾಡುವುದು ಇತ್ಯಾದಿ ಅಪರಾಧಗಳಿಗೆ ಭಾರತೀಯ ದಂಡಸಂಹಿತೆಯಲ್ಲಿ ಪರಿಹಾರ ಪಡೆಯಲು ಅವಕಾಶಗಳನ್ನು ಕಲ್ಪಿಸಲಾಗಿದೆ.

ಮಹಿಳೆಯರ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ವಿಶೇಷ ಕಾನೂನುಗಳನ್ನು ಜಾರಿಗೆ ತರಲಾಗಿದೆ. ಅವುಗಳಲ್ಲಿ ಉದ್ಯೋಗಿಗಳ ರಾಜ್ಯ ವಿಮೆ ಕಾಯಿದೆ–1948, ನೆಡುತೋಪು ಕಾರ್ಮಿಕರ ಕಾಯಿದೆ–1951, ಕುಟುಂಬ ನ್ಯಾಯಾಲಯ ಅಧಿನಿಯಮ–1954, ವಿಶೇಷ ವಿವಾಹ ಅಧಿನಿಯಮ–1954, ಹಿಂದೂ ವಿವಾಹ ಅಧಿನಿಯಮ–1955, ಹಿಂದೂ ಉತ್ತರಾಧಿಕಾರ ಅಧಿನಿಯಮ–1956, ಅನೈತಿಕ ವ್ಯವಹಾರ (ಪ್ರತಿಬಂಧ) ಅಧಿನಿಯಮ–1956, ಪ್ರಸೂತಿ ಸೌಕರ್ಯ ಅಧಿನಿಯಮ– 1961, ವಧು ವರದಕ್ಷಿಣೆ ನಿಷೇಧ ಅಧಿನಿಯಮ–1961, ವೈದ್ಯಕೀಯ ಗರ್ಭ ಸಮಾಪನ ಅಧಿನಿಯಮ–1971, ಸಮಾನ ಪರಿಶ್ರಮಧನ ಅಧಿನಿಯಮ–1976, ಬಾಲ್ಯವಿವಾಹ (ನಿಷೇಧ) ಅಧಿನಿಯಮ– 2006, ಮಹಿಳಾ ಅಸಭ್ಯ ರೂಪಣಾ (ನಿಷೇಧ) ಅಧಿನಿಯಮ–1986, ಸತಿಹೋಗುವಿಕೆ (ಪ್ರತಿಬಂಧ) ಅಧಿನಿಯಮ– 1987, ಕೌಟುಂಬಿಕ ದೌರ್ಜನ್ಯ ತಡೆ ಅಧಿನಿಯಮ– 2005, ವಿಧವಾ ವಿವಾಹ ಅಧಿನಿಯಮ– 1986 ಇವು ತುಂಬಾ ಮುಖ್ಯವಾದವು. ಈ ಅಧಿನಿಯಮಗಳಿಗೆಲ್ಲಾ ಕಾಲಕಾಲಕ್ಕೆ ತಿದ್ದುಪಡಿಗಳೂ ಆಗಿವೆ.

**ಮಹಿಳೆಯರಿಗಾಗಿ ಕೈಗೊಂಡ ವಿಶೇಷ ಉಪಕ್ರಮಗಳು**

* ಮಹಿಳೆಯರಿಗಾಗಿ ರಾಷ್ಟ್ರೀಯ ಆಯೋಗವನ್ನು 1992 ರಲ್ಲಿ ಸ್ಥಾಪಿಸಲಾಯಿತು.
* ಸಂವಿಧಾನಕ್ಕೆ 73 ನೇ ತಿದ್ದುಪಡಿ ತರುವ ಮೂಲಕ ಸ್ಥಳೀಯ ಸಂಸ್ಥೆಗಳಲ್ಲಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮಹಿಳೆಯರಿಗೆ ಮೀಸಲಾತಿಯನ್ನು 1992 ರಲ್ಲಿ ಖಾತರಿಗೊಳಿಸಿದೆ.

* ರಾಷ್ಟ್ರೀಯ ಹೆಣ್ಣು ಮಗುವಿನ ಕಾರ್ಯ ಯೋಜನೆ ( 1991–2000)
* ಮಹಿಳಾ ಸಬಲೀಕರಣಕ್ಕೆ ರಾಷ್ಟ್ರೀಯ ನೀತಿ, 2001

ಬಹಳ ಹಿಂದಿನಿಂದಲೂ ಎಲ್ಲಾ ಸಮಾಜದಲ್ಲಿಯೂ ಮಹಿಳೆಯರನ್ನು ಕೆಟ್ಟರೀತಿಯಲ್ಲಿ ನಡೆಸಿಕೊಳ್ಳುವುದು ಇದ್ದೇ ಇತ್ತು. ಇದರಿಂದ ಭಾರತ ದೇಶ ಏನೂ ಹೊರತಾಗಿಲ್ಲ. ಮಹಿಳೆಯರನ್ನು ಶಕ್ತಿ ಎಂದು ಎಲ್ಲಿ ಪೂಜೆ ಮಾಡುತ್ತಾರೋ ಅಲ್ಲಿಯೇ ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚಾಗಿರುವುದು ಒಂದು ವಿಪರ್ಯಾಸದ ಸಂಗತಿಯಾಗಿದೆ. ಆಕೆಯನ್ನು ಒಂದು ವಸ್ತುವಾಗಿ ಅಥವಾ ಗುಲಾಮಳಾಗಿ ನೋಡಲಾಗುತ್ತಿದೆ. ಮನೆಯ ಹೊರಗೆ ಮಾತ್ರ ಅವಳ ಘನತೆ ಮತ್ತು ಆತ್ಮಗೌರವಕ್ಕೆ ಕುಂದು ಬರುವಂತಹ ಘಟನೆಗಳು ನಡೆಯುತ್ತವೆ ಎಂದು ಹೇಳುವಂತಿಲ್ಲ, ಮನೆಯ ಒಳಗೂ ಸಹ ಅವಳು ಹಿಂಸೆ ಮತ್ತು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾಳೆ. ಗಂಡಸರ ಕಾಮತೃಪ್ತಿಗಾಗಿ ಮತ್ತು ಮಕ್ಕಳನ್ನು ಹೆರುವ ವಸ್ತುವಾಗಿ ಅವಳನ್ನು ನಡೆಸಿಕೊಳ್ಳಲಾಗುತ್ತಿದೆ. ಮಹಿಳೆಯರು ನಿಜವಾಗಿಯೂ ತುಳಿತಕ್ಕೆ ಒಳಗಾದವರು. ನಮ್ಮ ದೇಶದ ಮಹಿಳೆಯರು ಎರಡು ಹಂತಗಳಲ್ಲಿ ತಾರತಮ್ಯಕ್ಕೆ ಒಳಗಾಗುತ್ತಾರೆ. ಮೊದಲನೆಯದಾಗಿ ಲಿಂಗತಾರತಮ್ಯ, ಎರಡನೆಯದಾಗಿ ಕಡುಬಡತನ. ಮಹಿಳೆಯರು ಆರ್ಥಿಕ ಸಂಪನ್ಮೂಲಗಳಿಂದ ವಂಚಿತರಾಗಿರುತ್ತಾರೆ ಮತ್ತು ಅವರ ಜೀವನ ನಿರ್ವಹಣೆಗಾಗಿ ಗಂಡಸರನ್ನು ಅವಲಂಬಿಸಿರುತ್ತಾರೆ. ಹೆಚ್ಚಿನ ಕುಟುಂಬಗಳಲ್ಲಿ ಮಹಿಳೆಯರ ಕೆಲಸ ಕೇವಲ ಮನೆಯೊಳಗಿನ ಕೆಲಸಗಳಿಗೆ ಸೀಮಿತವಾಗಿರುತ್ತದೆ. ಈ ಮನೆವಾರ್ತೆ ನಡೆಸುವ ಕೆಲಸಗಳಿಗೆ ಮನೆಯವರು ಅವಳನ್ನು ಗುರುತಿಸುವುದಿಲ್ಲ, ಗೌರವಿಸುವುದಿಲ್ಲ. ಅದನ್ನು ಅವಳು ವೇತನರಹಿತವಾಗಿ ಮಾಡುತ್ತಾಳೆ. ಈ ಆಧುನಿಕ ಕಾಲದಲ್ಲಿ ಮಹಿಳೆಯರು ಉದ್ಯೋಗಕ್ಕೆ ಹೋಗುತ್ತಿದ್ದರೂ ಅವರು ಎರಡು ರೀತಿಯ ಜವಾಬ್ದಾರಿಗಳನ್ನು ಹೊರುತ್ತಾರೆ. ಮನೆಯ ಕೆಲಸವನ್ನೂ ಮಾಡುತ್ತಾರೆ. ಉದ್ಯೋಗದ ಸ್ಥಳದಲ್ಲಿ ಸಹ ಪುರುಷರಿಗೆ ಸರಿಸಮನಾಗಿ ಕೆಲಸ ಮಾಡುತ್ತಾರೆ. ಆದರೆ ಕೆಲಸದಿಂದ ವಜಾ ಮಾಡುವ ಸಂದರ್ಭ ಬಂದಾಗ ಅವಳನ್ನೇ ಮೊದಲು ಪರಿಗಣಿಸುತ್ತಾರೆ. ಏಕೆಂದರೆ ಮಹಿಳೆ ಸಹೋದ್ಯೋಗಿಗಿಂತ ಕಡಿಮೆ ಉತ್ಪಾದನೆ ಮಾಡುವವಳು ಎಂದು ಪರಿಗಣಿಸಲ್ಪಟ್ಟಿದ್ದಾಳೆ. ಕುಟುಂಬದೊಳಗಾಗಲೀ ಸಮಾಜದಲ್ಲಾಗಲೀ ಅವಳ ಸ್ಥಾನ ಕಡಿಮೆಯದೆಂದು, ಮಾನ್ಯತೆ ಇಲ್ಲದ್ದೆಂದು ತಿಳಿಯಲಾಗುತ್ತಿದೆ. ತೊಟ್ಟಿಲಿನಿಂದ ಸ್ಮಶಾನದವರೆಗೂ ಹೆಣ್ಣುಮಕ್ಕಳು ತಾರತಮ್ಯ, ಕೌಟುಂಬಿಕ ಹಿಂಸೆ ಮತ್ತು ಉದ್ಯೋಗಸ್ಥಳದಲ್ಲಿನ ಹಿಂಸೆ ಇತ್ಯಾದಿ ಕೇಡಿನ ಕೃತ್ಯಗಳಿಗೆ ಬಲಿಯಾಗುತ್ತಲೇ ಇರುತ್ತಾರೆ.

*(ಸಂಗ್ರಹಾನುವಾದ: **ಪದ್ಮಾಕ್ಷಿ**)*

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಪ್ರತಿಕ್ರಿಯೆಗಳು

## ಪಾವಿತ್ರ್ಯದ ಭಾರ: ವೃಂದಾ ಹೆಗಡೆ, ಸಾಗರ

ಬೆಳಗ್ಗೆಯಿಂದ ಎಲ್ಲ ವಿಸ್ತಾರವಾಗಿ, ಮುಖ್ಯವಾಗಿ ಸಂವಿಧಾನದ ಬಗ್ಗೆ ಮಾತಾಡಿದ್ರು. ಸಂವಿಧಾನದ ಬಗ್ಗೆ ಮಾತಾಡ್ತಾ ನಮ್ಮನ್ನ ವಿಚಾರ ಮಾಡೋ ಥರದಲ್ಲಿ ಎಷ್ಟೋಂದು ವಿಷಯಗಳನ್ನು ಹೇಳಿದ್ರು ಅಂತ ನಾನಂದುಕೊಂಡಿದ್ದೇನೆ. ಅದು ನನಗೂ ಬಿಟ್ಟಿದ್ದು ನಿಮಗೂ ಬಿಟ್ಟಿದ್ದು. ವಿಚಾರ ಮಾಡ್ತಾ ಮುಂದುವರೆಯೋಣ.

ಈಗ ಈ ಗೋಷ್ಠಿಗೆ ಕೊಟ್ಟಿರುವ ವಿಷಯ ಅಂದ್ರೆ, ಧರ್ಮ ಮತ್ತು ಸಂವಿಧಾನ. ರೇಷ್ಮಾ ಮೇಡಂ ಹೇಳಿದ್ರು, ಯಾವುದು ಧರ್ಮ ಅಂತ ನೋಡ್ಕೋಬೇಕು ಅಂತ. ಅವರು ಮಾತಾಡೋದನ್ನು ಕೇಳ್ತಾ ಹೋದ ಹಾಗೆ ಧರ್ಮದ ಬಗ್ಗೆ ಮಾತಾಡ್ಬೇಕಾದ್ರೆ ಏನೋ ಒಂದು ಹೆದರಿಕೆ ಇದೆ. ಸಾರ್ವಜನಿಕವಾಗಿ ಒಂದು ಧರ್ಮದ ಬಗ್ಗೆ ಮಾತಾಡ್ಬೇಕಾದ್ರೆ ಸ್ವಲ್ಪ ಅಂಜಿಕೊಳ್ತೀವಿ. ಅದೇ ರೀತಿ ಈ ಸಂವಿಧಾನದ ಬಗ್ಗೆ ಮಾತಾಡೋಕೂ ಅಂಜಿಕೋಬೇಕಾದ ಪರಿಸ್ಥಿತಿ ಈಗ ಬಂದಿದೆ. ಈ ಧರ್ಮ ಅಂದ್ರೇನು, ಸಂವಿಧಾನ ಅಂದ್ರೇನು ಅಂತ ನಾನು ಯೋಚನೆ ಮಾಡ್ದಾಗ, ಮೂಲ ಆಶಯ ಎರಡರದ್ದೂ ಒಂದೇ ಅಂತೆ ಅನ್ನಿಸ್ತು. ಒಂದು ಜೀವವನ್ನು ಆರೋಗ್ಯದಿಂದಿಟ್ಟುಕೊಳ್ಳಲು ನಾವು ದಿನಂಪ್ರತಿ ಹೇಗೆ ಆಹಾರ, ವ್ಯಾಯಾಮ, ಶುಚಿ ಮುಂತಾದವುಗಳಿಗೆ ಕೆಲವು ನಿಯಮಗಲನ್ನು ಹಾಕಿಕೊಳ್ಳುತ್ತೀವೋ, ಹಾಗೆ ಸಮಾಜವನ್ನು ಸ್ವಾಸ್ಥ್ಯದಿಂದಿಡಲು ಧರ್ಮ ಹಾಗೇ ಸಂವಿಧಾನ ಹುಟ್ಟುಹಾಕಿಕೊಡಿದ್ದೇವೆ. ಸಂವಿಧಾನ ಹೊಸದು. ಧರ್ಮ ಅನ್ನೋದು ಸ್ವಲ್ಪ ಹಳೇದಾಗಿದೆ. ಆದರೆ ನಾವು ಎರಡನ್ನೂ ಸರಿಯಾಗಿ ಉಪಯೋಗಿಸ್ಕೊತಾ ಇಲ್ಲ. ಸಂವಿಧಾನ ಅಂದ್ರೆ ಪವಿತ್ರ, ಧರ್ಮ ಅಂದ್ರೆ ಪವಿತ್ರ ಅಂತ ಹೇಳ್ಬಿಟ್ಟು ಒಂದು ಮಡಿಗಂಟು ತರ ಕಟ್ಟಿ ಏರಿಸಿಟ್ಟುಬಿಟ್ಟಿದೀವಿ. ಅವುಗಳನ್ನ ಪವಿತ್ರ ಅಂತ ಹೇಳೋದರ ಮೂಲಕ ಬಹಳ ಜಟಿಲಗೊಳಿಸ್ತಾ ಇದೀವಿ. ಅದನ್ನ ಮುಟ್ಟಕ್ಕೆ ಹೋಗಲ್ಲ. ಒಂಥರಾ ಅನ್‌ಟಚಬಲ್. ಯಾವುದನ್ನೋ ಕೀಳು ಎಂದು ಅನಟಚಬಲ್ ಅಂತ ಮಾಡಿದೀವಲ್ಲ, ಹಾಗಲ್ಲ, ಇದು ಉನ್ನತ ,ಶ್ರೇಷ್ಠ ಎಂಬ ಕಾರಣಕ್ಕಾಗಿ ಅನಟಚಬಲ್. ಅದು ನಮಗಿಂತ ಬಹಳ ಶ್ರೇಷ್ಠ ಎಂಬ ಭಾವನೆಯಿಂದ ನಮಗೆ ಎಟುಕಲಾರದ್ದು ಎಂದುಕೊಂಡು ಎಕ್ಸ್‌ಕ್ಲೂಡ್ ಮಾಡಿರುವುದು. ಪವಿತ್ರ ಅನ್ನೋ ಕಾರಣಕ್ಕೆ ಮುಟ್ಟಬಾರದು. ಅದನ್ನ ಅಲ್ಲಿಟ್ಟುಬಿಟ್ಟು ನಾವು ಯಾವ ಥರ ಅದನ್ನ ಉಪಯೋಗಿಸ್ತಾ ಇದೀವಿ ಅಂದರೆ, ಧರ್ಮವನ್ನು ಕಟ್ಟಳೆಗಳ ಮೂಲಕ, ಸಂವಿಧಾನವನ್ನು ಕಾನೂನಿನ ಮೂಲಕ ದುರ್ಬಳಕೆ ಮಾಡುತ್ತ ಮಹಿಳೆಯರಿಗೆ, ದಲಿತರಿಗೆ ಹಿಂಸೆ ಕೊಡ್ತಾನೆ ಇದಾರೆ.

ಯಾವ ಧರ್ಮಕ್ಕೂ ಸೇರದ, ಯಾವ ಜಾತಿಗೂ ಸೇರದ, ಯಾವ ಸಂವಿಧಾನದಲ್ಲೂ ಸೇರದ ಅತ್ಯಂತ ಸೆಕ್ಯುಲರ್ ಅಂಶ ಅಂತಂದ್ರೆ, ಅದು ಮಹಿಳಾ ದೌರ್ಜನ್ಯ. ಯಾವ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಜಾತಿಗೂ ಸೇರಿದ್ದಲ್ಲ, ಯಾವ ಧರ್ಮಕ್ಕೂ ಸೇರಿದ್ದಲ್ಲ, ಯಾವ ಸಂವಿಧಾನಕ್ಕೂ ಸೇರಿದ್ದಲ್ಲ. ಸೇರಿದ್ದಲ್ಲ ಅಂದ್ರೆ, ಇನ್ವಿಸಿಬಲ್ ಅಂತ. ಎಲ್ಲಾ ಧರ್ಮದಲ್ಲಿ, ಎಲ್ಲಾ ಜಾತಿಯಲ್ಲಿ, ಎಲ್ಲಾ ಕಾನೂನು ಕಟ್ಟಳೆಗಳಲ್ಲಿ ಇದ್ದೂ ಕಾಣದಿರುವುದು ಅಂದರೆ, ಮಹಿಳಾ ದೌರ್ಜನ್ಯ. ನಮ್ಮದೇಶದ ಸಂವಿಧಾನ ನಿಜಾರ್ಥದಲ್ಲಿ ಪವಿತ್ರವಾದ್ದು. ಏಕೆಂದರೆ ಮಹಿಳೆಯರನ್ನು, ದಲಿತರನ್ನು, ಎಲ್ಲರನ್ನೂ ಜೀವಿಗಳೆಂದು ಪರಿಗಣಿಸುತ್ತದೆ. ಆದರೆ ಕಾನೂನು? ಏಸಿಡ್ ಅಟ್ಯಾಕ್‌ಆದ್ರೆ, ಅಪರಾಧಿಗಳಿಗೆ ಯಾವ ಶಿಕ್ಷೆ ಎಂದು ಕಾನೂನು ತಜ್ಞರು ವರ್ಷಾನುಗಟ್ಟಲೆ ತಡಕಾಡುತ್ತಾರೆ. ಅಂದರೆ ಮಹಿಳಾ ದೌರ್ಜನ್ಯ ಎಂಬುದು ಕಂಡರಿಯದ ಕತೆಯೇ? ಯಾಕೆ ಸಂವಿಧಾನ ಅಂತ ಮತ್ತೆ ಮತ್ತೆ ಹೇಳ್ತಾ ಇದೀನಿ ಅಂದ್ರೆ, ಸಂವಿಧಾನವನ್ನ ಯಾವ ಥರದಲ್ಲಿ ಅಳವಡಿಸಿಕೊಳ್ತಾ ಇದೀವಿ ಅಂದ್ರೆ ಈಗಾಗಲೇ ಹೇಳಿದ ಹಾಗೆ ಕಾನೂನಿನ ಮೂಲಕ. ನಮ್ಮ ಸಂವಿಧಾನ ಅಥವಾ ಬೇರೆ ಸಂವಿಧಾನಗಳಿಗೆ ಹೋಲಿಸಿದರೆ, ಸೌತ್ ಆಫ್ರಿಕಾದ ಸಂವಿಧಾನ ತುಂಬಾ ಯಂಗ್. ಅದು ಏನಾಗಿದೆ ಅಂತ ಈಗಾಗಲೇ ಗೊತ್ತಿರಬಹುದು, ಗುಪ್ತ ಅನ್ನುವ ಒಂದು ಫ್ಯಾಮಿಲಿ, ಇಲ್ಲಿಂದ ಸೌತ್ ಆಫ್ರಿಕಾಕ್ಕೆ ವಲಸೆ ಹೋಗಿ, ಅಲ್ಲಿನ ಆರ್ಥಿಕತೆಯನ್ನ ಹಾಳುಮಾಡುವುದರ ಜೊತೆಗೆ, ಅಲ್ಲಿಯ ಪ್ರೆಸಿಡೆಂಟನ್ನ ಪದಚ್ಯುತಗೊಳಿಸಕ್ಕೆ ಕೂಡ ಕಾರಣರಾದರು. ಅಲ್ಲಿ ಹಾಗಾದರೆ ಸಂವಿಧಾನ ಯಾವ ಥರ ಕೆಲಸ ಮಾಡ್ತು? ಅವರದನ್ನ ಉಳಿಸಿಕೋಬಹುದಿತ್ತು. ಯಾವ ಥರದ ಪ್ರೆಸಿಡೆಂಟನ್ನು ನಮ್ಮ ದೇಶಕ್ಕೆ ಕೊಡಬಹುದಿತ್ತು ಅಂತ ಕೂಡ ಯೋಚನೆ ಮಾಡ್ಬೋದಿತ್ತು ಅಲ್ವಾ.

ಆಮೇಲೆ ನಾನೊಬ್ಬಳು ಅತಿಥಿ ಉಪನ್ಯಾಸಕಿ. ನಮಗೆ ಸಮಾನ ಕೆಲಸ, ಸಮಾನ ವೇತನ ಅಂತ ಕಾನೂನಿದೆ ಅಂತ ಹೇಳ್ತೀವಿ. ಆ ಕಾನೂನಿನಡಿಯಲ್ಲಿ ಈ ಅತಿಥಿ ಉಪನ್ಯಾಸಕಿಯರಿಗೆ ಹೆರಿಗೆ ರಜೆ ಇಲ್ಲ. ಹಾಗಾದ್ರೆ ಯಾವುದು ಸಮಾನ ಕೆಲಸ? ಯಾವುದು ಸಮಾನ ವೇತನ? ಕಾನೂನು ಏನು ಮಾಡ್ತಾ ಇದೆ? ಕಾನೂನಿನ ಬಗ್ಗೆ ಈಗಾಗಲೇ ತುಂಬಾನೇ ಹೇಳಿದ್ದಾರೆ. ನಾನು ಮುಂದುವರೆಸೋಕ್ಕೆ ಹೋಗಲ್ಲ.

ಇನ್ನೊಂದು ವಿಷಯ ಏನಂದ್ರೆ ಪುರುಷಪ್ರಾಧಾನ್ಯ ಅನ್ನೋದು ಯಾರಿಗೂ ಒಳ್ಳೇದಲ್ಲ. ಹೆಂಗಸರಿಗೂ ಒಳ್ಳೇದಲ್ಲ ಮಾತ್ರವಲ್ಲ, ಗಂಡಸರಿಗೂ ಒಳ್ಳೇದಲ್ಲ ಅಂತ ಮನೀಶಾ ಗುಪ್ತೆ ಹೇಳಿದರು. ಇದು ನಿಜ. ಯಾಕೇಂದ್ರೆ, ಮೊನ್ನೆ ಮೊನ್ನೆ ನಾನು ಫೇಸ್ಬುಕ್‌ನಲ್ಲಿ ಒಂದು ಸ್ಟೇಟಸ್ ಹಾಕ್ದೆ. ಹೆಣ್ಣಿಗೆ ನೀನು ಹೆಣ್ಣಲ್ಲ ಅಂತ, ನೀನು ಬಂಜೆ ಅಂತ ಜರಿಯೋದು, ಬಾಳ ಹಿಂದೆ ಆಗ್ಹೋಯ್ತು. ಆಗ್ಲೂ ಕೂಡ, ಮನಸ್ಸಿನಾಳದೊಳಗೆ ಹೆಣ್ಣು ಖುಷಿಪಡ್ತಾಳೆ. ಯಾಕೆ ಖುಷಿ ಪಡ್ತಾಳೆ ಅಂದ್ರೆ, ಹೆಣ್ಣು ಅಂದ್ರೇನೇ ಅದೊಂದು ಬೈಗುಳ ಶಬ್ದ. ಅದಕ್ಕೆ ನೀನು ಹೆಣ್ಣಲ್ಲ ಅಂದ್ರೆ ಖುಷಿಯಾಗಿಬಿಡ್ತಾಳೆ. ಅದೇ ಗಂಡಿಗೆ ನೀ ಗಂಡಲ್ಲ, ನೀನೂ ಗಂಡ್ಸಾ ಅಂತ ಕೇಳಿದ್ರೆ, ಏನನ್ನತ್ತೆ? ತಡ್ಕೋತಾರಾ ಅವರು? ಇಲ್ಲ. ಇದು ತಡ್ಕೊಳೋದೇ ಇರೋದ್ರಲ್ಲೂ ಕೂಡ ಈ ಪುರುಷ ಪ್ರಧಾನ ವ್ಯವಸ್ಥೆ ಕೆಲಸ ಮಾಡತ್ತೆ. ಅದು ಅವರನ್ನ ತಾನು ಗಂಡು, ತಾನು ಗಂಡಾಗ್ಲೇಬೇಕು ಅನ್ನುವ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಟೆನ್ಶನ್ ಕೂಡಾ ಹುಟ್ಟು ಹಾಕಿದೆ. ಇದು ಸಾಮಾನ್ಯವಾಗಿ ಎಲ್ಲೂ ಚರ್ಚಿತ ಆಗೋದಿಲ್ಲ. ಆದ್ರೆ ಅದೇನೇನನ್ನ ಹುಟ್ಟುಹಾಕುತ್ತೋ ಅದರ ಎಲ್ಲ ಎಫೆಕ್ಟು ಹೆಣ್ಣಿನ ಮೇಲೆ ಆಗ್ತಾ ಹೋಗತ್ತೆ. ಆಮೇಲೆ ಈಗ ಇತ್ತೀಚೆಗೆ ಒಂದು ಫೇಸ್ಬುಕ್ನಲ್ಲಿ ಬಂತು. ಅಂಡಾಣು ಬ್ಯಾಂಕ್ ಅಂತ ಮಾಡ್ತಾ ಇದಾರೆ ಅಂತ. ವೀರ್ಯಾಣು ಬ್ಯಾಂಕ್ ಕೇಳಿದ್ವಿ, ಆದ್ರೆ ಅಂಡಾಣು ಬ್ಯಾಂಕ್ ಕೇಳಿರಲಿಲ್ಲ. ಮಹಿಳೆಯರು ಅಂಡಾಣು ದಾನ ಮಾಡೋದಕ್ಕೆ ಸಿಕ್ಕಾಪಟ್ಟೆ ಮೆಡಿಕಲ್ ಸಫರಿಂಗ್ ಅನ್ನ ಅನುಭವಿಸಬೇಕಾಗುವಂಥ ಪ್ರೆಷರ್ ಇರತ್ತೆ. ಅಂಡಾಣು ಪ್ರೊಡ್ಯೂಸ್ ಮಾಡೋ ತರದಲ್ಲಿ ಎಷ್ಟೆಷ್ಟೋ ಇಂಜೆಕ್ಷನ್‌ಗಳು, ಮಾತ್ರೆಗಳು ಇಂತವನ್ನೆಲ್ಲ ಕೊಟ್ಟು, ಇಡೀ ದೇಹವೇ ಹಾಳಾಗಿ ಹೋಗುವಂತ ವಾತಾವರಣ ಇರತ್ತೆ. ಅಷ್ಟಾದರೂ ಕೂಡ, ಆ ಅಂಡಾಣುವನ್ನ ತಗೊಳೋರ್ಯಾರು? ತಮಗೆ ಮಕ್ಕಳಾಗಲ್ಲ ಅನ್ನೋರು. ಮಕ್ಕಳಾಗದೇ ಇರೋರು ಎಷ್ಟೊಂದು ಅನಾಥ ಮಕ್ಕಳಿದಾರೆ, ಬಡ ಮಕ್ಕಳಿದ್ದಾರೆ, ಅವರನ್ನ ತಗೊಳೋ ಮನಸ್ಸು ಮಾಡೋದೇ ಇಲ್ಲ ನೋಡಿ. ಜಾತಿ, ವರ್ಗ ಮತ್ತಿನ್ನೇನೋ ಎಲ್ಲ ಕೆಲಸ ಮಾಡತ್ತೆ.

ಧರ್ಮ ಮತ್ತೆ ಸಂವಿಧಾನ ಈ ಎರಡನ್ನೂ ಮಡಿಗಂಟಾಗಿ ಇಟ್ಟಿದೀವಿ. ಅದನ್ನ ಕೆಳಗಿಳಿಸಿಕೊಳ್ಳುವ ಪ್ರಯತ್ನ ಮಾಡ್ತಾ ಹೋಗೋಣ.

## ಸಂವಿಧಾನ ಎಂಬ ಚೇತನ: ನಸ್ರೀನ್, ಹೊಸಪೇಟೆ

ಧರ್ಮ ಇಲ್ಲ, ಜಾತಿ ಇಲ್ಲ, ಅಂತ ಹೇಳ್ತೀವಿ. ನಾವು ಜಾತ್ಯತೀತರು ಹೌದು. ಆದರೆ ಎಲ್ಲೋ ಒಂದುಕಡೆ ಈ ಧರ್ಮ, ಜಾತಿಗಳ ಐಡೆಂಟಿಟಿಗಳೊಳಗೆ ನಾವು ಮಹಿಳೆಯರು ಸಿಕ್ಕಾಕೊಂಡಿದೀವಿ ಅಂತ ಅನ್ನಸ್ತೆ. ಆದರೆ ಈಗ ಕೇರಳದ ಹಾದಿಯಾ ಎಂಬ ಮಹಿಳೆಯ ಪರವಾಗಿ ಸುಪ್ರೀಂಕೋರ್ಟ್ ಏನು ತೀರ್ಪು ಕೊಡ್ತು ಅದನ್ನ ನೋಡಿ ನಮಗನ್ನಿಸುತ್ತೆ ಧರ್ಮಗಳನ್ನ ಮೀರಿ ಕೂಡ ಒಂದು ಆಯ್ಕೆ ಸ್ವಾತಂತ್ರ್ಯವನ್ನ ಪಡಕೊಳ್ಳೋಕೆ ಸಾಧ್ಯ ಆಗಿದೆ, ಅದೂ ಈಗ ಸಂವಿಧಾನದ ಮೂಲಕ ಮಾತ್ರ ಸಾಧ್ಯ ಆಗಿದೆ. ಅದೇ ಹಾದಿಯಾ ಇಸ್ಲಾಂ ಧರ್ಮದ ನಿಯಮಗಳನ್ನ ಇಟ್ಟುಕೊಂಡು ಧರ್ಮದ ಆಧಾರದಲ್ಲಿ ಹೋಗಿ ನ್ಯಾಯ ಕೇಳಿದ್ರೆ ಸಿಗುತ್ತಿತ್ತು ಅಂತ ಗಟ್ಟಿಯಾಗಿ ನಾನು ಹೇಳಕ್ಕಾಗಲ್ಲ. ಧರ್ಮ ಮತ್ತು ಇವತ್ತಿನ ಪ್ರಚಲಿತ ಸಾಮಾಜಿಕ ವಿಷಯಗಳು ಮುಖಾಮುಖಿ ಆದಾಗ ನಾವು ಯಾವುದನ್ನ ಚಾಯ್ಸ್ ಮಾಡ್ಕೊತೀವಿ? ಮಹಿಳಾ ಹೋರಾಟಗಾರ್ತಿಯಾಗಿ ನಾವು ಧರ್ಮವನ್ನ ಇಟ್ಟುಕೊಂಡು ಹೋರಾಟ ಮಾಡಕ್ಕೆ ಆಗತ್ತಾ ಇವತ್ತಿನ ಭಾರತದ ಸಂದರ್ಭದಲ್ಲಿ? ಅಥವಾ ಇಲ್ಲಿನ ಸಂವಿಧಾನ ನಮಗೆ ಹೋರಾಟ ಮಾಡಕ್ಕೆ ಒಂದು ಪ್ರೇರಣೆಯನ್ನ ಅಥವಾ ಒಂದು ಸ್ಪೇಸ್‌ನ ಕೊಡುತ್ತಾ ಅನ್ನೋದನ್ನ ಯೋಚ್ನೆ ಮಾಡ್ಬೇಕಾಗಿದೆ ಇವತ್ತು. ಅದು ಇಸ್ಲಾಮಿಗೆ ಮತಾಂತರವಾದ ಹಿಂದೂ ಮಹಿಳೆ ಹಾದಿಯಾ ಇರಬಹುದು, ಒಬ್ಬ ಮುಸ್ಲಿಂ ಮಹಿಳೆಯೇ ಇರಬಹುದು, ಅಥವಾ ಬೇರೆ ಧರ್ಮದ ಮಹಿಳೆಯರು ಧರ್ಮದ ಒಳಗಿನ ಪದ್ಧತಿಗಳಿಂದ ಅಥವಾ ಅನಾಚಾರಗಳಿಂದ ಸಿಡಿದೆದ್ದು, ಇವತ್ತು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ನಿಂತುಕೊಂಡು ಪ್ರಶ್ನೆ ಮಾಡೋಕೆ ಸಾಧ್ಯ ಆಗಿದ್ದು ನಮ್ಮ ಸಂವಿಧಾನದಿಂದ ಅಂತ ನನಗೆ ಅನ್ಸುತ್ತೆ.

ನಾವು ಹೇಳಬಹುದು, ಸುಮಾರು ಧರ್ಮಗ್ರಂಥಗಳು ಇವತ್ತಿನ ರೋಗಗ್ರಸ್ತ ವ್ಯವಸ್ಥೆಯನ್ನ ಖಂಡಿಸುತ್ತೆ, ಕನಸುಗಳನ್ನ ಬಿತ್ತಿದೆ ಅಂತ. ಬೇರೆ ಬೇರೆ ಧರ್ಮಗಳು ಬೇರೆ ಬೇರೆ ಥರ ಹೇಳಿರಬಹುದು. ಆದರೂ ಕೂಡ ನಮ್ಮ ಪಟ್ಟಭದ್ರ ಹಿತಾಸಕ್ತಿಗಳು ಅದನ್ನ ಕ್ಲೈಮ್ ಮಾಡಕ್ಕೆ ಬಿಡ್ತಾ ಇಲ್ವೆನೋ ಅಂತ. ಹೇಗೆ ಧರ್ಮಗಳನ್ನ, ಸಂಪ್ರದಾಯಗಳನ್ನ ಹೈಜಾಕ್ ಮಾಡಿಕೊಂಡು ಧರ್ಮದ ಚೌಕಟ್ಟಿನೊಳಗೇ ಹೇಗೆ ಹೇರಲಾಗ್ತಾ ಇದೆ, ಹೇಗೆ ಅಲ್ಲಿ ಮಹಿಳೆಯರಿಗೆ ಹಕ್ಕೇ ಇಲ್ಲ ಅಂತ ಹೇಳ್ತಾರೆ. ಧರ್ಮದಲ್ಲಿ ಮಹಿಳೆಯರಿಗೆ ಹಕ್ಕುಗಳಿದ್ದರೂ ಕೂಡ ಅದನ್ನ ಕ್ಲೈಮ್ ಮಾಡಕ್ಕೆ ಇವತ್ತು ತುಂಬ ಕಷ್ಟ ಪಡಬೇಕಾಗಿದೆ. ನಮ್ಮ ಸಂಘಟನೆಯಿಂದ ಈ ವರ್ಷ ನಾವು ಒಂದು ದೊಡ್ಡ ಹೋರಾಟದಲ್ಲಿ ಗೆದ್ದಿದ್ದೀವಿ. ಸುಪ್ರೀಂಕೋರ್ಟ್ ಮೂಲಕ ಸಾಧ್ಯ ಆಗಿದೆ. ಅದರಲ್ಲೂ ತುಂಬ ರಾಜಕೀಯ ಆಗಿದೆ. ಏಕೆ ಅಂದ್ರೆ ಧರ್ಮ ಅಂದ್ರೆ, ಮತ್ತೆ ಅಲ್ಲಿ ಅಧಿಕಾರ ಸಂರಚನೆಗೆ ಲಿಂಕ್ ಆಗ್ತಾ ಇರತ್ತೆ. ಮತ್ತೆ ಅಲ್ಲಿ ಮಹಿಳಾ ಹೋರಾಟಗಳನ್ನ ಹತ್ತಿಕ್ಕಲಾಗ್ತಾ ಇದೆ. ಧರ್ಮ ಅನ್ನೋದು ಆಳುವ ವರ್ಗದಿಂದ ಬಳಸಲ್ಪಡ್ತಾ ಇದೆ. ಆದರೆ ಮತ್ತೆ ನಮ್ಮ ಸಂವಿಧಾನದಿಂದ ನಮಗೆ ಭರವಸೆ ಹುಟ್ಟುತ್ತೆ ಅನ್ಸತ್ತೆ.

ಕೆಲವು ಸಂದರ್ಭಗಳಲ್ಲಿ ಸಂವಿಧಾನದ ಅಡಿಯಲ್ಲಿ ಕೆಲವು ಹೋರಾಟಗಳಲ್ಲಿ ಗೆದ್ದು ಬಂದ್ರೂ ಕೂಡ ಮತ್ತೆ ಅಲ್ಲಿ ಪಟ್ಟಭದ್ರ ಹಿತಾಸಕ್ತಿಗಳು, ಅಧಿಕಾರದಿಂದ ಮತ್ತೆ ಹೇಗೆ ನಮ್ಮನ್ನ ಸಿಕ್ಕಿಹಾಕಿಸ್ತಾರೆ ಅಂದ್ರೆ; ಮುಸ್ಲಿಂ ಮಹಿಳೆಯರು ಹೋರಾಡ್ತಾರೆ ಅಂದ್ರೆ ಅದೊಂದು ಬಹಳ ದೊಡ್ಡ ಬೆಳವಣಿಗೆ. ತುಂಬ ವರ್ಷಗಳಿಂದ ಬಹಳ ದೊಡ್ಡ ಮಟ್ಟದಲ್ಲಿ ಹೋರಾಟ ನಡೆಸ್ತಾ ಇದ್ರೂ ಕೂಡ, ಇವತ್ತಿನ ರಾಜಕೀಯ ವ್ಯವಸ್ಥೆಯಲ್ಲಿ ಮತ್ತೆ ಅದು ಬಲಿಯಾಯಿತು. ಮತ್ತೆ ಅಲ್ಲಿ ಧಾರ್ಮಿಕ ಮೂಲಭೂತವಾದಿಗಳನ್ನು ಬಳಸಿಕೊಂಡು ಎರಡೂ ರೀತಿಯ ಮೂಲಭೂತವಾದಿಗಳಿಂದ ಅಲ್ಲಿ ಗೊಂದಲಗಳನ್ನು ಮೂಡಿಸ್ತು. ಆದರೂ ಕೂಡ ಇತಿಹಾಸವನ್ನು ನಾವು ಮಹಿಳೆಯರು ಸೃಷ್ಟಿಸ್ತೀವಿ ಅಂತಂದ್ರೆ, ನಿಜವಾಗಲೂ ಸಂವಿಧಾನದ ಆಶಯಗಳನ್ನಿಟ್ಟುಕೊಂಡು ಸುಪ್ರೀಂಕೋರ್ಟ್ ಮೂಲಕ ಏನು ತೀರ್ಪುಗಳನ್ನ ಪಡೀತಾ ಇದಾರೆ, ಅದರ ಮೂಲಕ ಮುನ್ನಡೀತಾ ಇದಾರೆ ಅನ್ನೋದು ಆಶಾಭಾವವನ್ನು ಉಂಟುಮಾಡತ್ತೆ.

ಅದರ ಜೊತೆಗೆ ನಾವು ಧರ್ಮದಲ್ಲಿ ತಾತ್ವಿಕತೆ ಮತ್ತು ಸಾಂದರ್ಭಿಕ ಅಂತ ಎರಡು ಇಶ್ಯೂಗಳನ್ನು ನೋಡಿದ್ರೆ, ಧರ್ಮದಲ್ಲಿ ತಾತ್ವಿಕತೆಯ ಬಗ್ಗೆ ಮಾತನಾಡಬಹುದು ಆದರೆ ಸಾಂದರ್ಭಿಕವಾಗಿ ಇವತ್ತಿನ ಮಹಿಳೆಯರ ಹಕ್ಕುಗಳ ಬಗ್ಗೆ ಯೋಚನೆ ಮಾಡಿದಾಗ ನಾವು ಹೇಗೆ ಉತ್ತರ ಕಳೆದುಕೊಳ್ಳುತ್ತೇವೆ ಅನ್ನೋದಕ್ಕೆ ಈ ನೆಲದ ಸಂವಿಧಾನವೇ ಮತ್ತೆ ನಮಗೆ ಸಪೋರ್ಟ್ ಆಗಿ ನಿಲ್ಲುವುದು. ಮಹಿಳೆಯರ ಹಕ್ಕುಗಳ ಬಗ್ಗೆ ಮರುಚಿಂತನೆ ಮಾಡ್ದಾಗ, ಧರ್ಮದ ತಾತ್ವಿಕತೆಯಿಂದ ಅದನ್ನ ಪಡೆಯುವುದು ಸಾಧ್ಯವಿಲ್ಲ. ಧಾರ್ಮಿಕ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಪಥ್ಯಗಳನ್ನು ನೆಪವಾಗಿ ಇಟ್ಟುಕೊಂಡು, ನೀವು ಅಳಬಾರದು, ಹೀಗೆ ನಗಬಾರದು, ನೀವು ಅಲ್ಲಿ ಮಾತಾಡ್ಬಾರದು, ಈ ಬಟ್ಟೆ ಉಡಬಾರದು, ಇಷ್ಟು ರಾತ್ರಿಯಲ್ಲಿ ಓಡಾಡಬಾರದು ಇತ್ಯಾದಿ ಬೇಡಗಳನ್ನು ನಮ್ಮ ಮೇಲೆ ಹೇರೋದಕ್ಕೆ ತುಂಬಾ ಪ್ರಯತ್ನಗಳು ನಡೆಯುತ್ತಿವೆ. ಹಾಗಾಗಿ ಮಹಿಳಾ ಹಕ್ಕುಗಳಿಗೆ ಈಗ ಸಂವಿಧಾನವೇ ನಮಗೆ ತುಂಬಾ ದೊಡ್ಡ ಭರವಸೆಯಾಗಿ ಕಂಡರೂ ಕೂಡ ಮನೀಶಾ ಗುಪ್ತೆ ಅವರು ಹೇಳಿದ ಹಾಗೆ ಅದಕ್ಕೆ ತುಂಬ ಲಿಮಿಟೇಷನ್ಸ್ ಇದ್ದು, ತಿದ್ದುಪಡಿಗಳು ಬರಬೇಕಾಗಿವೆ. ಭಾರತೀಯ ಮುಸ್ಲಿಂ ಹೆಣ್ಣುಮಕ್ಕಳಿಗೆ ಇಸ್ಲಾಂ ಧರ್ಮ ಒಂದು ದೊಡ್ಡ ಪ್ಲಾಟ್‌ಫಾರಂ ಅಂದ್ರೂ ಕೂಡ ಅದರ ಮೂಲಕ ಹೋಗಿ ನಮಗೆ ಆ ಹಕ್ಕು ಕೊಡಿ ಈ ಹಕ್ಕು ಕೊಡಿ ಅಂತ ಹೋದ್ರೆ ಅದು ಸಾಧ್ಯವೇ ಇಲ್ಲ. ಇವತ್ತು ಶೈಕ್ಷಣಿಕವಾಗಿ ಮುಂದಿರ್ತಕ್ಕಂಥ ಮುಸ್ಲಿಂ ಹೆಣ್ಣುಮಕ್ಕಳು ಬರೀ ಧರ್ಮದ ಆಧಾರದಲ್ಲಿ ಕೋರ್ಟ್ ಮೆಟ್ಟಿಲು ಹತ್ತಕ್ಕೆ ಸಾಧ್ಯವೇ ಇಲ್ಲ. ಸಂವಿಧಾನದಲ್ಲಿ ಲಿಂಗ ಸಮಾನತೆ ಮತ್ತು ಧಾರ್ಮಿಕ ಸ್ವಾತಂತ್ರ್ಯ ಎರಡು ಜೊತೆಜೊತೆಯಾಗಿ ಇರೋದಕ್ಕೇನೆ ಮುಸ್ಲಿಂ ಹೆಣ್ಣು ಮಕ್ಕಳು ಧೈರ್ಯದಿಂದ ಹೋರಾಟ ಮಾಡುವುದಕ್ಕೆ ಸಾಧ್ಯವಾಗಿದೆ. ನನ್ನ ಅನುಭವದ ಹಿನ್ನೆಲೆಯಲ್ಲಿ ಮುಸ್ಲಿಂ ಮಕ್ಕಳ ಬಗ್ಗೆ ಹೆಚ್ಚು ಮಾತನಾಡುತ್ತಿದ್ದೇನೆ, ಉದಾಹರಣೆಗಳನ್ನ ಕೊಡ್ತಾ ಇದ್ದೀನಿ. ಯಾಕೆಂದ್ರೆ ನಾನು ಹುಟ್ಟಿಬೆಳೆದ ಜಗತ್ತು ಅದು ಅಷ್ಟೇ. ದಯವಿಟ್ಟು ತಪ್ಪು ತಿಳಿಯಬೇಡಿ.

ಧರ್ಮಗಳು ಮಹಿಳಾ ಹಕ್ಕು, ಜೀವಪರತೆ, ತಾಯ್ತನ, ಎತ್ತಿ ಹಿಡಿತಾವೆ ಅಂತ ಹೇಳಿದರೂ ಕೂಡ, ನಮಗೆ ಅದು ಖಾತ್ರಿ ಕೊಡಲ್ಲ. ಪ್ರಶ್ನೆ ಮಾಡಬಹುದು ಅನ್ನುವ ಕ್ಲಾರಿಟಿ ಆಗ್ಲಿ ಖಾತ್ರಿ ಆಗ್ಲಿ ನಮ್ಮ ಧರ್ಮಗಳು ನಮಗೆ ಕೊಟ್ಟಿಲ್ಲ. ಆದರೆ ಸಂವಿಧಾನ ನಮಗೆ ಅದನ್ನ ಕೊಟ್ಟಿದೆ. ಭಾರತದ ಪ್ರಜೆಯಾಗಿ ಮಹಿಳೆಯಾಗಿ ಈ ಹಕ್ಕುಗಳನ್ನ ಕ್ಲೇಮ್ ಮಾಡಕ್ಕೆ ನಮ್ಮ ಸಂವಿಧಾನದಲ್ಲಿ ಮಾತ್ರ ಅವಕಾಶ ಇರೋದು ಅಂತ ನನಗೆ ಅನ್ಸುತ್ತೆ. ಸಂವಿಧಾನ, ಸುಪ್ರೀಂಕೋರ್ಟ್ ಇವೆಲ್ಲ ಮಹಿಳೆಯರ ಹೋರಾಟದ ಪರವಾಗಿ ನಿಂತಿವೆ ಅನ್ನೋದು ನೋಡಿ ಫ್ಯಾಸಿಸ್ಟ್ ಶಕ್ತಿಗಳಿಗೆ ಭಯ ಆಗಿರಬಹುದು. ಹಾಗಾಗಿ ಈ ಪಟ್ಟಭದ್ರ ಹಿತಾಸಕ್ತಿಗಳು ನಮಗೆ ನಡುಕ ಹುಟ್ಟಿಸ್ತಾ ಇವೆ. ಎಲ್ಲಿ ಈ ಮಹಿಳೆಯರು ಈ ಜಗತ್ತನ್ನ ಬದಲಾಯಿಸಿಬಿಡ್ತಾರೋ ಅಂತ ಬೇರೆ ಬೇರೆ ಉಪಾಯಗಳನ್ನು ಹಾಕಿಕೊಂಡು ನಮ್ಮ ಸಂವಿಧಾನವನ್ನು ತೆಗೆಯೋಕೆ ಧಿಕ್ಕರಿಸೋಕೆ ತುಂಬಾ ಹುನ್ನಾರಗಳನ್ನು ಮಾಡುತ್ತಿದ್ದಾರೆ.

ಯಾವುದೇ ರಕ್ತಪಾತವಿಲ್ಲದೆ ಧರ್ಮವನ್ನು ಮೀರಿ ನಾನು ಮದುವೆಯಾಗಿದ್ದೇನೆಂದರೆ ಅದಕ್ಕೆ ಕಾರಣ ನಮ್ಮ ಸಂವಿಧಾನ ಕೊಟ್ಟಿರುವ ಧೈರ್ಯ. ನನ್ನಂತಹ ಯುವತಿ, ಯುವಕರಿಗೂ ಕೂಡ ಒಳಗಡೆಯಿಂದ ಧೈರ್ಯ ಕೊಟ್ಟಿದೆ ಅಂತ ಅನ್ಸತ್ತೆ. ಇಲ್ಲಾಂದ್ರೆ, ಡಿಕ್ಟೇಟರ್‌ಷಿಪ್ ಇರೋ ಅಂಥ ದೇಶದಲ್ಲಿ ನಾನು ಇದ್ದಿದ್ದರೆ ಹೀಗೆ ಧರ್ಮವನ್ನು ಮೀರಿ ಯೋಚನೆ ಮಾಡೋಕೂ ಆಗುತ್ತಾ ಇರಲಿಲ್ಲ. ಅದಕ್ಕೇ ಸಂವಿಧಾನ ಒಂದು ದೊಡ್ಡ ಚೇತನ ಅನ್ಸತ್ತೆ.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಆದ್ದರಿಂದ ನಮ್ಮ ಸಂವಿಧಾನ ಉಳಿಸುವ ನಿಟ್ಟಿನಲ್ಲಿ ಮಹಿಳೆಯರು ಹೆಚ್ಚು ಕಾರ್ಯಪ್ರವೃತ್ತರಾಗಬೇಕಿದೆ. ಸಂವಿಧಾನವು ವೈವಿಧ್ಯತೆಯನ್ನು ಎತ್ತಿಹಿಡಿದಿದೆ. ಬಹುಸಂಸ್ಕೃತಿ ಬಹುಧರ್ಮಗಳ ಮಧ್ಯೆ ನಾವು ಜೀವಿಸುತ್ತಿದ್ದೇವೆ. ಧಾರ್ಮಿಕ ಅಲ್ಪಸಂಖ್ಯಾತರಿಗೆ ಇನ್ನಿತರ ಅಲ್ಪಸಂಖ್ಯಾತರಿಗೆ ಎಷ್ಟೇ ಅಭದ್ರತೆ ಕಾಡಿದರೂ ಕೂಡ ಸಂವಿಧಾನ ಒಂದು ಆಶಾಕಿರಣವಾಗಿದೆ. ಅಂಬೇಡ್ಕರ್ ಈ ಎಲ್ಲದರ ಬಗ್ಗೆ ಎಲ್ಲರ ಬಗ್ಗೆ ಯೋಚನೆ ಮಾಡಿ ನಮಗೆ ಸಂವಿಧಾನವನ್ನು ರೂಪಿಸಿಕೊಟ್ಟಿದ್ದಾರೆ. ಆದ್ದರಿಂದ ಅದಕ್ಕೆ ಬದ್ಧವಾಗಿ ನಿಲ್ಲಬೇಕಾಗಿರುವುದು ಇವತ್ತಿನ ತುರ್ತಾಗಿದೆ.

## ಸಂವಿಧಾನವೆಂಬ ರಕ್ಷಣೆ: ಗೀತಾ ಭದ್ರಾವತಿ

ಸಂವಿಧಾನದ ಬಗ್ಗೆ ಎಷ್ಟು ಮಾತಾಡಿದರೂ ಕಮ್ಮಿನೇ. ಸಂವಿಧಾನ ಅನ್ನೋದು ಅಷ್ಟು ದೊಡ್ಡದು. ಧರ್ಮದಲ್ಲಿ ಎಷ್ಟೋ ವರ್ಷಗಳಿಂದ ನಡೆಸಿಕೊಂಡುಬಂದ ಒಳ್ಳೆಯ ಆಚರಣೆಗಳು, ಸಂಪ್ರದಾಯಗಳು ಸಂವಿಧಾನದಲ್ಲಿ ಕಾನೂನಾಗಿ ಪರಿವರ್ತನೆಯಾಗಿದೆ. ಹಾಗಾಗಿ ಸಂವಿಧಾನ ಬಿಟ್ಟು ಧರ್ಮ ಇಲ್ಲ. ಸಂವಿಧಾನದ ಬಗ್ಗೆ ಬೆಳಗ್ಗಿನಿಂದ ಬಹಳ ಚರ್ಚೆ ಆಗಿದೆ. ಸಂವಿಧಾನದ ಅನುಚ್ಛೇದ 25ರಲ್ಲಿ, ಒಬ್ಬ ದೇಶದ ನಾಗರಿಕ ಯಾವ ಧರ್ಮವನ್ನಾದರೂ ತನ್ನ ಇಚ್ಛೆಯಿಂದ ಪಾಲಿಸಬಹುದು. ತನ್ನ ಧರ್ಮದಲ್ಲಿ ತುಂಬ ಹಿಂಸೆ ಆಗ್ತಿದೆ ಅಂದ್ರೆ, ಬೇರೆ ಧರ್ಮವನ್ನ ಸ್ವೀಕರಿಸಬಹುದು. ಆದರೆ ಅದನ್ನ ಬಲವಂತದಿಂದ ಮಾಡೋ ಹಾಗಿಲ್ಲ. ಹಾಗೆ ಮಾಡಿದರೆ ಅವನು ಕಾನೂನಿನ ಅಡಿಯಲ್ಲಿ ರಕ್ಷಣೆ ಪಡೆಯಬಹುದು. ಮಹಿಳೆಯರಿಗೆ ಧರ್ಮ ಯಾವ ರೀತಿ ಒತ್ತಡ ಹೇರ್ತಾ ಇದೆ ಅನ್ನೋದನ್ನ ನೋಡ್ತಿದೇವೆ. ಆದ್ರೆ ಸಂವಿಧಾನದಲ್ಲಿ ಇದಕ್ಕೆ ರಕ್ಷಣೆ ಇದೆ. ಹಲವಾರು ಆರ್ಟಿಕಲ್‌ಗಳಲ್ಲಿ ಮಹಿಳೆಯರ ಹಕ್ಕುಗಳ ರಕ್ಷಣೆಯ ಪ್ರಸ್ತಾಪ ಇದೆ. ಅನೇಕ ಆಕ್ಟ್‌ಗಳನ್ನ ಜಾರಿ ಮಾಡಲಾಗಿದೆ. ಆದರೆ ಹೆಣ್ಣುಮಕ್ಕಳು ತಮ್ಮನ್ನ ತಾವು ಒಂದು ಚೌಕಟ್ಟಿನೊಳಗೆ ಬಂಧಿಸಿಕೊಂಡಿದ್ದಾರೆ. ಸಂವಿಧಾನ ಅಂದ್ರೆ ಅದೇನೋ ನಮಗೆ ಸಂಬಂಧಿಸಿದ್ದಲ್ಲ ಎಂದುಕೊಂಡಿದ್ದಾರೆ. ಅವರು ಆ ಬಗ್ಗೆ ತಿಳಿದುಕೊಳ್ಳಬೇಕು. ಹೋರಾಡಬೇಕು.

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಭಾರತದ ಸಂವಿಧಾನ ರಚನಾ ಸಭೆಯಲ್ಲಿದ್ದ ಮಹಿಳೆಯರು

ಅಮ್ಮು ಸ್ವಾಮಿನಾಥನ್, ಆನಿ ಮಸ್ಕರೇನೆ, ಬೇಗಂ ಐಜಾಜ್ ರಸೂಲ್, ದಾಕ್ಷಾಯಿಣಿ ವೇಲಾಯುಧನ್, ದುರ್ಗಾಬಾಯಿ ದೇಶಮುಖ್, ಹನ್ಸಾ ಜೀವರಾಜ ಮೆಹ್ತಾ, ಕಮಲಾ ಚೌಧುರಿ, ಲೀಲಾ ರಾಯ್, ಮಾಲತಿ ಚೌಧರಿ, ಪೂರ್ಣಿಮಾ ಬ್ಯಾನರ್ಜಿ, ರಾಜಕುಮಾರಿ ಅಮೃತ್ ಕೌರ್, ರೇಣುಕಾ ರೇ, ಸರೋಜಿನಿ ನಾಯ್ಡು, ಸುಚೇತಾ ಕೃಪಲಾನಿ, ವಿಜಯಲಕ್ಷ್ಮಿ ಪಂಡಿತ್.



(ಚಿತ್ರದಲ್ಲಿ ಎಡದಿಂದ ಬಲಕ್ಕೆ: ನಿಂತವರು: ದುರ್ಗಾಬಾಯಿ ದೇಶಮುಖ್, ರೇಣುಕಾ ರೇ, ಆನಿ ಮಸ್ಕರೇನಸ್, ಬೇಗಂ ಐಜಾಜ್ ರಸೂಲ್, ಲೀಲಾ ರಾಯ್, ದಾಕ್ಷಾಯಿಣಿ ವೇಲಾಯುಧನ್. ಕುಳಿತವರು: ಸುಚೇತಾ ಕೃಪಲಾನಿ, ಹನ್ಸ ಮೆಹ್ತಾ, ಅಮೃತ್ ಕೌರ್, ಕಮಲಾ ಚೌಧುರಿ?, ಅಮ್ಮು ಸ್ವಾಮಿನಾಥನ್.)

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಬಿಳಿಯುಡುಗೆಯಲ್ಲಿ ಮಹಿಳೆಯರು: ಅರಿವಿನ ಪಯಣದಲ್ಲೊಂದು ಮೌನ ಕ್ರಾಂತಿ

❖ **ಮಂಜುಳಾ ರಾಜು,** ಶಿವಮೊಗ್ಗ

**ಶಿ**ವಮೊಗ್ಗದಲ್ಲಿ ನಡೆದ ಅರಿವಿನ ಪಯಣ ಮಹಿಳಾ ಹೋರಾಟದಲ್ಲೊಂದು ಮೈಲಿಗಲ್ಲೆಂದೇ ಹೇಳಬಹುದು. ಈ ಮಧ್ಯೆ ಸಿದ್ಧತಾ ಸಭೆಗಳಲ್ಲಿ ಮಹಿಳಾ ಚೈತನ್ಯದಿನದ ರೂಪರೇಷೆಗಳನ್ನು ಚರ್ಚಿಸುವಾಗ, ಫೆಬ್ರವರಿ ತಿಂಗಳಿಂದ ಪ್ರಾರಂಭಿಸಿ ಪ್ರತಿ ಗುರುವಾರ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ಸಂಜೆ ಬಿಳಿಯುಡುಗೆಯಲ್ಲಿ ಮಹಿಳೆಯರು ಎಂಬ ಕಾರ್ಯಕ್ರಮ ಮಾಡಬೇಕೆಂದು ನಿರ್ಧರಿಸಲಾಯಿತು. ಆಫ್ರಿಕಾದ ಮಹಿಳೆಯರು ಯುದ್ಧದಲ್ಲಿ ಕಣ್ಮರೆಯಾದ ತಮ್ಮ ಮಕ್ಕಳನ್ನು ಹುಡುಕಿಕೊಡುವಂತೆ ಆಗ್ರಹಿಸಿ 'ವಿಮೆನ್ ಇನ್ ಬ್ಲಾಕ್' ಎಂಬ ಚಳುವಳಿ ನಡೆಸಿದ್ದರಂತೆ. ಈ ಚಳುವಳಿಯ ಪ್ರೇರಣೆಯೇ ನಮ್ಮ 'ಬಿಳಿಯುಡುಗೆಯಲ್ಲಿ ಮಹಿಳೆಯರು' ಮೌನ ಜಾಗೃತಿ ಕಾರ್ಯಕ್ರಮ. ಅದರಂತೆ ಪ್ರತಿ ತಾಲೂಕು ಕೇಂದ್ರಗಳಲ್ಲಿ ಪ್ರತಿ ಗುರುವಾರ ಬಿಳಿಯುಡುಗೆ ತೊಟ್ಟ ಮಹಿಳೆಯರು ಮತ್ತು ಇದಕ್ಕೆ ಸ್ಪಂದಿಸುವ ಪುರುಷರೂ ಸೇರಿದಂತೆ ಬಿಳಿ ಬಟ್ಟೆ ತೊಟ್ಟು ಊರಿನ ಮುಖ್ಯ ಸರ್ಕಲ್ ಬಳಿ ಸಂಜೆ 5:30 ಕ್ಕೆ ಸೇರಿ ದೀಪ ಹಚ್ಚಿದ ಕ್ಯಾಂಡಲ್ ಹಿಡಿದು ಒಂದು ಗಂಟೆ ಚಲಿಸದೇ ಮೌನವಾಗಿ ನಿಲ್ಲುವುದು. ಸಾಗರದಲ್ಲಿ ಫೆ. 1 ರಂದು ಇದು ಪ್ರಾರಂಭವಾಗಿ ಎಲ್ಲರ ಗಮನ ಸೆಳೆಯಿತು. ನಂತರದಲ್ಲಿ ತೀರ್ಥಹಳ್ಳಿ, ಭದ್ರಾವತಿ, ಸೊರಬಗಳಲ್ಲಿ ಕ್ರಮವಾಗಿ ನಡೆದು ಮಾರ್ಚ್ ಎಂಟರಂದು ಶಿವಮೊಗ್ಗದ ಗೋಪಿವೃತ್ತದಲ್ಲಿ ಸುಮಾರು ಐನೂರಕ್ಕೂ ಹೆಚ್ಚು ಜನರ ಪಾಲ್ಗೊಳ್ಳುವಿಕೆಯಿಂದ ಅಭೂತಪೂರ್ವ ಯಶಸ್ಸು ಪಡೆಯಿತು. ಇದರಲ್ಲಿ ತೀರ್ಥಹಳ್ಳಿ ಮತ್ತು ಶಿವಮೊಗ್ಗದಲ್ಲಿ ಭಾಗವಹಿಸಿದ ನನಗೆ ವಿಶೇಷ ಅನುಭೂತಿಯುಂಟಾಯಿತು. ಒಂದು ಗಂಟೆ ಶಾಂತಿಸಂಕೇತವಾಗಿ ಬಿಳಿಯುಡುಗೆ ತೊಟ್ಟು ದೀಪ ಹಿಡಿದು ಸಂಚಾರ ದಟ್ಟಣೆಯ ನಡುವೆ ಮೌನವಾಗಿ ನಿಂತಿದ್ದು, ಒಂದು ರೀತಿಯಲ್ಲಿ ನಮ್ಮೊಳಗೇ ಒಂದು ಪರಿವರ್ತನೆ, ಅರಿವು, ಸಹನೆ ಬೆಳೆಯುತ್ತಿತ್ತು.

ಮೌನ ಮುರಿದ ವೇಳೆ, ಸರ್ಕಲಿನಲ್ಲಿಯೇ ಎಲ್ಲರನ್ನುದ್ದೇಶಿಸಿ ಹಿರಿಯ ಚಿಂತಕರು ಮಾತನಾಡಿದರು. ಕತ್ತಲಲ್ಲಿ ವಿದ್ಯುದ್ದೀಪಗಳಿದ್ದರೂ, ನಮ್ಮ ಕೈದೀಪಗಳು ಕತ್ತಲಲ್ಲಿ ಭರವಸೆಯ ಬೆಳಕಾಗಿ ಕಂಡ ದೃಶ್ಯ ಅವಿಸ್ಮರಣೀಯ. ದು. ಸರಸ್ವತಿ ಮತ್ತಿತರು ಘೋಷಣೆಗಳನ್ನು ಕೂಗುತ್ತಲೇ, ಹುಮ್ಮಸ್ಸು ಇಮ್ಮಡಿಯಾಗಿ, ಪುಣೆಯಿಂದ ಬಂದಿದ್ದ, ಲೋಕಾಯತ ಸಂಸ್ಥೆಯ ಯುವ ಸಂಗಾತಿಗಳು ತಮಟೆಯೊಂದಿಗೆ ಹಾಡಲು ಶುರುವಿಟ್ಟದ್ದು ಒಂದು ರೋಮಾಂಚಕ ಅನುಭವ. ಮಹಿಳೆಯರ ಮೇಲಿನ ಅತ್ಯಾಚಾರ, ದೌರ್ಜನ್ಯಗಳ ವಿರುದ್ಧ ಹೀಗೆ ಮೌನವಾಗಿ ಜನರ ಗಮನ ಸೆಳೆದದ್ದು ಅರಿವಿನ ಪಯಣದಲ್ಲೇ ಒಂದು ವಿಶೇಷವಾದ ಮೌನ ಕ್ರಾಂತಿ.

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಅರಿವಿನ ಮಂಥನ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

## ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಶಿವಮೊಗ್ಗ

***ಸಮತೆಯೆಡೆಗೆ ನಮ್ಮ ನಡಿಗೆ***



***ನಮ್ಮ ಬದುಕು ನಮ್ಮ ಹಕ್ಕು, ಹೆಣ್ಣು ಮಗಳು ಜಗದ ಬೆಳಕು***

**ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಶಿವಮೊಗ್ಗ**
**ತಾ. 9–03–18, ಹಕ್ಕೊತ್ತಾಯ ಜಾಥಾ ಮತ್ತು ಬೃಹತ್ ಸಾರ್ವಜನಿಕ ಸಮಾವೇಶ**

ಬೆಳಿಗ್ಗೆ 10.30 ಘಂಟೆ, ನೆಹರೂ ಮೈದಾನದ ಆವರಣ
**ಜಾಥಾ ಉದ್ಘಾಟನೆ:** ಜನ್ನಿಬಾಯಿ ಆಗುಂಬೆ; ಶ್ರೀದೇವಿ ಭಗವತಿಕೆರೆ.
**ಜಾಥಾ ಚಾಲನೆ:** ಚೌಡಮ್ಮ ಮತ್ತು ಯಲ್ಲಮ್ಮ–ಅಲೆಮಾರಿ ಬುಡಕಟ್ಟು ಸಂಘಟನೆ
**ನಿರ್ವಹಣೆ:** ಮಂಜುಳಾ ಎನ್., ಕೃತಿ ಹೆಗ್ಗೋಡು.
**ಜಾಥಾ ಮಾರ್ಗ:** ನೆಹರೂ ಮೈದಾನ >> ಕೋರ್ಟ್ ಸರ್ಕಲ್ >> ಕುವೆಂಪು ರಂಗಮಂದಿರ, ಡಿವಿಎಸ್ ಸೀನಿಯರ್ ಕಾಲೇಜು >> ಬಿಎಚ್ ರಸ್ತೆ, ಕರ್ನಾಟಕ ಸಂಘ >> ಶಿವಪ್ಪ ನಾಯಕ ಸರ್ಕಲ್ >> ಅಮೀರ್ ಅಹ್ಮದ್ ಸರ್ಕಲ್ >> ಗೋಪಿ ಸರ್ಕಲ್ ಕೋರ್ಟ್ ಸರ್ಕಲ್ >> ನೆಹರೂ ಮೈದಾನ.

**ಬಹಿರಂಗ ಸಾರ್ವಜನಿಕ ಸಭೆ**
**ಆಶಯ ಗೀತೆಗಳು:** ಒಕ್ಕೂಟದ ಸಂಗಾತಿಗಳಿಂದ
**ಉದ್ಘಾಟನೆ:** ಚರಕ ಸಂಸ್ಥೆಯ ಗೌರಮ್ಮ ಹೆಗ್ಗೋಡು ಹಸೆ ಚಿತ್ರ ಬರೆಯುವ ಮೂಲಕ ಮತ್ತು ಶಿವಮೊಗ್ಗ ಅಲೆಮಾರಿ ಬುಡಕಟ್ಟು ಸಂಘಟನೆಯ ಜ್ಯೋತಿ ಮತ್ತು ತಂಡದವರ ಹಾಡು ಮತ್ತು ಮಾತಿನ ಮೂಲಕ
**ಸರ್ವರನ್ನು ಬರಮಾಡಿಕೊಳ್ಳುವವರು:** ಕೆ. ಅಕ್ಷತಾ
**ಪ್ರಾಸ್ತಾವಿಕ ಮಾತು:** ಗುಲಾಬಿ ಬಿಳಿಮಲೆ, ಮಂಗಳೂರು
**ಆಶಯ ಮಾತು:** ಸವಿತಾ ನಾಗಭೂಷಣ
**ದಿಕ್ಸೂಚಿ ಭಾಷಣ:** ಫ್ಲೇವಿಯಾ ಆಗ್ನೆಸ್, ಮುಂಬಯಿ
**ನಿರ್ಣಯ ಮಂಡನೆ:** ಪ್ರತಿಭಾ ಸಾಗರ
**ವಂದನಾರ್ಪಣೆ:** ಗೌರಿ
**ಉಪಸ್ಥಿತಿ:** ಶೈಲಮ್ಮ ಬಿಳಲುಕೊಪ್ಪ, ಕ.ರಾ. ಅಕ್ಷರ ದಾಸೋಹ, ಬಿಸಿಯೂಟ ತಯಾರಕರ ಫೆಡರೇಷನ್; ಮಂಜಮ್ಮ ಗೋಗಡಿಗೆ ಸಾಗರ; ಕಲಾವತಿ, ಸಾಧನಾ ಸಂಘ, ಶಿವಮೊಗ್ಗ; ಗೌರಮ್ಮ, ಚರಕ, ಹೆಗ್ಗೋಡು; ಪ್ರಿಸಿಲ್ಲಾ ಮಾರ್ಟಿಸ್, ಸ್ತ್ರೀಬಂಧು ಸೌಹಾರ್ದ ಸಹಕಾರಿ ಸಂಘ; ವಿದ್ಯಾ, ಕನ್ನಡಪ್ರಭ; ಸುಶೀಲಮ್ಮ ಮಡಸೂರು, ಅಂಗನವಾಡಿ ಯೂನಿಯನ್; ಪುಷ್ಪ ವಿ. ಜಿ. ಕಾರ್ಗಲ್, ಕರ್ನಾಟಕ ಅರಣ್ಯಮೂಲ ಬುಡಕಟ್ಟುಗಳ ಒಕ್ಕೂಟ; ಕೆ. ಶರೀಫಾ, ಕಲೇಸಂ, ಬೆಂಗಳೂರು; ರತಿ ರಾವ್, ಸಮತಾ, ಮೈಸೂರು; ಮಂಜುಳಾ ಸುನಿಲ್, ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ, ಮಂಗಳೂರು; ಸರೋಜಾ ಬಾಕಳೆ, ಪ್ರಗತಿಪರ ಮಹಿಳಾ ಒಕ್ಕೂಟ, ಕೊಪ್ಪಳ; ಚಾಂದಿನಿ, ಪಯಣ, ಬೆಂಗಳೂರು; ಪ್ರತಿಭಾ, ಗಾಟು, ಬೆಂಗಳೂರು; ರುದ್ರಮ್ಮ ಜಿಲ್ಲಾ ಸಂಚಾಲಕರು, ದಲಿತ ಮಹಿಳಾ ಒಕ್ಕೂಟ (ದ.ಸಂ.ಸ); ಬಿ. ಸಿ. ಸರೋಜಮ್ಮ ಬುಳ್ಳಾಪುರ – ಕ.ರಾ.ರೈತ ಸಂಘ; ಪದ್ಮ ಕೋಲಾರ, ಸಫಾಯಿ ಕರ್ಮಚಾರಿ ಕಾವಲು ಸಮಿತಿ, ಡಾ. ಆರ್. ಸುನಂದಮ್ಮ, ಅಕ್ಕಮಹಾದೇವಿ ಕ.ರಾ.ಮಹಿಳಾ ವಿ.ವಿ. ವಿಜಯಪುರ ಮತ್ತು ಸಮಾನಮನಸ್ಕ ಸಂಘ–ಸಂಸ್ಥೆಗಳ ಪ್ರತಿನಿಧಿಗಳು.

**ನಿರ್ವಹಣೆ:** ಟಿ. ಎಲ್.ರೇಖಾಂಬಾ, ಹೆಚ್. ಎಂ. ಪೂರ್ಣಿಮ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಹಕ್ಕೊತ್ತಾಯ ಜಾಥಾ

ಬೆಳಗ್ಗೆ ಸುಮಾರು ಹತ್ತುಗಂಟೆಗೆ ಸಮಾವೇಶ ನಡೆಯುವ ಸ್ಥಳವಾಗಿದ್ದ ನೆಹರೂ ಮೈದಾನದಲ್ಲಿ ಜಾಥಾ ಉದ್ಘಾಟನೆಯ ವೇದಿಕೆಯ ಮುಂಭಾಗದಲ್ಲಿ ಜನಹಿತಪದಗಳನ್ನು ಹಾಡುತ್ತಿದ್ದರು ಗೆಳತಿಯರು. ಸಾಕಷ್ಟು ಸಂಖ್ಯೆಯಲ್ಲಿ ಸಹಭಾಗಿ ಸಂಘಟನೆಗಳು, ಸಂಘ ಸಂಸ್ಥೆಗಳು ತಂತಮ್ಮ ಬ್ಯಾನರ್ ಹಿಡಿದು ಸಾಲಿನಲ್ಲಿ ನಿಲ್ಲುತ್ತಿದ್ದರು. ವೇದಿಕೆಯನ್ನು ಗೆಳತಿ ಮಂಜುಳಾ ಅಶೋಕ್ ನಿರ್ವಹಿಸುತ್ತಿದ್ದಳು. ಹಿರಿಯಕ್ಕಂದಿರಾದ ಆಗುಂಬೆಯ ಜನ್ನಿಬಾಯಿ ಮತ್ತು ಭಗವತಿಕೆರೆಯ ಶ್ರೀದೇವಿ ಶಾಮಣ್ಣ ಅವರುಗಳು ತಮ್ಮ ಅನುಭವದ ಮಾತುಗಳೊಂದಿಗೆ ಜಾಥಾಕ್ಕೆ, ಸಮಾವೇಶಕ್ಕೆ, ಒಕ್ಕೂಟಕ್ಕೆ, ಚಳುವಳಿಗೆ ಶುಭಕೋರಿದರು.

'ಮಳೆ ಹಾಡ ಹಾಡುತ್ತಾ/ ಸಾಲು ಗಿಡಗಳ ನೆಡುತ್ತ....ಮೆರವಣಿಗೆ ಹೊರಡುತ್ತಾರೆ' ಎಂಬ ಒಕ್ಕೂಟದ ಆಶಯಗೀತೆಯ ಸಂಕೇತವಾಗಿ, ಸಮಾವೇಶ ನಡೆಯುವ ಜಿಲ್ಲೆಯಿಂದ ಮುಂದೆ ಸಮಾವೇಶ ನಡೆಯುವ ಜಿಲ್ಲೆಯವರಿಗೆ ಒಂದು ಸ್ಥಳೀಯ ಪ್ರಬೇಧದ ಸಸಿಯೊಂದನ್ನು ನೀಡುವುದು ವಾಡಿಕೆ. ಅದರಂತೆ ನಾವು ಶಿವಮೊಗ್ಗದ ಗೆಳತಿಯರು ಧಾರವಾಡದಿಂದ ಬಂದಿದ್ದ ಸುನಂದಾ ಕಡಮೆ ಮತ್ತು ಶಾರದಾ ಪಾಟೀಲರಿಗೆ ಒಂದು ಹಲಸಿನ ಗಿಡದ ಸಸಿಯೊಂದನ್ನು ನೀಡಿದೆವು. ಅದಕ್ಕೆ ನಮ್ಮ ಹಿರಿಯ ಗೆಳತಿ ಸ. ಉಷಾ ಇಲ್ಲಿನ ಮಣ್ಣನ್ನು ಮಣ್ಣಿನ ಕುಡಿಕೆಯ ಸಮೇತ ಕಾಣಿಕೆಯಾಗಿತ್ತರು. ಈ ಬಾರಿಯ ಮತ್ತೊಂದು ವಿಶೇಷವೆಂದರೆ, ಶಿವಮೊಗ್ಗದ ಅಲೆಮಾರಿ ಕ್ಯಾಂಪಿನ ಬುಡಕಟ್ಟು ಸಮುದಾಯದ ಚೌಡಮ್ಮ ಮತ್ತು ಯಲ್ಲಮ್ಮನವರುಗಳು 'ಉರ್ಮಿ'(ದುರುಗಾ ಮುರುಗಿಯವರ ಒಂದು ಚರ್ಮವಾದ್ಯ) ಬಾರಿಸುವುದರ ಮೂಲಕ ಜಾಥಾಕ್ಕೆ ಚಾಲನೆ ಕೊಟ್ಟದ್ದು. ಉರ್ಮಿಯ ನಾದಕ್ಕೆ ಮಹಿಳೆಯರು ಹೆಜ್ಜೆ ಹಾಕಿದ್ದೂ ವಿಶೇಷವೇ. ಸಮಾವೇಶದ ಅತಿಥಿಗಳಾದ ಫ್ಲೇವಿಯಾ ಆಗ್ನೆಸ್, ಸಬಿಹಾ ಭೂಮಿಗೌಡ, ಆರ್. ಸುನಂದಮ್ಮ, ಸವಿತಾ ನಾಗಭೂಷಣರೊಂದಿಗೆ ಹಿರಿಯಕ್ಕ 83 ವರ್ಷದ ಜನ್ನಿಬಾಯಿ, ಶ್ರೀದೇವಿ ಶಾಮಣ್ಣ ಮತ್ತಿತರರು ಶಿವಮೊಗ್ಗದ ಪ್ರಮುಖ ಬೀದಿಗಳಲ್ಲಿ ಬಿಸಿಲನ್ನು ಲೆಕ್ಕಿಸದೆ ಸುಮಾರು ನಾಲ್ಕು ಕಿ. ಮೀ. ನಡೆದರು. ಪ್ರಮುಖ ವೃತ್ತಗಳಲ್ಲಿ ಮಾನವ ಸರಪಳಿ ನಿರ್ಮಿಸಿದರು.

ಜಾಥಾ ಮಾರ್ಗದಲ್ಲಿ ಸ್ವಯಂಸೇವಕರು, ನೀರು, ಬಾಳೆಹಣ್ಣು, ಬಿಸ್ಕತ್ತುಗಳನ್ನು ಹಂಚುತ್ತಾ ಸಾಗಿದರು. ಬಹಳ ಶಿಸ್ತಿನಿಂದ ಮೆರವಣಿಗೆ ಸಾಗಿತು. ಮಂಡ್ಯದ ಮಹಿಳಾ ಮುನ್ನಡೆಯ ಯುವತಿಯರ ನಗಾರಿ ಕುಣಿತ ಮೆರವಣಿಗೆಯ ವಿಶೇಷ ಆಕರ್ಷಣೆಯಾಗಿತ್ತು. ಮಾರ್ಚ್ ತಿಂಗಳಾದ್ದರಿಂದ ಪರೀಕ್ಷೆಗಳು ನಡಿಯುತ್ತಿದ್ದವು. ಅಂತಹ ಕಡೆ ಮೌನವಾಗಿಯೇ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮೆರವಣಿಗೆ ಸಾಗಿತು. ರಸ್ತೆಯಲ್ಲಿ ಎಲ್ಲೂ ಯಾವುದೇ ಕಸಗಳನ್ನು, ಸಿಪ್ಪೆಗಳನ್ನು ಎಸೆಯದೇ ಸಂಗ್ರಹಿಸಿ, ಕಸದ ಬುಟ್ಟಿಗೇ ಹಾಕಲಾಯಿತು. "ಶಿವಮೊಗ್ಗದಲ್ಲಿ ಸಾವಿರಾರು ಜಾಥಾಗಳು ನಡೆದಿವೆ. ಅತ್ಯಂತ ಅಚ್ಚುಕಟ್ಟಾಗಿ ನಡೆದ ಈ ಜಾಥಾ ಬಹಳ ವಿಶೇಷವಾದುದು" ಎಂಬ ಉದ್ಗಾರ ಪೋಲೀಸ್ ಮಿತ್ರರಿಂದ ಬಂದಿದ್ದನ್ನು ನಾವು ಹೆಗ್ಗಳಿಕೆಯಿಂದ ಸ್ವೀಕರಿಸುತ್ತೇವೆ. ಹೀಗೆ ಶಿವಮೊಗ್ಗದ ಜನತೆ ಈ ಹೊಸ ರೀತಿಯ ಮಹಿಳಾ ಚಳುವಳಿಗೆ ಸಾಕ್ಷಿಯಾಯಿತು. ನೆಮ್ಮದಿಯ ನಾಳೆಯನ್ನು ಕನಸುತ್ತಿತ್ತು.

**ನೆಹರೂ ಮೈದಾನದ ಸಮಾವೇಶ**

ಜಾಥಾ ಮುಗಿದ ಕೂಡಲೇ ಊಟದ ವ್ಯವಸ್ಥೆಯಿತ್ತು. ನಂತರ ಹಲವರು ತಂತಮ್ಮ ದಾರಿ ಹಿಡಿದರೂ ಸಾಕಷ್ಟು ಜನ ಸಮಾವೇಶದ ವೇದಿಕೆಗೆ ಬಂದರು. ವೇದಿಕೆಯನ್ನು ನಿರ್ವಹಿಸುತ್ತಿದ್ದದ್ದು ಪೂರ್ಣಿಮಾ ಮತ್ತು ರೇಖಾಂಬ. ವೇದಿಕೆಯಲ್ಲಿ ಸಹಭಾಗಿ ಸಂಘಟನೆಗಳ ಅನೇಕ ಮಹಿಳಾ ಪ್ರತಿನಿಧಿಗಳು ಉಪಸ್ಥಿತರಿದ್ದರು. ಪೊನ್ನಮ್ಮಾಳ್ ನೆನಪಿನ ವಿಶಾಲ ವೇದಿಕೆಯನೇರಿ ನಗಾರಿ ನುಡಿಸುವ ಮೂಲಕ ಮಹಿಳಾ ಮುನ್ನಡೆಯ ಗೆಳತಿಯರು ಸಮಾವೇಶಕ್ಕೆ ಮುನ್ನುಡಿ ಬರೆದರು. ಸ್ಥಳೀಯ ವಿಶೇಷ ಹಸೆಚಿತ್ರ ಕಲಾವಿದರಾದ ಹೆಗ್ಗೋಡಿನ ಚರಕದ ಗೌರಮ್ಮನವರು ಹಸೆಚಿತ್ರವನ್ನು ಬಿಡಿಸುವುದರ ಮೂಲಕ ಮತ್ತು ಅಲೆಮಾರಿ ಬುಡಕಟ್ಟು ಸಮುದಾಯದ ಮಕ್ಕಳ ಒಂದು ಭಾವಗೀತೆಯ ಮೂಲಕ ಸಮಾವೇಶವನ್ನು ಉದ್ಘಾಟಿಸಿದ್ದು. ಗೆಳತಿ ಅಕ್ಷತಾ ಎಲ್ಲರನ್ನೂ ಸ್ವಾಗತಿಸಿದ ಮೇಲೆ, ಒಕ್ಕೂಟದ ಗೆಳತಿ ಗುಲಾಬಿ ಬಿಳಿಮಲೆಯವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ನಮ್ಮೂರಿನ ಮತ್ತೊಬ್ಬ ಹಿರಿಯಕ್ಕ ಕವಿ ಸವಿತಾ ನಾಗಭೂಷಣ ಆಶಯನುಡಿಗಳನ್ನಾಡಿ ಸಮಾವೇಶಕ್ಕೆ ಚಾಲನೆ ನೀಡಿದರು. ನಾಡಿನ ಎಲ್ಲ ಕಡೆಗಳಿಂದ ಬಂದಿದ್ದ ಮಹಿಳಾ ಹೋರಾಟಗಾರ್ತಿಯರು, ಕಲಾವಿದರು, ರಂಗಕರ್ಮಿಗಳು, ಸಾಹಿತಿಗಳು, ಜನಪರ ಚಳುವಳಿಯ ಪ್ರತಿನಿಧಿಗಳು ಮತ್ತು ಮಹಿಳಾಪರ ಮನಸ್ಸುಗಳು ಅಲ್ಲಿ ನೆರೆದಿದ್ದರು.

❖

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಜೇನಿನಂತಹ ಮಧುರ ಮಾತಿನ ಜನ್ನಕ್ಕ

❖ ಎಂ. ಜಿ. ಗಾಯತ್ರಿ ಶೇಷಗಿರಿ, ತೀರ್ಥಹಳ್ಳಿ

ಜೀವನ ಎನ್ನುವುದು 'ಬದುಕುವುದು ಮಾತ್ರವಲ್ಲ, ಒಳ್ಳೆಯ ರೀತಿಯಲ್ಲಿ ಬದುಕುವುದು' ಎಂದೆನ್ನುವ ಆಗುಂಬೆಯ ಹಿರಿಯ ಮಹಿಳೆ ಜನ್ನಿ ಬಾಯಮ್ಮ, ಆಗುಂಬೆ ಹಾಗೂ ಸುತ್ತಮುತ್ತಲಿನ ಪ್ರದೇಶದ ಜನರಿಗೆ ಪ್ರೀತಿಯ ಜನ್ನಕ್ಕ. ಸದಾ ಶುಭ್ರ ಶ್ವೇತ ಉಡುಗೆಯಲ್ಲಿ ಹಸನ್ಮುಖದೊಂದಿಗೆ ಕಂಗೊಳಿಸುವ ಇವರನ್ನು ನೋಡುತ್ತಿದ್ದಂತೆ, ಎಷ್ಟೋ ಮಹಾನ್ ವ್ಯಕ್ತಿಗಳ ಚಿತ್ರಣ ಮನದಲ್ಲಿ ನುಗ್ಗಿ ಬರುತ್ತದೆ. ಆಗುಂಬೆಯ ಜಮೀನ್ದಾರ್ ಕುಟುಂಬದ ದೊಡ್ಡ ಮನೆಯ ಮಗಳಾಗಿ ಜನಿಸಿದ ಇವರು ಕಷ್ಟವೇನೆಂದೇ ಅರಿಯದವರು. ಕಿರಿಯ ಪ್ರಾಯದಲ್ಲಿ ವಿವೇಕಾನಂದ, ಗಾಂಧೀಜಿಯವರ ಸರಳ ಜೀವನ, ಉನ್ನತ ವಿಚಾರ ಪರಿಕಲ್ಪನೆಗೆ ಮನಸೋತು ಅದೇ ರೀತಿ ಬದುಕುತ್ತಿರುವವರು. ಹತ್ತನೇ ತರಗತಿಯ ನಂತರ ಊರಿನ ದಲಿತ ಕೇರಿಗೆ ಬಡವರ ಮನೆಗಳಿಗೆ ತೆರಳಿ ಲಾಟಿನ್ ಬೆಳಕಿನ ಮಬ್ಬುಗತ್ತಲೆಯಲ್ಲಿಯೇ ಅವರಿಗೆ ಅಕ್ಷರಾಭ್ಯಾಸ ಮಾಡಿಸಿ ಜ್ಞಾನದ ದೀವಟಿಗೆ ಹಚ್ಚಿದರು. ಅವರಲ್ಲಿ ಸ್ನಾನ ಶೌಚಾದಿ ಸ್ವಚ್ಛತೆಯ ಬಗ್ಗೆ ಅರಿವು, ಕುಡಿತ ಬಿಡುವಂತೆ ಮನವೊಲಿಕೆಯನ್ನು ಮಾಡಿದವರು. ಇವರು ತಮ್ಮ ಖರ್ಚಿಗಾಗಿ ಯಾರನ್ನೂ ಆಶ್ರಯಿಸದೆ ತಾನು ಕಲಿತ ಹೋಳಿಗೆಯನ್ನು ಆಶ್ರಯಿಸಿ ಗಳಿಕೆಗೂ ಮುಂದಾದರು.

ಕೆಲ ಸಮಯದ ನಂತರ ಅಕ್ಕ–ಅಣ್ಣನೊಂದಿಗೆ ಮುಂಬಯಿಗೆ ಹೋದಾಗ, ಅಕ್ಕನ ಮೈದುನ ಎಂ. ವಿ. ಕಾಮತ್, ಇವರನ್ನು ವಿವಾಹವಾಗಬಯಸಿದಾಗ ಅವರ ಇಂಗಿತವನ್ನು ನಯವಾಗಿಯೇ ನಿರಾಕರಿಸಿದರು. ಕಾರಣ, ಯಾರಿಗೂ ಎಂದಿಗೂ ಹೊರೆಯಾಗದಂತೆ ಸಮಾಜಕ್ಕಾಗಿ ಸೇವೆ ಸಲ್ಲಿಸಬೇಕೆಂಬ ಅದಮ್ಯ ಬಯಕೆ ಅದಾಗಲೇ ಇವರ ಮನದಲ್ಲಿ ಕುಡಿಯೊಡೆದು ಬೃಹದಾಕಾರವಾಗತೊಡಗಿತ್ತು. ಅವ್ಯಕ್ತ ಭಾವನೆಯೊಂದು, ನಿನ್ನ ಅವಶ್ಯಕತೆ ಸಮಾಜಕ್ಕಿದೆ, ಹೊಟ್ಟೆಪಾಡಿಗಾಗಿ ಮಾತ್ರ ಜೀವಿಸುವುದು ಜೀವನವಲ್ಲವೆಂದು ಪದೇಪದೇ ಎಚ್ಚರಿಸತೊಡಗಿದಾಗ, ಇವರು ಹೋಗಿದ್ದು ಕಲ್ಕತ್ತಾದ ರಾಮಕೃಷ್ಣ ಮಿಷನ್‌ನ ಶಾರದಾದೇವಿ ಆಶ್ರಮಕ್ಕೆ, ದೀಕ್ಷೆ ಪಡೆದು ಸೇವೆ ಸಲ್ಲಿಸುವ ಅಭಿಲಾಷೆ ಹೊತ್ತು. ಆದರೆ ಹಿತಚಿಂತಕರೊಬ್ಬರು, ಸನ್ಯಾಸತ್ವ ಸ್ವೀಕಾರಕ್ಕಿಂತ ಸ್ವತಂತ್ರವಾಗಿ ಸೇವೆ ಮಾಡುವಂತೆ ಪ್ರೀತಿಯಿಂದ ಉಪದೇಶಿಸಿದಾಗ, ಇವರು ಆಯ್ದುಕೊಂಡದ್ದು ನರ್ಸಿಂಗ್ ವೃತ್ತಿ. ಬಡವರ,

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ದೀನ ದಲಿತರ ಸೇವೆ ಹತ್ತಿರದಿಂದ ಮಾಡಲು ನರ್ಸಿಂಗ್‌ನಿಂದ ಸಾಧ್ಯವೆಂದು ಅತ್ತ ಒಲವು ತೋರಿದಾಗ ಈ ವೃತ್ತಿಯ ಕುರಿತಾದ ಸಾಮಾಜಿಕ ಕೀಳು ದೃಷ್ಟಿಕೋನದಿಂದಾಗಿ ಕುಟುಂಬದವರಿಂದ ವಿರೋಧ ವ್ಯಕ್ತವಾಯಿತು. ಅಣ್ಣನಿಗೆ ಇವರನ್ನು ಮೆಡಿಕಲ್‌ಗೆ ಸೇರಿಸಬೇಕು ಎಂಬ ಆಸೆ. ಆಗ ಇವರು, 'ನನ್ನ ಮೇಲೆ ಒತ್ತಡ ಹೇರಬೇಡಿ, ನನ್ನಿಂದ ಯಾರಿಗೂ ತೊಂದರೆ, ಕಳಂಕವಾಗದಂತೆ ವೃತ್ತಿ ನಿಭಾಯಿಸುತ್ತೇನೆ' ಎಂದು ಮನವಿ ಮಾಡಿದಾಗ, ಇವರ ಮೃದು ಸ್ವಭಾವದ ಅರಿವಿದ್ದ ಕುಟುಂಬಸ್ಥರು ಬೆಂಬಲಿಸಿದರು.

ಸುಮಾರು ಏಳು ವರ್ಷಗಳ ನಂತರ ವಿದ್ಯಾಭ್ಯಾಸ ಮುಂದುವರೆಸಿ ಬೆಳಗಾಂನಲ್ಲಿ ನರ್ಸಿಂಗ್ ತರಬೇತಿ ಮುಗಿಸಿ ಹುಬ್ಬಳ್ಳಿಯಲ್ಲಿ, ತೀರ್ಥಹಳ್ಳಿಯಲ್ಲಿ ಹೆರಿಗೆ ಮತ್ತು ಮಕ್ಕಳ ವಾರ್ಡ್ ಶಸ್ತ್ರಚಿಕಿತ್ಸೆ ವಿಭಾಗದಲ್ಲಿ ರಾತ್ರಿ ಹಗಲೆನ್ನದೆ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಕಾರ್ಯ ನಿರ್ವಹಿಸಿದರು. ನಂತರ ಬೆಂಗಳೂರಿನ ಮಾತೃಛಾಯಾ ಸಂಸ್ಥೆಯಲ್ಲಿ ವೃದ್ಧರ, ಅನಾಥರ, ನೊಂದವರ ನೆರಳಾಗಿ ಸಂತೈಸಿದರು. ಅವರ ಆರೈಕೆ ಮಾಡಿದರು. ಹೀಗೆ ಸೇವೆ ಸಲ್ಲಿಸುತ್ತಾ ಸಾಗಿದವರಿಗೆ ತನ್ನೂರಿನಲ್ಲಿಯೂ ಸೇವೆ ಸಲ್ಲಿಸಬೇಕೆಂಬ ಸೆಳೆತ, ಅವರನ್ನು ತವರೂರಿನತ್ತ ಎಳೆದು ತಂದಿತ್ತು. ಆಗುಂಬೆಯಲ್ಲಿಯೇ ಸ್ಥಳೀಯ ಜನರನ್ನು ಒಗ್ಗೂಡಿಸಿ, ಪ್ರಾಕೃತಿಕ ವಸ್ತುಗಳನ್ನು ಬಳಸಿ ಗ್ರೀಟಿಂಗ್ ಕಾರ್ಡ್ ತಯಾರಿಕೆ, ಹೊಲಿಗೆ, ಹೆಣಿಗೆ, ಪೇಪರ್ ಬ್ಯಾಗ್, ಪೇಂಟಿಂಗ್ ಇತ್ಯಾದಿ ಕಲಿಸಿದರು. ತಯಾರಾದ ವಸ್ತುಗಳನ್ನು ಉತ್ತಮ ಬೆಲೆಗೆ ಮಾರಾಟ ಮಾಡಿಸಿ ಅದರಿಂದ ಬಂದ ಲಾಭ ಫಲಾನುಭವಿಗಳಿಗೆ ತಲುಪಿಸಿ, ಉಳಿದ ಒಂದು ಸಣ್ಣ ಪಾಲನ್ನು ಶಿಕ್ಷಣ ಸಂಸ್ಥೆಗೂ ನೀಡಿದರು. ಆದರೆ ಇತ್ತೀಚೆಗೆ ಗ್ರೀಟಿಂಗ್ ಕಾರ್ಡ್ ಸಂಸ್ಕೃತಿ ನಶಿಸುತ್ತಿದೆ, ಜನರ ಆಸಕ್ತಿಯು ಬೇರೆ ಬೇರೆ ಕಡೆ ಹರಿದಾಡುತ್ತಿದ್ದು, ವ್ಯಾಪಾರ ಕುಂಠಿತಗೊಂಡಿದೆ ಎಂಬ ಬೇಸರ ಇವರಲ್ಲಿ ಇದ್ದರೂ, ಗ್ರಾಮಸ್ಥರ ಆರ್ಥಿಕ ಸಬಲೀಕರಣದತ್ತ ಮಾತ್ರ ಗಮನ ಹರಿಸದೆ, ತಮ್ಮ ಬದುಕಿನ ಅಂಗವಾಗಿರುವ ಯೋಗ–ಧ್ಯಾನ–ಬಿರುಸು ನಡಿಗೆ–ಪೌಷ್ಟಿಕ ಆಹಾರ ಸೇವನೆಯನ್ನು, ಮನಃಶುದ್ಧಿಗಾಗಿ ವಿಪಶ್ಯನ ಧ್ಯಾನವನ್ನು ಹೇಳಿಕೊಡುತ್ತಾ, ಅವರಲ್ಲಿ ಆರೋಗ್ಯ ಸಮತೋಲೀಕರಣದತ್ತ ಒಲವು ಮೂಡಿಸುತ್ತಿದ್ದಾರೆ. ಇವರಿಗೆ ಜಾತಿ, ಧರ್ಮ, ಬಡವ, ಬಲ್ಲಿದನೆಂಬ ಬೇಧವಿಲ್ಲ. ಶಾಲೆಯೇ ದೇವಾಲಯ, ಸಮಾಜದಲ್ಲಿ ವಿದ್ಯಾಮಂದಿರ ಹೆಚ್ಚಬೇಕು. ಪರಿಸರ, ಪ್ರಾಣಿ, ಪಕ್ಷಿ ಕುರಿತಾದ ಪ್ರೀತಿ, ಅನುಕಂಪ ಹೆಚ್ಚಬೇಕೆನ್ನುವ ಜನ್ನಕ್ಕ, ತನ್ನ 85ನೇ ವಯಸ್ಸಿನಲ್ಲಿ 85 ಗಿಡಗಳನ್ನು ನೆಡುವ ಮೂಲಕ ಹುಟ್ಟು ಹಬ್ಬ ಆಚರಿಸಬೇಕು ಎಂಬ ಆಶಯ ಹೊಂದಿದ್ದಾರೆ.

ಆಗುಂಬೆಯ ಅನ್ನಪೂರ್ಣ ವಿದ್ಯಾಮಂದಿರದ ಕಮಿಟಿಯಲ್ಲಿರುವ ಇವರು, ಅಲ್ಲಿನ ಮಕ್ಕಳಿಗೆ ಪ್ರೀತಿಯ ದೊಡ್ಡಮ್ಮನಾಗಿ, ಮಕ್ಕಳ ಶಿಸ್ತು, ಸಂಯಮ, ಸಮಯಪಾಲನೆ ಮಾಡುವಂತೆಯೂ, ಆಹಾರ, ನೀರು ಪೋಲು ಮಾಡದಂತೆಯೂ ನಿಗಾ ವಹಿಸುವ ಇವರ ವಯಸ್ಸು ಈಗ 83 ಎಂದರೆ ತರುಣಿಯರು ನಾಚಿ ನೀರಾಗಿಬೇಕು, ಅಷ್ಟೊಂದು ಜೀವನೋತ್ಸಾಹ, ಲವಲವಿಕೆ. ಬಾಲ್ಯದಲ್ಲಿ ಆಭರಣ ತ್ಯಜಿಸಿ ಬಿಳಿ ಸೀರೆಯುಟ್ಟ, ತಮ್ಮಲ್ಲಿನ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಉದಾತ್ತ ಗುಣಗಳಿಂದ, ಸಹನೆ, ಸರಳತೆ, ಸೇವಾಮನೋಭಾವ, ಹಸನ್ಮುಖ, ಯೋಗ ಧ್ಯಾನಗಳಿಂದ ಗಳಿಸಿದ ಆರೋಗ್ಯವೇ ಅವರ ಆಭರಣವಾಗಿ, ಮೊದಲ ನೋಟದಲ್ಲಿಯೇ ಇವರನ್ನು ನೋಡಿದವರಿಗೆ ಗೌರವ ಮೂಡಿ ಅವರೊಬ್ಬ ಅಪ್ರತಿಮ ಸೌಂದರ್ಯವತಿ ಎಂದೆನಿಸುತ್ತದೆ.

ಇತ್ತೀಚೆಗೆ ಇವರನ್ನು ಭೇಟಿಯಾಗುವ ಅವಕಾಶವಾಗಿದ್ದು, ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದವರು ಶಿವಮೊಗ್ಗದಲ್ಲಿ ಮಾರ್ಚ್ 8, 9 ರಂದು ನಡೆಸುತ್ತಿರುವ ವಿಚಾರ ಸಂಕಿರಣ ಹಾಗೂ ಮಹಿಳಾ ದಿನಾಚರಣೆಯ ಅಂಗವಾಗಿ ಈ ಜಿಲ್ಲೆಯ ಮಹಿಳೆ ಮತ್ತು ಸಮಾಜಕ್ಕಾಗಿ ನಿಸ್ವಾರ್ಥ ಸೇವೆ ಮಾಡುತ್ತಾ ಎಲ್ಲಿಯೂ ಪ್ರಚಾರ ಬಯಸದೆ ಎಲೆಮರೆಯ ಕಾಯಿಯಂತಿರುವವರ ಜೀವನ ಕುರಿತಾದ ಬರಹ ಕಳಿಸುವಂತೆ ಪ್ರೇರೇಪಿಸಿದಾಗ ನಾನು ಹುಡುಕಿ ಹೊರಟಿದ್ದು ಜನ್ನಕ್ಕನವರನ್ನು. ಇದೇ ಜೆಸಿ ಆಸ್ಪತ್ರೆಯಲ್ಲಿ ನಮ್ಮ ತಂದೆಯವರು ಕೆಲಸ ಮಾಡುವಾಗ, ನಾವು ಇವರು ಅಕ್ಕಪಕ್ಕದ ಮನೆಯಲ್ಲಿದ್ದೆವು. ಸಣ್ಣ ಮಗುವಾಗಿದ್ದಾಗಿನಿಂದಲೂ ನನ್ನನ್ನು ಎತ್ತಿ ಆಡಿಸಿದ ಇವರನ್ನು ದಶಕಗಳ ನಂತರ ಹುಡುಕಿ ಹೋದಾಗ ಅಮ್ಮನ ಪ್ರೀತಿಯ ಅಪ್ಪುಗೆಯಲ್ಲಿ ಮತ್ತೆ ಮಗುವಾಗಿದ್ದೆ. ಇವರ ಸಾಂಗತ್ಯದಲ್ಲಿ ಹೊತ್ತು ಕಳೆದಿದ್ದೇ ತಿಳಿಯದಾಗಿತ್ತು. ತಮ್ಮ ಜೀವನಾನುಭವವನ್ನು ಹಂಚಿಕೊಂಡ ಇವರು, ನಾ ಹೊರಟು ನಿಂತಾಗ ಹೀಗೆಂದರು; 'ಇದು ನಾಮಕಾವಸ್ಥೆಯ ಸಂಘಟನೆಯಾಗದಿರಲಿ. ಮಾಡುವ ಕೆಲಸದಲ್ಲಿ ಶ್ರದ್ಧೆ, ಭಕ್ತಿ ಇದ್ದಲ್ಲಿ ಉತ್ತಮ ಫಲಿತಾಂಶ, ಹೋರಾಟಕ್ಕೆ ಬಲ ಬರುತ್ತದೆ. ಅಂತೆಯೇ ನಿಮ್ಮ ಸದುದ್ದೇಶ ಗಟ್ಟಿಗೊಂಡು, ಈಡೇರಲಿ ಮಗಳೇ. ಈ ಕಾರ್ಯದಲ್ಲಿ ಕೈಜೋಡಿಸಿದ ಸಮಸ್ತರಿಗೂ ಶುಭವಾಗಲಿ. ನಾನು ಕಾರ್ಯಕ್ರಮದಲ್ಲಿ ಭಾಗವಹಿಸುತ್ತೇನೆ' ಎಂದು ಅಭಯ ನೀಡಿ ನಿಷ್ಕಲ್ಮಶ ಮನಸ್ಸಿನೊಂದಿಗೆ ಬೀಳ್ಕೊಟ್ಟಾಗ ನನ್ನ ಮನಸ್ಸು ಧ್ಯಾನ ಮಾಡಿದಷ್ಟೇ ಪ್ರಶಾಂತವಾಗಿತ್ತು.

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಭೂದೇವಿಯ ಸಖಿ ಶ್ರೀದೇವಿ

❖ ಅಕ್ಷತಾ ಹುಂಚದಕಟ್ಟೆ

ಶ್ರೀದೇವಿ, ಕನ್ನಡದ ಪ್ರಸಿದ್ಧ ಲೇಖಕರಾದ ಹಾ. ಮಾ. ನಾಯಕರ ಸಹೋದರಿ. ಮೈಸೂರಿನಲ್ಲಿ ಹಾ. ಮಾ. ನಾಯಕರ ಮನೆಯಲ್ಲಿದ್ದುಕೊಂಡೇ ಬಿಎ ವಿದ್ಯಾಭ್ಯಾಸ ಮಾಡಿರುವ ಶ್ರೀದೇವಿ, ಬಾಲ್ಯದಿಂದ ಬಲ್ಲ ಕಡಿದಾಳು ಶಾಮಣ್ಣ ಅವರನ್ನು ಓದಿನ ದಿನಗಳಲ್ಲಿ ಮೈಸೂರಿನಲ್ಲಿ ಇದ್ದಾಗ ಹತ್ತಿರದಿಂದ ಅರಿತು ಮದುವೆಯಾದವರು. ಶಾಮಣ್ಣನವರ ಹಳ್ಳಿಯಲ್ಲಿ ನೆಲೆಸುವ ನಿರ್ಧಾರ, ರೈತಾಪಿ ಮಾಡಿ ಬದುಕುವ ನಿರ್ಧಾರ, ಸಮಾಜವಾದಿ ತತ್ವದ ಸೆಳೆತ, ಸೃಜನಶೀಲ ಸಾಹಸಗಳು ಎಲ್ಲಾ ಗೊತ್ತಿದ್ದೂ ನೀವು ಶಾಮಣ್ಣನವರನ್ನು ಮದುವೆಯಾಗುವ ಮತ್ತು ಅವರೊಂದಿಗೆ ಹಳ್ಳಿಯಲ್ಲಿ ಬದುಕು ಕಳೆಯುವ ರಿಸ್ಕ್ ತೆಗೆದುಕೊಂಡಿರಲ್ಲ ಎಂದು ಶ್ರೀದೇವಿ ಅವರನ್ನು ಕೇಳಿದರೆ, ಅವರು, 'ಪ್ರೀತಿ ಪ್ರೇಮಕ್ಕೆ ಸಾಟಿ ಯಾವುದೂ ಇಲ್ಲ. ಅದಿದ್ದರೆ ಎಲ್ಲಿಯಾದರೂ ಬದುಕು ಸಾಗಿಸುವುದಕ್ಕೆ ಸಿದ್ಧರಾಗುತ್ತೇವೆ' ಎನ್ನುತ್ತಾರೆ. ಹಾಗೆಯೇ, 'ಶಾಮಣ್ಣನವರು ಮದುವೆಗೆ ಮುಂಚೆಯೇ ಭಗವತಿಕೆರೆಯಲ್ಲಿ ರೈತಾಪಿ ಮಾಡುತ್ತಾ ಬದುಕುವ ನಿರ್ಧಾರ ತೆಗೆದುಕೊಂಡಿದ್ದರು. ನನಗೂ ಹಳ್ಳಿಯ ಬದುಕು ಸುಖ ಎನಿಸುತ್ತಿತ್ತು. ಆದ್ದರಿಂದ ಸಂತೋಷದಿಂದಲೇ ನಾನು ಹಳ್ಳಿಯಲ್ಲಿ ಸಂಸಾರ ಶುರು ಮಾಡಿದೆ. ಈ ಹಳ್ಳಿಯಲ್ಲಿ ನೆಲೆ ನಿಂತು ಅರೆ ಶತಮಾನವಾಗಿದ್ದರೂ ನಮ್ಮಿಬ್ಬರ ಜೊತೆಗೂಡಿದ ಹಳ್ಳಿಯ ಬದುಕು ರುಚಿ ಕಳೆದುಕೊಂಡಿಲ್ಲ' ಎನ್ನುವರು. ಕೃಷಿ ಕಾರ್ಮಿಕರ ಸಮಸ್ಯೆ, ಬೆಳೆಗೆ ತಗಲುವ ರೋಗಗಳು, ಬೆಲೆಯಲ್ಲಿ ಏರಿಳಿತ ಹೀಗೆ ಹತ್ತು ಹಲವು ಸವಾಲುಗಳನ್ನು ಎದುರಿಸುತ್ತಲೇ ಇರುವ ಶ್ರೀದೇವಿ ಮತ್ತು ಶಾಮಣ್ಣ ಎಲ್ಲಿಯೂ ಕೃಷಿಯ ಬಗೆಗೆ ಆಸಕ್ತಿ ಕಳೆದುಕೊಳ್ಳದೆ ಶ್ರದ್ಧೆಯಿಂದ ರೈತಾಪಿ ಬದುಕು ಮಾಡುತ್ತಿದ್ದಾರೆ. ಶ್ರೀದೇವಿ ಹೋರಾಟದಿಂದಲೂ ಎಷ್ಟು ಸಾರ್ಥಕತೆ ಪಡೆದಿದ್ದಾರೋ ಅಷ್ಟೇ ಕಷ್ಟ ನಷ್ಟ ಎದುರಿಸಿದ್ದಾರೆ. ರೈತ ಹೋರಾಟ ಚೈತನ್ಯದಾಯಕವಾಗಿದ್ದಾಗ ಇವರ ಮನೆಯೇ ಅದೆಷ್ಟೋ ರೈತರ ಆಶ್ರಯ ತಾಣವಾಗಿತ್ತು. ಜೊತೆಗೆ ರೈತ ಹೋರಾಟಗಾರರ ಚಳುವಳಿಯ ಕಷ್ಟ–ನಷ್ಟದ ಸಂದರ್ಭದಲ್ಲಿ ತಮ್ಮ ಮನೆಯ ತೆಂಗಿನಕಾಯಿಯನ್ನೋ ಭತ್ತವನ್ನೋ ಮಾರಿ ಚಳುವಳಿಯ ಸಾಲ ತೀರಿಸಲು ಶ್ರೀದೇವಿ ಅವರು ಹಿಂದೆ ಮುಂದೆ ನೋಡಿಲ್ಲ. ಅಂತರ್ ಜಾತಿ ಮದುವೆಗಳಿಗೆ ಪ್ರೇಮ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ವಿವಾಹಿತರಿಗೆ ಶಾಮಣ್ಣ ಶ್ರೀದೇವಿ ದಂಪತಿಗಳು ಬೆನ್ನಿಗೆ ನಿಂತ ಕಾರಣಕ್ಕೇ ಶ್ರೀದೇವಿಯವರ ಮನೆಗೆ ಕಲ್ಲು ಬಿದ್ದಿದ್ದು, ಹತ್ತು ಹಲವು ಬೈಗುಳ ತಿಂದಿದ್ದು, ಶಾಮಣ್ಣ ಅವರ ಮೇಲೆ ದೈಹಿಕ ಹಲ್ಲೆ ನಡೆಯುವಂಥ ಸಂದರ್ಭಗಳು ಸೃಷ್ಟಿಯಾಗಿದ್ದರೂ ಈ ದಂಪತಿಗಳು ಯಾವತ್ತೂ ಇಂತಹ ಪ್ರಕ್ರಿಯೆಗಳಿಂದ ವಿಚಲಿತರಾಗದೆ ಇಂದಿಗೂ ಸರಳ ಮದುವೆ ಮಾಡಿಸಲು ಸ್ವಂತದ ಕೆಲಸಗಳನ್ನು ಬದಿಗೊತ್ತಿ ಸಂತೋಷದಿಂದ ಹೋಗುತ್ತಾರೆ.

ಇಳಿ ಸಂಜೆಯ ದಿನಗಳಲ್ಲೂ ಶ್ರೀದೇವಿಯವರ ಜೀವನ ಪ್ರೇಮ ತುಸುವೂ ಕುಂದಿಲ್ಲ. ಶ್ರೀದೇವಿಯವರು ಮದುವೆಯಾಗಿ ಶಾಮಣ್ಣನವರ ಜೊತೆ ಬಂದಾಗ ಭಗವತಿಕೆರೆಯ ಮನೆಯಲ್ಲಿ ಒಂದು ಬಚ್ಚಲು ಇರಲಿಲ್ಲವಂತೆ. ಪಕ್ಕದಲ್ಲಿ ನೀರಿನ ತೊರೆಯೇ ಇರಬೇಕಾದರೆ ಬಚ್ಚಲು ಅಗತ್ಯವಿಲ್ಲ ಎಂಬುದು ಶಾಮಣ್ಣನವರ ಅಂಬೋಣವಾಗಿತ್ತು. ನಂತರದಲ್ಲಿ ಒಂದು ಸುಂದರವಾದ ಮನೆ ಕಟ್ಟಿಸಿಕೊಂಡು ಸರಳವಾಗಿ ಆದರೆ ಸೃಜನಶೀಲವಾಗಿ ಶ್ರೀದೇವಿ–ಶಾಮಣ್ಣ ಬದುಕು ಕಟ್ಟಿಕೊಂಡಿದ್ದಾರೆ. ಇವತ್ತಿಗೂ ಮನೆಗೆ ಹೋದವರನ್ನು ತಮ್ಮ ಪ್ರೀತಿಯ ಆತಿಥ್ಯದಿಂದ ಸತ್ಕರಿಸುವ ಶ್ರೀದೇವಿಯವರು ಹೆಚ್ಚಿನ ಸಂದರ್ಭದಲ್ಲಿ ನಿಮ್ಮ ಮನೆಯಲ್ಲಿ ನೆಡಿ ಎಂದು ಗಿಡವೊಂದನ್ನು ಕೊಟ್ಟು ಕಳಿಸುವಷ್ಟು ಜೀವನೋತ್ಸಾಹಿ. ಆದರೆ ಈಗ ನಡೆಯುತ್ತಿರುವ ಎಳೆಗೂಸುಗಳ ಮೇಲಿನ ಅತ್ಯಾಚಾರ, ರೈತರ ಆತ್ಮಹತ್ಯೆ, ಕೊಳ್ಳುಬಾಕ ಸಂಸ್ಕೃತಿ ಕಲಿಸಿದ ಹಪಾಹಪಿತನ, ಧರ್ಮಗಳ ನಡುವಿನ ನೀಚ ರಾಜಕಾರಣ ಎಲ್ಲವೂ ಇವರನ್ನು ವಿಚಲಿತರನ್ನಾಗಿಸುತ್ತದೆ. ಶಾಮಣ್ಣನವರ ಬೆನ್ನಿಗೆ ನಿಂತು ಅವರ ಬದುಕಿಗೆ ಒಂದು ಅರ್ಥಪೂರ್ಣತೆ ತಂದ, ತನ್ನ ಅಸ್ಮಿತೆಯನ್ನೂ ಉಳಿಸಿಕೊಂಡಿರುವ ಶ್ರೀದೇವಿಯವರು ನಮ್ಮ ನಡುವಿನ ಹೆಮ್ಮೆಯ ರೈತ ಮಹಿಳೆ. ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಸಹಭಾಗಿ ಸಂಘಟನೆಗಳ ಜೊತೆಗೂಡಿ ಶಿವಮೊಗ್ಗೆಯಲ್ಲಿ ಮಾರ್ಚ್ 9ರಂದು ನಡೆಸಲಿರುವ ವಿಶ್ವ ಮಹಿಳಾ ದಿನದ ಜಾಥಾ ಉದ್ಘಾಟನೆ ಮಾಡಿದ್ದಾರೆ.

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಹುತ್ತ ಕಟ್ಟದೆ ಮೂಡಿದ ರೂಪ - ಗೌರಮ್ಮ

❖ ವೃಂದಾ ಹೆಗಡೆ

25/02/2018 ನೇ ಭಾನುವಾರ. ಸಂಜೆ ಚರಕ ಉತ್ಸವ ಕಾರ್ಯಕ್ರಮದಲ್ಲಿ ಪ್ರಸನ್ನರವರ ನಿರ್ದೇಶನದ 'ತಾಯವ್ವ' ನಾಟಕ. ಎಂ.ಡಿ.ಪಲ್ಲವಿ ಪ್ರಧಾನ ಭೂಮಿಕೆಯಲ್ಲಿ. ನಾಟಕ ಪ್ರಾರಂಭಕ್ಕಿಂತ ಮೊದಲು ಸಭಾ ಕಾರ್ಯಕ್ರಮ. ಗಣ್ಯ ಅತಿಥಿಗಳ ಜೊತೆ ಚರಕ ಸಂಸ್ಥೆಯ ಅಧ್ಯಕ್ಷೆ ಗೌರಮ್ಮ ವೇದಿಕೆಯ ಮೇಲೆ. (ಕಾರ್ಯಕ್ರಮದ ಅಧ್ಯಕ್ಷೆಯೂ ಹೌದು) ನೇಕಾರಿಕೆಯಲ್ಲಿ ಸಾಧನೆಗೈದ ಮಹಿಳೆ ಹಾಗೂ ಪುರುಷರಿಗೆ ಸನ್ಮಾನವಿತ್ತು. ಯಾದಗಿರಿಯ ಶಹಾಪುರದ ಪುಷ್ಪಲತಾ ಎಂಬ ಮಹಿಳೆಗೆ ಸನ್ಮಾನ ಮಾಡುತ್ತಾ 'ಇವರು 2000 ಇಸವಿಯಲ್ಲಿ ಮದುವೆಯಾದರು, ಇವರಿಗೆ ಐದು ಮಕ್ಕಳು....' ಹೀಗೆ ಪರಿಚಯ ಮುಂದುವರಿದಿತ್ತು. ಮನಸ್ಸು ಲೆಕ್ಕಾಚಾರದಲ್ಲಿ ಮುಳುಗಿತ್ತು. ಈಗಿನ ಕಾಲದಲ್ಲಿ ಪುಷ್ಪಲತಾ ಎಂಬ ಮಹಿಳೆಗೆ ಐದು ಮಕ್ಕಳು! ಇನ್ನೊಬ್ಬ ಸಾಧಕಿ ನಂದಿನಿ. ಆರು ಮಕ್ಕಳಲ್ಲಿ ಕೊನೆಯವರು. ನಂತರ ನಾನು ಮಾತಾಡಿಸಿದ ಚರಕದ ಹೆಣ್ಣುಮಕ್ಕಳದ್ದು ಒಂದೇ ಕತೆ.

'ನೀವು ಎಷ್ಟು ವರ್ಷದಿಂದ ಇಲ್ಲಿ ಕೆಲಸ ಮಾಡ್ತಾ ಇದ್ದೀರಾ?'

'ನಾನು ಬಂದು ಹದಿನೈದು ವರ್ಷ ಆಯ್ತೇನೋ'

'ಎಷ್ಟು ಓದಿದ್ದೀರಾ?'

'ಎರಡ್ನೇ ಕ್ಲಾಸ್ ತಂಕ"

'ಯಾಕೆ? ಯಾಕೆ ಶಾಲೆ ಬಿಟ್ಟಿದ್ದು?'

'ನಮ್ಮನೇಲಿ ತುಂಬಾ ಮಕ್ಕಳು. ನಾನೇ ದೊಡ್ಡೋಳು. ಎಂಟೋ ಹತ್ತೋ ಮಕ್ಕಳು ನಮ್ಮಮ್ಮಂಗೆ. ಅವರನ್ನೆಲ್ಲ ನೋಡ್ಕಲಕಂತ ಶಾಲೆ ಬಿಡಿಸಿದ್ರು. ಆ ಮಕ್ಕಳೆಲ್ಲ ಒಂಥರ ಹ್ಯಾಂಡಿಕ್ಯಾಪು. ಒಂದು ಉಳೀಲಿಲ್ಲ. ಒಬ್ನೇ ಒಬ್ಬ ತಮ್ಮ ಇದಾನೆ. ಅವನಿಗೀಗ ಮದ್ವೆ ಆಗಿದೆ. ಮಕ್ಕಳಿದಾರೆ. ನಂಗೆ ವಿದ್ಯೇನೂ ಇಲ್ಲ. ನಾನು ನೋಡ್ಕಂಡ ಮಕ್ಕಳು ಇಲ್ಲ.'

ಕುಬ್ಜವಾಗಿರುವ ಮಹಾಲಕ್ಷ್ಮಿ ಹೇಳುವಾಗ ನನಗೆ ನನ್ನಕ್ಕ ಕಣ್ಮುಂದೆ ಬಂದಳು. ಏಳು ಮಕ್ಕಳಲ್ಲಿ ಹಿರಿಯಳಾಗಿ ಹುಟ್ಟಿದ ಅವಳಿಗೆ ಪಾಪ ಬಾಲ್ಯವೇ ಇಲ್ಲ. ಐದಾರು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ವರುಷಗಳಿರುವಾಗಲೇ ತಂಗಿಯರನ್ನು ನೋಡಿಕೊಳ್ಳುವ ಕೆಲಸ. ಏಳನೇ ಮಗುವಾಗಿ ಹುಟ್ಟಿದ ನನ್ನ ತಮ್ಮನಿಗೋಸ್ಕರ ನಾವು ಹುಟ್ಟಿ ಬೆಳೆದು, ಭೇದ ಭಾವವೆಣಿಸದ ಅಪ್ಪ ಅಮ್ಮಂದಿರನ್ನು ಪ್ರೀತಿಸುತ್ತ, ಹೊಗಳುತ್ತಾ ಕಾಲ ಸರಿದಾಗ ನನ್ನಕ್ಕನ ತ್ಯಾಗ ಕಾಲದಲ್ಲಿ ಸಹಜವಾಗಿ ಹೋಯ್ತು. ಎಷ್ಟು ಹೆಣ್ಮಕ್ಕಳು ಮಾಯವಾಗಿ ಬದುಕುತ್ತಿರುತ್ತಾರೆ ಎಂದು ಆಲೋಚಿಸುತ್ತ ಇರುವಾಗ;

ಗೌರಮ್ಮನವರು ಸಭಾ ಕಾರ್ಯಕ್ರಮವನ್ನು ಉದ್ದೇಶಿಸುತ್ತಿದ್ದ ರೀತಿ ಗಮನ ಸೆಳೆಯಿತು. ಹಳ್ಳಿ ಸೊಗಡನ್ನು ಇಟ್ಟುಕೊಂಡೆ ಅವರು ವೇದಿಕೆಯನ್ನು ನಿರ್ವಹಿಸಿದ ರೀತಿ ಇವರನ್ನು ಮಾತಾಡಿಸಲೇಬೇಕು ಎಂಬ ನಿರ್ಧಾರಕ್ಕೆ ನನ್ನ ಎಳೆದೊಯ್ದಿತು. ಚರಕದ ಹಿಂದೆ ಕುಳಿತು ದಾರವನ್ನು ಬಾಬಿನ್‌ಗೆ ಸುತ್ತುತ್ತಿರುವ ಗೌರಮ್ಮ ನನಗೆ ಗಾಂಧಿಯಂತೆಯೋ, ಧ್ಯಾನಸ್ಥ ಯೋಗಿಯಂತೆಯೋ ಕಾಣಲಿಲ್ಲ. ಅದು ನನ್ನ ಕವಿ ಮನದ ಕೊರತೆ ಇರಬಹುದು. ಅತ್ಯಂತ ಸಹಜ ವಾತಾವರಣದಲ್ಲಿ ಸಹಜ ಎಂದರೆ ಆದರ್ಶ ಬಯಸಿ ಸಾಕಾರಗೊಳಿಸಿಕೊಂಡಂತ ಪರಿಸರದಲ್ಲಿ ಸಹಜ ಜೀವಿಗಳಂತೆ ಗೌರಮ್ಮ ಮತ್ತು ಲಕ್ಷ್ಮಮ್ಮ ಕೂತು ನೂಲು ಸುತ್ತುತ್ತಿದ್ದರು. ಮಾತಿಗೆಳೆದಾಗ ಮತ್ತೆ ಸಹಜವಾಗಿಯೇ ಬಾಲ್ಯ, ಓದು ಈ ಬಗೆಗೆ ಮಾತು.. 'ಮೂರನೇ ತರಗತಿವರೆಗಿನ ಓದು, ಐದು ಹೆಣ್ಣು, ಎರಡು ಗಂಡು. ನಾನು ಎರಡನೆಯವಳು ಮತ್ತೆ ಮಕ್ಕಳಾಗ್ತ ಹೋಯ್ತು. ಅವರನ್ನ ನೋಡ್ಕಳಿರಲ್ಲ ಅಂತಂದು ಮತ್ತೆ ನನ್ ಸಾಲೆ ಬಿಡ್ಸಿ ನೋಡ್ಕಣಕ್ ಹಾಕಂಡ್ರು ಆವಾಗೆಲ್ಲ ಆಪ್ರೇಸನ್ ಗೀಪ್ರೇಸನ್ ಇರಲಿಲ್ಲ'.

'ಇತ್ತು ಗೌರಮ್ನೋರೆ ನೀವೇನು ಭಾಳ ಹಿಂದಿನೋರಲ್ಲ. ಮತ್ತೆ ಡಾಕ್ಟರರೆ ಹೇಳ್ತಾರೆ ಹೆಂಗಸರಿಗಿಂತ ಗಂಡಸರಿಗೆ ತುಂಬಾ ಸುಲಭ ಆಪ್ರೇಶನ್ ಮಾಡಿಸ್ಕೊಳೋದು ಅಂತ. ನೋವು ಸಹ ಇರೋದಿಲ್ಲ ಅಂತ. ಆದರೆ ಯಾವ ಗಂಡೂ ಮುಂದೆ ಬರಲ್ಲ ನೋಡಿ.'

'ಹೆದ್ರಕೆಗೆ ಆಸ್ಪತ್ರೆಯೋರ್ ಬಂದಾಗ ಕಾಡಿಗ್ಹೋಗಿ ಅಡ್ಕಂಡ್ ಬಿಟ್ಟಿದ್ಲು ನಮ್ಮವ್ವ. ಇದು ಹೆದ್ರಕಂಡ್ ಪ್ರಾಣ ಬಿಡ್ತದೆ ಅಂತ್ಹೇಳಿ ಯಾರಿಗೂ ಹೇಳದೆ ಅವರಣ್ಣನ ಮನೆಗ್ಹೋಗಿ ಅಲ್ಲೆ ಆಪ್ರಸನ್ ಮಾಡಿಸ್ಕ ಬಂದ ನಮ್ಮಪ್ಪ'.

'ಓ ನಿಮ್ಮಪ್ಪನೆ ಏಳು ಮಕ್ಕಳಾದ್ಮೇಲೆ ಆಪ್ರೇಸನ್ ಮಾಡಿಸ್ಕಂಡ್ರ? (ನಮ್ಮಮ್ಮನ ನೆನಪಾಯ್ತು. ಏಳು ಹಡೆದ ನಂತರ ಆಪ್ರೇಶನ್ ಮಾಡಿಸ್ಕಂಡ್ಳು) ಮೆಚ್ಚಬೇಕು ಬಿಡಿ'.

'ಹಂಗೆ ಮಕ್ಕಳಾಡಿಸ್ಕಂತ ದೊಡ್ಡ ಆದೆ, ಮದುವ್ಯಾಯಿತು. ಸೋದರಿಕೆಯಲ್ಲೇ ಮದ್ವೆ, ಅದೊಂದು ದೊಡ್ಡ ಕತೆ ಬಿಡಿ'.

'ಹೇಳಿ ಗೌರಮ್ಮವರೆ'

ಬದುಕಿನ ಹೆಜ್ಜೆಗಳು ಒಂದೊಂದು ಮುಂದಿನ ಬದುಕು ಕಟ್ಟುವತ್ತ ತಮ್ಮದೇ ತರವಾಗಿ ಚಿಕ್ಕಚಿಕ್ಕದಾಗಿ ನೆರವಾಗುತ್ತ ಇರುತ್ತವೆ. ಗೌರಮ್ಮನವರ ಗಂಡ, ಮಗ ಹುಟ್ಟಿ ಸ್ವಲ್ಪ ದಿನಗಳವರೆಗೂ ಚೆನ್ನಾಗಿಯೇ ಇದ್ದರು. ನಂತರ ಕುಡಿತ ಎಲ್ಲ ಕಲಿತು ಬಂದು...

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

'ಮತ್ತೇನಿಲ್ಲ ತುಂಬಾ ಸಿಟ್ಟಿಂದ ಹ್ವಡೆಯೋದು, ಬಡಿಯೋದು ಮಾಡ್ತಿದ್ರು.' ಮಗನ ಭವಿಷ್ಯಕ್ಕೋಸ್ಕರ ಗಂಡನ್ನ ಬಿಟ್ಟು ಎದ್ರಿಗೇ ಇರುವ ತವರುಮನೆ ಸೇರ್ಕ್ಕೊಂಡ್ರು ಗೌರಮ್ಮ. ಗಂಡನಿಂದ ವಿಚ್ಛೇದನ ಬಯಸಿ ಸಾಗರದ ಕೋರ್ಟಿಗೆ ಹಾಕಿದ್ರು. ಆದರೆ ವರ್ಷಗಟ್ಟಲೆ ಅಲೆದ್ರೂ ಗಂಡ ಕೋರ್ಟಿಗೆ ಹಾಜರಾಗಲೇ ಇಲ್ಲ. ದುಡ್ಡು ಹೋಯ್ತು. ಕಾನೂನಾತ್ಮಕ ವಿಚ್ಛೇದನ ಸಿಗಲಿಲ್ಲ. ಹಂಗೇ ಗಂಡನೂ ಕರೀಲಿಲ್ಲ. ಅಲ್ಲಿಗೆ ದಾಂಪತ್ಯ ಮುಗೀತು.

'ಇಲ್ಲಿ(ಚರಕಕ್ಕೆ) ಇಷ್ಟಪಟ್ಟು ಬಂದ್ರಾ? ಅಥವಾ ಅನಿವಾರ್ಯತೆ ಎಳೆತಂತಾ?'

ಇಷ್ಟಪಟ್ಟೂ ಅಲ್ಲ. ಅನಿವಾರ್ಯವಾಗೂ ಅಲ್ಲ. ಪ್ರಸನ್ನಾರು ಕವಿಕಾವ್ಯ ಅಂತ ಟ್ರಸ್ಟ್ ಮಾಡ್ಕೊಂಡಿದ್ರು. ಆ ಟ್ರಸ್ಟ್ ಸಾಹಿತ್ಯದಲ್ಲಿ ಅಭಿರುಚಿ ಇರುವವರನ್ನು ಒಂದೆಡೆ ಸೇರಿಸುವ ಇರಾದೆಯಿಂದ ಪ್ರಾರಂಭವಾದ್ದು. 'ಚರಕ'ವಾಗಿ ಮಾರ್ಪಡಲು ಗೌರಮ್ಮನವರೂ ಒಂದು ಹೆಜ್ಜೆಯಾಗಿದ್ದು ಹೇಗೆ ಎಂಬುದು ಅವರ ಚರಕದತ್ತ ಪಯಣವನ್ನು ಅವಲೋಕಿಸಿದರೆ ಅರ್ಥವಾಗುತ್ತದೆ.

ಪ್ರಸನ್ನರವರು ತಮ್ಮ ಮನೆಯಿಂದ ಕವಿಕಾವ್ಯಕ್ಕೆ ಹೋಗುವ ದಾರಿಯಲ್ಲಿ ಗೌರಮ್ಮನವರ ಮನೆ ಬರುತ್ತದೆ. ಅಲ್ಲಿ ಆಗಲೇ ಗೌರಮ್ಮ ಒಂದು ಗೌರ್ನಮೆಂಟ್ ಸ್ಕೀಮಿನಲ್ಲಿ ಆರು ತಿಂಗ್ಳ ಟ್ರೈನಿಂಗ್ ತಗೊಂಡು ಬಟ್ಟೆ ನೇಯುತ್ತಿದ್ದರು. ಇವರೇನು ಮಾಡ್ತಾ ಇದ್ದಾರೆ ಅಂತ ಕುತೂಹಲದಿಂದ ಹಣಿಕಿ ಹಾಕಿದ್ದೇ ಆರಂಭ. ಆಗ ಪ್ರಸನ್ನರವರು ತಮ್ಮ ಮಗು ಚಿಕ್ಕದಾಗಿದ್ದರಿಂದ ದಿನದಲ್ಲಿ ಒಂದು ಗಂಟೆ ಕಾಲ ಮನೆಗೆಲಸಕ್ಕೆ ಬನ್ನಿ ಎಂದು ಕರೆಯುತ್ತಾರೆ. ಗೌರಮ್ಮ ಒಪ್ಪಿ ಆ ಕೆಲಸ ಒಂದ್ವರ್ಷ, ಆರು ತಿಂಗಳು ಪೂರೈಸುವ ಹೊತ್ತಿಗೆ ಪ್ರಸನ್ನರವರು ಒಂದು ಅಂಗನವಾಡಿ ಪ್ರಾಜೆಕ್ಟ್ ತಗೋತಾರೆ. ಗೌರಮ್ಮ ನೀವು ಬನ್ನಿ, ಕೈ ಜೋಡಿಸಿ ಎಂದು ಕರೆಯುತ್ತಾರೆ. ಮೊದಲು ವಿದ್ಯಾಭ್ಯಾಸದ ಕೊರತೆಯಿಂದುಂಟಾದ ಕೀಳರಿಮೆಯಿಂದ ಹಿಂಜರಿಯುವ ಗೌರಮ್ಮ ನಂತರ ಪ್ರಾಜೆಕ್ಟ್‌ನಲ್ಲಿ ಪಾಲ್ಗೊಳ್ಳುತ್ತಾರೆ. ಅಂಗನವಾಡಿಗಳ ಗೋಡೆಗಳ ಮೇಲೆ ಚಿತ್ತಾರ ಬಿಡಿಸುವುದು, ಗೊಂಬೆ ಮಾಡುವುದು ಇತ್ಯಾದಿ. ಒಂದು ವರ್ಷದ ಪ್ರಾಜೆಕ್ಟ್ ಮುಗಿದ ನಂತರ ಅದರಲ್ಲಿ ಪಾಲ್ಗೊಂಡವರನ್ನು ಚದುರಲು ಬಿಡಬಾರದೆಂಬ ಇರಾದೆಯಿಂದ ಒಂದು ಸಣ್ಣ ಬಟ್ಟೆ ತಯಾರುಮಾಡುವ 'ಗಾರ್ಮೆಂಟ್ ಟೈಪ್' ಮಾಡಣ ಅಂತ ಆಲೋಚಿಸಿದ್ರು. ಎಲ್ಲಿ ಮಾಡ್ಬೇಕು ಅಂತ ಯೋಚನೆ ಮಾಡ್ತಾಗ ಗೌರಮ್ಮನವರು ಸೂಚಿಸುತ್ತಾರೆ. 'ಸರ್ ಅಲ್ಲಿ ಕೈ ಮಗ್ಗ ತರಬೇತಿಗಾಗಿ ಮಾಡಿದ್ ಬಿಲ್ಡಿಂಗ್ ಒಂದ್ ಹಾಳ್ ಬಿದ್ದಿದೆ. ಅದ್ರಲ್ಲಿ ಮಾಡ್ಬಹುದು ಅದ್ ಕೊಟ್ರೆ. ಅದನ್ ಯಾರ್ಹತ್ರ ಕೇಳ್ಬೇಕು ಅಂತ ನನಗ್ಗೊತ್ತು.'


ಇಲ್ಲಿಯ 'ನನಗ್ಗೊತ್ತು' ಎಂಬುದು ಎಷ್ಟು ಪ್ರಬಲವಾದ್ದು ಹಾಗೂ ಕಣ್ಣಿಗೇ ಕಾಣದೆ ಬದುಕಿನ ಝುರಿಯಲ್ಲಿ ತಳದ ಅಲೆಯಾಗಿ ಹೋಗಿರುವುದು.

ಹೀಗೆ ಚರಕ ರೂಪುಗೊಳ್ಳುವಲ್ಲಿ ಪ್ರಸನ್ನರವರ ಅದ್ಭುತ ಕಾಣ್ಕೆ, ಶ್ರಮ, ಜ್ಞಾನ ಎಷ್ಟು ಕಾರಣವೋ ಅಷ್ಟೇ ಗೌರಮ್ಮನವರ ಪ್ರಕೃತಿ ಸಹಜ ಜ್ಞಾನವೂ ಅಷ್ಟೇ ಕಾರಣ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮೊದಮೊದಲು ಬಟ್ಟೆಯನ್ನು ತಲೆ ಮೇಲೆ ಹೊತ್ತು, ಸಂತೆಗೆ, ಜಾತ್ರೆಗೆ ಅಲೆದ ಕಥೆಯಿಂದ ಈಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತ ಗ್ರಾಮೀಣ ಬದುಕಿನ ಗೆರೆ ದಾಟದಂತೆ ಗಾಂಧಿಯ ಗ್ರಾಮ ಸ್ವರಾಜ್ಯವನ್ನು ಸಾಕಾರಗೊಳಿಸುವಲ್ಲಿ 'ಚರಕದ' ಪಾತ್ರ ತುಂಬಾ ದೊಡ್ಡದು. ಹೆಗ್ಗೋಡಿನ ತುಂಬಾ ಸಿದ್ಧ ಉಡುಪುಗಳ ತಯಾರಿಕಾ ಘಟಕಗಳು ಸ್ವತಂತ್ರವಾಗಿ ನಡೆಯುತ್ತಾ, ಪೇಟೆಯ ಮಂದಿಯನ್ನು ತನ್ನೆಡೆಗೆ ಸೆಳೆದುಕೊಂಡದ್ದು, ಸಮಾರಂಭಗಳಲ್ಲಿ ಯಾರನ್ನು ನೋಡಿದರೂ ಕೈಮಗ್ಗದ ದಿರಿಸುಗಳನ್ನು ತೊಡುವಂತೆ ಮಾಡಿದ್ದು ಕಡಿಮೆ ಸಾಧನೆಯಲ್ಲ.

❖



Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಎಂದೂ ಯಾರೊಬ್ಬರನ್ನೂ ದ್ವೇಷಿಸಬೇಡಿ

❖ ಜನ್ನಿಬಾಯಿ

ಎಲ್ಲರಿಗೂ ನಮಸ್ಕಾರ. ಎಲ್ಲರಿಗೂ ಮಹಿಳಾ ದಿನದ ಶುಭಾಶಯಗಳು. ಮಹಿಳೆಯರು ತುಂಬ ದೌರ್ಜನ್ಯವನ್ನು ಅನುಭವಿಸಿ ಈ ಮಟ್ಟಕ್ಕೆ ಬಂದಿದ್ದಾರೆ. ಬಹಳ ವರ್ಷದ ಹಿಂದೆನೇ ನಾನು ನನ್ನ ಸ್ವಾತಂತ್ರ್ಯವನ್ನು ಉಳಿಸಿಕೊಂಡೆ. ನನ್ನ ಮನಸ್ಸಿನಂತೆ ನಾನು ನಡೆದೆ. ಎಂದೂ ಹಿಮ್ಮೆಟ್ಟಲಿಲ್ಲ. ಒಳ್ಳೆಯ ನಿರ್ಧಾರವನ್ನ ತಗೊಂಡೆ. ಎಲ್ಲರೂ ನೆರವು ಕೊಟ್ಟರು ನನಗೆ. ದೀನ ದಲಿತರ ಸೇವೆಗೆ ನನ್ನ ಜೀವನವನ್ನ ಮುಡಿಪಿಟ್ಟಿದ್ದೇನೆ. ನರ್ಸಿಂಗ್ ಮಾಡುವ ವೃತ್ತಿ ನನ್ನದು. ಅದನ್ನೇ ಮುಂದುವರೆಸಿಕೊಂಡೆ. ಮೂಲಭೂತವಾಗಿ ನಾನು ನನ್ನ ಕರ್ತವ್ಯವನ್ನು ನಿಭಾಯಿಸಿದ್ದೇನೆ. ಶಾಂತಿ ನೆಮ್ಮದಿ ನನಗೆ ಈಗಲೂ ಇದೆ. ಅದೇ ನನ್ನನ್ನು ಕಾಯುತ್ತಾ ಇದೆ. ದೇವರ ದಯದಿಂದ ನನಗೆ 83 ವರ್ಷಗಳು. ಬೇಕಾದಷ್ಟು ಮರಗಳನ್ನು ನೆಟ್ಟಿದ್ದೇನೆ. ಈಗಲೂ ನನ್ನ ಸ್ವಂತ ಕೆಲಸಗಳನ್ನು ನಾನೇ ಮಾಡಿಕೊಳ್ತಾ ಇದ್ದೇನೆ. ಹುಡುಗಿಯರಿಗೆಲ್ಲ ಎಷ್ಟರಮಟ್ಟಿಗೆ ಉತ್ತೇಜನ ಕೊಡಲಿಕ್ಕೆ ಸಾಧ್ಯವೋ ಅಷ್ಟನ್ನು ಕೊಡುತ್ತಾ ಇದ್ದೇನೆ. ಯಾವ ಜಾತಿ ಮತ ಭೇದ ನನ್ನ ಮನಸ್ಸಿನಲ್ಲಿ ಇಲ್ಲ.

ಪ್ರೀತಿಸುವ ಹೃದಯದಿಂದ ನೆಮ್ಮದಿಯನ್ನು ಕಂಡುಕೊಳ್ಳಬೇಕು ಮಹಿಳೆಯರೇ. ಎಂದೂ ಯಾರೊಬ್ಬರನ್ನೂ ದ್ವೇಷಿಸಬೇಡಿ. ಅಂಥ ಸಂದರ್ಭ ಬಂದ್ರೆ ನಕ್ಕು ಆ ಜಾಗವನ್ನು ಖಾಲಿ ಮಾಡಿ ಬಿಡಿ. ಯಾವತ್ತೂ ನಗು ಮುಖದಿಂದಲೇ ಇರಿ. ಸಂಕಷ್ಟದಲ್ಲಿರುವವರಿಗೆ ತಕ್ಷಣ ಸ್ಪಂದಿಸಿ. ಅದು ನಮ್ಮ ಜೀವನದ ಗುರಿಯಾಗಲಿ. ಅದೇ ನಮ್ಮನ್ನ ಕಾಪಾಡುತ್ತೆ. ಸೂರ್ಯ ಅಸ್ತಂಗತನಾಗಬೇಕಾದರೆ ಕೇಳಿದನಂತೆ, "ಯಾರಿದ್ದೀರಾ ಇಲ್ಲಿ? ನಾನು ಅಸ್ತಂಗತನಾಗುತ್ತಿದ್ದೇನೆ. ಮುಂದೆ ನನ್ನ ಕೆಲಸವನ್ನು ಯಾರು ಮಾಡ್ತೀರಿ" ಅಂತ. ಆಗ ಅಲ್ಲಿದ್ದ ಒಂದು ಪುಟ್ಟ ಹಣತೆ ಹೇಳ್ತಂತೆ, "ನಾನು ನನ್ನ ಕೈಲಾದಷ್ಟು ಬೆಳಕನ್ನ ನೀಡುತ್ತೇನೆ". ಆ ಪುಟ್ಟ ಹಣತೆಯಂತೆ ಉರಿದು ನಾವು ನಮ್ಮ ಕರ್ತವ್ಯಗಳನ್ನ ನಿಭಾಯಿಸೋಣ. ಇಷ್ಟರವರೆಗೆ ನಾನು ಏನನ್ನೂ ಬಯಸಿಲ್ಲ ಈ

ಸಮಾಜದಿಂದ. ಯಾವುದೇ ಅಹಂ ಇಲ್ಲದೇ ಪ್ರೀತಿಯಿಂದ ಬದುಕೋಣ. ಎಲ್ಲರಿಗೂ ಒಳ್ಳೆಯದಾಗಲಿ.

❖


Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಒಗ್ಗಟ್ಟಾದರೆ ಪರಿಹಾರ

❖ ಶ್ರೀದೇವಿ ಶಾಮಣ್ಣ

ಮಹಿಳಾ ದಿನದ ಸಂದರ್ಭದಲ್ಲಿ ನಾವೆಲ್ಲ ಇಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಸೇರಿದ್ದೇವೆ ಎಂಬುದು ತುಂಬಾ ಸಂತೋಷ ತರುವ ಸಂಗತಿ. ಮಹಿಳೆಯರು ಬಹಳ ಹಿಂದಿನಿಂದ ಅನುಭವಿಸುತ್ತಿರುವ ಕಷ್ಟ, ನೋವುಗಳು ಒಂದೆರಡಲ್ಲ. ಆದರೆ ಮಹಿಳೆಯರು ಪರಸ್ಪರ ಒಗ್ಗಟ್ಟಾದರೆ ಮಾತ್ರ ನಮ್ಮೆಲ್ಲ ಕಷ್ಟಗಳಿಗೆ ಪರಿಹಾರ ಸಿಗಲು ಸಾಧ್ಯ. ಇಲ್ಲಿ ಈ ಸಂಖ್ಯೆಯಲ್ಲಿ ಸೇರಿರುವ ಮಹಿಳೆಯರ ಒಗ್ಗಟ್ಟು ನಾವು ಮಹತ್ವದ್ದನ್ನು ಸಾಧಿಸಿಯೇ ಸಾಧಿಸುತ್ತೇವೆ ಎಂಬುದನ್ನು ರುಜುವಾತು ಪಡಿಸುವಂತಿದೆ. ಎಲ್ಲರಿಗೂ ಮಹಿಳಾ ದಿನದ ಶುಭಾಶಯಗಳು.

❖



Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಸಮಾನತೆ ಮಹಿಳಾ ಹಕ್ಕಾಗಲಿ

❖ **ಜ್ಯೋತಿ. ಎಸ್.** (ಅಲೆಮಾರಿ ಕುಟುಂಬದ 8ನೇ ತರಗತಿ ವಿದ್ಯಾರ್ಥಿನಿ)

ಇಲ್ಲಿ ಸೇರಿರುವ ಎಲ್ಲಾ ಸಮತೆಯ ಮನಸ್ಸುಗಳೇ, ನಿಮ್ಮೆಲ್ಲರಿಗೂ ವಿಶ್ವ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ಕೋರುತ್ತಾ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರಹದಿಂದ ಆಯ್ದ ಕೆಲವನ್ನು ಓದಬಯಸುತ್ತೇನೆ.

"ಹಿಂದೆ ಸತಿಪತಿಧರ್ಮ ಪಾಲನೆಯಲ್ಲಿತ್ತು. ಸತಿ ಧರ್ಮ ಎಂದರೆ ಹೆಣ್ಣು ಪರಿಶುದ್ಧಳಾಗಿರುವುದು. ಪತಿ ಧರ್ಮ ಎಂದರೆ ಹಾಗೆ ಗಂಡೂ ಪರಿಶುದ್ಧನಾಗಿರುವುದು. ಆದರೆ ಇತಿಹಾಸದಲ್ಲಿ ಎಲ್ಲಿಯೂ ಕೂಡ ಪತಿಯು ಪರಿಶುದ್ಧನೋ ಅಲ್ಲವೋ ಎನ್ನುವುದಕ್ಕೆ ಯಾವ ಪರೀಕ್ಷೆ ಪವಾಡಗಳೂ ನಡೆದ ಉದಾಹರಣೆಯಿಲ್ಲ. ಆದರೆ ಹೆಣ್ಣು ಪರಿಶುದ್ಧಳೋ ಅಲ್ಲವೋ ಎನ್ನುವುದಕ್ಕೆ ಅದೆಷ್ಟೋ ಲೆಕ್ಕವಿಲ್ಲದಷ್ಟು ಪರಿಶೋಧನೆಗಳೂ ಘನಘೋರ ಪರೀಕ್ಷೆಗಳೂ ನಡೆದಿವೆ. ಸತಿಧರ್ಮಕ್ಕೆ ಅಪಚಾರವಾದರೂ ಹಾಗೂ ಪತಿಧರ್ಮಕ್ಕೆ ಅಪಚಾರವಾದರೂ ಹೆಣ್ಣೇ ಕಾರಣಳೆಂದು ಪರಿಭಾವಿಸಿ, ಆಕೆಯನ್ನು ಪರೀಕ್ಷೆಗೊಳಪಡಿಸುವ ಮುಖಾಂತರ ಶೋಷಣೆಗೊಳಪಡಿಸಲಾಗುತ್ತಿತ್ತು. ಆದರೆ ಪಾರ್ವತಿಯ ಚರಿತೆ ಇದನ್ನು ಶೋಷಣೆಯೆಂದು ಪರಿಗಣಿಸದೇ ಪಾವಿತ್ರ್ಯತೆ ಎಂದು ಭಾವಿಸಿತು. ಇದು ಇತಿಹಾಸಕ್ಕೆ ಅಪಚಾರವಾಯಿತು. ಸ್ವಯಂವರದಲ್ಲಿ ಹೆಣ್ಣು ಪಣಕ್ಕಿಟ್ಟ ವಸ್ತು. ಯುದ್ಧದಲ್ಲಿ ಗಂಡ ಸತ್ತರೆ ಆಕೆ ಕ್ರಾಪ್ ಮಾಡಿಸಬೇಕು. ಹೆಣ್ಣಿನ ಅಪರೂಪದ ಸೌಂದರ್ಯದ ಒಂದು ಅಂಶ ತಲೆಕೂದಲು. ಅದನ್ನೇ ನಾಶಪಡಿಸಬೇಕು. ತ್ಯಾಗದ ಸಂಕೇತವಾಗಿ ಬಿಳಿಬಟ್ಟೆ ಧರಿಸಬೇಕು. ಬಳೆ ತೆಗೆಯಬೇಕು. ಎಲ್ಲಿಯವರೆಗೆ ಅಂದರೆ ಗಂಡ ಸತ್ತರೆ, ಆತನ ಜೊತೆ ಚಿತೆಗೆ ಹಾರುವವರೆಗೆ. ಆದರೆ ಹೆಂಡತಿ ಸತ್ತರೆ ಗಂಡ ಇಂತಹದನ್ನೆಲ್ಲ ಅನುಭವಿಸಿದ ಉದಾಹರಣೆ ಎಲ್ಲಿಯೂ ಇಲ್ಲ. ಇದನ್ನು ನಾನು ಬಹುದೊಡ್ಡ ಅಮಾನವೀಯ ಶೋಷಣೆ ಎಂದು ಪರಿಗಣಿಸುತ್ತೇನೆ. ಬಹುತೇಕ ಇತಿಹಾಸಕಾರರು ಗಂಡಸರೇ ಆದ ಕಾರಣ ಅವರು ಪುರುಷಲೋಕಿಯ ಇತಿಹಾಸವನ್ನು ಮಾತ್ರ ಚಿತ್ರಿಸಿದ್ದಾರೆ. ನಾನು ಮಹಿಳೆ ಕೂಡಾ ಇತಿಹಾಸಕಾರ್ತಿಯಾಗಿ ತನ್ನ ಚರಿತ್ರೆಯನ್ನು ತಾನೇ ಬರೆದುಕೊಳ್ಳಬೇಕು ಎಂದು ಪರಿಭಾವಿಸುತ್ತೇನೆ. ಯಾಕೆಂದರೆ, ಈ ನೆಲದಲ್ಲಿ ಆಕೆಯ ಚರಿತ್ರೆ ಅಮೋಘವಾಗಿದೆ. ಆಕೆಯು ಎಲ್ಲಾ ಸಂಕೋಲೆಗಳಿಂದ ಬಿಡುಗಡೆಗೊಳ್ಳಬೇಕು. ಅದಕ್ಕೆ ಆಕೆ ಸಂಪೂರ್ಣ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಪ್ರಯತ್ನಿಸಬೇಕು. ಇದಕ್ಕೆ ಮೌಢ್ಯದಿಂದ ಹೊರಬರಬೇಕು. ಮಹಿಳೆಯರಿಗಾಗಿಯೇ ಸೃಷ್ಟಿಸಿದ ಕೆಲವು ಧರ್ಮ ಸಂಕೋಲೆಗಳನ್ನು ಆಕೆ ಸೀಳಿ ಮೆಟ್ಟಿನಿಲ್ಲಬೇಕು. ಅದಕ್ಕೆ ಪುರುಷಸಮಾನ ಶಿಕ್ಷಣ ಬೇಕು. ಉದ್ಯೋಗ ಬೇಕು. ಆಕೆಗೂ ಮತದಾನ ಹಕ್ಕಿರಬೇಕು ಎಂದು ನಾನು ಹೋರಾಡಿದೆ. ಇದನ್ನು ಆರೋಪ ಪ್ರತ್ಯಾರೋಪ ವೈರುಧ್ಯಗಳ ನಡುವೆ ಸಾಧಿಸಿದ್ದೇನೆ. ಎಲ್ಲಿಯವರೆಗೆ ಈ ನೆಲದಲ್ಲಿ ಶೋಷಿತರು ಮತ್ತು ಮಹಿಳೆಯರು ದೇಶದ ಚುಕ್ಕಾಣಿ ಹಿಡಿಯುವುದಿಲ್ಲವೋ ಅಲ್ಲಿಯವರೆಗೆ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳಲಾರೆವು ಎಂದು ಹೇಳಿದ್ದೆ. ಅದರಲ್ಲಿ ಮಹಿಳೆಯರ ಪಾತ್ರ ತುಂಬ ಗಂಭೀರವಾದದ್ದು. ಹಾಗೇ ಹೆಣ್ಣು ಗಂಡು ಜಾತಿಗಳಲ್ಲ, ಪ್ರಬೇಧಗಳು. ಭಾರತದಲ್ಲಿ ಸಾವಿರ ಜಾತಿಗಳಿವೆ. ಆದರೆ ಹೆಣ್ಣು ಕುಲದಲ್ಲಿ ಇರಬಾರದು. ಕಾರಣ, ಎಲ್ಲ ಜಾತಿಯ ಮಹಿಳೆಯರು ಶತಶತಮಾನಗಳಿಂದ ಶೋಷಣೆಗೊಳಪಟ್ಟಿದ್ದಾರೆ ಹಾಗೂ ಇದು ಮುಂದುವರೆಯುತ್ತಲೇ ಇದೆ. ಎಲ್ಲಿಯವರೆಗೆ ಎಂದರೆ, ಶೋಷಕರನ್ನು ನಾವು ಹಿಂಬಾಲಿಸುವವರೆಗೆ." ಎಂದು ಅಂಬೇಡ್ಕರ್ ಹೇಳಿದ್ದಾರೆ.

ಈ ಶೋಷಕ ಸಂಕೋಲೆಯನ್ನು ಕಡಿದುಕೊಂಡು ಹೆಣ್ಣೂ ಕೂಡ ಇತಿಹಾಸಕಾರ್ತಿಯಾಗಬೇಕಾಗಿದೆ. ಇಂದಿನ ನನ್ನಂಥ ಎಳೆಯ ಹೆಣ್ಣುಮಕ್ಕಳಿಗೆ ನಮಗೆ ಇದರ ಬಗ್ಗೆ ಏನೂ ತಿಳಿದಿಲ್ಲ. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎನ್ನುತ್ತಾರೆ. ಆದರೆ ನೀವೆಲ್ಲರೂ ನನ್ನಂಥ ಹೆಣ್ಣುಮಕ್ಕಳಲ್ಲಿ ತಿಳುವಳಿಕೆಯನ್ನು ತುಂಬಿ ಇಂದಿನ ಮಕ್ಕಳೇ ಮುಂದಿನ ಇತಿಹಾಸಗಾರ್ತಿಯರು ಎಂಬಂತೆ ಬೆಳೆಸಬೇಕೆಂದು ತಿಳಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಸಮಾನತೆ ಮಹಿಳಾ ಹಕ್ಕಾಗಲಿ, ವಿಶ್ವ ಮಹಿಳಾದಿನ ಚಿರಾಯುವಾಗಲಿ, ಮಹಿಳಾ ಹೋರಾಟಕ್ಕೆ ಜಯವಾಗಲಿ. ಧನ್ಯವಾದಗಳು.

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಒಕ್ಕೂಟವೆಂಬ ಜೀವಪರ ಜಾಲ

❖ ಗುಲಾಬಿ ಬಿಳಿಮಲೆ

**'ಸ**ಮತೆಯೆಡೆಗೆ ತಮ್ಮ ನಡಿಗೆ'ಯನ್ನು ಇಡುತ್ತಾ ಬಂದ ಎಲ್ಲ ಜೀವಪರ ಕಾಳಜಿಯ ಹಿರಿ ಕಿರಿಯ ಗೆಳತಿ ಗೆಳೆಯರಿಗೆ ನನ್ನ ಭಾವಪೂರ್ಣ ವಂದನೆಗಳು. ಪ್ರಗತಿಗಾಗಿ ಒತ್ತಾಯಿಸಿ ಎಂಬ ಘೋಷ ವಾಕ್ಯದಡಿ ಆಚರಣೆಗೊಳ್ಳುತ್ತಾ ಇರುವ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ 107ನೇ ವರ್ಷವಿದು. ಮಹಿಳಾ ದಿನಾಚರಣೆ ಎಂದರೆ, ಆರ್ಚಿಸ್ ಕಾರ್ಡುಗಳಲ್ಲ. ಸ್ಪಾ ಡಿಸ್ಕೌಂಟುಗಳಲ್ಲ. ಸೌಂದರ್ಯ ಉತ್ಪನ್ನಗಳಲ್ಲ, ತಾಯ್ತನ ಸ್ತ್ರೀತ್ವದ ವೈಭವೀಕರಣ ಅಲ್ಲ. ಬದಲಿಗೆ ಮಹಿಳಾ ದಿನ ಎಂದರೆ ಇವೆಲ್ಲವುಗಳ ವಿರುದ್ಧದ ಆಕೆಯ ಹೋರಾಟದ ಒಂದು ಇತಿಹಾಸ. ಪಿತೃಪ್ರಧಾನತೆಯ ಕಪಿಮುಷ್ಠಿಯಿಂದ ಹೊರಬರಲು ಆಕೆ ನಡೆಸುತ್ತಿರುವ ಹೋರಾಟದ ಸಂಭ್ರಮ. ಮಹಿಳಾ ಸಾಮರ್ಥ್ಯದ ಅನಂತ ಮುಖಗಳನ್ನು ಬಿಚ್ಚಿಡುವ, ಮಹಿಳಾ ಘನತೆಯನ್ನು ಎತ್ತಿ ಹಿಡಿಯುವ ಪ್ರಯತ್ನ. ಅಂತಹ ಪ್ರಯತ್ನದ ಭಾಗವಾಗಿ 'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ದ ಆಶ್ರಯದಲ್ಲಿ ನಡೆಯುತ್ತಿರುವ ಈ ಸಮಾವೇಶವು ಗುರುತಿಸಿಕೊಳ್ಳುತ್ತಿದೆ ಎಂದು ಮೊದಲಿಗೆ ಸ್ಪಷ್ಟಪಡಿಸುತ್ತೇನೆ.

ಶತಮಾನದಷ್ಟು ದೀರ್ಘ ಪರಂಪರೆ ಹೊಂದಿರುವ ಮಹಿಳಾ ದಿನಾಚರಣೆಯು ಅವರವರ ಭಾವಕ್ಕೆ ತಕ್ಕ ಹಾಗೆ ಆಚರಣೆಗೊಳ್ಳುತ್ತಿದ್ದರೂ ಮಹಿಳಾ ದಿನ ಅಂದ ತಕ್ಷಣ ನೆನಪಾಗುವುದು ಕ್ಲಾರಾ ಜೆಟ್‌ಕಿನ್ ಹೆಸರು. ಮಹಿಳಾ ದಿನಾಚರಣೆಯ ಪರಿಕಲ್ಪನೆಯನ್ನು ಗುರುತಿಸಿ ಅದರ ಅನುಷ್ಠಾನಕ್ಕೆ ಒತ್ತಾಯಿಸಿ ಮಹಿಳಾ ಪ್ರಶ್ನೆಗಳನ್ನು ಒಂದು ರಾಜಕೀಯ ಅಜೆಂಡಾ ಮಾಡುವಲ್ಲಿ ಅವರು ಇತಿಹಾಸವನ್ನು ಬರೆದಿದ್ದಾರೆ. ನ್ಯೂಯಾರ್ಕ್‌ನ ಸಿದ್ಧ ಉಡುಪು ತಯಾರಿಸುವ ಕಾರ್ಖಾನೆಯ ಮಹಿಳೆಯರು ತಮ್ಮ ಅಗತ್ಯ ಬೇಡಿಕೆಗಳ ಈಡೇರಿಕೆಗೆ ನಡೆಸಿದ ಹೋರಾಟ ಮತ್ತು ಅವರು ಪಡೆದ ಗೆಲುವಿನ ನೆನಪಿನಲ್ಲಿ ಮಹಿಳಾ ದಿನ ಆಚರಣೆಗೊಳ್ಳುತ್ತಾ ಇದೆ ಅನ್ನುವುದನ್ನು ನಾವು ಯಾವತ್ತೂ ನೆನಪಿಸಿಕೊಳ್ಳಬೇಕು.

ಭಾರತದಲ್ಲಿ 75 ರ ವರ್ಷವನ್ನು ಮಹಿಳಾ ವರ್ಷವೆಂದು ಘೋಷಿಸಿದಾಗ ಆ ಸಂದರ್ಭದಲ್ಲಿ ನಾವು ಮಹಿಳಾ ಸಮಾನತೆಯ ಬಗ್ಗೆ ಮಾತನಾಡುತ್ತಿದ್ದೆವು. ಆದರೆ, ಈ ಶತಮಾನದಲ್ಲಿ ಸಮಾನತೆಯ ಮಾತು ಹಾಗಿರಲಿ, ನಮ್ಮ ಸುರಕ್ಷೆಯ ಬಗೆಗೇ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮಾತಾಡಬೇಕಾದ ಆತಂಕದ ಕಾಲಘಟ್ಟದಲ್ಲಿ ನಾವು ಬಂದು ನಿಂತಿದ್ದೇವೆ. ಬದಲಾವಣೆಯ ಹಾದಿಯಲ್ಲಿ ನಾವು ಎರಡು ಹೆಜ್ಜೆ ಮುಂದಿಟ್ಟಿದ್ದೇವೆ ನಿಜ. ಆದರೆ ನಡೆದ ಹಾದಿಯನ್ನೊಮ್ಮೆ ಹಿಂದಿರುಗಿ ನೋಡಿದಾಗ ನಾವು ಹತ್ತು ಹೆಜ್ಜೆಗಳನ್ನು ಹಿಂದಕ್ಕೆ ಇಟ್ಟಿರುವುದು ನಿಚ್ಚಳವಾಗಿ ಕಂಡುಬರುತ್ತದೆ. ಧರ್ಮ, ಲೈಂಗಿಕತೆ, ರಾಜಕಾರಣ ಈ ಮೂರು ಗಂಡು ಪ್ರಧಾನ ಕ್ಷೇತ್ರಗಳು ನಾಗರಿಕತೆಯ ಕುಸಿತಕ್ಕೆ ಎಂದಿಲ್ಲದಷ್ಟು ಕೊಡುಗೆಗಳನ್ನು ನೀಡುತ್ತಿವೆ. ಜಗತ್ತಿನಾದ್ಯಂತ ದ್ವೇಷದ ವಾತಾವರಣ ಹೆಚ್ಚುತ್ತಿದೆ. ಜನಾಂಗ ದ್ವೇಷ, ಲಿಂಗ ದ್ವೇಷ, ವೈಚಾರಿಕ ದ್ವೇಷ, ರಾಜಕೀಯ ದ್ವೇಷ ಒಂದಲ್ಲ ಎರಡಲ್ಲ. ಸಿರಿಯಾ ಸೇರಿದಂತೆ ಜಗತ್ತಿನಾದ್ಯಂತ ಮಕ್ಕಳ ಮಾರಣ ಹೋಮ ನಡೆಯುತ್ತಾ ಇದೆ. ಹೆಣ್ಣು ಮಗುವನ್ನು ಹೊಟ್ಟೆಯಲ್ಲಿಯೇ ಹೊಸಕಿ ಹಾಕಲಾಗುತ್ತಿದೆ. ನಮ್ಮ ಮನೆಯ ಅಡುಗೆ ನನ್ನ ಅಡುಗೆ ಎಂಬಂತಹ ಖಾಸಗಿತನ ನಮ್ಮದಾಗಿತ್ತು. ಅ ಖಾಸಗಿತನ ಈಗ ಇದೆಯೇ? ಅಡುಗೆ ಮನೆಯೊಳಗೆ ಏನನ್ನು ಕೊಂಡು ಹೋಗಬೇಕು, ಏನನ್ನು ಬೇಯಿಸಬೇಕು, ನಮ್ಮ ಫ್ರಿಜ್ಜಿನಲ್ಲಿ ಯಾವ ಮಾಂಸವನ್ನು ಇಡಬಹುದು, ಯಾವುದನ್ನು ಇಡಬಾರದು ಎಂಬುದನ್ನೆಲ್ಲ ನಿರ್ದೇಶಿಸಲು ಜನ ನಿಗದಿಯಾಗಿದ್ದಾರೆ. ಅಡುಗೆ ಮನೆಯ ಖಾಸಗಿತನ ಕಳೆದುಹೋಯಿತು ಅಂದರೆ ಅದು ನಮ್ಮ ಆಹಾರದ ಹಕ್ಕಿನ ಉಲ್ಲಂಘನೆ ಎಂದೇ ಅರ್ಥಮಾಡಿಕೊಳ್ಳಬೇಕಿದೆ. ಇಂದಿನ ವಿದ್ಯಮಾನಗಳನ್ನೇ ಗಮನಿಸಿದರೂ ಸಹಬಾಳ್ವೆಯನ್ನು ದಿಟ್ಟವಾಗಿ ಪ್ರತಿಪಾದಿಸುತ್ತಿದ್ದ ಸ್ತ್ರೀವಾದಿ ಪತ್ರಕರ್ತೆ ಗೌರಿ ಲಂಕೇಶರ ಹತ್ಯೆಯಾಗಿದೆ. ಜಾತಿ ದ್ವೇಷ ಇಮ್ಮಡಿಸುತ್ತಿದೆ. ಮೊನ್ನೆ ಮೊನ್ನೆಯಷ್ಟೇ ಮೈಸೂರಿನಲ್ಲಿ ದಲಿತ ಸಮುದಾಯದ ಹುಡುಗನನ್ನು ಪ್ರೀತಿಸಿದ ಮೇಲ್ಜಾತಿಯ ಹುಡುಗಿಯನ್ನು ಮರ್ಯಾದೆಗೇಡು ಹತ್ಯೆ ಮಾಡಲಾಗಿದೆ. ವಿಜಯಪುರದ ಮತ್ತೊಬ್ಬಳು ಕಂದಮ್ಮ ಲೈಂಗಿಕ ದೌರ್ಜನ್ಯಕ್ಕೆ ಆಹಾರವಾಗಿದ್ದಾರೆ. ಮೂಡಿಗೆರೆಯ ಯುವತಿ ಧನ್ಯಶ್ರೀಯ ಅನ್ಯ ಧರ್ಮಸ್ನೇಹ ಆಕೆಯ ಜೀವಕ್ಕೆ ಮುಳುವಾಗಿ ಹೋಯಿತು. ಒಟ್ಟಿನಲ್ಲಿ ಜಾತೀಯತೆ, ಪುರುಷ ಪ್ರಧಾನತೆ, ಮತಾಂಧತೆ ಇವೆಲ್ಲವೂ ಒಟ್ಟಾಗಿ ದ್ವೇಷದ ವಾತಾವರಣ ಹೆಚ್ಚಾಗುತ್ತಾ ಇದೆ. ಇಂತಹ ಬರ್ಬರ ಸನ್ನಿವೇಶದಲ್ಲಿ ದ್ವೇಷಕ್ಕೆ ಪ್ರತಿಯಾಗಿ ದ್ವೇಷವನ್ನೇ ಮುಂದಿಡಲಾಗುತ್ತಿದೆ. ದ್ವೇಷಕ್ಕೆ ದ್ವೇಷವೇ ಉತ್ತರವಾದರೆ ದ್ವೇಷ ಹೆಚ್ಚಾಗುವುದಲ್ಲದೆ ಕಡಿಮೆಯಾಗುವುದಿಲ್ಲ ಎಂಬ ಸರಳ ಸತ್ಯವೂ ಅವರಿಗೆ ಅರ್ಥವಾಗುವುದಿಲ್ಲ. ಈ ಹಂತದಲ್ಲಿ ದ್ವೇಷಕ್ಕೆ ಪ್ರತಿಯಾಗಿ ಪ್ರೀತಿಯನ್ನು ಹಂಚಬೇಕಾಗುತ್ತದೆ. ಈ ಕೆಲಸವನ್ನು ಮಾಡಲು ಮಹಿಳೆಯರಿಗೆ, ಮಹಿಳಾ ಸಂವೇದನೆಗೆ ಮಾತ್ರ ಸಾಧ್ಯ. ಈ ಹಿನ್ನೆಲೆಯಲ್ಲಿ ಪ್ರೀತಿ, ಸಹಬಾಳ್ವೆ, ಬದ್ಧತೆಗಳೆಂಬ ಮಹಿಳಾ ರಾಜಕಾರಣ ಮುನ್ನೆಲೆಗೆ ಬರಬೇಕಾದದ್ದು ಇಂದಿನ ತುರ್ತು ಅಗತ್ಯ. ಇದು ನಾವು ನಂಬುವ ರಾಜಕಾರಣ. ಈ ರಾಜಕಾರಣವನ್ನು ಮಾಡಲು ಸೋದರಿತ್ವದ ನೆಲೆಯ ಹೋರಾಟವನ್ನು ಕಟ್ಟಿಕೊಳ್ಳುವುದು ಅವಶ್ಯವಾಗಿದೆ. ಹೊರಗಿನ ಸಂದರ್ಭಗಳು ಒಡ್ಡುವ ಸವಾಲುಗಳನ್ನು ಎದುರಿಸಲು ಮಹಿಳೆಯರೆಲ್ಲರೂ, ಸಮಾಜಪರ ಮನಸುಗಳೆಲ್ಲವೂ ಒಂದೇ ವೇದಿಕೆಯಡಿ ಬರಬೇಕಾದುದು ಹಿಂದೆಂದಿಗಿಂತಲೂ ಇಂದು ಅಗತ್ಯ. ಆದರೆ, ಬಲಪಂಥೀಯ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ರಾಜಕಾರಣ, ಜಾತಿ, ಕೋಮು, ವರ್ಗ ಇತ್ಯಾದಿ ವಾಸ್ತವದಲ್ಲಿ ಸೋದರಿತ್ವದ ಮನಸುಗಳನ್ನು ಕಟ್ಟುವುದು ಬಹುದೊಡ್ಡ ಸವಾಲು. ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಆ ಸವಾಲನ್ನು ಕೈಗೆತ್ತಿಕೊಂಡು ದಲಿತ ಅಲ್ಪಸಂಖ್ಯಾತ, ಕಾರ್ಮಿಕ, ಸಂಘಟಿತ, ಅಸಂಘಟಿತ ವಲಯ, ಲಿಂಗತ್ವ ಅಲ್ಪಸಂಖ್ಯಾತರು ಒಟ್ಟಿನಲ್ಲಿ ಜೀವಪರ ಕಾಳಜಿಯ ಎಲ್ಲರನ್ನು ತನ್ನ ಪ್ರೀತಿಯ ಬಾಹುಗಳನ್ನು ಚಾಚಿ ಜತೆ ಸೇರಿಸಿಕೊಳ್ಳಲು ಶ್ರಮಿಸುತ್ತಿದೆ. ಈಗಷ್ಟೇ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ತಾವೆಲ್ಲರೂ ಒಂದೇ ಹಾದಿಯಲ್ಲಿ ನಡೆದು ಬಂದು ಇಲ್ಲಿ ಮತ್ತೆ ಒಟ್ಟು ಸೇರಿರುವುದು ಸೋದರಿತ್ವದ ಮನಸುಗಳನ್ನು ಕಟ್ಟಿಕೊಳ್ಳುತ್ತಿರುವುದಕ್ಕೆ ಬಲುದೊಡ್ಡ ಸಾಕ್ಷಿಯಲ್ಲವೇ?

ಇಂತಹ ಒಂದು ಜೀವಪರ ಜಾಲವನ್ನು ಹೆಣೆಯಲು ಒಕ್ಕೂಟಕ್ಕೆ ಹೇಗೆ ಸಾಧ್ಯವಾಯಿತು ಎಂಬುದನ್ನು ಇಲ್ಲಿ ಬಂದಿರುವ ಹೊಸಬರಿಗಾಗಿ ನಾನು ಹೇಳಬೇಕಾಗಿದೆ. ಅದು 2012ನೇ ಇಸವಿಯ ಜುಲೈ 28. ಹೋಮ್ ಸ್ಟೇ ಒಂದರಲ್ಲಿ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದ ಯುವಕ ಯುವತಿಯರ ಮೇಲೆ ದಾಳಿ ಮಾಡಿ ಅವರನ್ನು ಅಮಾನುಷವಾಗಿ ಹೊಡೆದು ಕುಸಂಸ್ಕೃತರು ಅಟ್ಟಹಾಸ ಮೆರೆದ ದಿನಗಳವು. ನಾವು ಒಂದಷ್ಟು ಮಂದಿ ಗೆಳತಿಯರು ಇದಕ್ಕೆ ಪ್ರತಿರೋಧವಾಗಿ ಏನಾದರೂ ಮಾಡಲೇಬೇಕು ಎಂದು ಪರಸ್ಪರ ಮಾತಾಡಿಕೊಂಡು ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆಯನ್ನು ಹುಟ್ಟುಹಾಕಿದೆವು. ಅದೇ ಡಿಸೆಂಬರ್ 16ರಂದು ದೆಹಲಿಯಲ್ಲಿ ನಿರ್ಭಯ ಪ್ರಕರಣ ನಡೆದಾಗ ನಾವು ಈ ಹಿಂಸೆಗಳಿಗೆಲ್ಲ ಇನ್ನು ಸಾಕು ಎನ್ನುವ ಸಂದೇಶವನ್ನು ನೀಡಲು ಕರ್ನಾಟಕದ ಎಲ್ಲ ಮೂಲೆಗಳಿಂದ ಮಹಿಳಾಪರ ಸಂಘಟನೆಗಳನ್ನು, ಮನಸುಗಳನ್ನು ಒಟ್ಟು ಸೇರಿಸಿ ಮಂಗಳೂರಿನಲ್ಲಿ ಚಾರಿತ್ರಿಕ ಸಮಾವೇಶವೊಂದನ್ನು ನಡೆಸಿದೆವು. ಸಮಾವೇಶದ ಬಳಿಕ, ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಒಟ್ಟು ಸೇರಿದ ಮಹಿಳೆಯರು ಮತ್ತೆ ಒಟ್ಟಾಗಿಯೇ ಇರಬೇಕು, ಅದಕ್ಕಾಗಿ ಒಕ್ಕೂಟವೊಂದನ್ನು ರೂಪಿಸೋಣ ಎಂದು ಆ ಸಮಾವೇಶದ ಚಪ್ಪರದಡಿಯಲ್ಲಿ ಬಂದ ಸಲಹೆಯಂತೆ ಆ ಕ್ಷಣದಲ್ಲಿ 'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ' ಜನ್ಮತಾಳಿತು. ಮಂಗಳೂರು ಸಮಾವೇಶ ಮೊದಲ ಸಮಾವೇಶವಾಗಿ ಗುರುತಿಸಿಕೊಂಡು ಆನಂತರ ಮೈಸೂರು, ಬೆಂಗಳೂರು, ವಿಜಯಪುರ, ಕೊಪ್ಪಳವನ್ನು ಹಾದು ಇದೀಗ ಶಿವಮೊಗ್ಗಕ್ಕೆ ತಲುಪಿದೆ.

ಒಕ್ಕೂಟದ ಸಮಾವೇಶಗಳು ನಾನು ಆರಂಭದಲ್ಲಿ ಹೇಳಿದ ಹಾಗೆ ಸಮಾನತೆ ಸಹಬಾಳ್ವೆಯ ಅನಂತ ಸಾಧ್ಯತೆಗಳನ್ನು ಹುಡುಕುವ ಪ್ರಯತ್ನ. ಇದನ್ನು ಸಾಧ್ಯವಾಗಿಸಲು ಒಕ್ಕೂಟ ಒಂದು ವಿನ್ಯಾಸವನ್ನು ರೂಪಿಸಿಕೊಂಡಿದೆ. ಇಲ್ಲಿ ಎರಡು ದಿನಗಳ ಕಾರ್ಯಕ್ರಮವಿರುತ್ತದೆ. ಮೊದಲ ದಿನ ಎಳೆಯ ತಲೆಮಾರಿಗೆ ಚಳುವಳಿಯ ಆಶಯವನ್ನು ಪರಿಚಯಿಸುವ ಸಲುವಾಗಿ ವಿಶ್ವವಿದ್ಯಾಲಯಗಳಲ್ಲಿ ನಡೆಯುವ ವಿಚಾರಸಂಕಿರಣ. ಈ ವಿಚಾರ ಸಂಕಿರಣವನ್ನು ಪ್ರತಿ ಬಾರಿಯೂ ಆಯಾಯ ವಿಶ್ವವಿದ್ಯಾಲಯಗಳು ಪ್ರಾಯೋಜಿಸುತ್ತವೆ. ಆದರೆ, ಶಿವಮೊಗ್ಗದಲ್ಲಿ ಅಂತಹ ಸಹಾಯ ಪಡೆದಿಲ್ಲ. ಅದೇ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ದಿನ ಸಂಜೆ ಎಲ್ಲ ಹಿಂಸೆಗಳನ್ನು ವಿರೋಧಿಸಿ ಮೌನ ಭಾಷೆಯಲ್ಲಿ ಮಾತನಾಡುವ 'ಕಪ್ಪು ಉಡುಗೆಯಲ್ಲಿ ಮಹಿಳೆಯರು' ಪ್ರತಿಭಟನೆಯಿರುತ್ತದೆ. ಕಳೆದ ವರ್ಷ ಹಿಂಸೆಯ ವಿರುದ್ಧ ಶಾಂತಿಯ ಮಾತಾಡುವ ಬಿಳಿ ಉಡುಪಿನಲ್ಲಿ ಮಹಿಳೆಯರು ಕಾರ್ಯಕ್ರಮವನ್ನು ನಡೆಸಿಕೊಂಡು ಮುನ್ನಡೆದೆವು.

ಒಂದು ದಿನ ಜಾಥಾ ಮತ್ತು ಸಮಾವೇಶವಿರುತ್ತದೆ. ಈ ಒಕ್ಕೂಟದ ಸಮಾವೇಶವೆಂದರೆ ಅದು ಒಂದು ದಿನದ ವೇದಿಕೆಯ ಕಾರ್ಯಕ್ರಮವಲ್ಲ. ಸುಮಾರು ಏಳೆಂಟು ತಿಂಗಳಿನಿಂದಲೇ ಸಮಾವೇಶದ ಭೂಮಿಕೆಯನ್ನು ಸಿದ್ಧಪಡಿಸಲು ಇದು ಶ್ರಮಿಸುತ್ತದೆ. ಶಿವಮೊಗ್ಗದಲ್ಲಿ ಕಳೆದ ಅಕ್ಟೋಬರ್ ತಿಂಗಳಿಂದಲೇ ಶಾಲಾಕಾಲೇಜುಗಳಲ್ಲಿ ಅರಿವಿನ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದೆ. ಈ ಬಾರಿ ಸುಮಾರು 20 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ನಮಗೆ ತಲುಪಲು ಸಾಧ್ಯವಾಗಿದೆ. ಹಾಗೆಯೇ ಅರಿವಿನ ಅವ್ವನ ದೊಂದಿ ಹಿಡಿದು ದಲಿತರ ಕೇರಿಗಳಿಗೆ ಹೋಗಿದ್ದೇವೆ. ಮುಟ್ಟಾದ ಹೆಣ್ಣುಮಕ್ಕಳನ್ನು ಊರಿನಿಂದ ಹೊರಗಿಡುವ ಪದ್ಧತಿಯ ವಿರುದ್ಧ ಜಾಗೃತಿಯ ಅಭಿಯಾನವನ್ನು ನಡೆಸಿದ್ದೇವೆ.

ಪ್ರತೀ ಸಮಾವೇಶದಲ್ಲಿ ಒಂದು ಘೋಷವಾಕ್ಯ ಇರುತ್ತದೆ. ಈ ಬಾರಿ 'ಹೆಣ್ಣುಮಗಳು ಜಗದ ಬೆಳಕು, ನಮ್ಮ ಬದುಕು ನಮ್ಮ ಹಕ್ಕು' ಎಂಬ ಘೋಷವಾಕ್ಯವನ್ನು ಆರಿಸಿಕೊಂಡಿದ್ದೇವೆ. ಕಳೆದ ಬಾರಿ 'ನಮ್ಮ ದೇಹ ನಮ್ಮ ಹಕ್ಕು, ನಮ್ಮ ಮಗಳು ಜಗದ ಬೆಳಕು' ಘೋಷವಾಕ್ಯವಾಗಿತ್ತು. ಮಹಿಳೆಯರ ದೇಹ ಬಿಕರಿಯಾಗುತ್ತಿರುವ ಈ ದಿನಗಳಲ್ಲಿ, ಪತ್ನಿಯನ್ನು ತನ್ನ ಲೈಂಗಿಕ ಸರಕಿನಂತೆ ಬಳಸಿಕೊಳ್ಳಬಹುದು ಎಂದು ವ್ಯಭಿಚಾರದ ವ್ಯಾಖ್ಯೆ ಅರ್ಥ ಪಡೆದುಕೊಳ್ಳುತ್ತಿರುವ ಘೋರ ಕಾಲದಲ್ಲಿ 'ನಮ್ಮ ದೇಹ ನಮ್ಮ ಹಕ್ಕು' ಎಂಬುದನ್ನು ನಾವೆಲ್ಲರೂ ಸಮತೆಯೆಡೆಗೆ ನಡೆಯುತ್ತ ಅರ್ಥಮಾಡಿಕೊಳ್ಳಬೇಕಾಗಿದೆ.

ಒಕ್ಕೂಟವು ಪ್ರತೀ ಬಾರಿಯೂ ಸಮಾವೇಶದ ನೆನಪಿನ ಸಂಚಿಕೆಯನ್ನು ಹೊರತರುತ್ತಿದೆ. ಕೊಪ್ಪಳ ಸಮಾವೇಶದ ಸ್ಮೃತಿ ಸಂಚಯ 'ಸಮತೆಯೆಡೆಗೆ ನಮ್ಮ ನಡಿಗೆ' ನಿನ್ನೆಯ ವಿಚಾರ ಸಂಕಿರಣದಲ್ಲಿ ಬಿಡುಗಡೆಗೊಂಡಿದೆ. ಇಷ್ಟೊಂದು ವ್ಯವಸ್ಥಿತ ಕೆಲಸಗಳನ್ನು ಮಾಡಲು ಇವರಿಗೆ ಹಣದ ಮೂಲ ಯಾವುದು ಎಂಬ ಸಂಶಯ ನಿಮ್ಮಲ್ಲಿ ಇರಬಹುದು. ಸಾಮಾನ್ಯವಾಗಿ ಇಂದಿನ ಬಹುತೇಕ ಚಳುವಳಿಗಳು ಒಂದಲ್ಲ ಒಂದು ರಾಜಕೀಯ ಪಕ್ಷಗಳ ಅಥವಾ ಧಾರ್ಮಿಕ ಸಂಸ್ಥೆಗಳ ಕೃಪಾಕಟಾಕ್ಷದಲ್ಲಿ ನಡೆಯುವಂಥವು. ಆದರೆ, ನಮ್ಮ ಒಕ್ಕೂಟವು ಯಾವುದೇ ರಾಜಕೀಯ ಪಕ್ಷಗಳಿಂದ ಧಾರ್ಮಿಕ ಸಂಸ್ಥೆಗಳಿಂದ, ಕಾರ್ಪೋರೇಟ್ ಕುಳಗಳಿಂದ ಕೋಮು ದ್ವೇಷ ಹರಡುವವರಿಂದ ಸರಕಾರಿ ಇಲಾಖೆ, ಸಂಸ್ಥೆಗಳಿಂದ ಹಣದ ಸಹಾಯ ಪಡೆದಿಲ್ಲ. ಮತ್ತು ಮುಂದೆಯೂ ಪಡೆಯುವುದಿಲ್ಲ ಎಂದು ನಿಮ್ಮ ಮುಂದೆ ಧೈರ್ಯವಾಗಿ ಹೇಳಬಲ್ಲೆವು. ನಾವು ವಿಶೇಷವಾಗಿ ಕರವಸ್ತ್ರಗಳನ್ನು ಸಿದ್ಧಪಡಿಸಿ ಮಾರುತ್ತೇವೆ. ಚಿಕ್ಕ ಚಿಕ್ಕ ಅರಿವಿನ ಪುಸ್ತಕಗಳನ್ನು ಮುದ್ರಿಸಿ ಮಾರುತ್ತೇವೆ.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಬೀದಿಬೀದಿ ಸುತ್ತಿ ಮಾರುಕಟ್ಟೆ ಅಲೆದು ಜನರಿಂದ ಒಂದೊಂದು ರುಪಾಯಿ ಸಂಗ್ರಹಿಸುತ್ತೇವೆ. ತಮ್ಮಂತಹ ಸಹೃದಯರಿಂದ ದೇಣಿಗೆಗಳನ್ನು ಸಂಗ್ರಹಿಸುತ್ತೇವೆ. ಕೇವಲ ಜನಧನದಿಂದಲೇ ಕಾರ್ಯಕ್ರಮವನ್ನು ನಡೆಸುತ್ತೇವೆ.

ಇಂತಹ ಸ್ವರೂಪದೊಳಗೆ ನಾವು ಐದು ಸಮಾವೇಶಗಳನ್ನು ಸಂಘಟಿಸಿ ಆರನೆಯದನ್ನು ಶಿವಮೊಗ್ಗದ ನೆಲದಲ್ಲಿ ನಡೆಸುತ್ತಿದ್ದೇವೆ. ಶಿವಮೊಗ್ಗ ಅನೇಕ ಸಮಾಜವಾದಿ ಹೋರಾಟಗಳಿಗೆ ಚಳುವಳಿಗಳಿಗೆ ಕುವೆಂಪು ಸೇರಿದಂತೆ ಖ್ಯಾತ ಸಾಹಿತಿಗಳಿಗೆ ರಾಜಕೀಯ ಮುತ್ಸದ್ದಿಗಳಿಗೆ ಜನ್ಮ ನೀಡಿದ ನೆಲ. ಸಾಹಿತ್ಯ, ಸಂಸ್ಕೃತಿ, ಕಲೆಗೆ ಹೆಸರಾದ ಪ್ರದೇಶ. ಸಮಾಜವಾದಿಗಳೊಂದಿಗೆ, ಸಮಾಜವಾದಿ ಚಳುವಳಿಗಳೊಂದಿಗೆ ಅನೇಕ ಚಳುವಳಿಗಳಿಗೆ ಆರಂಭ ನೀಡಿದ ನೆಲ ಇದು. ವಿಶ್ವಮಾನವತೆಯನ್ನು ಸಾರಿದ ಕುವೆಂಪು, ತೇಜಸ್ವಿ, ಅನಂತಮೂರ್ತಿ, ಲಂಕೇಶರಿಗೆ ಜನ್ಮ ನೀಡಿದ ಪುಣ್ಯ ಭೂಮಿಯಿದು. 1950 ರ ದಶಕದಲ್ಲಿ ಕಾಗೋಡು ಸತ್ಯಾಗ್ರಹ 70, 80 ರ ದಶಕದ ದಲಿತ ಚಳುವಳಿ, 90 ರ ದಶಕದ ತುಂಗಾಮೂಲ ರಕ್ಷಿಸಿ ಹೋರಾಟ, ಕೋಮು ಸೌಹಾರ್ದ ಚಳುವಳಿ, 2000ದ ನಂತರ ಕುದುರೆಮುಖ ಗಣಿಗಾರಿಕೆಯ ವಿರುದ್ಧದ ಹೋರಾಟಗಳ ಜತೆ ಜತೆಗೆ ದುಡಿಯುವ ವರ್ಗದವರ ಹೋರಾಟ, ಬಂಡಾಯಗಳಿಗೆ ಇಂಬು ನೀಡಿದ ನೆಲ ಇದು. ಶಾಂತವೇರಿ ಗೋಪಾಲ ಗೌಡ, ಕಡಿದಾಳು ಮಂಜಪ್ಪರಂತಹ ರಾಜಕೀಯ ಮುತ್ಸದ್ದಿಗಳಿಗೆ, ಕಡಿದಾಳು ಶಾಮಣ್ಣರಂತಹ ರೈತ ಹೋರಾಟಗಾರರನ್ನು ನೀಡಿದ ಪುಣ್ಯಭೂಮಿಯಿದು. ಈ ನೆಲವನ್ನು ಶ್ರೀಮಂತ ಗೊಳಿಸಿದ್ದು ಈ ಪುರುಷರು ಮಾತ್ರವಲ್ಲ, ಅಕ್ಕ ಮಹಾದೇವಿ, ಎಂ ಕೆ ಇಂದಿರಾ, ಗೌರಿ ಲಂಕೇಶ್, ಖ್ಯಾತ ಹೋರಾಟಗಾರ್ತಿ ಪೊನ್ನಮ್ಮಾಳ್ ಅವರ ಕೊಡುಗೆಯೂ ಸಾಕಷ್ಟಿದೆ ಎಂಬುದು ನಮಗೆ ಈ ಹೊತ್ತು ಮುಖ್ಯವಾಗಬೇಕು. ಇಂತಹ ಅನನ್ಯ ವಾತಾವರಣದಲ್ಲಿ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟಕ್ಕೆ ಏನು ಕೆಲಸ ಎಂದು ನೀವು ಕೇಳಬಹುದು. ಸುಮ್ಮನೆ ನೋಡಿದಾಗ ಮತ್ತು ಕಣ್ಣು ತೆರೆದು ನೋಡಿದಾಗ ಕಾಣುವ ಚಿತ್ರಣಗಳು ಬೇರೆಯದೇ ಆಗಿರುತ್ತವೆ. ಒಂದು ಘಳಿಗೆ ನಾವೀಗ ಕಣ್ಣು ತೆರೆದು ಶಿವಮೊಗ್ಗದ ಮಹಿಳೆಯರ ಬದುಕನ್ನು ನೋಡೋಣ.

ನಾನು ಸಂಗ್ರಹಿಸಿದ ಮಾಹಿತಿಯಂತೆ ಅಡಿಕೆ ಮಂಡಿಯಲ್ಲಿ ದುಡಿಯುವ ಮಹಿಳೆಯರಿಗೆ ದಿನಕ್ಕೆ ಸಿಗುವುದು 250 ರುಪಾಯಿಗಳು. ನ್ಯೂ ಮಂಡ್ಲಿ, ಸೀಗೆ ಹಟ್ಟಿ, ಬರ್ಮಪ್ಪ ನಗರ, ಕ್ಲಾರ್ಕ್ ಪೇಟೆ, ಟಾಂಕ್ ಮೊಹಲ್ಲಾಗಳ ಮಹಿಳೆಯರು ಶಿವಮೊಗ್ಗದ ದೊಡ್ಡಾಸ್ಪತ್ರೆಗಳಿಗೆ ಕಾಲೇಜುಗಳಿಗೆ ನೆಲ ಒರಸುವ ಶುಚಿಗೊಳಿಸುವ ಕೆಲಸಕ್ಕೆ ಹೋಗುತ್ತಾರೆ. ಅವರು ದಿನವೊಂದಕ್ಕೆ ಪಡೆಯುವ ಕೂಲಿ ರುಪಾಯಿ 50. ಎರಡು ಮೂರು ಕಡೆ ಕೆಲಸ ಮಾಡಿದರೆ ತಿಂಗಳಿಗೆ ಸಿಗುವುದು 1500 ರಿಂದ 2500 ರುಪಾಯಿ. ಹಕ್ಕಿಪಿಕ್ಕಿ ಹಂದಿಜೋಗಿ ಮುಂತಾದ ಅಲೆಮಾರಿಗಳು ಇಂದಿಗೂ ಟೆಂಟ್ ಗೂಡುಗಳಲ್ಲಿ ವಾಸಿಸುತ್ತಿದ್ದಾರೆ. ಸಮಾಜವಾದಿಗಳ ನಾಡಿನಲ್ಲಿ ಕೂಲಿಯ ಅಸಮಾನತೆಯೂ ಅಗಾಧವಾಗಿದೆ. ಗಂಡಸರಿಗೆ 300 ರುಪಾಯಿಯಾದರೆ ಹೆಂಗಸರಿಗೆ 150 ರುಪಾಯಿ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ನಗರದಲ್ಲಿ 40ಕ್ಕೂ ಹೆಚ್ಚು ಕೊಳಚೆ ಪ್ರದೇಶಗಳಿದ್ದು ಅಲ್ಲಿನ ಕುಟುಂಬಗಳಿಗೆ ಹಕ್ಕು ಪತ್ರಗಳು ಇರುವುದಿಲ್ಲ. ಸ್ಲಮ್‌ಗಳಲ್ಲಿ ಶೌಚಾಲಯಗಳಿಲ್ಲ. ಈ ಕ್ಷಣದ ಒಂದು ಸಂಗತಿ ಕೇಳಿ. ನಾವೆಲ್ಲ ತಲೆಗೆ ಟೋಪಿ ಹಾಕಿಕೊಂಡು ಕಣ್ಣಿಗೆ ತಂಪು ಕನ್ನಡಕ ಹಾಕಿ ಮೆರವಣಿಗೆಯಲ್ಲಿ ನಡೆದೆವು. ಆದರೆ, ಈಗ ಮೆರವಣಿಗೆ ಉದ್ಘಾಟಿಸಿದ ನಮ್ಮ ಸಹೋದರಿಯರನ್ನು ಎಷ್ಟು ಮಂದಿ ಸರಿಯಾಗಿ ಗಮನಿಸಿದ್ದೀರಿ? ಅವರ ಕಾಲುಗಳಲ್ಲಿ ಚಪ್ಪಲಿಯೇ ಇರಲಿಲ್ಲ. ಹೀಗಿರುವಾಗ ಇಲ್ಲಿ ಸಮಾವೇಶ ನಡೆಯುತ್ತಿರುವುದು ಹೆಚ್ಚು ಅರ್ಥಪೂರ್ಣ ಎಂದು ನಾವು ಭಾವಿಸುತ್ತೇವೆ.

ನಾವೆಲ್ಲರೂ ಒಂದೇ ಸೈದ್ಧಾಂತಿಕ ಹಿನ್ನೆಲೆಯವರು ಅಲ್ಲದಿರಬಹುದು. ನಮ್ಮ ಕಾರ್ಯವಿಧಾನದಲ್ಲಿ ವ್ಯತ್ಯಾಸಗಳಿರಬಹುದು. ನಾವು ಹಿಡಿಯುವ ಬಾವುಟದ ಬಣ್ಣ ಬದಲಾಗಿರಬಹುದು. ಆದರೆ ನಮ್ಮೆಲ್ಲರಿಗೆ ಸಮಾನವಾದ ಸಮಸ್ಯೆಗಳಿವೆ ಆತಂಕಗಳಿವೆ, ಇಕ್ಕಟ್ಟುಗಳಿವೆ, ಬಿಕ್ಕಟ್ಟುಗಳಿವೆ. ಇದು ನಮ್ಮನ್ನು ಒಂದಾಗಿಸುವುದಕ್ಕೆ ಸಾಧ್ಯ. ಒಂದಾಗಿ ಸಂಖ್ಯಾತ್ಮಕವಾಗಿ ನಾವು ಪ್ರಬಲರಾದಾಗ ರಾಜಕೀಯ ಪ್ರಾತಿನಿಧ್ಯಕ್ಕಾಗಿ ಪ್ರಬಲ ಹಕ್ಕೊತ್ತಾಯವನ್ನು ಮಂಡಿಸಲು ಸಾಧ್ಯ. ಇದು ಕಾನೂನು ನಿರ್ಮಾಪಕರಾಗುವ ನಮ್ಮ ಪ್ರಯತ್ನದ ಒಂದು ಭಾಗ. ಇದರ ಮೊದಲ ಹೆಜ್ಜೆಯಾಗಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮಹಿಳಾಪರವಲ್ಲದ, ಮಹಿಳಾ ಪ್ರಾತಿನಿಧ್ಯವಿರದ, ಸಹಬಾಳ್ವೆಯ ಪರಿಕಲ್ಪನೆಯಿರದ ರಾಜಕೀಯ ಪಕ್ಷಗಳನ್ನು ನಾವು ಸಾರಾ ಸಗಟಾಗಿ ತಿರಸ್ಕರಿಸಬೇಕು. ಇದು ಒಕ್ಕೂಟದ ಆಶಯವೂ ಹೌದು.

ಒಕ್ಕೂಟವು ತನ್ನ ನೆಲೆಯನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಳ್ಳುತ್ತ, ಬೇರೆಯವರ ಚಿಂತನೆಗಳೊಡನೆ ತಾದಾತ್ಮ್ಯ ಸಾಧಿಸಲು ಬಯಸುತ್ತಾ ಸಮಾವೇಶಕ್ಕೆ ಅತಿಥಿಗಳನ್ನು ಹೊರರಾಜ್ಯದಿಂದಲೂ ಕರೆಯುವುದನ್ನು ರೂಢಿಸಿಕೊಂಡಿದೆ. ಇಂದು ಖ್ಯಾತ ಹೋರಾಟಗಾರ್ತಿಯರಾದ ಫ್ಲೇವಿಯಾ ಆಗ್ನೆಸ್ ಮತ್ತು ಮನಿಷಾ ಗುಪ್ತೆಯವರು ನಮ್ಮೊಡನಿದ್ದಾರೆ.

ಕೊನೆಯಲ್ಲಿ ಒಂದು ಮಾತು – ಫ್ಯಾಸಿಸಂ ದೇಶವನ್ನು ಆಕ್ರಮಿಸಿಕೊಳ್ಳುತ್ತಾ ಇದೆ. ನಮ್ಮ ಸಂವಿಧಾನ ತೀರಾ ಅಪಾಯದಲ್ಲಿದೆ. ಈ ವಾಸ್ತವಗಳು ಒಕ್ಕೂಟದ ಮನಸ್ಸಿನಾಳಕ್ಕೆ ಇಳಿದಿವೆಯೇ ಎಂದು ಹಿರಿಯ ಹೋರಾಟಗಾರರೊಬ್ಬರು ಕೇಳಿದ್ದಾರೆ. ಇಷ್ಟು ಹೊತ್ತಿನ ನನ್ನ ಮಾತುಗಳು ಇದಕ್ಕೆ ಉತ್ತರವನ್ನು ನೀಡಿವೆ ಎಂದು ಭಾವಿಸುತ್ತೇನೆ.

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಹೆಣ್ಣು ಜೀವವೆಂಬ ಏಕ ಅಸ್ಮಿತೆ

❖ ಸವಿತಾ ನಾಗಭೂಷಣ

ಎಲ್ಲರಿಗೆ ನಮಸ್ಕಾರ. ಇಲ್ಲಿರುವ ಎಲ್ಲ ಮನುಷ್ಯ ಚೇತನಗಳಿಗೆ ವಂದಿಸಿ ಕೆಲವು ಮಾತುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಇಷ್ಟಪಡುತ್ತೇನೆ. ಬಹುಶಃ ಇದು ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಆರನೆಯ ಸಮಾವೇಶ. ಈ ಹಿಂದಿನ ಸಮಾವೇಶಗಳಲ್ಲಿ ನಾನು ಭಾಗವಹಿಸಿಲ್ಲ. ಆದರೆ ನನ್ನ ಗೆಳತಿಯರು ಅಂದರೆ ಒಕ್ಕೂಟದವರು ಶಿವಮೊಗ್ಗೆಗೆ ಬಂದು ಇದನ್ನು ಆಯೋಜಿಸಿರುವುದರಿಂದ ನಾನು ಅವರೊಂದಿಗೆ ಕೈ ಜೋಡಿಸಿರುವೆ.

ಮನುಷ್ಯ ಚೇತನ ಯಾವಾಗಲೂ ಸ್ವತಂತ್ರವಾಗಿ ಹಕ್ಕಿಯ ತರಹ ಹಾರಾಡಲು ಬಯಸುತ್ತದೆ. ಈ ಅದಮ್ಯ ಸ್ವಾತಂತ್ರ್ಯದ ಬಯಕೆಯೇ ನಮ್ಮನ್ನೆಲ್ಲಾ ಒಗ್ಗೂಡಿಸಿದೆ. ಅದಕ್ಕೆ ಸಾಕ್ಷಿ ಎಂಬಂತೆ ಸಾವಿರಾರು ಜನ ಮಹಿಳೆಯರು ಇಂದು ಬೆಳಿಗ್ಗೆ ಮೆರವಣಿಗೆಯಲ್ಲಿ ಭಾಗವಹಿಸಿರುವರು. ಈ ವೇದಿಕೆಯ ಎಡಭಾಗದಲ್ಲಿ ತುಂಬಾ ಕುರ್ಚಿಗಳು ಖಾಲಿ ಇವೆ. ಅದನ್ನ ನಮ್ಮೂರಿನ ಮಹಿಳೆಯರು ತುಂಬಬಹುದಿತ್ತು. ಬಂದಿಲ್ಲ. ಬಹುಶಃ ನಮ್ಮೂರಿನ ಮಹಿಳೆಯರು ಕಡಿಮೆ ದೌರ್ಜನ್ಯಕ್ಕೆ ಈಡಾಗಿದ್ದಾರೇನೋ ಅಂತ ನನಗೆ ಒಂದು ಕ್ಷಣ ಅನಿಸಿತು. ಅದು ನಿಜವಾಗಲೂ ಸತ್ಯವಾದ ಮಾತು ಕೂಡ. ಯಾಕೇಂದ್ರೆ, ಇಲ್ಲಿ ಕುವೆಂಪು ವಿಚಾರಗಳು, ಸೋಷಿಯಲಿಸ್ಟರು, ರೈತಸಂಘ, ದಲಿತ ಸಂಘ, ಇದೆಲ್ಲವೂ ಸದಾಕಾಲ ಸಕ್ರಿಯವಾಗಿದ್ದ ಊರಿದು. ಹಾಗಾಗಿ ಒಂದಲ್ಲ ಒಂದು ರೀತಿ, ಸಾಹಿತ್ಯ, ಸಂಗೀತ, ರಂಗಭೂಮಿಯ ಚಟುವಟಿಕೆಗಳು, ಜನಪರ ಹೋರಾಟಗಳು ಈ ಊರಿನ ಜನರ ಮನಸ್ಸನ್ನ ತಿದ್ದಿವೆ ಅಂತ ನಾನಂದುಕೊಳ್ಳುತ್ತೇನೆ. ನಾವು ಅದರ ಫಲಾನುಭವಿಗಳು. ಏಕೆಂದರೆ, ನಾನು ಇದೇ ಊರಲ್ಲಿ ವಿದ್ಯಾಭ್ಯಾಸ ಮಾಡಿದ್ದು, ಬದುಕಿನ ಸುಮಾರು 40 ವರ್ಷಗಳನ್ನ ಇಲ್ಲೇ ಕಳೆದಿರುವೆ. ನಾನೂ ಕೂಡ ಈ ಎಲ್ಲ ಚಳುವಳಿಗಳಿಂದ ಪ್ರಭಾವಿತಳಾಗಿದ್ದೇನೆ. ನನ್ನ ಸ್ನೇಹಿತೆಯರು ಕೂಡ ಪ್ರಭಾವಿತರಾಗಿದ್ದಾರೆ. ನಮ್ಮ ಸಹೋದರರೂ ಕೂಡ ನಮ್ಮ ಬಗ್ಗೆ ಉದಾರಿಗಳಾಗಿದ್ದಾರೆ. ನಾನು ಪ್ರತೀ ಬಾರಿ ಎಲ್ಲಾದರೂ ಕಾರ್ಯಕ್ರಮಕ್ಕೆ ದೂರ ಹೋದಾಗ ಕೆಲವು ಸರ್ತಿ ಮಧ್ಯರಾತ್ರಿ ಆಗಿಬಿಟ್ಟಿರತ್ತೆ. ಅವಾಗ ಒಬ್ಬಳೇ ಆಟೋ ಹತ್ತಿ ಬರ್ತೀನಿ. ಮಧ್ಯ ರಾತ್ರಿ 2 ಗಂಟೆ, 3 ಗಂಟೆ, 4 ಗಂಟೆ ಹೀಗೆಲ್ಲ ಬಂದಿದ್ದೀನಿ. ಆಗ ಒಂದು ರೀತಿ ಮನಸ್ಸಿನಲ್ಲಿ ಅಳುಕು. ಆದರೂ ಆಟೋ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಹತ್ತಿ ಕೂರ್ತೀನಿ. ಒಬ್ಬಳೇ ಮನೆಗೆ ಬರ್ತೀನಿ. ಮನೆಗೆ ತಲುಪಿಸಿದ ಆಟೋದವನಿಗೆ ಧನ್ಯವಾದ ಹೇಳ್ತೀನಿ. ನಿನ್ನಿಂದ ನನ್ನ ಊರು ಸಮೃದ್ಧವಾಗಿದೆ, ಸಂಪನ್ನವಾಗಿದೆ ಅಂತ. ಆ ಥರದ ಒಂದು ಊರು ಇರಬೇಕು. ಆ ತರಹದ ವಾತಾವರಣ ಇರೋದ್ರಿಂದ್ಲೇನೆ ನಾವು ಈ ಊರಿನಲ್ಲಿ ಬಹುಮುಖಿ ಚಟುವಟಿಕೆಗಳಲ್ಲಿ ಭಾಗವಹಿಸಲಿಕ್ಕೆ ಸಾಧ್ಯವಾಗಿದೆ.

ನೋಡಿ, ನಮ್ಮಜ್ಜಿ ಬರೀ ಎರಡನೇ ಕ್ಲಾಸ್ ಓದಿದ್ದು. ಯಾವಾಗ್ಲೂ ಹೇಳ್ತಾ ಇದ್ರು, ನಾನು ಇನ್ನೂ ಓದಬೇಕಿತ್ತು. ನನಗೆ ತುಂಬಾ ಆಸೆ ಅಂತ. ನನ್ನ ತಾಯಿ ಹತ್ತನೇ ಕ್ಲಾಸ್ ಓದಿದವರು, ಅವರು ನನಗೊಂದು ಕೆಲಸ ಇರಬೇಕಿತ್ತು ಅಂತ ಹೇಳ್ತಿದ್ದರು. ನಾನು ವಿದ್ಯಾಭ್ಯಾಸವನ್ನೂ ಪಡೆದೆ, ಕೆಲಸವನ್ನೂ ಪಡೆದೆ. ಅದಕ್ಕಿಂತ ಮುಂದೆ ಒಂದು ಹೆಜ್ಜೆಯನ್ನೂ ಹಾಕಿದೆ. ಆದರೂ ನನಗೆ ಇಷ್ಟು ಸಾಕು ಅಂತ ಅನ್ನಿಸಲಿಲ್ಲ. ಈಗ ನನ್ನ ಮಗಳು ವಿಮಾನದಲ್ಲಿ ಹಾರಾಡಬಹುದು. ಈ ಸ್ವಾತಂತ್ರ್ಯದ ಬದುಕು ಹೇಗಿರುತ್ತೆ ಅಂದ್ರೆ, ಒಂದು ಹೆಜ್ಜೆ ಮುಂದೆ ಹೋದ್ರೆ, ಇನ್ನೂ ನಾಲ್ಕು ಹೆಜ್ಜೆ ಮುಂದೆ ಹೋಗ್ಬೇಕು ಅಂತ ಅನ್ನಿಸ್ತಾ ಇರತ್ತೆ. ಇದಕ್ಕೆ ಒಂದು ಕೊನೆ ಅಂತ ಇರಲ್ಲ. ಬಹುಶಃ ತುಂಬ ಅಮೂಲ್ಯವಾದದ್ದು ಅಂದ್ರೆ ಸ್ವಾತಂತ್ರ್ಯ ಇರಬೇಕು. ಬಹುಶಃ ಸ್ವಾತಂತ್ರ್ಯ ಪಡೆಯುವ ಬಯಕೆ ಈ ಎಲ್ಲ ಸೋದರಿಯರನ್ನೂ ಒಗ್ಗೂಡಿಸಿದೆ ಅಂತ ಈ ಸಂದರ್ಭದಲ್ಲಿ ಹೇಳ್ಲಿಕ್ಕೆ ಇಷ್ಟಪಡ್ತೀನಿ. ನಾನು ಈ ಮಹಿಳಾ ದಿನಾಚರಣೆಗಳಲ್ಲಿ ತುಂಬ ಪಾಲ್ಗೊಂಡಿಲ್ಲ. ಏಕೆಂದ್ರೆ, ಪ್ರತಿದಿವಸವೂ ನಮ್ಮ ಮನೆಯಲ್ಲಿ ಮಹಿಳಾ ದಿನಾಚರಣೆ ನಡೀತಾ ಇರತ್ತೆ. ನನ್ನ ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ನಮ್ಮ ಮನೆಯವರಿಗೆ ಹೇಳ್ತಾ ಇರ್ತೀನಿ, "ಏನ್ರೀ, ನೀವು ಯಾವ ಸೀಮೆ ಸೋಷಿಯಲಿಸ್ಟು?" ಅಂತ. ತಕ್ಷಣ ಅವರು ಸುಮ್ಮನಾಗಿಬಿಡ್ತಾರೆ. ಹಂಗೆ ನಾವು ಪ್ರತಿದಿನ ಸೆಣೆಸಾಟದ ಮೂಲಕವೇ ನಮ್ಮ ಹಕ್ಕುಗಳನ್ನ ಪಡೀಬೇಕಾಗ್ತದೆ. ನಮ್ಮ ನಿರ್ಧಾರಗಳನ್ನ ಮಾಡ್ಬೇಕಾಗ್ತದೆ. ನಾನು ನನ್ನ ಬಾಲ್ಯದಿಂದನೇ ಸ್ವಂತ ನಿರ್ಧಾರಗಳನ್ನ ನನ್ನ ಬದುಕಿನ ಬಗ್ಗೆ ತಗೊಂಡಿದೇನೆ. ಬಹುಶಃ ನನ್ನ ಅದೃಷ್ಟ, ನನ್ನ ಮದುವೆಯಾದ ಮೇಲೆ ಕೂಡಾ ನಾನು ನನ್ನ ಮನಸ್ಸಿಗೆ ಏನನ್ನಿಸಿದೆಯೋ ಅದನ್ನ ಮಾಡ್ತಾ ಬಂದಿದ್ದೇನೆ. ಅದಕ್ಕೆ ಯಾವ ಚ್ಯುತಿ ಕೂಡ ಬಂದಿಲ್ಲ. ಆದರೆ ಇದು ಸುಲಭವಾಗಿ ಸಿಕ್ಕಿದೆ ಅಂತ ನಾನು ಹೇಳೊದಿಲ್ಲ. ಇದು ನಾನು ಕಷ್ಟಪಟ್ಟು ಗಳಿಸಿರೋದು.

ಈ ತನಕ ಈ ತರಹದ ಐದು ಸಮಾವೇಶಗಳು ಆಗಿವೆ. ಬಹುಶಃ ಇಲ್ಲಿ ಭಾಗವಹಿಸಿರುವ ಮಹಿಳೆಯರಿಗೆ ಏನೋ ಒಂದು ಚಲನೆ ಸಿಕ್ಕಿರಬಹುದು ಅಂತ ನಾನಂದುಕೊಳ್ತೀನಿ. ಯಾಕೇಂದ್ರೆ ಯಾವುದೇ ಸಮಾವೇಶದಲ್ಲಿ ಭಾಗವಹಿಸಿದಾಗ ಅಲ್ಲಿನ ಮಾತುಗಳನ್ನು ಕೇಳಿದಾಗ, ನಾವು ಮೊದಲು ಏನಾಗಿರ್ತೇವೋ, ಅದು ಮುಗಿದ ಮೇಲೆ ನಾವು ಬೇರೆಯೇ ಆಗಿರುತ್ತೇವೆ. ನಮ್ಮ ವ್ಯಕ್ತಿತ್ವಕ್ಕೆ ಒಂದು ವಿಸ್ತಾರ ಸಿಕ್ಕಿರತ್ತೆ. ನಮ್ಮ ಅರಿವು ಹಿಗ್ಗಿರತ್ತೆ. ಹಾಗಾಗಿ ಯಾವುದೂ ವ್ಯರ್ಥ ಅಲ್ಲ ಅಂತ ನಾನು ತಿಳ್ಕೊಳ್ತೀನಿ. ಯಾಕೇಂದ್ರೆ ಮೂವತ್ತು ವರ್ಷಗಳ ಹಿಂದೆ ಏನೊಂದ್ರೆ ಏನೂ ತಿಳಿಯದ ಮಹಿಳೆಯಾಗಿದ್ದೆ ನಾನು. ಒಂದು ಶಿಬಿರದಲ್ಲಿ ಭಾಗವಹಿಸಿದಾಗ ಮೊಟ್ಟಮೊದಲಿಗೆ ಬುದ್ಧ, ಗಾಂಧಿ,

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಅಂಬೇಡ್ಕರ್, ಬಸವ ಇವರ ಬಗ್ಗೆಯೆಲ್ಲ ತಿಳಿದೆ. ಜಗತ್ತು ಹೀಗಿದೆಯಾ ಅಂತ ಅನ್ನಿಸ್ತು. ಆ 'ಹೀಗಿದೆಯಾ?' ಎನ್ನುವ ಒಂದು ಪ್ರಶ್ನೆ ನನ್ನ ಅರಿವನ್ನ ವಿಸ್ತರಿಸಿತು. ಹಾಗೆಯೇ ನಾವೆಲ್ಲ ಸೋದರಿಯರು ಒಂದಲ್ಲಾ ಒಂದು ಚಟುವಟಿಕೆಗಳಲ್ಲಿ ಭಾಗವಹಿಸಿದರೆ ನಮ್ಮ ಅರಿವು ವಿಸ್ತಾರವಾಗುತ್ತಾ ಹೋಗುತ್ತೆ. ನಾವು ಅಕ್ಷರವನ್ನೇ ಅಥವಾ ವಿಚಾರವನ್ನೇ ಒಡವೆಯನ್ನಾಗಿ ಮಾಡಿಕೊಳ್ಳಬೇಕು. ಆವಾಗ ಈ ಜಗತ್ತಿನ ದಿಕ್ಕು ದೆಸೆ ಕೊಂಚ ಬದಲಾವಣೆ ಆಗತ್ತೆ ಅನ್ನುವುದು ನನ್ನ ಅಭಿಮತ. ಅನೇಕ ಸಹೋದರಿಯರು ದೂರದೂರದಿಂದ ಬಂದಿದ್ದೀರಾ. ಮನೆಮಠ ಎಲ್ಲ ಬಿಟ್ಟುಬರೋದು ಎಷ್ಟು ಕಷ್ಟ ಅಂತ ನಮಗೆಲ್ಲರಿಗೂ ಗೊತ್ತಿದೆ. ನಾವು ಹೀಗೆ ಒಂದು ದಿವಸ ಕೂಡ ಹೋಗೋದು ಮನೆಮಂದಿಗೆ ಇಷ್ಟ ಆಗಲ್ಲ. ಯಾಕಂದ್ರೆ, ಅವರಿಗೆ ತುಂಬ ಕಷ್ಟ ಆಗತ್ತೆ. ಆದರೆ ಮಹಿಳೆ ಅವಳಿಗೋಸ್ಕರ ಕೂಡ ಬದುಕಬೇಕಾಗತ್ತೆ. ಅವಳ ಪ್ರಪಂಚ ಹಿಗ್ಗಬೇಕಾಗತ್ತೆ.

ಅದಕ್ಕೋಸ್ಕರ ನೀವು ಬಂದಿರುವುದಕ್ಕೆ ನಿಮಗೆಲ್ಲರಿಗೂ ಅಭಿನಂದನೆಗಳು. ಇಂಥಾ ಚಟುವಟಿಕೆಗಳಿಗೆ ನಿಮಗೆ ಗೊತ್ತಿರುವಂತೆ ಮಹಿಳೆಯರಿಗೆ ಬೆಂಬಲ ಸಿಗುವುದು ಕಮ್ಮಿ. ಫೇಸ್‌ಬುಕ್‌ನಲ್ಲಿ ಕೂಡ ನಾನು ಈ ಸಂದರ್ಭಕ್ಕೆ ಮಹಿಳೆಯರ ಬಗ್ಗೆ ಕವನಗಳನ್ನು ಹಾಕಿದಾಗ, 'ಬನ್ನಿ' ಎಂದು ಶಿವಮೊಗ್ಗೆಯ ಸಮಾವೇಶಕ್ಕೆ ಕರೆದಾಗ ಅಂತಹ ಬೆಂಬಲವೇನೂ ಸಿಗಲಿಲ್ಲ. ಪರವಾಗಿಲ್ಲ. ಜಗತ್ತಿನಲ್ಲಿ ಏನೆಲ್ಲ ಬದಲಾವಣೆ ಆಗುತ್ತದೆ. ಅದು ಸಣ್ಣ ಗುಂಪಿನಿಂದಲೇ ಶುರುವಾಗುವುದು.

ವಯಸ್ಸು, ವರ್ಗ, ಜಾತಿ, ಲಿಂಗ, ಧರ್ಮ, ಪಕ್ಷ, ಸಿದ್ಧಾಂತ ಇವುಗಳು ಬೇರೆ ಬೇರೆಯಾಗಿದ್ದರೂ ಹೆಣ್ಣು ಜೀವವೆಂಬ ಏಕ ಅಸ್ಮಿತೆ (ಐಡೆಂಟಿಟಿ) ಯಲ್ಲಿ ನಾವೆಲ್ಲ ಇಲ್ಲಿ ಜೊತೆಗೂಡಿದ್ದೇವೆ. ಅದೇ ದೊಡ್ಡ ಚಲನೆ ಅಂತ ನಾನು ಭಾವಿಸುವೆ. ಹೆಣ್ಣು ತನ್ನ ಅಸ್ಮಿತೆ ಕಂಡುಕೊಳ್ಳುವ ಆಸೆಗೆ ಸಹೋದರರೂ ಕೂಡ ಬೆಂಬಲ ನೀಡಿರುವರು. ಹಾಗೆ ನೋಡಿದರೆ ಈ ಸಮಾವೇಶಕ್ಕೆ 'ಅರಿವಿನ ಪಯಣ' ಎಂಬ ಶಾಲೆಗಳಲ್ಲಿ ಮಕ್ಕಳೊಂದಿಗೆ ಸಂವಾದ ನಡೆಸುವ ಕಾರ್ಯಕ್ರಮದ ಮೂಲಕ ಚಾಲನೆ ಸಿಕ್ಕಿತು. ಅರಿವಿನ ಪಯಣದಲ್ಲಿ ನಮ್ಮೆಲ್ಲಾ ಗೆಳತಿಯರು ಜಿಲ್ಲೆಯಲ್ಲಿ ಹಲವಾರು ಶಾಲೆಗಳಿಗೆ ಭೇಟಿ ನೀಡಿ ಮಕ್ಕಳ ಹಕ್ಕುಗಳ ಬಗ್ಗೆ, ಹಾಗೂ ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳ ಮೇಲಾಗುವ ಲೈಂಗಿಕ ಶೋಷಣೆಗಳಿಂದ ಕಾನೂನಿನ ರಕ್ಷಣೆ ಪಡೆಯಲು, "ಲೈಂಗಿಕ ಅಪರಾಧಗಳಿಂದ ರಕ್ಷಣೆ ಕಾಯ್ದೆ–2012" (ಪೋಕ್ಸೋ ಕಾಯ್ದೆ–2012) ರ ಉಪಯೋಗ ಹೇಗೆ ಪಡೆಯಬಹುದು ಎಂದುದರ ಬಗ್ಗೆ ತಿಳಿವಳಿಕೆ ನೀಡಿರುತ್ತಾರೆ. ಹದಿಹರಯದ ಹೆಣ್ಣುಮಕ್ಕಳು ಹಾಗೂ ಗಂಡುಮಕ್ಕಳಿಗೆ ಸಮಾಜದಲ್ಲಿ ಆಗುತ್ತಿರುವ ಲಿಂಗ ತಾರತಮ್ಯದ ಬಗ್ಗೆ ತಿಳಿವಳಿಕೆ ನೀಡಿ ಲಿಂಗತಾರತಮ್ಯದ ಮನಸ್ಥಿತಿಯಿಂದ ಧೈರ್ಯವಾಗಿ ಹೊರಬಂದು ವ್ಯಕ್ತಿತ್ವ ವಿಕಾಸದ ಕಡೆ ಗಂಡು ಹೆಣ್ಣುಮಕ್ಕಳಿಬ್ಬರೂ ಸಮಾನವಾಗಿ ನಡೆಯಬೇಕೆಂಬ ಆಶಯದ ಅರಿವಿನ ದಾರಿಯನ್ನು ತೋರಿಸಿಕೊಟ್ಟಿರುತ್ತಾರೆ. ಈ ಅರಿವಿನ ಪಯಣ ಹೆಣ್ಣು ಮತ್ತು ಗಂಡುಮಕ್ಕಳಿಬ್ಬರಿಗೂ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಉಪಯೋಗವಾಗಿದೆ ಎಂದುಕೊಳ್ಳುವೆ.


ಜಗತ್ತಿನಲ್ಲಿಯೇ ಭಾರತ ಅತಿ ದೊಡ್ಡ ಪ್ರಜಾಪ್ರಭುತ್ವ. 90ರ ದಶಕದ ತನಕವೂ ನಮ್ಮದು ಸಿರಿವಂತ ದೇಶ ಆಗಿರಲಿಲ್ಲ. ಆದರೆ ಈ ದೇಶಕ್ಕೆ ಒಂದು ಚಾರಿತ್ರ್ಯ ಇತ್ತು. ನಾವೆಲ್ಲ ದುಷ್ಟರಾಗದೆ, ಭ್ರಷ್ಟರಾಗದೆ ಬದುಕಲು ಅವಕಾಶ ಮಾಡಿಕೊಟ್ಟದ್ದಕ್ಕೆ ಈ ದೇಶಕ್ಕೆ ದೊಡ್ಡ ಸಲಾಂ. ಸಿರಿವಂತಿಕೆ ಬಂದರೆ ಮನೆ ಮಂದಿ–ಮಕ್ಕಳು ಹೇಗೆ ಹಾಳಾಗುವರೋ ಹಾಗೆಯೇ ಆಗಿದೆ. ಈಗ ಎಲ್ಲೆಡೆ ಭ್ರಷ್ಟಾಚಾರ, ದುಷ್ಟತನಗಳು ಮೇರೆ ಮೀರಿವೆ. ದುರ್ಬಲರ ಅಂದರೆ ಆದಿವಾಸಿಗಳು, ಮಹಿಳೆಯರು, ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ಹೆಚ್ಚಿದೆ. ನಮಗೆ ಈ ಸಿರಿವಂತಿಕೆ ಬೇಕಿತ್ತಾ? ಏನು ನಾವು ನ್ಯಾಯವಾದ ಹಾದಿಯಲ್ಲಿ ಗಳಿಸಿದ್ದೆವೋ ಅದನ್ನು ನ್ಯಾಯವಾಗಿ ಹಂಚಿಕೊಂಡು ಕೂಡಿ ಬಾಳಲು ನಮ್ಮಿಂದ ಸಾದ್ಯವಿಲ್ಲವೇ? ಈ ಹೊತ್ತು ಪ್ರತಿಯೊಬ್ಬ ಭಾರತೀಯನ ತಲೆಮೇಲೆ ವಿಪರೀತ ಸಾಲ ಬೇರೆ ಇದೆಯಂತೆ. ನಮ್ಮದು ಅತಿ ದೊಡ್ಡ ಪ್ರಜಾಪ್ರಭುತ್ವ. ಅತ್ಯುತ್ತಮ ಸಂವಿಧಾನ. ಈ ತನಕ ಒಬ್ಬ ಮನುಷ್ಯ ತನ್ನ ಆತ್ಮಸಾಕ್ಷಿಗೆ ಅನುಗುಣವಾಗಿ ಏನು ಹೇಳಬೇಕೋ ಅದನ್ನು ಧೈರ್ಯವಾಗಿ ಹೇಳುವ ಅವಕಾಶವನ್ನು ಸಂವಿಧಾನ ತನ್ನ ಪ್ರಜೆಗಳಿಗೆ ನೀಡಿದೆ. ಅದನ್ನು ಕಾಪಾಡಿಕೊಳ್ಳುವ ದೊಡ್ಡ ಸವಾಲು ನಮ್ಮ ಮುಂದಿದೆ.

ನಾವು ಮಹಿಳೆಯರು ಈ ದೇಶದಲ್ಲಿ ಪುರುಷರ ಸಮಪಾಲು ಇದ್ದೇವೆ. ಆದರೆ ಎಲ್ಲಾ ರಂಗಗಳಲ್ಲಿಯೂ ನಮಗೆ ಸಮಪಾಲು ಸಿಕ್ಕಿಲ್ಲ. ಗಾಂಧೀಜಿ ಕನಸಿದ್ದ ಮಧ್ಯರಾತ್ರಿಯಲ್ಲಿ ಮಹಿಳೆ ಏಕಾಂಗಿಯಾಗಿ ಓಡಾಡುವ ಸ್ವಾತಂತ್ರ್ಯದ ಕನಸು ಇನ್ನೂ ಕೈಗೂಡಿಲ್ಲ. ಮಧ್ಯರಾತ್ರಿಯಲ್ಲೇಕೆ ಅವಳು ಓಡಾಡಬೇಕು ಎಂದು ನಿಮಗೆ ಅನಿಸಬಹುದು. ಈಗ ಎಲ್ಲಾ ಕ್ಷೇತ್ರಗಳಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಮಹಿಳೆಯರು ತಮ್ಮ ಕುಟುಂಬಕ್ಕೂ ಆಧಾರವಾಗಿದ್ದಾರೆ, ದೇಶಕ್ಕೂ ಸೇವೆ ಸಲ್ಲಿಸುತ್ತಿದ್ದಾರೆ. ತುರ್ತು ಪರಿಸ್ಥಿತಿಯಲ್ಲಿ ಏಕಾಂಗಿಯಾಗಿ ಓಡಾಡಬೇಕಾಗುತ್ತದೆ. ಅಂತಹ ವಾತಾವರಣವು ಬೇಕಾಗುತ್ತದೆ. ಸದಾ ಆಕ್ರಮಣದ ಭೀತಿಯಲ್ಲಿರುವ ಮಹಿಳೆ ಒಳಗೂ ಹೊರಗೂ ಸದಾ ರಕ್ಷಣೆಯನ್ನೇ ಬೇಡುವಂಥ ಪರಿಸ್ಥಿತಿ ಇರುವಂತಹ ವಾತಾವರಣದಲ್ಲಿ ಹೆಣ್ಣುಜೀವ ಹೇಗೆ ಬದುಕು ನಡೆಸಬೇಕೋ ನೀವೇ ಯೋಚಿಸಿ.

ಅನಕ್ಷರಸ್ಥ ಆದರೆ ತಮ್ಮದೇ ಆದ ರೀತಿಯಲ್ಲಿ ವಿದ್ಯಾವಂತರಾದ ತಳ ಸಮುದಾಯದ ಮಹಿಳೆಯರು ಇನ್ನೂ ಕೆಳಗೇ ಇರುವರು. ಇನ್ನು ಸಿರಿವಂತ ಮಹಿಳೆಯರೋ, ಅವರ ಆದ್ಯತೆಗಳೇ ಬೇರೆ. ಅವರು ಆಕಾಶದಲ್ಲೇ ತೇಲಾಡುತ್ತಿರುವರು. ಇನ್ನು ಕೆಳಮಧ್ಯಮ, ಮಧ್ಯಮವರ್ಗದ ನಡುವೆ ಇರುವ ಮಹಿಳೆಯರು ತ್ರಿಶಂಕುಗಳ ಹಾಗೆ. ವಿಚಾರ, ಹೋರಾಟ, ಹಾರಾಟ ಅಂತಾ ಮಾಡುತ್ತಾ ಇರುವೆವು. ತಳದವರನ್ನು ಒಂದು ಕೈಯಿಂದ, ಮೇಲಿರುವವರನ್ನು ಮತ್ತೊಂದು ಕೈಯಿಂದ ಎಳೆದುಕೊಂಡು ಜೊತೆಯಾಗಿ ನಮ್ಮ ಕಾಲ ಮೇಲೆ ನಾವು ನಿಂತು ನಡೆಯುವ ಹಂಬಲ ನಮ್ಮದು.

ಕೊನೆಯದಾಗಿ ಒಂದು ಮಾತು ಹೇಳಬೇಕೆಂದರೆ ಅಕ್ಷರಮಾಲೆಯೇ ನಮ್ಮ ಒಡವೆ ಆಗಬೇಕು. ಸಹಜೀವಿಗಳ ಬಗ್ಗೆ ಕಕ್ಕುಲಾತಿ, ಕಾಳಜಿ ನಮ್ಮ ಹಂಬಲವಾಗಬೇಕು. ಒಬ್ಬ ಮಹಿಳೆಗೆ ರಾತ್ರಿ ನಿರ್ಭಯವಾಗಿ ಓಡಾಡುವ ಅವಕಾಶ ಇದೆ ಎಂದಾದರೆ ಇಡೀ ಲೋಕಕ್ಕೆ ಸ್ವಾತಂತ್ರ್ಯ ಸಿಕ್ಕಹಾಗೆ. ಅಂತಹ ಒಂದು ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಹೆಜ್ಜೆಗಳನ್ನಿಡುತ್ತಾ ಈ ದಿನ ಮೆರವಣಿಗೆಯಲ್ಲಿ ಸಾಗಿದ್ದೇವೆ. ನಂತರ ಇಲ್ಲಿ ಕೂತು ಪರಸ್ಪರ ಮಾತುಕತೆಯಾಡಿದ್ದೇವೆ. ಮುಂದಿನ ದಿನಗಳಲ್ಲಿ ಈ ನಮ್ಮ ಕನಸಿಗಾಗಿ ದುಡಿಯೋಣ, ಮುಂದಿನ ದಿನಗಳಲ್ಲಿ ಕ್ರಿಯಾಶೀಲರಾಗಿ ಇರೋಣ ಎಂದು ಹೇಳಬಯಸುವೆ. ಮಹಿಳೆಯರ ಸ್ವಾತಂತ್ರ್ಯ ಗೌರವಿಸುವ ಸಮಾಜದಲ್ಲಿ ಅಸಮಾನತೆ, ಅತ್ಯಾಚಾರ, ಮರ್ಯಾದೆ ಹತ್ಯೆ, ಭ್ರೂಣಹತ್ಯೆ, ಆಸಿಡ್ ದಾಳಿ, ವರದಕ್ಷಿಣೆ ಸಾವು ಹೀಗೆ ಯಾವುದೇ ವಿಧವಾದ ಹೇರುವಿಕೆ ಕಡಿಮೆ ಇರುತ್ತದೆ. ಅವಳ ಪ್ರತಿಭೆ, ದುಡಿಮೆ, ಸೇವೆಗೆ ಗೌರವ ಇರುತ್ತೆ. ಅಂತಹ ಗೌರವದ ಬದುಕು ನಮ್ಮದಾಗಲಿ ಅಂತ ಆಶಿಸುತ್ತಾ, ನನಗೆ ನಾಲ್ಕು ಮಾತನಾಡಲು ಅವಕಾಶ ನೀಡಿದ ಸಂಘಟಕರಿಗೆ ನಮಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

❖



Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಹೆಣ್ಣು ಸಮುದಾಯವಾಗಿ ಮುನ್ನಡೆಯಬೇಕಾಗಿದೆ

❖ ಫ್ಲೇವಿಯಾ ಆಗ್ನೆಸ್

ನಾನು ಈ ಒಕ್ಕೂಟದ ಕಾರ್ಯಕ್ರಮಕ್ಕೆ ಮೊದಲನೆಯ ಬಾರಿ ಬರ್ತಾ ಇರೋದು. ಇಷ್ಟು ದೊಡ್ಡ ಸಂಘಟನೆಯನ್ನು ಕಟ್ಟಿ, ತುಂಬಾ ಪರಿಶ್ರಮ ಪಟ್ಟು ಸಭೆ, ಮೆರವಣಿಗೆ ಎಲ್ಲವನ್ನೂ ಮಾಡಿ ಇವತ್ತಿನ ದಿನವನ್ನು ನಮ್ಮ ನೆನಪಿನಲ್ಲಿಡುವಂತೆ ಮಾಡಿದ ಒಕ್ಕೂಟದ ಸದಸ್ಯರಿಗೆ ಅಭಿನಂದನೆಗಳು. ಇಂತಹ ಕೆಲಸಗಳು ಬಹಳ ಮುಖ್ಯವಾದದ್ದು. ಮಹಿಳೆಯರ ಸಮಸ್ಯೆಗಳನ್ನು ಸಾರ್ವಜನಿಕ ವಲಯದ ಗಮನಕ್ಕೆ ತರುವಂತಹ ಹೇಳಿಕೆಗಳು, ಕೆಲಸಗಳು ಇಂದಿನ ತುರ್ತು. ಈ ರೀತಿಯ ಸಮಾವೇಶಗಳು ಅದನ್ನು ಮಾಡುತ್ತವೆ.

ಮಾರ್ಚ್ 8 ನೇ ತಾರೀಖಿನ ಮಹತ್ವದ ಮೂಲಕ ಆರಂಭ ಮಾಡುತ್ತೇನೆ. ಸಾರ್ವಜನಿಕ ಹೇಳಿಕೆಗಳು ಎಷ್ಟು ಮುಖ್ಯ ಅಂತ ಇದರಿಂದ ಗೊತ್ತಾಗುತ್ತದೆ. ಕಾರ್ಖಾನೆಯಲ್ಲಿ ಮೊದಲು ಪ್ರತಿಭಟನೆ ಮಾಡಿದವರು ಹೆಂಗಸರು. ಅಮೆರಿಕದ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವ ಅವಧಿಯನ್ನು 14 ಘಂಟೆಯಿಂದ 10 ಘಂಟೆಗೆ ಇಳಿಸುವುದಕ್ಕೆ, ಸಂಬಳದ ಹೆಚ್ಚಳಕ್ಕಾಗಿ ಮಹಿಳೆಯರು ಪ್ರತಿಭಟಿಸಿ ಬೀದಿಗಿಳಿದರು. ಮಹಿಳೆ ಯಾವಾಗಲು ಎರಡು ರೀತಿಯ ಕೆಲಸಗಳನ್ನು ಮಾಡುತ್ತಾಳೆ. ಅಲ್ಲಿನ ಹೆಂಗಸರು 14 ಘಂಟೆ ಕಾರ್ಖಾನೆಯಲ್ಲಿ ಕೆಲಸ ಮಾಡಿ, ಮನೆಗೆ ಬಂದು, ಮನೆ ಮತ್ತು ಮಕ್ಕಳನ್ನು ನೋಡಿಕೊಳ್ಳಬೇಕಿತ್ತು. ಅವರ ಗಳಿಕೆಯಿಂದಲೇ ಅವರು ತಮ್ಮ ಮನೆಯನ್ನು ಪೋಷಿಸಬೇಕಾದ್ದರಿಂದ ಅವರು ಕಾರ್ಖಾನೆಯಲ್ಲಿ ಕೆಲಸ ಮಾಡುವುದು ಮುಖ್ಯವಾಗಿತ್ತು. ಅದರಲ್ಲಿ ಮಹಿಳೆಯರು ಯಶಸ್ಸನ್ನು ಕಂಡರು. ಆ ನಂತರ ರಷ್ಯದಲ್ಲಿ ಮತ್ತು ಬೇರೆ ಬೇರೆ ದೇಶದಲ್ಲಿ ಕೂಡ ಮಹಿಳೆಯರು ತಮ್ಮ ಹಕ್ಕಿಗಾಗಿ ಹೋರಾಟ ನಡೆಸಿದರು. ಕೊನೆಗೆ 1975, ಮಾರ್ಚ್ 8ರ ದಿನವನ್ನು ಅಂತಾರಾಷ್ಟ್ರೀಯ ಮಹಿಳಾ ದಿನವೆಂದು ಘೋಷಿಸಲಾಯಿತು.

ನಮ್ಮ ದೇಶಕ್ಕೆ ಬಂದರೆ, 1980ರ ಮಾರ್ಚ್ 8 ರಂದು, ಕೆಲವೊಂದು ದೊಡ್ಡ ನಗರಗಳಲ್ಲಿ ಮಹಿಳೆಯರು ಪ್ರತಿಭಟನೆ ನಡೆಸಿದರು. ಇವತ್ತಿನ ರೀತಿಯ ದೊಡ್ಡ ರ್‍ಯಾಲಿ ಆಗಿರಲಿಲ್ಲ. ಆದರೆ ಅದು ಮುಖ್ಯವಾದದ್ದಾಗಿತ್ತು. ಅದಕ್ಕೆ ದೊಡ್ಡ ಪಬ್ಲಿಸಿಟಿಯೂ ಸಿಕ್ಕಿತು. ಸುಪ್ರೀಂಕೋರ್ಟಿನ ಒಂದು ತೀರ್ಪಿನ ಬಗ್ಗೆ ಈ ಪ್ರತಿಭಟನೆ ನಡೆಯಿತು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಅದನ್ನು ನಾನು ವಿವರಿಸಬೇಕು. ಇದು ಮಥುರಾ ಕೇಸ್ ಅಂತಲೇ ಪ್ರಚಲಿತವಾಗಿದೆ. ಇದರಿಂದಲೇ ನಮಗೆ ಅತ್ಯಾಚಾರ ವಿರೋಧಿ ಕಾನೂನಿಗೆ ಮುಖ್ಯವಾದ ತಿದ್ದುಪಡಿ ಬಂತು. ಒಬ್ಬ 16 ವರ್ಷದ ಹೆಣ್ಣುಮಗಳನ್ನು ಅವಳ ಅಣ್ಣನೇ ಸಲ್ಲಿಸಿದ ಆರೋಪದ ಮೇಲೆ ಪೋಲೀಸ್ ಠಾಣೆಗೆ ಕರೆಸಲಾಗಿತ್ತು. ಅವಳು ಬೇರೆಯವರ ಮನೆಯಲ್ಲಿ ಮನೆಗೆಲಸ ಮಾಡುವ ಬಡ ಹೆಣ್ಣು ಮಗಳಾಗಿದ್ದಳು. ಅವಳ ಹೇಳಿಕೆ ತೆಗೆದುಕೊಂಡ ಮೇಲೆ ಅವಳನ್ನು ಅಲ್ಲಿಯ ಪಾಯಿಖಾನೆಗೆ ಕರೆದುಕೊಂಡು ಹೋಗಿ ಎರಡು ಪೋಲಿಸರು ಅವಳ ಮೇಲೆ ಅತ್ಯಾಚಾರ ಮಾಡಿದರು. ಇದು ನಡೆದದ್ದು 1973ರಲ್ಲಿ. ಅವಳು ಹೊರಗೆ ಬಂದಾಗ ಹೊರಗೆ ಕಾಯುತ್ತಿದ್ದವರಿಗೆ ಅವಳು ಅತ್ಯಾಚಾರದ ಬಗ್ಗೆ ಹೇಳಿದಳು. ಹೊರಗಡೆ ಅವಳಿಗಾಗಿ ಕಾಯುತಿದ್ದ ಅಣ್ಣ ಮತ್ತಿತರರ ನಡವಳಿಕೆಯನ್ನು ನಾವು ಗಮನಿಸಬೇಕು. ಅವಳ ಮಾತನ್ನು ಅವರು ನಂಬಿದರು ಮತ್ತು ಪೋಲಿಸರ ವಿರುದ್ಧ ಪ್ರತಿಭಟಿಸಿದರು. ಉಳಿದ ಹಳ್ಳಿಯವರೂ ಅದಕ್ಕೆ ಧ್ವನಿ ಕೊಟ್ಟರು. ಈ ರೀತಿಯ ನಡವಳಿಕೆ ಇವತ್ತೂ ನಮ್ಮಲ್ಲಿ ಆಗುವುದಿಲ್ಲ. ಈ ಘಟನೆಯಾಗಿ ಇಷ್ಟು ವರ್ಷದ ನಂತರವೂ ಒಂದು ಹುಡುಗಿ ತನ್ನ ಅತ್ಯಾಚಾರದ ಬಗ್ಗೆ ಹೇಳಿಕೊಂಡರೆ ನೀನು ಏನು ಮಾಡಿದ್ದಿ, ನೀನೇಕೆ ಅಲ್ಲಿಗೆ ಹೋದೆ ಇತ್ಯಾದಿ ಪ್ರಶ್ನೆಯಿಂದ ಅವಳನ್ನೇ ಕಂಗೆಡಿಸುತ್ತಾರೆ. ಆದರೆ ಅಂದು ಮಹಾರಾಷ್ಟ್ರದ ಒಂದು ಸಣ್ಣ ಹಳ್ಳಿಯಲ್ಲಿ ಜನ ಅವಳನ್ನು ಬೆಂಬಲಿಸಿದರು. ಪೋಲಿಸರಿಗೆ ಕಂಪ್ಲೇಂಟ್ ಕೊಟ್ಟರು. ಕೇಸು ರಿಜಿಸ್ಟರ್ ಆಯಿತು. ಸೆಶನ್ ಕೋರ್ಟಿಗೆ ಹೋಯಿತು. ಅವಳ ದೇಹದ ಮೇಲೆ ಬಲತ್ಕಾರದಿಂದ ಹಲ್ಲೆಗೊಳಗಾದ ಗುರುತು ಇಲ್ಲ ಅಂತಾದ ಮೇಲೆ ಅದು ಅತ್ಯಾಚಾರ ಆಗಿರೋಕೆ ಸಾಧ್ಯವಿಲ್ಲ, ಈ ಹುಡುಗಿ ಸುಳ್ಳನ್ನು ಹೇಳಿದ್ದಾಳೆ. ಅವಳ ಚರಿತ್ರೆ ಸರಿ ಇಲ್ಲ. ಅವಳು ಹಿಂದೆಯೇ ಒಬ್ಬನೊಂದಿಗೆ ಓಡಿಹೊಗಿದ್ದಳು ಇತ್ಯಾದಿ ವಿಷಯಗಳನ್ನು ಒಳಗೊಂಡ ತೀರ್ಪು ಹೊರಬಂದಿತು. ಅಲ್ಲಿಂದ ಕೇಸು ಹೈಕೋರ್ಟಿಗೆ ಹೋದಾಗ ಅವಳು ಸುಮ್ಮನಿದ್ದಾಳೆ ಅಂದರೆ ಅದು ಅವಳ ಒಪ್ಪಿಗೆ ಅಲ್ಲ ಎಂದು ಪೋಲಿಸರ ವಿರುದ್ಧವೇ ತೀರ್ಪು ಬರುತ್ತದೆ. ಅಲ್ಲಿಂದ ಪೋಲಿಸರು ಸುಪ್ರೀಂಕೋರ್ಟ್‌ಗೆ ಅಪೀಲು ಹೋಗುತ್ತಾರೆ. ಸುಪ್ರೀಂಕೋರ್ಟ್, ಸೆಶನ್ ಕೋರ್ಟ್‌ನ ತೀರ್ಪನ್ನೇ ಬೆಂಬಲಿಸುತ್ತದೆ. ಈ ಕೇಸಿನ ಆಗುಹೋಗುಗಳನ್ನು ನೋಡಿದ ನಾಲ್ಕು ಕಾನೂನು ಅಧ್ಯಾಪಕರು ಇದರ ಬಗ್ಗೆ ದಿನಪತ್ರಿಕೆಯಲ್ಲಿ ಬರಿಯುತ್ತಾರೆ. ಇದಕ್ಕೆ ಇಲ್ಲಿ ನ್ಯಾಯ ಸಿಗುವುದಿಲ್ಲವೆಂದರೆ ಇನ್ನು ಎಲ್ಲಿ ಸಿಗುತ್ತದೆ? ಈ ಕೇಸನ್ನು ಮತ್ತೆ ಪರಿಶೀಲಿಸಿ ಅಂತ ಒಂದು ತೆರೆದ ಪತ್ರ ಬರೆಯುತ್ತಾರೆ. ಆ ಪತ್ರ ಮತ್ತು ಕೇಸಿನೊಂದಿಗೆ ಅತ್ಯಾಚಾರ ವಿರೋಧಿ ಕಾನೂನಿಗೆ ತಿದ್ದುಪಡಿ ಆರಂಭವಾಯಿತು. ಅದರ ಪ್ರಯುಕ್ತ ನಡೆದ 1980ರ ಮಾರ್ಚ್ 8ರ ರ‍್ಯಾಲಿಯೇ ಒಂದು ಮಹಿಳಾ ಚಳುವಳಿಯಾಯಿತು. ಒಂದು ಸ್ವಾಯತ್ತ ಮಹಿಳಾ ಚಳುವಳಿಯು ಅಸ್ತಿತ್ವಕ್ಕೆ ಬಂತು. ಇದು ಮಹಿಳೆಯರ ಬೇರೆಬೇರೆ ವಿಷಯಗಳನಿಟ್ಟುಕೊಂಡು ಸಾರ್ವಜನಿಕವಾಗಿ ಹೋರಾಡುವುದಕ್ಕೆ ನಾಂದಿಯಾಯಿತು.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಅವತ್ತಿನ ಮುಖ್ಯವಾದ ಅಹವಾಲು ಏನಾಗಿತ್ತು ಅಂದರೆ ಅತ್ಯಾಚಾರ ವಿರೋಧಿ ಕಾನೂನಿಗೆ ತಿದ್ದುಪಡಿ ತರಬೇಕು ಎಂದಾಗಿತ್ತು. ಈಗ ಕಾನೂನು ತಿದ್ದುಪಡಿ ಆಗುತ್ತಲೇ ಇದೆ. ನಿರ್ಭಯ ಅತ್ಯಾಚಾರದ ನಂತರ 2013ರಲ್ಲಿ ಮತ್ತೆ ಕಾನೂನು ಪರಿಷ್ಕೃತಗೊಂಡಿತು. ಈಗ ಕಾನೂನುಗಳಿದ್ದರೂ ಅತ್ಯಾಚಾರದ ಕೇಸುಗಳ ವರದಿಗಳು ಬರುತಿದ್ದರೂ ದೋಷ ನಿರ್ಣಯವಾಗುತ್ತಿಲ್ಲ. ನಮ್ಮ ವ್ಯವಸ್ಥೆ ಇದಕ್ಕೆ ಯಾವುದೇ ಪ್ರತಿಕ್ರಿಯೆಯನ್ನೂ ತೋರುವುದಿಲ್ಲ. ಕಾನೂನು ಸರಿ ಇದ್ದರೆ ನ್ಯಾಯ ಸಿಗುತ್ತದೆ ಎನ್ನುವ ಹಾಗಿಲ್ಲ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇದರ ಜೊತೆ ನಾನು ಹೇಗೆ ಸೇರಿಕೊಂಡೆ ಎಂದು ಹೇಳುತ್ತೇನೆ. ಹೆಂಗಸರು ಒಟ್ಟಿಗೆ ಸೇರಿಕೊಂಡಾಗ ಅವರು ತಮ್ಮತಮ್ಮ ಮನೆಯಲ್ಲಿ ನಡೆಯುವುದನ್ನು ಹೇಳಿಕೊಳ್ಳುತ್ತಾರೆ. ಅದರ ಬಗ್ಗೆ ಚರ್ಚೆ, ಸಲಹೆಗಳನ್ನು ಒಬ್ಬರಿಗೊಬ್ಬರು ಕೊಟ್ಟುಕೊಳ್ಳುತ್ತಾರೆ. ನಾನು ನನ್ನ ಮನೆಯ ವಿಷಯಗಳನ್ನು ಈ ಚಳುವಳಿಯಿಂದ ಮಾತಾಡಲು ಶುರುಮಾಡಿದೆ. ಆಗ ಎಲ್ಲರು ಕೇಳಿದರು, ಇಷ್ಟೆಲ್ಲಾ ಹಿಂಸೆ ಇರುವಾಗ ಇನ್ನೂ ಯಾಕೆ ಈ ಮನೆಯಲ್ಲಿ ಇದ್ದೀಯ? ಅಂತ. ಆದರೆ ಎಲ್ಲಿ ಹೋಗೋದು? ಆರ್ಥಿಕವಾಗಿ ಏನೂ ಬೆಂಬಲವಿಲ್ಲದೆ, ಮೂರು ಮಕ್ಕಳು, ಅವರ ಊಟ, ಶಿಕ್ಷಣ ಎಲ್ಲವನ್ನೂ ಹೇಗೆ ನಿಭಾಯಿಸೋದು? ಹಾಗಾಗಿ ಆಗ ಹೊರಗೆ ಬರಲಿಲ್ಲ. ಆದರೆ ಹೊರಗಡೆ ಬರುವ ಬಯಕೆ ಹುಟ್ಟಿತು. ಆದ್ದರಿಂದ ಇದು ನನ್ನ ಪಯಣದ ಆರಂಭವೇ ಅಂದುಕೊಳ್ಳುತ್ತೇನೆ. ಒಂದು ಕನಸು ಕಾಣುವುದಕ್ಕಾದರೂ ಆಯಿತು. ಹೆಚ್ಚಿನ ಜನರಿಗೆ ಕನಸೂ ಇರುವುದಿಲ್ಲ. ಇರುವುದನ್ನು ಒಪ್ಪಿಕೊಳ್ಳುವುದಲ್ಲದೇ, ಬೇರೆ ದಾರಿಯೇ ಇಲ್ಲ ಅಂದುಕೊಂಡಿರುತ್ತೇವೆ. ಅತ್ಯಾಚಾರ, ವರದಕ್ಷಿಣೆ ಸಾವು ಇವುಗಳು ಅಪರಾಧ ಎಂದು ತಿಳಿದಿದ್ದರೂ, ಕೌಟುಂಬಿಕ ಹಿಂಸೆಯನ್ನು ಅದಕ್ಕೆ ಸೇರಿಸುತ್ತಿರಲಿಲ್ಲ. ಅದು ವೈಯಕ್ತಿಕವಾದದ್ದು. ಅವರವರ ಮನೆ ವಿಷಯ ಅನ್ನುವ ಹಾಗೆ. ಆದರೆ ಈ ಚಳುವಳಿ ವೈಯಕ್ತಿಕ ಅನ್ನುವುದೂ ರಾಜಕೀಯ ಅನ್ನುವುದನ್ನು ತೋರಿಸಿತು. ಮನೆಯಲ್ಲಿ ನಡೆಯುವ ಹಿಂಸೆ ವೈಯಕ್ತಿಕ ಅಲ್ಲ, ಅದಕ್ಕೆ ರಾಜಕೀಯ ಆಯಾಮಗಳಿವೆ ಎಂದು ತಿಳಿಯಿತು. ನಾನು ನನ್ನ ಜೀವನದ ಕಥೆ ಬರೆದೆ. ಅದು ಕನ್ನಡಕ್ಕೂ ಅನುವಾದವಾಗಿದೆ "ನನ್ನ ಕಥೆ, ನಮ್ಮ ಕಥೆ." ಎಂದು. ಅದಾದ ಮೇಲೆ ನನ್ನ ವಿದ್ಯಾಭ್ಯಾಸ, ಕೆಲಸ, ಮನೆಯಿಂದ ಹೊರಗೆ ಬರುವ ಸ್ವಾತಂತ್ರ್ಯ ಸಿಕ್ಕಿತು. ಅದು ಧೀರ್ಘವಾದ ಪಯಣ, ಆದರೆ ಒಂದೊಂದು ಸಣ್ಣ ಹೆಜ್ಜೆಯೂ ಮುಂದಿಟ್ಟ ಹೆಜ್ಜೆಯೇ. ಮಹಿಳಾ ಚಳುವಳಿ ಮಾತ್ರ ಹಾಗೆ ಬೆಳೆಯಲಿಲ್ಲ. ಪ್ರತೀ ಮಾರ್ಚ್ 8ರಿಂದ ಮುಂದಿನ ವರ್ಷ 8ರ ಮಧ್ಯೆ ಏನೂ ಆಗುವುದಿಲ್ಲ. ಪ್ರತಿವರ್ಷ ವರದಕ್ಷಿಣೆ ಸಾವು, ನಾನಾ ರೀತಿಯ ಹಿಂಸೆಯ ವಿರುದ್ಧ ರ್‍ಯಾಲಿ ಮಾಡುತ್ತೇವೆ. ಕೆಲವೊಂದು ಕಡೆ ಅವು ಬರೀ ಆಚರಣೆಗಳಾಗಿವೆ.

2005 ರಲ್ಲಿ ಕೌಟುಂಬಿಕ ಹಿಂಸೆಯ ವಿರುದ್ಧ ಒಂದು ಕಾನೂನು ಬಂತು. ಆದರೆ ಈಗ ಈ ಎಲ್ಲಾ ಕಾನೂನಿಗೂ ಮತ್ತು ಮಹಿಳೆಯರ ಜೀವನಕ್ಕೂ ಸಂಬಂಧ ಇಲ್ಲ ಅನ್ನುವುದು ಗೊತ್ತಾಗಿದೆ. ನಾವು ಇನ್ನೂ ಪೋಲಿಸ್ ಠಾಣೆಗೆ ಹೋಗೋಕೆ, ಕೇಸ್

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಹಾಕೋಕೆ, ನ್ಯಾಯಲಯಕ್ಕೆ ಹೋಗೋಕೆ ಹೆದರುತ್ತೇವೆ. ಪ್ರತೀ ಸಲ ಹಿಂಸೆ ಆದಾಗ ಅದಕ್ಕೆ ತಕ್ಕ ಕಾನೂನು ಬೇಕು ಎಂದು ಕೇಳುತ್ತೇವೆ. ನಮಗೆ ಬರೀ ಕಾನೂನು ಬೇಕಾಗಿರೋದಲ್ಲ. ಅದನ್ನು ಸರಿಯಾಗಿ ಬಳಸಲು ಸಹಾಯ ಮಾಡುವಂತಹ ಒಂದು ವ್ಯವಸ್ಥೆ ಬೇಕು. ಒಂದು ಅತ್ಯಾಚಾರ ಅಥವಾ ದೌರ್ಜನ್ಯವಾದಾಗ ಅವರನ್ನು ಬೆಂಬಲಿಸುವ, ಅವರೊಟ್ಟಿಗೆ ಕೊನೆತನಕ ಇರುವವರು ಯಾರು? ಕುಟುಂಬ, ಸಮುದಾಯ ಅವಳೊಟ್ಟಿಗೆ ಹೇಗೆ ನಡೆದುಕೊಳ್ಳುತ್ತದೆ ಅನ್ನೋದನ್ನ ನಮ್ಮ ಸಂಸ್ಥೆಯ ಮೂಲಕ ಅರ್ಥ ಮಾಡಿಕೊಳ್ಳೋಕೆ ಪ್ರಯತ್ನ ಪಡುತ್ತಾ ಇದ್ದೇವೆ.

ವಿಶ್ವ ಸಂಸ್ಥೆ ರೂಪಿಸಿದ ಲಿಂಗ ಅಸಮಾನತೆಯ ಮಾಪನದಲ್ಲಿ ನಾಲ್ಕು ಭಾಗಗಳಿವೆ. ಹೆಣ್ಣಿನ ಆರ್ಥಿಕ, ರಾಜಕೀಯ ವಲಯಗಳಲ್ಲಿ ಭಾಗವಹಿಸುವಿಕೆ, ಶಿಕ್ಷಣ ಪಡೆಯುವುದು, ಆರೋಗ್ಯ ಮತ್ತು ಬದುಕು ನಡೆಸಲು ಇರುವ ಸಾಮರ್ಥ್ಯ, ಹಕ್ಕು (ಸರ್ವೈವಲ್). ರಾಜಕೀಯ, ಆರ್ಥಿಕ, ಮತ್ತು ಶಿಕ್ಷಣ ಕ್ಷೇತ್ರದಲ್ಲಿ ನಾವು ಸ್ವಲ್ಪ ಸಾಧನೆಯನ್ನು ಮಾಡಿದ್ದೇವೆ. ಆದರೆ ಕೊನೆಯ ಎರಡು ಮಾತ್ರ ಹಾಗೆ ಇದೆ. ಮಹಿಳೆ ಮುಂದುವರಿಯುವುದು ಅಂದರೆ ಆರೋಗ್ಯವನ್ನು ಕಾಪಾಡಿಕೊಳ್ಳುವ ಮತ್ತು ಆತ್ಮಸಮ್ಮಾನದಿಂದ ಬದುಕುವ ಹಕ್ಕು ಇರಬೇಕು. ನಮ್ಮ ದೇಶ ಮುಂದುವರಿಯುತ್ತಾ ಇದೆ ಎನ್ನುತ್ತಾರೆ. ಆದರೆ, ಬಾಲ್ಯವಿವಾಹ, ವರದಕ್ಷಿಣೆ ಸಾವು, ಭ್ರೂಣ ಹತ್ಯೆ, ಅತ್ಯಾಚಾರ, ಎಲ್ಲವೂ ಈಗಲೂ ಹಾಗೆ ಇವೆ. ಅವಳ ದೇಹ ಮತ್ತು ಮನಸ್ಸಿನ ಮೇಲೆ ಎಲ್ಲಾ ರೀತಿಯ ದೌರ್ಜನ್ಯವೂ ನಡೆಯುತ್ತಾ ಇದೆ. ಇದನ್ನೇ ನಾವು ಮೊದಲಿಂದ ಹೇಳುತ್ತಿದ್ದೇವೆ. ಇದನ್ನೇ ನಾವು ಇವತ್ತೂ ಎದುರಿಸಬೇಕಾಗಿದೆ. ಸ್ವಸಹಾಯ ಗುಂಪುಗಳು ಹೆಂಗಸರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುತ್ತಿವೆಯಾದರೂ ಮನೆಯಲ್ಲಿ ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಅವರಿಗೆ ಕಾನೂನಿನ, ಮಾನವೀಯ ಹಕ್ಕುಗಳ ಬಗ್ಗೆ ತಿಳಿದಿಲ್ಲ. ಇದು ಬರೀ ಹಳ್ಳಿಗಳಲ್ಲಿ ಮಾತ್ರವಲ್ಲ. ಇಂತಹದ್ದು ನಗರಗಳಲ್ಲೂ, ಮಧ್ಯಮವರ್ಗದಲ್ಲೂ ನಡೆಯುತ್ತಿದೆ. ನಮ್ಮಲ್ಲಿ ಕಾನೂನಿದೆ. ಆದರೆ ಆ ಕಾನೂನನ್ನು ಕಾರ್ಯರೂಪಕ್ಕೆ ತರುವ ತಾಂತ್ರಿಕ ವ್ಯವಸ್ಥೆ ಇಲ್ಲ. ಅಂತಹ ವ್ಯವಸ್ಥೆ, ದೌರ್ಜನ್ಯವನ್ನು ಗುರುತಿಸುವ ಸಂಸ್ಕೃತಿ ಬೆಳೆಯದೇ ಹೋದರೆ ನಾವು ಮುಂದೆ ಹೋಗುವುದು ಕಷ್ಟ.

1980ರಲ್ಲಿ ಮನೆಯಲ್ಲಿ ನಡೆಯುವ ಹಿಂಸೆ ವೈಯಕ್ತಿಕ ಅಲ್ಲ ಅನ್ನುವುದು ಗೊತ್ತಾಯಿತು. ವೈಯಕ್ತಿಕವಾದದ್ದು ರಾಜಕೀಯ ಎಂದೆವು. ಆದರೆ ಈಗ ಮತ್ತೆ ಸಂದರ್ಭ ಬದಲಾಗಿದೆ. ರಾಜಕೀಯವೂ ವೈಯಕ್ತಿಕ ಅನ್ನುವ ನೆಲೆಯಲ್ಲಿ ಯೋಚಿಸುವುದನ್ನು ಕಾಣುತಿದ್ದೇವೆ. ಗೌರಿ ಲಂಕೇಶ್ ವಿಷಯದಲ್ಲಿ ನೋಡಿ. ಒಂದು ಮಹಿಳೆಯ ಮೇಲೆ ರಾಜಕೀಯ ವಿಷಯಕ್ಕಾಗಿ, ಸಾರ್ವಜನಿಕವಾಗಿ ನಡೆದ ಹಿಂಸೆ. ಇದು ಹೊಸ ರೀತಿಯ ಹಿಂಸೆ. ಇದು ಮಹಾರಾಷ್ಟ್ರ, ಕರ್ನಾಟಕದಲ್ಲಿ ನಡೆಯಿತು. ಇದನ್ನು ಅರ್ಥಮಾಡಿಕೊಳ್ಳಲು ನಾವು ಪ್ರಯತ್ನಿಸುತ್ತಿದ್ದೇವೆ. ಈಗ ನಮ್ಮ ಗುರಿ ಮತ್ತೆ ಬದಲಾಗಬೇಕು. ನಮ್ಮ ಅಜೆಂಡ ಬದಲಾಗಬೆಕು. ಬರೀ ಮಹಿಳೆಯ ವೈಯಕ್ತಿಕ ಹಿಂಸೆಯ ಬಗ್ಗೆ ಮಾತಾಡುವುದಲ್ಲ.

ಈಗಿನ ಮಹಿಳಾ ಸಂಘಟನೆಯ ಗುರಿ ನಾವು ರಾಜಕೀಯವಾಗಿ ಆಲೋಚಿಸುವುದರ ಜೊತೆಗೆ ವಿಶಾಲವಾಗಿ ಸಮುದಾಯವನ್ನು ಒಳಗೊಂಡು ಯೋಚಿಸಬೇಕಾಗಿದೆ. ಕಷ್ಟ ಸಮುದಾಯಕ್ಕೆ ಬಂದರೆ, ಅದು ಆ ಸಮುದಾಯದ ಹೆಂಗಸರಿಗೂ ಬರುತ್ತದೆ. ಮಹಿಳಾ ಹೋರಾಟದ ಆಶಯಗಳು ವಿಶಾಲವಾಗಿರಬೇಕು. ನನ್ನ ಸಂಸ್ಥೆಯ ಹೆಸರು ಮಜಲೀಸ್. ಆ ಹೆಸರು ಮುಸ್ಲಿಮ್ ಹೆಸರಲ್ಲವೇ ಎಂದು ಕೇಳುತ್ತಾರೆ. ಆ ಹೆಸರು ನಮ್ಮ ದೇಶದಲ್ಲಿರುವ ವೈವಿಧ್ಯತೆಯನ್ನು ತೋರುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಎಲ್ಲಾ ವರ್ಗದ, ಎಲ್ಲಾ ಸಮುದಾಯದಲ್ಲಿರುವ ಹೆಂಗಸರಿಗೆ ಬದುಕುವ ಹಕ್ಕಿದೆ, ಸಂಸ್ಥೆ ಎಲ್ಲರನ್ನೂ ಒಳಗೊಳ್ಳಬೇಕು ಎನ್ನುವ ಆಶಯದಿಂದಲೇ ಅಂಥ ಹೆಸರು ಕೊಟ್ಟಿದ್ದು.

ಇವತ್ತು ನಾವೆಲ್ಲ ಸೇರಿದ್ದೇವೆ. ಘೋಷಣೆಗಳನ್ನು ಹೇಳಿದ್ದೇವೆ. ಇವತ್ತಿನ ದಿನ ನಾನು ನಿಮ್ಮಿಂದ ಬಯಸುವುದೇನೆಂದರೆ ಮುಂದಿನ ಮಾರ್ಚ್ 8ಕ್ಕೆ ಸೇರುವುದೊರಳಗೆ ಈ ಘೋಷಣೆಗಳನ್ನ ನಾವು ನಮ್ಮ ಜೀವನದಲ್ಲಿ, ಸಮುದಾಯದಲ್ಲಿ ಪಾಲಿಸಲು ಪ್ರಯತ್ನ ಪಡುತ್ತೇವೆ. ನಾವು ಬದಲಾವಣೆಯನ್ನ ತರುತ್ತೇವೆ ಎಂದುಕೊಳ್ಳುತ್ತಾ ಆ ನಿಟ್ಟಿನಲ್ಲಿ ನಾವೆಲ್ಲ ಕೆಲಸ ಮಾಡಬೇಕು. ಧನ್ಯವಾದಗಳು.

***(ರೂಪಾಂತರ: ಕೃತಿ ಆರ್. ಪುರಪ್ಪೆಮನೆ)***

❖






Edited with the trial version of Foxit Advanced PDF Editor
To remove this notice, visit: www.foxitsoftware.com/shopping

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಸಹಮತದ ನುಡಿಗಳು

**ಶೈಲಮ್ಮ ಬಿಳಲುಕೊಪ್ಪ**

(ಕ.ರಾ. ಅಕ್ಷರ ದಾಸೋಹ, ಬಿಸಿಯೂಟ ತಯಾರಕರ ಫೆಡರೇಷನ್)

ನಾನು ಚಿಕ್ಕದಾದ ಒಂದು ಉದ್ಯೋಗದಲ್ಲಿ ಸೇರಿಕೊಂಡೆ, ಬಹುಶಃ ನನ್ನ ಮುವ್ವತ್ತೇಳನೇ ವಯಸ್ಸಿನಲ್ಲಿ. ಸರ್ಕಾರದಿಂದ ನನಗೊಂದು ಕೆಲಸ ಕೊಟ್ರು ಅಂತ ಬಹಳಷ್ಟು ಖುಷಿ ಪಟ್ಟೆ. ಆ ಟೈಮ್‌ನಲ್ಲಿ ನನಗೊಂದು ಉದ್ಯೋಗ ಅಂತ ಕೊಟ್ರಲ್ಲ ಅಂತ್ಹೇಳಿ. ಆದರೆ ಆ ಕಾಲದಲ್ಲಿ ನಮಗೆ ಒಂದರಿಂದ ಐದನೇ ತರಗತಿವರೆಗೆ, ಬಿಸಿ ಊಟ ಮಾಡಿಹಾಕಿ ಅಂತ ಹೇಳ್ಬಿಟ್ಟು, ದಿನವೊಂದಕ್ಕೆ 20ರೂ ಸಂಬಳ. ಮತ್ತು ಸಹಾಯಕರಿಗೆ ಹತ್ತು ರೂಪಾಯಿ ಸಂಬಳ ಕೊಟ್ರು. ಹತ್ತು ರೂಪಾಯಿನಲ್ಲಿ ಯಾವ ತರದ ಜೀವನ ಮಾಡ್ಬಹುದು ಎಂಬುದನ್ನ ಸಾರ್ವಜನಿಕರೂ ಯೋಚನೆ ಮಾಡುವಂಥ ವಿಚಾರ. ಆದರೂ ಅದೇ ರೀತಿಯಾಗಿ ನಾವು 2009ರವರೆಗೆ ಅದೇ ಸಂಬಳದಲ್ಲಿ ಕೆಲಸ ಮಾಡಿಕೊಂಡು ಬಂದ್ವಿ. ಆನಂತರದಲ್ಲಿ ನಮ್ಮ ಹೋರಾಟ ನಡೀತಾನೇ ಬಂತು. ಸರ್ಕಾರ ಬದಲಾವಣೆ ಆಯ್ತು. ಸಮ್ಮಿಶ್ರ ಸರ್ಕಾರ ಬಂತು. ಸರ್ಕಾರದ ರಾಜಕೀಯ ಗುದ್ದಾಟದಲ್ಲಿ ನಮಗೆ ಅಲ್ಪಸ್ವಲ್ಪ ಭಿಕ್ಷೆಗಳನ್ನು ಅಂದರೆ, ನೂರು, ಇನ್ನೂರು ಈ ರೀತಿ ಕೊಟ್ಟು, ಮಹಿಳೆಯ ಶೋಷಣೆ ಮಾಡಲಿಕ್ಕೆ ಪ್ರಾರಂಭ ಮಾಡಿದರು. ಸಮ್ಮಿಶ್ರ ಸರ್ಕಾರ ಆಗ 6,7,8 ನೇ ತರಗತಿಗಳಿಗೂ ಮಧ್ಯಾಹ್ನದ ಊಟ ವಿಸ್ತರಣೆ ಮಾಡಿದರು. ಆಗ ಸ್ವಲ್ಪ ಸಂಬಳವನ್ನು ಹೆಚ್ಚಿಗೆ ಮಾಡಿದರು. ಒಂದು 20 ರೂಪಾಯಿ, 25 ರೂಪಾಯಿಯಷ್ಟು. ಆಗಲೂ ಕೂಡ ನಾವು ಸಾಕಷ್ಟು ಕೆಲಸ ಮಾಡ್ಬೇಕಾಯ್ತು. ಅಲ್ಲಿ ಇರುವಂಥ ಗ್ರಾಮಸ್ಥರು, ಪೋಷಕವರ್ಗದವರು, ಎಸ್‌ಡಿಎಂಸಿಯವರು, ರಾಜಕೀಯದವರು, ಗ್ರಾಮಪಂಚಾಯಿತಿಯವರು ಹಾಗೂ ನಮ್ಮ ಶಾಲೆಯಲ್ಲೇ ಸತತವಾಗಿ ನಮ್ಮ ಜೊತೆಯಲ್ಲಿ ಕೆಲಸವಾಡುವಂತ ಶಿಕ್ಷಕವರ್ಗದವರು... ಅಲ್ಲೂ ಕೂಡಾ ಮಹಿಳಾ ಶಿಕ್ಷಕಿಯರಿದ್ದಾರೆ. ಒಂದು ಮಹಿಳೆಗೆ ನೋವಾದರೆ ನಮಗೂ ನೋವಾಗತ್ತೆ ಅಂತ ಅರ್ಥ ಮಾಡ್ಕೊಳ್ಳಿಲ್ಲ. ಮಹಿಳಾ ಶಿಕ್ಷಕಿಯರೂ ಕೂಡ ಪುರುಷ ಶಿಕ್ಷಕರ ಜೊತೆಗೆ ನಮಗೆ ಕಿರುಕುಳ ಕೊಡ್ಲಿಕ್ಕೆ ಶುರುಮಾಡಿದರು. ಅವರಿಗೆ ಹೊತ್ತಿಗೆ ಹೊತ್ತಿಗೆ ಮಕ್ಕಳಿಗೆ ಕೊಟ್ಟಂತೆ ಶಿಕ್ಷಕರಿಗೂ ಕೊಟ್ವಿ. ಶಾಲೆಗೆ ಯಾರೇ ಬಂದ್ರೂ ಹಸಿದ ಹೊಟ್ಟೆಗೆ ಊಟ ಇಲ್ಲಾಂತ ಯಾವತ್ತೂ ಕಳಿಸಿಕೊಟ್ಟಿಲ್ಲ. ಒಬ್ಬ ಭಿಕ್ಷುಕ ಬಂದ್ರೂ ಕೂಡ ಆ ಮಕ್ಕಳ ಪಾಲಿನಲ್ಲಿ ತುತ್ತು ಕೊಟ್ಟು, ಅಥವಾ ಅಧಿಕಾರಿಗಳು ಬಂದಾಗ ಅವರಿಗೂ ಕೊಟ್ಟು ಮತ್ತು ಪೋಷಕರು ಬಂದಾಗ ಅವರಿಗೂ ಊಟ ಹಾಕಿದ್ವಿ. ಅವರು ಹೇಳಿದಂತ ಎಲ್ಲಾ ಕೆಲಸಗಳನ್ನು ಮಾಡಿಕೊಂಡು ಹೋಗುವಂಥ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಪರಿಸ್ಥಿತಿ ಬಂತು. ಕೆಲವರಿಗೆ ಟಾಯ್ಲೆಟ್ ತೊಳಸೋದನ್ನೂ ಮಾಡಿದರು. ಮಕ್ಕಳು ತಿಂದ ತಟ್ಟೆಲೋಟಗಳನ್ನ ತೊಳೀಬೇಕು. ಪಾತ್ರೆಗಳನ್ನ ಕ್ಲೀನ್ ಮಾಡ್ಬೇಕು. ಮೊದಲು ಕೆಲಸ ಕೊಟ್ಟಾಗ ಬೆಳಗ್ಗೆ ಹತ್ತುಗಂಟೆಯಿಂದ ಮಧ್ಯಾಹ್ನ ಒಂದು ಗಂಟೆಯವರೆಗೆ ಅಂತ ಕೊಟ್ಟಿದ್ರು. ಆನಂತರ ನಮಗೆ ಕೆಲಸದ ಒತ್ತಡಗಳು ಜಾಸ್ತಿಯಾಗಿ ನಾವು ಬೆಳಗ್ಗೆ ಬೇಗ ಹೋಗ್ಬೇಕಾಯ್ತು. 9ರಿಂದ 9.30ರ ಒಳಗೆ ಈಗ ಶಾಲೆಗೆ ಹೋಗಿ ಮುಟ್ತೇವೆ. ಯಾಕೆಂದ್ರೆ, ಸರಕಾರ ಬದಲಾವಣೆ ಆದಂಗೂ ನಮ್ಮ ಜೀವನಾನೂ ಬದಲಾವಣೆ ಮಾಡ್ತಾ ಇದಾರವರು. ಫಸ್ಟಿಗೆ ವಾರದಲ್ಲಿ ಮೂರುದಿನ ಹಾಲು ಕೊಡಿ ಅಂತ ಮಾಡಿದರು. ಮೂರು ರೂಪಾಯಿ ಸಂಬಳ ಭಿಕ್ಷೆ ಕೊಟ್ಟರು. ಆನಂತರ ಐದೂ ದಿನ ಕೊಡಿ ಅಂದ್ರು, ಮತ್ತೆ ಮೂರು ರೂಪಾಯಿ ಭಿಕ್ಷಾ ಹಾಕಿದರು. ದುಡಿಯುವ ಮಹಿಳೆಯರನ್ನ ಶೋಷಣೆ ಮಾಡ್ಲಿಕ್ಕೆ ಅವರು ಕೊಡುವ ಭಿಕ್ಷೆ ಆಗಿತ್ತು ಅದು. ಆನಂತರ ಪುನಃ ಮತ್ತೆ 2015 ಮತ್ತು 16ನೇ ಸಾಲಿನಲ್ಲಿ ನಮ್ಮ ಹೋರಾಟ ನಾಲ್ಕೈದು ಬಾರಿ ನಡೆಯಿತು. ಪುನಃ 17–18 ನೇ ಸಾಲಿನಲ್ಲಿ ಒಂಬತ್ತು ಹೋರಾಟಗಳನ್ನ ಮಾಡಿದ್ವಿ. ಒಂದು ಹೋರಾಟದಲ್ಲಿ ಮೂರು ದಿನ ಧರಣಿ ಕೂತೆವು. ಆಗ ನಮ್ಮ ಶಿಕ್ಷಣ ಸಚಿವರು ಬಂದರು. ಅವರು ತುಂಬ ವಿದ್ಯಾವಂತರು ಅಂತ ಅವರನ್ನ ಶಿಕ್ಷಣ ಸಚಿವರನ್ನಾಗಿ ನೇಮಕ ಮಾಡಿದರು ಅಂತ ಕಾಣುತ್ತೆ. ಆದರೆ ಅವರಲ್ಲಿ ಶಿಕ್ಷಣದ ಒತ್ತು ಎಷ್ಟಿದೆಯೋ ಗೊತ್ತಿಲ್ಲ, ಶಿಕ್ಷಣಕ್ಕೆ ಎಷ್ಟು ಮಹತ್ವ ಕೊಡಬೇಕೂಂತ ಗೊತ್ತಿಲ್ಲ, ಯಾವ ರೀತಿ ಇರಬೇಕು ಮಕ್ಕಳ ಶಿಕ್ಷಣ ಅನ್ನೋದೂ ಗೊತ್ತಿಲ್ಲ. ಶಿಕ್ಷಣದ ಬಗ್ಗೆ ಯಾವುದೇ ವಾಕ್ಯವನ್ನೂ ಆಡಲಿಲ್ಲ. ಅಂಥವರು ತಂದಂಥ ಯೋಜನೆಗಳಲ್ಲಿ ನಮಗೆ ಬಹಳ ತೊಂದರೆಗಳಾದವು. ಈ ವರ್ಷದಲ್ಲಿ ನಿಮಗೆ ಸಂಬಳ ಹೆಚ್ಚಿಗೆ ಮಾಡ್ತೀವಿ ಅಂತ ಭರವಸೆಯನ್ನು ಕೊಟ್ರು. ನೀವು ಹೋಗಿ ನಿಮ್ಮ ಸ್ಥಳಗಳಲ್ಲಿ ಮಕ್ಕಳಿಗೆ ಊಟ ಹಾಕಿ. ನಿಮಗೆ ತೊಂದರೆ ಕೊಡೋಲ್ಲ ಅಂತ್ಹೇಳಿ ಕಳಿಸಿಕೊಟ್ರು. ಮತ್ತೆ ಕಳೆದ ಫೆಬ್ರವರಿಯಲ್ಲಿ ನಾಲ್ಕು ದಿನ ಧರಣಿ ಕೂತಿದೀವಿ. ಧರಣಿ ಕೂತ್ರು ಕೂಡ, ರೋಡಿನಲ್ಲಿ ಕಸ ಬಿದ್ದಿತ್ತು, ಊಟಕ್ಕೆ ಅನ್ನ ಇಲ್ಲ. ಟಾಯ್ಲೆಟ್ ವ್ಯವಸ್ಥೆ ಇಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಅಂಥ ಟೈಮಲ್ಲೂ ಕೂಡ ನಾವು ಹೋರಾಟ ಮಾಡಿದಾಗ, ಮಾನ್ಯ ಮುಖ್ಯಮಂತ್ರಿಗಳು, ಶಿಕ್ಷಣ ಮಂತ್ರಿಗಳು ಸೇರಿ ಸಭೆ ನಡೆಸಿ, ಬಜೆಟ್ಟಿನಲ್ಲಿ ನಿಮಗೆ ನ್ಯಾಯಯುತವಾದ ಕೂಲಿಯನ್ನು ಕೊಡ್ತೀವಿ ಅಂತ ಹೇಳಿ ನಮಗೆ ಭರವಸೆ ಕೊಟ್ರು. ಆದ್ರೆ ಕನಿಷ್ಠ ಕೂಲಿನೂ ಕೊಡ್ಲಿಲ್ಲ. ಮೊನ್ನೆ 500 ರೂಪಾಯಿ ಭಿಕ್ಷೆ ಹಾಕಿದರು. ಬಹುಶಃ ಬಿಸಿಊಟ ತಯಾರಿಸುವಂಥವರು ಅಲ್ಪತೃಪ್ತರು ಅಂದುಕೊಂಡಿದ್ದೀನಿ. ರೈತ ಹೇಗೋ, ಅನ್ನ ಕೊಡುವ ತಾಯಂದಿರೂ ಹಾಗೇ. ತಾಯಂದಿರು ಯಾರಿಗೂ ಯಾವತ್ತೂ ಮೋಸ ಮಾಡೋದಿಲ್ಲ. ಅಂಥ ತಾಯಂದಿರಿಗೆ ಈ ಸರ್ಕಾರಗಳು ಮೋಸ ಮಾಡ್ತಾ ಇವೆ. ದಯವಿಟ್ಟು ಎಚ್ಚೆತ್ತುಕೊಂಡು ಶೋಷಣೆಯಾಗುವಂಥ ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡಬೇಕೂಂತ ಹೇಳ್ತಾ ನಮ್ಮ ಮಹಿಳಾ ಒಕ್ಕೂಟದ ಎಲ್ಲ ಮಹಿಳೆಯರ ಸಹಕಾರವೂ ಬೇಕು ಅಂತ ಕೇಳಿಕೊಳ್ತೇನೆ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

**ಮಂಜಮ್ಮ ಗೋಗಡಿಗೆ,** ಸಾಗರ

ನಾನು ಎಲ್ಲಿಂದ ಬಂದಿದ್ದೇನೆ ಎಂದರೆ ಜಗತ್ಪ್ರಸಿದ್ಧ ಜೋಗ ಜಲಪಾತದ ತಡಿಯ ಶರಾವತಿ ನದಿಯ ತಟದಿಂದ ಬಂದಂಥವಳು. ಇನ್ನು ಮಾತನಾಡುವುದಕ್ಕೆ ಹೆಚ್ಚು ಅವಕಾಶ ಇಲ್ಲ ಮಾತನಾಡಕ್ಕೆ ಇದ್ದಿದ್ರೆ ಒಂದೆರಡು ಮಾತಾಡಬೇಕೂಂತ ಇತ್ತು. ಮತ್ತೊಂದು ಸಾರಿ ಅವಕಾಶ ಸಿಕ್ಕೇ ಸಿಗುತ್ತೆ ಅಂತ ಅಂದುಕೊಂಡಿದ್ದೇನೆ. ಈ ಪುರುಷ ಪ್ರಧಾನ ಕಟ್ಟಳೆಗಳ ಸಮಾಜದಲ್ಲಿ ನಮ್ಮ ಕಡೆಯಿಂದ ಯಾರೂ ಬಂದೇ ಇಲ್ಲ, ನಾನೊಬ್ಬಳೇ ಅಂತ ಅಂದುಕೊಂಡರೆ, ನಮ್ಮ ಕಡೆಯಿಂದ ಇನ್ನೊಬ್ಬರು ಬಂದಿದ್ದಾರೆ, ಇಲ್ಲಿ ಫೋಟೋ ತೆಗೆಯುತ್ತಿರುವವಳು ನಮ್ಮೂರಿನವಳೇ. ಆ ಬಗ್ಗೆ ನನಗೆ ತುಂಬ ಹೆಮ್ಮೆ ಎನಿಸತ್ತೆ. ಆದರೆ ಮಹಿಳಾ ದೌರ್ಜನ್ಯದ ಬಗ್ಗೆ ಈಗ ತುಂಬಾ ಹೇಳುವುದಿದೆ. ನಾವೆಲ್ಲ ಸೇರಿದಾಗ ಅವನ್ನೇ ಮಾತಾಡೋಣ.

**ಪ್ರಿಸಿಲ್ಲಾ ಮಾರ್ಟಿಸ್,** ಸ್ತ್ರೀಬಂಧು ಸೌಹಾರ್ದ ಸಹಕಾರಿ ಸಂಘ

ನಿನ್ನೆಯಿಂದಲೂ ಕಾರ್ಯಕ್ರಮವನ್ನು ಅತ್ಯುತ್ತಮವಾಗಿ ಆಯೋಜಿಸಲಾಗಿತ್ತು. ಸಂವಿಧಾನದಲ್ಲಿ ಏನಿದೆ, ಸಂವಿಧಾನವನ್ನು ನಾವು ಹೇಗೆ ಬಳಸಬೇಕು, ಸಂವಿಧಾನವನ್ನು ಹೇಗೆ ಗೌರವಿಸಬೇಕು ಅನ್ನುವ ಬಗ್ಗೆ ಚರ್ಚೆ ಆಯಿತು. ಆದರೆ ಇತ್ತೀಚಿನ ದಿನಗಳಲ್ಲಿ ಸಂವಿಧಾನವನ್ನೇ ತಿರುಚುವವರು ಉದ್ಭವಿಸುತ್ತಿದ್ದಾರೆ. ಕೋಮು ಗಲಭೆಗಳನ್ನು ಉಂಟುಮಾಡ್ತಾರೆ. ನಮ್ಮಲ್ಲಿ ಅಶಾಂತಿಯನ್ನು ಮೂಡಿಸಲು ಎದುರಾಗುತ್ತಿದ್ದಾರೆ. ಈ ಒಕ್ಕೂಟ, ಅಂದ್ರೆ ರಾಜ್ಯ ಮಟ್ಟದ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಜೊತೆಗೆ ನಮ್ಮ ಚೈತನ್ಯ ಸಂಸ್ಥೆ ಬೆಂಬಲವಾಗಿ ನಿಲ್ಲತ್ತೆ.

ಚೈತನ್ಯ ಸಂಸ್ಥೆ, ನಿರಂತರವಾಗಿ 25 ವರ್ಷಗಳಿಂದ ಸ್ವಸಹಾಯ ಸಂಘದ ದಲಿತ ಮಹಿಳೆಯರು, ಶೋಷಿತ ಮಹಿಳೆಯರು, ಇವರೆಲ್ಲರಿಗೂ ಕಾಲಕಾಲಕ್ಕೆ ಬೇಕಾದ ಮಾಹಿತಿಯನ್ನು ಕೊಡುತ್ತಾ ಬಂದಿದ್ದೇವೆ. ಸಾಧನೆ ಹಂಡ್ರೆಡ್ ಪರ್ಸೆಂಟ್ ಇಲ್ಲ. ಆದರೆ ಮನಸ್ಸು ಗಟ್ಟಿ ಆಗುವಷ್ಟು ನಾವು ಬಂದಿದ್ದೇವೆ. ಕಳೆದ ಎರಡು ವರ್ಷದಿಂದ ಸ್ತ್ರೀಬಂಧು ಸೌಹಾರ್ದ ಸಹಕಾರ ಸೊಸೈಟಿಯನ್ನು ಮಾಡಿಕೊಂಡು, ಅದರಲ್ಲಿ ಮಹಿಳೆಯರೇ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ. ಇದನ್ನು ಸಂತೋಷವಾಗಿ ನಿಮ್ಮೆಲ್ಲರಲ್ಲೂ ಹೇಳುಕೊಳ್ಳುತ್ತೇನೆ. ಈ ಒಂದು ಸಹಕಾರ ಸಂಘಕ್ಕೆ ಕಳೆದ ಸಾಲಿನ ರಾಜ್ಯಮಟ್ಟದ ಎಲ್ಲಾ ಸಹಕಾರಿ ಸಂಘಗಳಲ್ಲಿ ಅತ್ಯುತ್ತಮ ಸಹಕಾರಿ ಸಂಘ ಎಂದು ಪ್ರಶಸ್ತಿಯನ್ನು ಕೂಡ ಪಡೆದಿದೆ ಎಂದು ಹೇಳಲು ಹೆಮ್ಮೆ ಪಡುತ್ತೇನೆ. ಇದಕ್ಕಾಗಿ ಸಾಧನೆ ಮಾಡಿದವರು, ಶ್ರಮಪಟ್ಟವರು ತುಂಬಾ ಇದ್ದಾರೆ. ಫಲಾನುಭವಿಗಳೂ ತುಂಬಾ ಇದ್ದಾರೆ.

ಒಕ್ಕೂಟದ ಜೊತೆ ಜೊತೆಯಾಗಿ ನಾವು ಎಚ್ಚೆತ್ತುಕೊಂಡು, ನಮ್ಮ ಮುಂದಿನ ಭವಿಷ್ಯವನ್ನು ನಾವೇ ರೂಪಿಸಿಕೊಳ್ಳಬೇಕು, ನಾವೇ ನಮ್ಮ ಸಮಸ್ಯೆಗಳನ್ನು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಬಗೆಹರಿಸಿಕೊಳ್ಳಬೇಕು ಅಂತ ಹೇಳುತ್ತಾ, ಮಹಿಳಾ ದಿನಾಚರಣೆಯ ಘೋಷಣೆಯನ್ನು ಎಲ್ಲರೂ ಒಕ್ಕೊರಲಿನಿಂದ ಹೇಳೋಣ. ಮಹಿಳಾ ಶಕ್ತಿಗೆ ಜಯವಾಗಲಿ/ಮಹಿಳಾ ಶಕ್ತಿಗೆ ಜಯವಾಗಲಿ

ನಿಜಕ್ಕೂ ತುಂಬಾ ಸಂತೋಷ. ಇವತ್ತು ಒಕ್ಕೂಟದಲ್ಲಿರುವ ಎಲ್ಲಾ ಮಹಿಳೆಯರು ತುಂಬಾ ಶ್ರಮಪಟ್ಟು ಈ ಕೆಲಸವನ್ನು ಮಾಡ್ತಾ ಇದ್ದಾರೆ. ಅವರಿಗೆ ನಾನು ಕೃತಜ್ಞತೆಯನ್ನು ಹೇಳಲು ಬಯಸುತ್ತೇನೆ. ನಮ್ಮ ಮಧ್ಯದಲ್ಲಿ ಕೆಲವೇ ಕೆಲವು ಸಮಾನ ಮನಸ್ಕ ಪುರುಷರು, ಯುವಕರು ಇರುವುದು, ನಮ್ಮೊಡನೆ ಕೈಜೋಡಿಸಿ ಅತ್ಯುತ್ತಮವಾಗಿ ನಮ್ಮ ಜಾಥಾವನ್ನು ನಡೆಸಿಕೊಟ್ಟಿದ್ದಾರೆ. ಈ ರೀತಿ ಪ್ರತಿಭೆಗಳನ್ನು ಬೆಳೆಸೋಣ. ಯುವ ಜನತೆಗೆ ಆದರ್ಶ ವ್ಯಕ್ತಿಗಳಾಗಿ ಬಾಳೋಣ. ನಮ್ಮ ಮುಂದಿನ ಚುಕ್ಕಾಣಿಯನ್ನು ನಿಮ್ಮ ಕೈಗೆ ಕೊಟ್ಟಿದ್ದೇವೆ, ಯುವಕ ಯುವತಿಯರೇ, ನೀವಿದನ್ನ ಮುಂದುವರಿಸಿಕೊಂಡು ಹೋಗಬೇಕು ಎಂದು ನಮ್ಮ ಆಶಯ.

**ವಿದ್ಯಾ,** ಪತ್ರಕರ್ತರು, ಕನ್ನಡಪ್ರಭ

ಈ ಎರಡು ದಿನದ ಕಾರ್ಯಕ್ರಮ ಶಿವಮೊಗ್ಗಕ್ಕೆ ಹೊಸ ಸಂಭ್ರಮ ಮೂಡಿಸಿದೆ. ನಾನು ಪತ್ರಕರ್ತೆ. ಶಿವಮೊಗ್ಗದಲ್ಲಿ ನನ್ನ ಹಾಗೆ ಮೂರು ನಾಲ್ಕು ಜನ ಪತ್ರಕರ್ತೆಯರಿರಬಹುದು. ಉಳಿದವರೆಲ್ಲ ಪುರುಷರೇ. ಆದರೆ ಈ ಕ್ಷೇತ್ರದಲ್ಲಿ ಹೆಚ್ಚಾಗಿ ಪುರುಷರಿದ್ದಾರೆ ಅಂತ ಬೇಜಾರೇನಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿಗೆ ಅವಕಾಶ ಸಿಕ್ತಾ ಇಲ್ಲ ಅನ್ನೋದು ಬೇಜಾರಿನ ಸಂಗತಿ. ಇದು ಕೇವಲ ಶಿವಮೊಗ್ಗದ ಅಂಕಿ ಅಂಶ ಅಲ್ಲ. ಬೇರೆ ಬೇರೆ ರಾಜ್ಯಗಳಲ್ಲಿಯೂ ಸಹ ಇದೇ ಪರಿಸ್ಥಿತಿ ಇದೆ. ಒಬ್ಬಳು ಮಹಿಳೆ ಪತ್ರಕರ್ತೆ ಆಗ್ತಾಳೆ ಅಂದರೆ ಅವಳಿಗೆ ಕೇವಲ ಕಚೇರಿ ಒಳಗಡೆ ಕೆಲಸವನ್ನು ಕೊಡ್ತಾರೆ. ಆದರೆ ಫೀಲ್ಡ್‌ನಲ್ಲಿ ಹೋಗಿ ಕೆಲಸ ಮಾಡ್ತೀನಿ ಅನ್ನೋದು ಸ್ವಲ್ಪ ಕಡಿಮೆಯೇ. ಪತ್ರಕರ್ತರ ಕೆಲಸ ಸವಾಲಿನ ಕೆಲಸ ಒಬ್ಬ ಮಹಿಳೆ ಪತ್ರಕರ್ತರ ಕೆಲಸ ಮಾಡಬಹುದಾ ಅಂತ ಈಗಲೂ ಕೇಳ್ತಾರೆ. ಆದರೆ ಮಹಿಳೆ ಯಾವುದೇ ಕೆಲಸವನ್ನು ಮಾಡಲು ಸಾಧ್ಯವಿದೆ.

ಟಿವಿ ಮಾಧ್ಯಮದಲ್ಲಿಯೂ ಸಹ ಮಹಿಳೆಯರಿಗೆ ಆಂಕರ್ ಕೆಲಸ ಬಿಟ್ಟರೆ ಬೇರೆ ಕೆಲಸ ಸಿಕ್ತಾ ಇಲ್ಲ. ಅದ್ರಲ್ಲೂ ಆಂಕರ್‌ಗಳು ನೋಡೋದಕ್ಕೆ ಚೆನ್ನಾಗಿರಬೇಕು. ಮತ್ತೆ ಟಿ.ಆರ್.ಪಿ.ಗೆ ಹೆಚ್ಚಿನ ಇಂಪಾರ್ಟೆನ್ಸ್ ಕೊಡ್ತಾರೆ. ಅವರ ಸಾಮರ್ಥ್ಯಕ್ಕೆ ಹೆಚ್ಚಿನ ಇಂಪಾರ್ಟೆನ್ಸ್ ಕೊಡ್ತಾ ಇಲ್ಲ. ಅದು ಬದಲಾಗಬೇಕು. ಅಲ್ಲದೆ ಇವೆಲ್ಲದರ ನಡುವೆ ಭಾರತ ಕಂಡ ಅಪ್ರತಿಮ ಪತ್ರಕರ್ತೆ ಪ್ರಭಾ ದತ್. 1965ರಲ್ಲಿಯೇ ಅವರು ಚೀನಾ ಮತ್ತು ಭಾರತದ ನಡುವೆ ನಡೆದ ಯುದ್ಧಭೂಮಿಗೆ ಹೋಗಿ, ಅಲ್ಲಿ ನಡೆದ ವಿದ್ಯಮಾನಗಳನ್ನು ವರದಿ ಮಾಡಿದ್ರು. ಆಗ ಅವರಿಗೆ ಕೇವಲ 20 ವರ್ಷ ಅಷ್ಟೇ. ಪ್ರಭಾ ದತ್ ಇಂದಿನ ಎಲ್ಲಾ ಮಹಿಳಾ ಪತ್ರಕರ್ತೆಯರಿಗೆ ಮಾದರಿಯಾಗಬೇಕು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

**ಚಾಂದಿನಿ,** ಪಯಣ, ಬೆಂಗಳೂರು

ನಾವು ಯಾವ ರೀತಿ ಯೋಚನೆ ಮಾಡಬೇಕು, ಮಹಿಳೆಯರು ಹೇಗೆ ಯುವತಿಯರನ್ನ ಬೆಳೆಸಬೇಕು ಅಂತ ಹೇಳಿದ ಆ ಪುಟ್ಟ ಮಗೂಗೆ ನಾವು ಕ್ಲಾಪ್ಸ್ ಹಾಕಬೇಕು. ಹಾಗೇ, ನಾವು ಬೆಳಗ್ಗೆ ರ್‍ಯಾಲಿ ಹೊರಟಾಗ, ಒಂದು ಗುಂಪು ಘೋಷಣೆ ಕೂಗ್ತ ಇತ್ತು, 'ನನ್ನ ದೇಹ ನನ್ನ ಹಕ್ಕು' ಅಂತ. ಅಷ್ಟು ಸಾಕು ಅಂತ ಅನ್ಸತ್ತೆ. ಯಾಕೆಂದರೆ ಮಹಿಳೆಯರ ಗುಂಪಿನಲ್ಲಿ 'ನನ್ನ ದೇಹ ನನ್ನ ಹಕ್ಕು' ಎನ್ನುವ ನನ್ನ ವಿಷಯವೂ ಅಲ್ಲಿ ಬಂತು. ನಮ್ಮ ಟ್ರಾನ್ಸ್ಜೆಂಡರ್, ಮಂಗಳಮುಖಿಯರ ವಿಷಯನೂ ಅಲ್ಲಿ ಬಂತು ಅಂತ ತುಂಬಾ ಖುಷಿಯಾಯಿತು. ಆಯೋಜಕರಿಗೆ ಧನ್ಯವಾದಗಳನ್ನು ಹೇಳ್ತೀನಿ.

**ಸುಶೀಲಮ್ಮ ಮಡಸೂರು** (ಅಂಗನವಾಡಿ)

ವಿಶ್ವಸಂಸ್ಥೆ ಈ ದಿನವನ್ನು ಮಹಿಳಾ ದಿನಾಚರಣೆಯನ್ನಾಗಿ ಆಚರಿಸಲು ಅವಕಾಶ ಮಾಡಿಕೊಟ್ಟಿರುವುದು ನಮಗೆಲ್ಲರಿಗೂ ತುಂಬಾ ಸಂತೋಷವಾಗಿದೆ. ಈ ದಿನವನ್ನು ನಾವು ಹೆಮ್ಮೆಯಿಂದ ಆಚರಿಸುತ್ತಿದ್ದೇವೆ. ನಮ್ಮ ಸಮಾಜದಲ್ಲಿ ಮಹಿಳೆಯರಿಗೆ ಸಾಕಷ್ಟು ಸ್ಥಾನಮಾನಗಳ ಸಿಕ್ಕಿದೆ. ಮಹಿಳೆಯರ ಸಬಲೀಕರಣ ಸಾಧ್ಯವಾಗಿದೆ. ಕುಟುಂಬದ ಮಹಿಳೆಯಾಗಿ, ತಾಯಿಯಾಗಿ, ಅತ್ತೆಯಾಗಿ ಪ್ರತಿಯೊಂದನ್ನು, ಎಷ್ಟೇ ಕಷ್ಟಗಳು ಬಂದರೂ ಕೂಡ ಸಮಾಧಾನದಿಂದ ತೀರ್ಮಾನ ಮಾಡ್ತಾಳೆ. ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಕೊಟ್ಟು 21 ನೇ ಶತಮಾನದಲ್ಲಿ ಏನೆಲ್ಲವನ್ನು ಸಾಧಿಸುತ್ತಾ ಹೊರಟಿದ್ದಾಳೆ.

**ಸರೋಜಾ ಬಾಕಳೆ,** ಪ್ರಗತಿಪರ ಮಹಿಳಾ ಒಕ್ಕೂಟ, ಕೊಪ್ಪಳ

ನನಗೆ ಒಂದು ಪ್ರಶ್ನೆಯಾಗಿ ಉಳಿದಿರುವುದು ಏನೆಂದರೆ, ಮಹಿಳಾ ದಿನಾಚರಣೆಯನ್ನು ನಾವು ಆಚರಿಸುತ್ತಿರುವುದು ಸೂಕ್ತನಾ? ನಮಗೆ ಸ್ವಾತಂತ್ರ ಬಂದಿದೆಯಾ? ಯಾಕೆಂದರೆ ನಾನು ಒಬ್ಬ ಸಾಹಿತಿಯಾಗಿ, ಒಂದು ಸಂಸ್ಥೆ ನಡೆಸುವವಳಾಗಿ, ಒಂದು ಸಾಂತ್ವನ ಕೇಂದ್ರ ನಡೆಸುವವಳಾಗಿ, ಸಿಡಬ್ಲ್ಯುಸಿ ಸದಸ್ಯೆಯಾಗಿ, ಯಾವುದೇ ಮಾರ್ಗದಲ್ಲಿ ಹೋದರೂ ಕೂಡ ಮಕ್ಕಳಿಗೆ, ಮಹಿಳೆಯರಿಗೆ ಪ್ರತಿನಿತ್ಯ ತಂದೆಯಿಂದ ಇರಬಹುದು, ಹೊರಗಿನವರಿಂದ ಇರಬಹುದು, ಶಿಕ್ಷಕರಿಂದ ಇರಬಹುದು, ಅಕ್ಕ ತಂಗಿಯರಿಂದ ಇರಬಹುದು, ಒಂದಲ್ಲಾ ಒಂದು ರೀತಿಯಿಂದ ದೌರ್ಜನ್ಯ ನಡೆಯುತ್ತಾನೆ ಇದೆ. ಆದ್ದರಿಂದ ನಾವೆಲ್ಲ ಸಹೃದಯ ಮನಸ್ಸುಗಳು, ನಾವೆಲ್ಲಾ ಮಹಿಳಾ ಪರ ಚಿಂತನೆ ಮಾಡುವವರು, ಮಹಿಳೆಯರಿಗಾಗಿ ಹೋರಾಟ ಮಾಡುವಂಥವರು ಎಂಬ ಹಣೆಪಟ್ಟಿ ಕಟ್ಟಿಕೊಂಡಿದ್ದರೂ ನಾವಿಂದು ಹೆಲ್ಪ್‌ಲೆಸ್ ಆಗಿದ್ದೇವೆ ಅಂತ ನನಗನ್ನಿಸುತ್ತೆ. ಅದಕ್ಕೆ ಈ ಮಹಿಳಾ ದಿನಾಚರಣೆಗೆ ಪರಿಪೂರ್ಣವಾದ ಒಂದು ಅರ್ಥ ಬರಬೇಕು ಅಂತ ಅಂದ್ರೆ ಪ್ರತಿಯೊಬ್ಬ ಮಹಿಳೆಯಲ್ಲಿಯೂ ಮಹಿಳಾ ದೌರ್ಜನ್ಯದ ವಿರುದ್ಧ ಹೋರಾಡುವ ಶಕ್ತಿ ಸಂಚಯವಾಗಬೇಕು.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

**ಪ್ರತಿಭಾ, ಗಾಟು** (ಗಾರ್ಮೆಂಟ್ ಮತ್ತು ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್) ಬೆಂಗಳೂರು

ಎರಡು ಮಾತುಗಳನ್ನು ಹೇಳೋದಕ್ಕೆ ಇಷ್ಟಪಡ್ತೀನಿ. ಒಂದು, ಯಾವುದೇ ಪಕ್ಷ ರಾಜಕಾರಣ ಇಲ್ಲದೆ, ಸಿದ್ಧಾಂತಗಳ ಭಾರದಲ್ಲಿ ಸೋತಿದ್ದಂತಹ ಕಾಲದಲ್ಲಿ, ಕೇವಲ ಪ್ರೀತಿಯ ರಾಜಕಾರಣ ಅಂತ ನಮ್ಮನ್ನೆಲ್ಲ ಕೂಡಿಸಿ, ನಮ್ಮನ್ನೆಲ್ಲ ಇಲ್ಲಿಗೆ ಕರೆತಂದ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟಕ್ಕೆ ಎಲ್ಲ ಗಾರ್ಮೆಂಟ್ಸ್ ಮಹಿಳೆಯರ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಒಕ್ಕೂಟ ಶುರುವಾದಾಗಿನಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಒಕ್ಕೂಟದ ಭಾಗವಾಗಿ ಕೆಲಸ ಮಾಡ್ತಾ ಬಂದಿದ್ದೇವೆ. ಕರ್ಚೀಫ್ ಹೊಲೆದಿದ್ದೇವೆ. ಕರ್ಚೀಫ್ ಮಾರಿದ್ದೇವೆ. ಪುಸ್ತಕ ಮಾರಿದ್ದೇವೆ. ದೇಣಿಗೆ ಎತ್ತಿದ್ದೇವೆ. ನಮ್ಮ ಕೈಲಾದಷ್ಟು ಕೆಲಸ ಮಾಡಿದ್ದೇವೆ. ಆ ಬಗ್ಗೆ ನಮಗೆ ಧನ್ಯತೆ ಇದೆ. ಎರಡನೇ ವಿಷಯ ಏನೆಂದರೆ, ನಿನ್ನೆಯಿಂದ ಸರಸ್ವತಿ ಅಕ್ಕ ಶಕುನ್ ಅಕ್ಕ ಹೇಳ್ತಾ ಇದ್ದರು, 70ರ ದಶಕದಲ್ಲಿ ಮಹಿಳಾ ಚಳುವಳಿ ಗಟ್ಟಿ ಆಗ್ತಾ ಇದ್ದಂತ ಸಮಯದಲ್ಲಿ, ನಮಗೆ ಬೈಬಲ್ ಎನಿಸಿಕೊಂಡದ್ದು 'ಮೈ ಸ್ಟೋರಿ ಅವರ್ ಸ್ಟೋರಿ' ಅಂತನ್ನುವ ಪುಸ್ತಕ. ಅದನ್ನು ಬರೆದ ಪ್ಲೇವಿಯಾ ಆಗ್ನೆಸ್ ಅವರು ಈ ವೇದಿಕೆಯಲ್ಲಿ ಇದ್ದಾರೆ. ಅವರ ಜೊತೆ ಈ ವೇದಿಕೆಯಲ್ಲಿ ಗಾರ್ಮೆಂಟ್ಸ್ ಮಹಿಳೆಯರ ಪರವಾಗಿ ನನಗೆ ಇಲ್ಲಿ ಕೂತ್ಕೊಳ್ಳೋಕೆ ಅವಕಾಶ ಮಾಡಿಕೊಟ್ಟಿದ್ದು ಗಾರ್ಮೆಂಟ್ಸ್ ಮಹಿಳೆಯರಿಗೆ ಸಂದ ಗೌರವ ಅಂತ ಅಂದುಕೊಳ್ಳುತ್ತೀನಿ.

**ಪದ್ಮ ಕೋಲಾರ,** ಸಫಾಯಿಕರ್ಮಚಾರಿ ಕಾವಲು ಸಮಿತಿ

ನಾನು ಸಫಾಯಿ ಕರ್ಮಚಾರಿಗಳು, ಅಂದರೆ ಮಲ ಹೊರುವ ಪದ್ಧತಿಯಲ್ಲಿ ತೊಡಗಿರುವ ಮಹಿಳಾ ಕಾರ್ಮಿಕರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಕ್ಕೆ ಇಚ್ಛೆ ಪಡ್ತೀನಿ.

ಬದುಕು ಹೇಗಿದೆ ಅಂತ ಅಂದರೆ, ಮಲ ಹೊರುವ ಮಹಿಳಾ ಕಾರ್ಮಿಕರು, ಅವರ ಜೀವನ, ಬದುಕು ಹೇಗಿದೆ ಅಂತ ನಾವು ಕೇಳಿದಾಗ, ಒಬ್ಬ ಮಹಿಳೆ ಹೇಳ್ತಾರೆ "ಕಸದ ವಿಂಗಡಣೆ ಮಾಡ್ತೇವೆ. ಅದರಲ್ಲಿ ಮಕ್ಕಳ ಡಯಾಪರ್‌ಗಳನ್ನ ವಿಂಗಡನೆ ಮಾಡುವಾಗ, ನನಗೆ ಒಂದುವರೆ ತಿಂಗಳ ಮಗುವನ್ನು ಮನೆಯಲ್ಲಿ ಬಿಟ್ಟು ಬಂದಿರುವುದು ನೆನಪಾಗುತ್ತದೆ. ಮಗುವಿನ ನೆನಪು ಬಂದಾಗ ಕಣ್ಣೀರು ಸುರಿಯುತ್ತೆ. ಎದೆಹಾಲು ಚಿಮ್ಮುತ್ತೆ. ಆದರೂ ಮತ್ತೆ ಸಮಾಧಾನ ಮಾಡಿಕೊಂಡು ನನ್ನ ಕೆಲಸವನ್ನು ಮುಂದುವರಿಸುತ್ತೇನೆ". ಈ ರೀತಿಯಾದ ಸಮಾಜದಲ್ಲಿ ಬದುಕು ಹೇಗಿದೆ ಅನ್ನೋದನ್ನಾ ನಾವು ಅರಿತುಕೊಳ್ಳಬೇಕಾಗಿದೆ. ಇಂಥ ಮಹಿಳೆಯರಿಗೆ ಸಾಮಾನ್ಯವಾಗಿ ಯಾವುದೇ ರೀತಿಯಾದಂತಹ ರಕ್ಷಣೆ ಇಲ್ಲ. ಬೆಳಗ್ಗೆ ಐದು ಗಂಟೆಗೆ ಬರುತ್ತಾರೆ. ಆ ಹೊತ್ತಿನಲ್ಲಿ ಅವರಿಗೆ ಯಾವುದೇ ರಕ್ಷಣೆ ಇಲ್ಲ. ಆ ಟೈಮಿನಲ್ಲಿ ಎಷ್ಟು ಜನ ಕುಡುಕರು, ಪೊಲೀಸರು,

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಪುಡಾರಿಗಳು, ಇನ್ನಿತರರು ದಾರಿಗಡ್ಡ ಕಟ್ಟಿ ಲೈಂಗಿಕವಾಗಿ ಬಳಸಿಕೊಂಡರೂ ಸಹ ಅವರನ್ನು ಕೇಳುವವರಿಲ್ಲ. ಪ್ರಶ್ನೆ ಮಾಡಬಹುದಾದಂತ ವೃತ್ತಿನೂ ಅದಾಗಿಲ್ಲ. ಪ್ರತಿದಿನ, ಪ್ರತಿ ಸೆಕೆಂಡು ರಕ್ಷಣೆ ಇಲ್ಲದೆ ಕೆಲಸ ಮಾಡ್ತಾ ಇರ್ತಾರೆ. ಮಹಿಳೆಯರಿಗೆ ಇದುವರೆಗೂ ಹಂಚಿಕೊಳ್ಳಲಿಕ್ಕೆ ಒಂದು ವೇದಿಕೆ ಇಲ್ಲ. ಹೇಳಿಕೊಳ್ಳಲಿಕ್ಕೆ ಒಂದು ಪೊಲೀಸ್ ಇಲಾಖೆ ಇಲ್ಲ. ಯಾವುದೇ ರೀತಿ ಹೇಳಿಕೊಂಡರು ಸಹ ಪ್ರಶ್ನೆ ಮಾಡುವಂತ ಪ್ರತಿಕ್ರಿಯೆಯೇ ಅವರಲ್ಲಿ ಹುಟ್ಟಲ್ಲ. ಇಷ್ಟೇ ಕಾರಣ. ಎಲ್ಲಿ ನಾನು ಆ ವಿಷಯವನ್ನು ಹೇಳಿಕೊಂಡರೆ ಅವಮಾನ ಆಗುತ್ತೆ, ನನ್ನ ಘನತೆಗೆ ಧಕ್ಕೆ ಆಗುತ್ತೆ, ನನಗೆ ಯಾರು ಸಪೋರ್ಟ್ ಮಾಡೋರು ಇಲ್ಲ, ನನ್ನದಾದ ಈ ವಿಷಯವನ್ನು ತೆಗೆದುಕೊಳ್ಳುವವರು ಯಾರೂ ಇಲ್ಲ ಅಂತ ಅಂದುಕೊಂಡು, ಹೇಳಿಕೊಳ್ಳದೆ ನೊಂದ ಮಹಿಳೆಯಾಗಿ ಇರುವ ಪರಿಸ್ಥಿತಿ ಇದೆ.

ಆ ಸಮುದಾಯದ ಒಬ್ಬಳು ಮಹಿಳೆಯಾಗಿ ನಾನು ಕೂಡ ಇಲ್ಲಿ ಕೂತಿರುವುದು ನನಗೆ ಒಂದು ಗೌರವ. ಈ ಗೌರವ ಅವರೆಲ್ಲರಿಗೆ ಸಲ್ಲಬೇಕು. ವಿಶೇಷವಾಗಿ ಪೌರ ಕಾರ್ಮಿಕರು ಎಂದರೆ ಜನರಲ್ ಆಗಿ ಗೊತ್ತಾಗುತ್ತೆ. ಗುತ್ತಿಗೆ ಪೌರಕಾರ್ಮಿಕರು. ಸಮಾನ ವೇತನದ ಮಹಿಳೆಯರು, ಪೌರಕಾರ್ಮಿಕರು, ಪರ್ಮನೆಂಟ್ ಎಂಪ್ಲಾಯಿಗಳು ಹೀಗೆ ವಿಭಾಗಗಳಿವೆ. ಅವರಿಗೆ ತಮ್ಮ ತಮ್ಮ ಕೆಲಸ ಅಂತ ಇದೆ. ಕೆಲಸ ಅಂದ ಮೇಲೆ ಅದು ನಗರಸಭೆ ಆಗಬಹುದು, ಪುರಸಭೆ ಆಗಬಹುದು, ಪಂಚಾಯಿತಿ ಆಗಿರಬಹುದು, ನಗರ ಪಾಲಿಕೆ, ಮಹಾನಗರ ಪಾಲಿಕೆ ಆಗಿರಬಹುದು, ಗುತ್ತಿಗೆ ಪದ್ಧತಿ ಅಂತ ಇದೆ. ಅದರಲ್ಲಿ ಕೆಲಸ ಮಾಡುತ್ತಾರೆ. ಆದರೆ ದಿನನಿತ್ಯ ಖಾಸಗಿಯಲ್ಲಿ ಕೆಲಸ ಮಾಡುವವರು, ಸಾಮೂಹಿಕ ಶೌಚಾಲಯ ತೊಳೆಯುವಂಥವರು, ಬಸ್ ಸ್ಟ್ಯಾಂಡ್‌ನಲ್ಲಿ ಇರುವಂತಹ ಟಾಯ್ಲೆಟ್ ತೊಳೆಯುವವರು, ಪೊಲೀಸ್ ಇಲಾಖೆ, ಸರ್ಕಾರಿ ಕಚೇರಿಗಳಲ್ಲಿ ಟಾಯ್ಲೆಟ್ ತೊಳೆಯುವವರು, ಈ ಮಹಿಳೆಯರಿಗೆ ಯಾವುದೇ ರೀತಿಯ ಆರ್ಥಿಕ ಭದ್ರತೆ ಇಲ್ಲ. ಈ ಎಲ್ಲ ಮಹಿಳೆಯರಿಗೆ ಕನಿಷ್ಠ ವೇತನ ಇಲ್ಲ, ಬದುಕುವ ವೇತನ ನೋಡಿಲ್ಲ. ಅದಕ್ಕೆ ನಾನು ಈ ವೇದಿಕೆಯ ಪರವಾಗಿ ಕೇಳಿಕೊಳ್ಳುವುದೇನೆಂದರೆ ವಿಶೇಷವಾಗಿ ಮಹಿಳೆಯರನ್ನು ಗುರುತಿಸಿ ಮಹಿಳೆಯರಿಗಾಗಿ ಹೋರಾಟವನ್ನು ದೌರ್ಜನ್ಯ ವಿರೋಧಿ ಒಕ್ಕೂಟದವರು ಮಾಡಬೇಕು. ವರ್ಗ, ಜಾತಿ, ಅದರಲ್ಲೂ ಲಿಂಗ ತಾರತಮ್ಯ, ಅದರಲ್ಲಿಯೂ ಅಂಚಿನಲ್ಲಿರುವ ಮಹಿಳೆಯರು ನಾವು. ತಾರತಮ್ಯದಲ್ಲಿ ಅಂಚಿಗೆ ತಳ್ಳಲ್ಪಟ್ಟ ಸಮುದಾಯದ ನಾವು ಕೊನೆಯಲ್ಲಿ ಇರುವಂಥವರು. ಸಂವಿಧಾನ, ಸಂವಿಧಾನ ಅಂತ ಮಾತಾಡ್ತಾ ಇದ್ದೀವಿ. ನಮ್ಮ ಸಮುದಾಯಕ್ಕೆ ಏನು ಸೌಲಭ್ಯ ಇದೆ? ಏನು ಹಕ್ಕುಗಳು ಇದಾವೆ? ಅದು ನಮ್ಮನ್ನು ಮುಟ್ಟಲೇ ಇಲ್ಲ.

**ಗೌರಮ್ಮ,** ಚರಕ, ಹೆಗ್ಗೋಡು

ನನಗೆ ಒಂದು, ಏನು ನೋವಾಗುತ್ತೆ ಅಂದ್ರೆ ಬೆಳಗ್ಗಿಂದ ಜನ ಓಡಾಡಿದರು.

ಯಾವಾಗ ಈ ವೇದಿಕೆ ಕಾರ್ಯಕ್ರಮ ಶುರುವಾಯಿತೋ ಆಗ ಕೆಲವರು ಕಾಣೆಯಾದರು. ಆರು ತಿಂಗಳಿಂದ ಇಷ್ಟು ಜನ ಒಂದು ಮಹಿಳಾ ಸಮಾವೇಶ ಮಾಡ್ಬೇಕು ಅಂತ ಮಾಡಿದ್ರು. ನಿನ್ನೆ ಇದ್ರು. ಇವತ್ತು ಬೆಳಗ್ಗೆನೂ ಇದ್ರು. ಇನ್ನೊಂದು ಗಂಟೆ, ಇಲ್ಲಿ ಯಾರು ಬಂದಿದ್ದಾರೆ? ಏನೇನ್ ಮಾತಾಡ್ತಾರೆ? ಅನ್ನೋದನ್ನ ತಿಳಿದುಕೊಳ್ಳದೆ ಎಲ್ಲರೂ ಮಧ್ಯಮಧ್ಯದಲ್ಲಿ ಎದ್ದು ಹೋದರು. ಯಾಕೆ ಹಾಗೆ ಮಾಡಬೇಕು? ಆ ರೀತಿ ಯಾವತ್ತೂ ಮಾಡಬಾರದು. ನಮಗೆ ಮಾಡಕ್ ಆಗಲ್ಲ. ಆದ್ರೆ ಮಾಡೋರ್ಗೆ ಯಾವತ್ತೂ ಸಪೋರ್ಟ್ ಮಾಡಬೇಕು ಅಂತ ನನ್ನ ಆಸೆ. ನಮ್ಮಂಥವರು ಇಷ್ಟೊಂದು ದೊಡ್ಡ ರೀತಿಯಲ್ಲಿ ಎಲ್ಲ ಮಾಡಕ್ಕಾಗಲ್ಲ. ಒಬ್ಬರಿಗೊಬ್ಬರು ಸಪೋರ್ಟ್ ಮಾಡ್ಕೊಂಡು ಮಾಡಿದರೆ ಒಂದು ಮಹಿಳಾ ಸಂಘ ಅಂತ ಹೇಳ್ತಾರೆ. ಅದನ್ನು ನೀವು ಫಸ್ಟು ಅರ್ಥಮಾಡಿಕೊಳ್ಳಿ ಅಂತ ನಾನು ಹೇಳ್ತಾ ಇದೀನಿ. ಯಾಕೆಂದರೆ ಯಾರು ಮಾಡ್ತಾರೆ ಯಾರು ಕರೆಯುತ್ತಾರೆ ಅನ್ನೋದಕ್ಕಿಂತ ನಾನ್ ಏನ್ ಮಾಡ್ತೀನಿ ಅನ್ನೋದನ್ನು ನಾನು ಫಸ್ಟ್ ಅರ್ಥ ಮಾಡಿಕೊಂಡರೆ ಬೇಕಾದಷ್ಟು ಮಾಡಬಹುದು. ಹಸೆ ಚಿತ್ರ ಮಾಡುವ ಮೂಲಕ ಉದ್ಘಾಟನೆ ಮಾಡಲು ಅವಕಾಶ ಮಾಡಿಕೊಟ್ಟ ಎಲ್ಲರಿಗೂ ವಂದನೆಗಳು.

❖






Edited with the trial version of Foxit Advanced PDF Editor
To remove this notice, visit: www.foxitsoftware.com/shopping

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಸಮಾವೇಶದ ನಿರ್ಣಯಗಳು

**ತಾ**ರೀಕು 09.03.2018 ರಂದು ಶಿವಮೊಗ್ಗದಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸಮಾವೇಶದಲ್ಲಿ ನೆರೆದಿರುವ ನಾವು, ಈ ಹಕ್ಕೊತ್ತಾಯಗಳ ಮಂಡಿಸುತ್ತಿದ್ದೇವೆ.

- ಬರಲಿರುವ ಚುನಾವಣೆಯಲ್ಲಿ ಪ್ರತಿಯೊಂದು ರಾಜಕೀಯ ಪಕ್ಷವೂ ಕೂಡಾ, ಎಲ್ಲಾ ವರ್ಗ ಮತ್ತು ಸಮುದಾಯಗಳ ಮಹಿಳೆಯರಿಗೂ ಸೂಕ್ತ ಅವಕಾಶ ಮತ್ತು ಪ್ರಾತಿನಿಧ್ಯ ನೀಡತಕ್ಕದ್ದು.
- ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ನಿಲ್ಲಿಸಿ. ವಿಐಸ್‌ಐಎಲ್, ಎಂಪಿಎಂ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲೇಬೇಕು.
- ಮಹಿಳೆಯರ ಮೇಲಿನ ಹಿಂಸೆಗೆ ಮೂಲಕಾರಣವಾದ ಮದ್ಯಪಾನ ನಿಷೇಧಿಸಬೇಕು. ಸಂಪೂರ್ಣ ಪಾನನಿಷೇಧ ಜಾರಿಯಾಗಲೇಬೇಕು.
- ಸಮಾನ ಕೆಲಸಕ್ಕೆ ಸಮಾನ ವೇತನ ನೀತಿಯು ಕೃಷಿಯೂ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಕಡ್ಡಾಯವಾಗಿ ಜಾರಿಯಾಗಬೇಕು.
- ಪೌರಕಾರ್ಮಿಕರಿಗೆ ಬದುಕುವ ವೇತನ, ಉತ್ತಮ ಕೆಲಸದ ವಾತಾವರಣ, ಸುರಕ್ಷಾ ಸೌಲಭ್ಯಗಳು ಸಿಗಲೇಬೇಕು. ಒಳಚರಂಡಿ ಸ್ವಚ್ಛತೆಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ಯಾಂತ್ರೀಕರಣಗೊಳಿಸಬೇಕು.
- ಮುದ್ದೇಬಿಹಾಳದ ಬಾಲಕಿ, ವಿಜಯಪುರದ ಬಾಲಕಿಯರೂ ಸೇರಿದಂತೆ ಎಲ್ಲಾ ಅತ್ಯಾಚಾರ ಕೊಲೆ ಪ್ರಕರಣಗಳ ತನಿಖೆ, ಕಾನೂನು ಪ್ರಕ್ರಿಯೆಗಳು ಪರಿಣಾಮಕಾರಿಯಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಅಪರಾಧಿಗಳಿಗೆ ಕಠಿಣ ಶಿಕ್ಷೆ ಆಗಬೇಕು. ಮುಖ್ಯವಾಗಿ ಅತ್ಯಾಚಾರ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಇಚ್ಛಾಶಕ್ತಿ ಪ್ರದರ್ಶಿಸಬೇಕು.

ಎಂದು ಈ ಒತ್ತಾಯಿಸುತ್ತಾ ಈ ಮೇಲ್ಕಂಡ ನಿರ್ಣಯಗಳನ್ನು ಅಂಗೀಕರಿಸುತ್ತಿದ್ದೇವೆ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಒಕ್ಕೂಟದ ಹಕ್ಕೊತ್ತಾಯಗಳು

- ಜಾತಿ, ವರ್ಗ, ಮತ, ಧರ್ಮ, ಜನಾಂಗ, ಯುದ್ಧ, ಸಿದ್ಧಾಂತ, ಭಾಷೆಗಳ ಹೆಸರಿನಲ್ಲಿ ನಡೆಯುವ ಭೀಕರ ಹಿಂಸೆ, ಅತ್ಯಾಚಾರಗಳು ನಿಲ್ಲಬೇಕು.
- ಹೆಣ್ಣು ಭ್ರೂಣಹತ್ಯೆ, ಬಾಲ್ಯ ವಿವಾಹ, ಆಸಿಡ್ ದಾಳಿ, ಮಹಿಳೆ ಮತ್ತು ಮಕ್ಕಳ ಮಾರಾಟ, ಅತ್ಯಾಚಾರ ಮೊದಲಾದ ಲಿಂಗಸಂಬಂಧಿ ದೌರ್ಜನ್ಯಗಳು ಕೊನೆಯಾಗಬೇಕು.
- ಆರೋಗ್ಯಕರ ಲೈಂಗಿಕ ಶಿಕ್ಷಣದ ಜೊತೆಗೆ ಸಾರ್ವಜನಿಕ ಸ್ಥಳ/ಸಂಸ್ಥೆಗಳಲ್ಲಿ, ವಿವಾಹ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಸಹಜೀವಿಯಾಗಿ, ಸಮಾನವಾಗಿ ಕಾಣುವಂತಹ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು. ಅಂತಹ ಪಠ್ಯಕ್ರಮ ಶಿಕ್ಷಣದಲ್ಲಿ ಜಾರಿಯಾಗಬೇಕು.
- ಸರ್ಕಾರ ರಚನೆಯಲ್ಲಿ ಮತ್ತು ರಾಜಕೀಯರಂಗವೂ ಸೇರಿದಂತೆ ಎಲ್ಲ ರಂಗಗಳಲ್ಲಿ ಸಾಮಾಜಿಕ ನ್ಯಾಯವನ್ನು ಆಧರಿಸಿದ ಮೀಸಲಾತಿಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು. ರಾಜಕೀಯ ಪಕ್ಷಗಳಲ್ಲಿ ಮತ್ತು ಸಂಘ, ಸಂಸ್ಥೆ, ಸಂಘಟನೆಗಳಲ್ಲಿ ಮಹಿಳಾ ನಾಯಕತ್ವವನ್ನು ಬೆಳೆಸಬೇಕು. ಚುನಾವಣೆ, ಕೋಮುಗಲಭೆಗಳ ಕಾಲದಲ್ಲಿ ಮಹಿಳೆಯರು ದಾಳವಾಗಿ, ಉಪಕರಣವಾಗಿ ಬಳಕೆಯಾಗುವುದು ನಿಲ್ಲಬೇಕು. ಮಹಿಳಾ ಸಮೂಹ ಸ್ಪಷ್ಟ ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳಲು ಸಂಘಟನೆ–ಸಮಾಜ–ಮಾಧ್ಯಮಗಳು ಅನುವು ಮಾಡಿಕೊಡಬೇಕು.
- ಉದ್ಯೋಗ ಪ್ರತಿ ಪ್ರಜೆಯ ಹಕ್ಕು. ಸಾಮರ್ಥ್ಯಕ್ಕೆ ತಕ್ಕ ಉದ್ಯೋಗ ಮತ್ತು ಬದುಕುವ ವೇತನ ಮಹಿಳೆಯರಿಗೆ ದೊರೆಯಬೇಕು. ಗಾರ್ಮೆಂಟ್ಸ್ ಕಾರ್ಮಿಕರು, ಅಂಗನವಾಡಿ–ಬಿಸಿಯೂಟ–ಆಶಾ ಕಾರ್ಯಕರ್ತೆಯರು, ಮನೆಗೆಲಸದವರು, ಕಟ್ಟಡ ಕಾರ್ಮಿಕರು ಹಾಗೂ ಇನ್ನಿತರ ಅಸಂಘಟಿತ ವಲಯದ ದುಡಿಮೆಗಾರರಿಗೆ ಬದುಕುವ ವೇತನ, ಆರೋಗ್ಯಕರ ಕೆಲಸದ ವಾತಾವರಣ, ಸಮಾನ ವೇತನ ಸಿಗಲೇಬೇಕು.
- ಜಾತಿ ದೌರ್ಜನ್ಯಗಳು ಮತ್ತು ಅಸ್ಪೃಶ್ಯತೆ ಕೊನೆಯಾಗಬೇಕು. ಪೌರಕಾರ್ಮಿಕರಿಗೆ ಬದುಕುವ ವೇತನ, ಉತ್ತಮ ಕೆಲಸದ ವಾತಾವರಣ, ಸುರಕ್ಷಾ ಸೌಲಭ್ಯಗಳು ಸಿಗಲೇಬೇಕು. ಒಳಚರಂಡಿ ವ್ಯವಸ್ಥೆಯನ್ನು ಸಂಪೂರ್ಣ ಯಾಂತ್ರೀಕೃತಗೊಳಿಸಬೇಕು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

- ವಲಸೆಯ ಮುಖ್ಯ ಕಾರಣ ನಿರುದ್ಯೋಗ. ಉದ್ಯೋಗಾವಕಾಶಗಳು ಗ್ರಾಮೀಣ ಹಾಗೂ ಸಣ್ಣ ಪಟ್ಟಣ ಪ್ರದೇಶಗಳಲ್ಲೂ ರೂಪುಗೊಳ್ಳುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕು.
- ದೇವದಾಸಿ ಪದ್ಧತಿ ಕೊನೆಗೊಳ್ಳಬೇಕು. ಅವರಿಗೆ ಉತ್ತಮ ಆರೋಗ್ಯ ಸೇವೆ, ಶಿಕ್ಷಣ ಮತ್ತು ಉದ್ಯೋಗ ದೊರಕಿಸಿಕೊಡಬೇಕು. ಮಹಿಳೆ ಮತ್ತು ಮಕ್ಕಳ ಸಾಗಾಣಿಕೆ ತಡೆಗೆ ಗಂಭೀರ ಪ್ರಯತ್ನಗಳಾಗಬೇಕು.
- ಲಿಂಗತ್ವ ಅಲ್ಪಸಂಖ್ಯಾತರ, ಲೈಂಗಿಕ ಕಾರ್ಯಕರ್ತರ ಮಾನವ ಹಕ್ಕುಗಳ ಉಲ್ಲಂಘನೆ ನಿಲ್ಲಬೇಕು.
- ಮುಟ್ಟಿನ ಹೆಸರಿನಲ್ಲಿ ಮಹಿಳೆಯರ ಹೊರಗಿಡುವಿಕೆ, ಶೋಷಣೆ ನಿಲ್ಲಬೇಕು.
- 1984ರಲ್ಲಿ ಆದೇಶವಾಗಿರುವ ಶೇ.33 ಜೆಂಡರ್ ಬಜೆಟ್ ಕಡ್ಡಾಯವಾಗಿ ಜಾರಿಗೊಳ್ಳಬೇಕು. ಯೋಜನಾ ಹಣಗಳ ಬಳಕೆಗೆ ಕಾವಲು ಸಮಿತಿ ರಚಿಸಬೇಕು.
- ಕೃಷಿಭೂಮಿಯನ್ನು ರೈತರಿಂದ, ಆದಿವಾಸಿಗಳಿಂದ ಬಲವಂತವಾಗಿ ಕಸಿದುಕೊಂಡು ಅವರ ಬದುಕನ್ನು ದಿಕ್ಕಾಪಾಲಾಗಿಸುವ ಅಭಿವೃದ್ಧಿ ಯೋಜನೆಗಳು, ಸುಗ್ರೀವಾಜ್ಞೆಗಳು ಸಾಮಾಜಿಕ ಮರುಪರಿಶೀಲನೆಗೊಳಗಾಗಬೇಕು. ಆದಿವಾಸಿ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಅಮಾನವೀಯ ದೌರ್ಜನ್ಯ ಕೊನೆಯಾಗಬೇಕು.
- ಶಿಕ್ಷಣ, ಆರೋಗ್ಯ ಹಾಗೂ ಇನ್ನಿತರ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ ನಿಲ್ಲಬೇಕು. ಸರ್ಕಾರ/ಸಾರ್ವಜನಿಕರ ಸಹಭಾಗಿತ್ವ ಮತ್ತು ಸಹಕಾರಿ ತತ್ವಗಳ ಸ್ವಾಮ್ಯತೆ ಜಾರಿಯಾಗಬೇಕು
- ಶೌಚಾಲಯ ಮತ್ತು ಒಳಚರಂಡಿ ನಿರ್ಮಾಣ, ನೀರು ಪೂರೈಕೆಗಳನ್ನು ಸಮರ್ಪಕವಾಗಿ ಕಾಲಮಿತಿಯೊಳಗೆ ನಡೆಸುವಂತೆ ಕ್ರಿಯಾಯೋಜನೆಗಳನ್ನು ರೂಪಿಸಬೇಕು.

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಅರಿವಿನ ಪಯಣ

## ಕೈಗೆ ಕೈ ಜೋಡಿಸಿದವರ ಅನುಭವಗಳು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಮೆರವಣಿಗೆ ಹೊರಡುತ್ತಾರೆ: ಶೃಂಗೇಶ್

*ಒಂದಲ್ಲಾ ಒಂದು ದಿನ ಈ ನೆಲದ ಹೆಣ್ಣುಗಳು*
*ಮೆರವಣಿಗೆ ಹೊರಡುತ್ತಾರೆ...*
*ಮೆರವಣಿಗೆ ಹೊರಡುತ್ತಾರೆ...*

ಇಂತಹದೊಂದು ದಿಟ್ಟವಾದ ಆಶಾವಾದ ಹೊತ್ತ ಮಾರ್ಚ್ 8 ಮತ್ತು 9ರ ಮಹಿಳಾ ಸಮಾವೇಶ ಮತ್ತು ಜಾಥಾದಲ್ಲಿ ನಾನೂ ಜೊತೆಯಾದೆ. ಅದೊಂದು ಹೆಮ್ಮೆಯ ಭಾವ. ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸಮಾವೇಶ ಮತ್ತು ಅದರ ಪೂರ್ವಭಾವಿ ಸಂಘಟನಾ ಸಭೆಗಳು, ಅರಿವಿನ ಪಯಣ ಎಲ್ಲವೂ ನನ್ನ ಪಾಲಿಗೆ ಹತ್ತು ಹಲವು ಆಪ್ತ ನೆನಪುಗಳನ್ನು ಉಳಿಸಿದೆ.

ಮಹಿಳಾ ದಿನಾಚರಣೆಯಲ್ಲಿ ನನಗೇನು ಕೆಲಸ ಎಂಬ ಪ್ರಶ್ನೆಯನ್ನಿಟ್ಟುಕೊಂಡು ಕುಪ್ಪಳಿಯಲ್ಲಿ ನಡೆದ ಸಮಾವೇಶದ ಮೊದಲ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡಿದ್ದೆ. ಪ್ರತಿಭಾ ಒತ್ತಾಯ ಮಾಡಿ ನನ್ನನ್ನು ಕುಪ್ಪಳಿಯ ಮೀಟಿಂಗ್‌ಗೆ ಕರೆದುಕೊಂಡು ಹೋಗಿದ್ದಳು. ಹಾಗೆ ಶುರುವಾದ ಅರಿವಿನ ಪಯಣ 8 ಮತ್ತು 9ರ ಸಮಾವೇಶದವರೆಗೂ ಜೊತೆಯಾಗುವಂತೆ ಮಾಡಿತು. ನಮಗೆ ಏನು ಕೆಲಸ ಎಂಬ ಭಾವನೆ ಹೋಗಿ ನಮ್ಮದೇ ಕೆಲಸ ಎಂಬ ಅರಿವನ್ನೂ ಮೂಡಿಸಿತು.

ಶಿವಮೊಗ್ಗದಲ್ಲಿ ಪ್ರಿಂಟಿಂಗ್ ಪ್ರೆಸ್ ನಡೆಸುವ ನಾನು ವಹಿಸಿಕೊಂಡಿದ್ದು ಸಮಾವೇಶಕ್ಕೆ ಸಂಬಂಧಿಸಿದ ಮುದ್ರಣ ಕೆಲಸಗಳನ್ನು. ಮಾಡಿದ್ದು ಸಣ್ಣಪುಟ್ಟ ಕೆಲಸಗಳನ್ನು. ಆದರೆ ಹಗಲಿರುಳು ತಮ್ಮ ಸ್ವಂತದ ಕೆಲಸ ಬಿಟ್ಟು ಆಸಕ್ತಿಗಳನ್ನು ಬದಿಗಿಟ್ಟು ಒಕ್ಕೂಟದ ಮಹಿಳಾ ಕಾರ್ಯಕರ್ತರು ಪ್ರಮುಖರು ಎಡಬಿಡದೆ ಓಡಾಡಿದ್ದನ್ನು ನೋಡಿ, ಅವರ ಎನರ್ಜಿಯನ್ನು ಕಂಡು ದಂಗಾಗಿ ಹೋದೆ. ಅವರೆಲ್ಲರ ದಿಟ್ಟ ನಡಿಗೆ ನನ್ನಲ್ಲಿ ಮೂಡಿಸಿದ ಆಪ್ತಭಾವ ಮತ್ತು ಪ್ರೀತಿ ಸುಮ್ಮನೆ ಕುಳಿತುಕೊಳ್ಳಲು ಬಿಡಲೇ ಇಲ್ಲ. ಸರಸ್ವತಿ ಅಕ್ಕಾ ವಾಣಿ ಮೇಡಂ, ಅನುಪಮ ಮೇಡಂ ಈ ಮೂವರು ರಾಜ್ಯದ ಮೂಲೆಮೂಲೆಯಿಂದ ಮಹಿಳೆಯರನ್ನು ಸಂಘಟಿಸುತ್ತಿದ್ದುದು, ಶಿವಮೊಗ್ಗ ಜಿಲ್ಲೆಯ ಹಳ್ಳಿ, ಪಟ್ಟಣಗಳಲ್ಲಿ ಕಾರ್ಯಕರ್ತರನ್ನು ಒಟ್ಟುಗೂಡಿಸುತ್ತಿದ್ದುದು ನೋಡಿದ ಮೇಲಂತೂ ಮೆರವಣಿಗೆ ಹೊರಡಲು ಈ ನೆಲದ ಹೆಣ್ಣುಮಕ್ಕಳು ಪಾಡುಪಡುವುದು ತಪ್ಪುವುದು ಯಾವಾಗ ಅನ್ನೋ ಪ್ರಶ್ನೆಯೂ ಕಾಡಿತು.

ಒಳ್ಳೆಯ ಕಾಫಿ ಕುಡಿಸ್ತಿರ ಅಂತ ನಿಮ್ಮ ಆಫೀಸಿಗೆ ಬಂದೆ ಎನ್ನುತ್ತಾ ಸರಸ್ವತಿ ಅಕ್ಕ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ನನ್ನ ಆಫೀಸಿಗೆ ಬಂದರೆಂದರೆ ಅಲ್ಲೇ ಒಂದು ಮೀಟಿಂಗ್. ರಾಶಿರಾಶಿ ಕೆಲಸದ ಹೊರೆ ಹೊತ್ತುಕೊಂಡು ಬರುತ್ತಿದ್ದ ಅವರು ನಮ್ಮ ಆಫೀಸಿನ ಹುಡುಗರಲ್ಲೂ ಏನಾದರೂ ಸಮಾವೇಶದ ಕೆಲಸ ಮಾಡುವ ಹುರುಪು ಮಾಡಿಸುತ್ತಿದ್ದರು. ಅವರ ಪ್ರೀತಿಯೇ ಅಂತಹುದು. ಸಮಾವೇಶದ ಹಿಂದಿದ್ದ ಶಕ್ತಿ ಇಂತಹ ನೂರಾರು ಅಕ್ಕಂದಿರು, ತಾಯಂದಿರು, ಗೆಳತಿಯರ ಪ್ರೀತಿಯೇ ಆಗಿತ್ತು. ದಿಟ್ಟತೆ ಮತ್ತು ಬದ್ಧತೆಯೇ ಆಗಿತ್ತು. ಶಿವಮೊಗ್ಗ ಸುತ್ತಮುತ್ತ ರೇಖಾಂಬ ಮತ್ತು ಇತರರು ಹಾಗೂ ಸಾಗರ ಸೇರಿದಂತೆ ತಾಲೂಕು ಕೇಂದ್ರಗಳಲ್ಲಿ ಪ್ರತಿಭಾ ಮತ್ತವರ ತಂಡದವರು ಶಾಲಾ–ಕಾಲೇಜುಗಳಿಗೆ ನುಗ್ಗಿ ಮಕ್ಕಳಲ್ಲಿ ಅರಿವಿನ ಬೆಳಕು ಹಚ್ಚುತ್ತಾ, ಮೀಸೆ ಚಿಗುರುವ ವಯಸ್ಸಿನ ಹುಡುಗರಿಗೆ ಜವಾಬ್ದಾರಿ ಅರಿವು ಮೂಡಿಸುತ್ತಾ ಸಮಾವೇಶದ ಕುರಿತಾದ ಪ್ರಚಾರ ನಡೆಸುತ್ತಿದ್ದರು. ಇದು ಶಿವಮೊಗ್ಗದ ಮಟ್ಟಿಗೆ ಬಹುದೊಡ್ಡ ಜಾಗೃತಿ ಜಾಥಾ ಆಗಿತ್ತು.

ಮಹಿಳಾ ಸಮಾವೇಶಕ್ಕಿಂತ ಅದರ ಪೂರ್ವಭಾವಿಯಾಗಿ ನಾಲ್ಕೈದು ತಿಂಗಳು ಶಾಲಾ ಕಾಲೇಜುಗಳಲ್ಲಿ, ಸಂತೆಗಳಲ್ಲಿ, ಸಭೆ ಸಮಾರಂಭಗಳಲ್ಲಿ ಒಕ್ಕೂಟದಿಂದ ನಡೆದ ಅರಿವಿನ ಪಯಣ ಸಮಾವೇಶದ ಯಶಸ್ಸಿನ ಹೆಗ್ಗುರುತಾಯಿತು. ಇಂತಹುದೊಂದು ಕೆಲಸ ನಿರಂತರವಾಗಿ ನಡೆಯಬೇಕು ಎಂಬ ಮಾತು ಎಲ್ಲೆಡೆ ವ್ಯಕ್ತವಾಯಿತು.

ಒಂದು ಬಗೆಯ ಉದಾಸೀನದಿಂದಲೇ ಒಕ್ಕೂಟದ ಕೆಲಸಗಳಿಗೆ ಜೊತೆಯಾಗಿದ್ದ ನನಗೆ ಮುಖ್ಯಸಂಘಟಕರಾಗಿದ್ದ ಸರಸ್ವತಿ, ವಾಣಿ ಪೆರಿಯೋಡಿ, ಹೆಚ್ ಎಸ್ ಅನುಪಮ, ರೇಖಾಂಬಾ, ಪ್ರತಿಭಾ, ಅಕ್ಷತಾ ಹೀಗೆ ಯಾರದ್ದಾದರು ಒಂದು ಫೋನು, ಮೆಸೇಜು ಬಂದೊಡನೆ ಅವರು ಹೇಳುತ್ತಿದ್ದ ಸಣ್ಣಪುಟ್ಟ ಕೆಲಸದತ್ತ ಧಿಗ್ಗನೆದ್ದು ಓಡುವಂತೆ ಮಾಡುತ್ತಿದ್ದ ಶಕ್ತಿ ಯಾವುದು? ಈ ನೆಲದ ಹೆಣ್ಣುಮಕ್ಕಳನ್ನು ಮೆರವಣಿಗೆ ಹೊರಡಿಸಲು ಅವರು ಮಾಡುತ್ತಿದ್ದ ಪ್ರೀತಿಯ ಒತ್ತಾಸೆಯನ್ನು ಹೇಗೆ ವಿವರಿಸುವುದು? ಕೇವಲ ಸಮಾನತೆಯ ಆಶಯ ಹೊತ್ತು ಮೆರವಣಿಗೆ ಹೊರಟ ಈ ನೆಲದ ಹೆಣ್ಣುಮಕ್ಕಳ ಜೊತೆ ಹೆಜ್ಜೆ ಹಾಕುವುದರಲ್ಲಿ ಮಾತ್ರವೇ ಶಾಪದ ಭಾರ ಹೊತ್ತ ಗಂಡು ಸಂತತಿಗೆ ಬಿಡುಗಡೆಯಿದೆ ಅಂತ ಮಾರ್ಚ್ 9 ರ ಜಾಥಾ ಸಮಯದಲ್ಲಿ ಅನ್ನಿಸಿತು. ಅಷ್ಟೆ.

*(ಸಂಪಾದಕರು, 'ಜನಹೋರಾಟ' ಪತ್ರಿಕೆ, ಶಿವಮೊಗ್ಗ)*

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಕನಸು ಕಟ್ಟಿಕೊಟ್ಟ ಒಕ್ಕೂಟ: ಸಿರಿ ಚೆನ್ನಿ

**ನಾ**ನು ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸದಸ್ಯೆಯಾಗಿದ್ದೇನೆ. ಒಂದು ದಿನ ನನ್ನ ಜ್ಯೂನಿಯರ್ ಆಗಿದ್ದ ಗೆಳತಿಯೊಬ್ಬಳು ಶಾಲೆ ಬಿಟ್ಟ ಮೇಲೆ ನನ್ನನ್ನೂ ಅವಳ ಮನೆಯ ತನಕ ಬರುವಂತೆ ಕರೆದಳು. ಆಗಲೇ ನನಗೆ ಈ ಒಕ್ಕೂಟದ ನಿಜವಾದ ಪರಿಣಾಮ ಏನು ಎಂದು ಗೊತ್ತಾಗಿದ್ದು. ಅವಳು ಮನೆಗೆ ಹೋಗುವ ದಾರಿಯಲ್ಲಿ ಕಟ್ಟಡವೊಂದನ್ನು ಕಟ್ಟುತ್ತಿದ್ದು ಅಲ್ಲಿ ಕೆಲವರು ಅವಳನ್ನು ಕೆಟ್ಟದಾಗಿ ನೋಡುತ್ತಿದ್ದರು. ನಾನು ಅವರಿಂದ ಅವಳನ್ನು ರಕ್ಷಿಸಬಹುದು ಅಂತ ಅವಳಿಗೆ ಅನಿಸಿತಂತೆ. ಹಾಗಂತ ಅವಳೇ ನನಗೆ ಹೇಳಿದಳು. ನಾನು ಈಗ ಸುಮ್ಮನೆ ನಿಂತು ನೋಡುವವರಲ್ಲಿ ಒಬ್ಬಳಾಗಿರಲಿಲ್ಲ. ಒಬ್ಬ ಹುಡುಗಿಗೆ ಕಿರಿಕಿರಿಯಾಗುವ ಅಂಥ ನೋಟಗಳನ್ನು ನಿಭಾಯಿಸುವ ಶಕ್ತಿಯುಳ್ಳವಳೆಂದು ಅವಳು ನಂಬುವ ಹುಡುಗಿಯಾಗಿದ್ದೆ. ಅಲ್ಲದೆ ಹಾಗೆ ಮಾಡುವುದಕ್ಕೆ ಇನ್ನೊಬ್ಬರಿಗೆ ಸಹಾಯ ಮಾಡಬಲ್ಲವಳಾಗಿದ್ದೆ. ಕುಪ್ಪಳಿಯಂಥ ಸಣ್ಣ, ಮಳೆಗಾಡಿನ ಹಳ್ಳಿಯೊಂದರಲ್ಲಿ ಆಕಸ್ಮಾತ್ತಾಗಿ ನನಗಿಂತ ವಯಸ್ಸಾದ ಮಹಿಳೆಯರ ಒಂದು ಸಣ್ಣ ಗುಂಪಿನೊಂದಿಗೆ ಭೇಟಿಯಾಗಿದ್ದು ಇದನ್ನೆಲ್ಲ ಸಾಧ್ಯವಾಗಿಸುತ್ತದೆಯೆಂದು ಯಾರಿಗೆ ಗೊತ್ತಿತ್ತು? ಬಹುಶಃ ವಿಧಿಗೆ ತನ್ನದೇ ಆದ ವಿಚಿತ್ರ ಹಾದಿಗಳು ಇರುತ್ತವೆಂದು ಕಾಣುತ್ತದೆ. ಆದರೆ ಆ ಒಂದು ಚಿಕ್ಕ ಭೇಟಿಯಿಂದ ಒಂದು ಆಸೆಹುಟ್ಟಿಕೊಂಡು, ಆ ನಿರೀಕ್ಷೆಯು ಒಂದು ಬದ್ಧತೆಯಾಗಿ ಮಾಪಾಡಾಯಿತು. ಅಂದಿನಿಂದ ಶುರುವಾದ ಈ ಪಯಣವು ನಾನು ಎಂದೂ ಮರೆಯಲಾಗದ ಪಯಣವಾಗಿದೆ.

ಒಕ್ಕೂಟದ ಜೊತೆಗಿನ ನನ್ನ ಭೇಟಿಯು ನಾನು ಯೋಜಿಸಿದ್ದಲ್ಲ. ನನ್ನ ಅಮ್ಮ ನನ್ನನ್ನು ಎಲ್ಲಿಗೆ ಮತ್ತು ಏಕೆ ಕರೆದುಕೊಂಡು ಹೋಗುತ್ತಿದ್ದಾಳೆನ್ನುವುದು ಅಂದಿನ ಸಭೆಯಲ್ಲಿ ಹೋಗಿ ಕೂಡುವವರೆಗೂ ನನಗೆ ಗೊತ್ತಾಗಿರಲಿಲ್ಲ. ನನ್ನ ಶಾಲೆ, ನನ್ನ ಮನೆ ಮತ್ತು ನನ್ನ ಮೊಬೈಲ್ನ ಸ್ಕ್ರೀನ್ನ ಆಚೆಗೆ ಏನನ್ನೂ ಬಲ್ಲದ ನನ್ನ ಪುಟ್ಟ ಮನಸ್ಸಿಗೆ ಅದೆಲ್ಲವೂ ಆಶ್ಚರ್ಯ ಹುಟ್ಟಿಸಿತು. ನಾನು ಇಷ್ಟಪಡುವ ಹಾಗೆ ಕುಚಿಯ ಮೇಲೆ ಕಾಲುಗಳನ್ನು ಮಡಚಿ ಕುಳಿತುಕೊಳ್ಳುವ, ಸಾಮಾಜಿಕವಾಗಿ, ವೈಚಾರಿಕವಾಗಿ ಅಷ್ಟೊಂದು ತಿಳುವಳಿಕೆ ಇದ್ದ ಮಹಿಳೆಯರನ್ನು ನೋಡಿ ನಾನೇ ಚಕಿತಗೊಳ್ಳುವಷ್ಟು ನನ್ನೊಳಗೆ ಸಂಚಲನವುಂಟಾಯಿತು. ನಾನು ಅವರೆಲ್ಲರ ಜೊತೆಗೆ ಯಾವ ಎಗ್ಗಿಲ್ಲದೇ ಸೇರಿಕೊಂಡೆ. ಅದೊಂದು ಬೆಚ್ಚಗಿನ ಸ್ನೇಹದ ವಾತಾವರಣವಾಗಿತ್ತು.

ಇದಕ್ಕಿಂತ ಹೆಚ್ಚು ಮುಖ್ಯವಾದದ್ದೇನೆಂದರೆ, ನನ್ನ ಅನುಭವ, ತಿಳುವಳಿಕೆಗೆ ನಿಲುಕದ ಮಾತುಗಳನ್ನೇನೂ ಅವರು ಆಡುತ್ತಿರಲಿಲ್ಲ. ನನ್ನ ಅಮ್ಮ ನನ್ನೊಂದಿಗೆ ಚರ್ಚಿಸುತ್ತಿದ್ದ,

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮಹಿಳೆಯರು ದಿನ ನಿತ್ಯ ಎದುರಿಸುವ ಸಮಸ್ಯೆಗಳ ಬಗ್ಗೆಯೇ ಅವರೆಲ್ಲ ಮಾತನಾಡುತ್ತಿದ್ದರು. ನನಗೆ ತುಂಬಾ ಇಷ್ಟವಾದದ್ದೇನೆಂದರೆ ಅವರ ಸ್ನೇಹಮಯ ಮಾತುಗಳು ಮತ್ತು ತಮ್ಮ 'ಹಿರಿಯತನ'ವನ್ನು ತೋರಿಸದೇ ಇದ್ದುದು. ಕೆಲವೇ ನಿಮಿಷಗಳಲ್ಲಿ ನಾನು ಮಾತುಕತೆಯಲ್ಲಿ ಭಾಗವಹಿಸುವ ಧೈರ್ಯ ಬಂದು ಬಿಟ್ಟಿತು.

ಹೇಗೆ "ಮಹಿಳೆ" ಎನ್ನುವುದರಲ್ಲಿ 'ಚಿಕ್ಕ ಹುಡುಗಿಯರು' ಇರುವುದಿಲ್ಲ ಮತ್ತು ಹೇಗೆ ಇಂತಹ ಚರ್ಚೆಗಳಲ್ಲಿ ಶಾಲಾ ಮಕ್ಕಳಿಗೆ ಆಸ್ಪದವೇ ಇರುವುದಿಲ್ಲವೆನ್ನುವುದರ ಬಗ್ಗೆ ನಾನು ಹೇಳತೊಡಗಿದೆ. ವಿಷಜಂತುಗಳಂತಿರುವ ಕೆಲವರ ಕಟುವಾದ ಮತ್ತು ಮನಸ್ಸು ಕೊರೆಯುವ ಕೆಟ್ಟ ಮಾತುಗಳು, ಬೈಗುಳಗಳು, ಏನಾಗುತ್ತಿದೆಯೆಂದು ತಿಳಿಯದ ಹೆಚ್ಚಿನ ಸಂಖ್ಯೆಯ ಮುಗ್ಧ ಮಕ್ಕಳು ಹಾಗೂ ಹದಿಹರೆಯದವರ ಮೇಲೆ ತುಂಬಾ ಪರಿಣಾಮವನ್ನುಂಟುಮಾಡುತ್ತವೆ. ಈ ವಿಷವು ಮಕ್ಕಳ ಮನಸ್ಸಿನಲ್ಲಿ ಉಳಿದು ಬೆಳೆಯದಂತೆ ಮಾಡುವುದು ತುಂಬಾ ಅವಶ್ಯಕವಾಗಿದೆ. ಹಾಗೆ ಮಾಡುವುದು ಶಿಕ್ಷಣದ ಭಾಗವೂ ಆಗಬೇಕಿದೆ ಎಂದು ಆ ದಿನ ನಾನು ನನ್ನ ಭಾವನೆಗಳನ್ನು ಮನ ಬಿಚ್ಚಿ ಹೇಳಿಕೊಂಡೆ. ತಕ್ಷಣವೇ ಅವರೆಲ್ಲ ನನ್ನನ್ನು ಅಭಿನಂದಿಸಿ ಪ್ರೋತ್ಸಾಹಿಸಿದರು ಮತ್ತು ನನ್ನನ್ನು ತುಂಬ ಉತ್ಸಾಹದಿಂದ ಬರಮಾಡಿಕೊಂಡರು. ಅವರೆಲ್ಲ ಸೇರಿ ಹೇಳಿದ "ಆಝಾದಿ" ಹಾಡಿನಲ್ಲಿ ನನ್ನ ಹೆಸರನ್ನು ಸೇರಿಸಿ ಹೇಳಿದ್ದು ಈಗಲೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದಂತಿದೆ. ಅದು, ಯಾವುದಕ್ಕೂ ಭಯಪಡದೇ ಜಗತ್ತನ್ನು ಎದುರಿಸಬಲ್ಲ ಒಬ್ಬ ಗಟ್ಟಿ ಯುವತಿಯಾಗುವ ಕನಸೊಂದನ್ನು ನನಗೆ ಕಟ್ಟಿಕೊಟ್ಟಿತು.

ಪ್ರತಿಯೊಂದು ಭೇಟಿಯಲ್ಲಿ ಇದು ಹೀಗೆಯೇ ಬೆಳೆಯುತ್ತಾ ಹೋಯಿತು. ಒಂದು ದಿನ ಒಕ್ಕೂಟದ ಸಂಗಾತಿಗಳು, ನನ್ನ ಶಾಲೆಯಲ್ಲಿ ಹಿಂದೆಂದೂ ಆಗಿರದಂಥ ಅದ್ಭುತವಾದ ಕಾರ್ಯಕ್ರಮವೊಂದನ್ನು ನಡೆಸಿಕೊಟ್ಟರು. ಅದು ನನ್ನ ಹಾಗೂ ನನ್ನ ಅನೇಕ ಸ್ನೇಹಿತೆಯರ ದೃಷ್ಟಿಕೋನವನ್ನೇ ಬದಲಾಯಿಸಿಬಿಟ್ಟಿತು. ಅಂದು ನಾನು, ಜನರಿಗೆ ಸ್ಫೂರ್ತಿಕೊಡುತ್ತಾ, ಅವರ ಮನಸ್ಸುಗಳನ್ನು ಬದಲಾಯಿಸುತ್ತಾ ಸಾಗುವ ಒಂದು ಗುಂಪಿನ ಸದಸ್ಯೆಯಾಗಿದ್ದೇನೆ ಎನ್ನುವ ಹೆಮ್ಮೆಯಲ್ಲಿ ಮನೆಗೆ ಬಂದೆ. ಒಕ್ಕೂಟದ ಪ್ರತಿಯೊಬ್ಬರ ವಿಚಾರಗಳು ನನಗೆ ಸ್ಫೂರ್ತಿಯನ್ನು ಕೊಟ್ಟವು. ನನ್ನ ಚಿಂತನೆಯನ್ನು ಆಳಗೊಳಿಸಿ ನನಗೆ ಬಲವನ್ನು ಕೊಟ್ಟವು.

ಶಿವಮೊಗ್ಗೆಯಲ್ಲಿ ನಡೆದ ಮೊಂಬತ್ತಿಯ ಬೆಳಕಿನ ಕಾಯಕ್ರಮದಲ್ಲಿ ನಾವು ಒಂದು ಬೆಳಕನ್ನು ಹಚ್ಚಿದೆವು. ಒಂದು, ನಾವು ಧೈರ್ಯದಿಂದ ಎತ್ತಿಹಿಡಿದ ಮೊಂಬತ್ತಿಯ ಬೆಳಕು. ಇನ್ನೊಂದು, ನಮ್ಮ ಹೃದಯಗಳಲ್ಲಿ ನಮಗೆ ಸತ್ಯ ಹಾಗೂ ನ್ಯಾಯವೆಂದು ಕಂಡಿದ್ದರ ಪರವಾಗಿ ಗಟ್ಟಿಯಾಗಿ ನಿಲ್ಲುವ ವಿಶ್ವಾಸದ ಬೆಳಕು.

ನಾನು ಇಂಥ ಗುಂಪಿನ ಸದಸ್ಯಳೆಂದು, ವಯಸ್ಸಿನಲ್ಲಿ ಕಿರಿಯಳು ಮತ್ತು ಕಾಲದೊಂದಿಗೆ ಬೆಳೆಯುವ, ಆದರೆ ಉಜ್ವಲವಾದ ಧ್ಯೇಯವನ್ನಿಟ್ಟುಕೊಂಡಿರುವ ಸದಸ್ಯೆಯೆಂದು ಹೆಮ್ಮೆ ಪಡುತ್ತೇನೆ.

*(ಶಿವಮೊಗ್ಗದ ಜ್ಞಾನದೀಪ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಥಿನಿ)*

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಒಕ್ಕೂಟವೆಂಬ ತೆರೆದ ಬಯಲು: ಕೃತಿ ಆರ್. ಪುರಪ್ಪೆಮನೆ

**ಹೆಂ**ಗಸರು ಎಲ್ಲೇ, ಹೇಗೇ, ಏನೇ ಮಾಡುತ್ತಿರಲಿ, ಆ ಕೆಲಸದ ಕೌಶಲ್ಯ, ವ್ಯಕ್ತಿತ್ವ ನಿರ್ಧಾರಿತ ವಿಧಾನಗಳು, ಇವೆಲ್ಲದರ ಜೊತೆ ಇನ್ನೊಂದು ಭಾರ ಹೊರಬೇಕಾಗುತ್ತದೆ. ಅದು ಲಿಂಗತಾರತಮ್ಯದ್ದು. ನೀನು ಹೆಣ್ಣಾಗಿ ಹೇಗೆ ಮಾಡುತಿದ್ದಿ ಎನ್ನುವ ಇನ್ನೊಂದು ಎಕ್ಸ್‌ಟ್ರಾ ಕಣ್ಣು ನಮ್ಮ ಮೇಲಿರುತ್ತದೆ. ಬೌದ್ಧಿಕ ಕೆಲಸವಾದರೆ, ನಿಮ್ಮ ಸಲಹೆ, ಅಧ್ಯಯನ, ಮಾತು ಎಲ್ಲವೂ ಉಪಯೋಗವಿಲ್ಲದ್ದು ಎಂದು ತಿರಸ್ಕರಿಸುವ, ಕೇಳಿಸಿಕೊಳ್ಳದ ಅಥವಾ ನೀವು ಮುಗ್ಧರಿದ್ದೀರಿ ನಿಮಗೆ ತಿಳಿಯುವುದಿಲ್ಲ ಎನ್ನುವ ಧೋರಣೆಗಳು. ಶ್ರಮದ ಕೆಲಸವಾದರೆ ದೇಹದ ದುರ್ಬಲತೆ, ಕೋಮಲತೆ, ಅಬಲೆ, ನಿಮಗೆ ಹರಿಯುವುದಿಲ್ಲ ಎನ್ನುವ ನೆಪಕ್ಕೆ ಕಡಿಮೆ ಸಂಬಳ. ಇದೆಲ್ಲದರ ಜೊತೆಗೆ ಮನೆ, ಹೊರಗೆ ಎಂಬ ಭೇದವಿಲ್ಲದೇ ಅತ್ಯಾಚಾರ ಮತ್ತು ಇತರೇ ಲೈಂಗಿಕ ಕಿರುಕುಳಗಳು. ಅದಕ್ಕೆ ಸಮಾಜ ಕೊಡುವ ಸಮರ್ಥನೆಗಳು. ಇಷ್ಟಲ್ಲದೇ ಲಿಂಗ ತಾರತಮ್ಯಕ್ಕೆ ಸಾಂಸ್ಥಿಕ ರೂಪ ಕೊಟ್ಟು ವ್ಯವಸ್ಥೆಯೇ ಒಪ್ಪಿಕೊಂಡು ಆಚರಿಸುವ ಮುಟ್ಟು, ದೇವದಾಸಿ, ವರದಕ್ಷಿಣೆ ಪಿಡುಗುಗಳು. ಇದೆಲ್ಲವೂ ಹುಟ್ಟಿದ ಮೇಲೆ ಆಗುವಂತದ್ದು. ಇದನ್ನೆಲ್ಲ ಹೇಳಲಿಕ್ಕೂ ಭೂಮಿಮೇಲೆ ಬರದ ಎಷ್ಟೋ ಭ್ರೂಣಗಳು. ಇಷ್ಟೆಲ್ಲಾ ಸ್ತರಗಳಲ್ಲಿ, ವಿವಿಧ ಜಾತಿ, ವರ್ಗಗಳಿಗೆ ಆಗುವ ತಾರತಮ್ಯದ ಸ್ವರೂಪ, ಈ ತಾರತಮ್ಯದಿಂದ ಆಗುವ ಹಾನಿ ಹಿಂಸೆ, ಎಲ್ಲವೂ ಬೇರೆ. ಹಾಗಿದ್ದೂ ಇವೆಲ್ಲಕ್ಕೂ ಕಾರಣ 'ಹೆಣ್ಣು' ಎಂದು ಬರೀ ಜೈವಿಕವಾಗಿಯಲ್ಲದೇ ಸಮಾಜಿಕವಾಗಿ ಗುರುತಿಸಿರುವುದು(ಜೆಂಡರ್). ಇದನ್ನೆಲ್ಲಾ ವಿರೋಧಿಸಲು ನಾವು ಬಳಸುವ ಭಾಷೆಯೂ, ಚಿಂತನೆಯ ಪರಂಪರೆಯೂ ಪುರುಷಾಧಿಪತ್ಯದ್ದು. ಹೀಗಿರುವಾಗ ಈ ರಂಗೋಲಿ ಕೆಳಗೆ ನುಸುಳುವ ಪ್ರವಾಹದೆದುರು ನಾವು ಈಜುವುದಾದರೂ ಹೇಗೆ?

ನೈಜೀರಿಯನ್ ಲೇಖಕಿ ಚಿಮಾಮಂಡ ಅಡಿಚಿ, "ಜಾತಿ (ರೇಸ್) ತಾರತಮ್ಯದ ಬಗ್ಗೆ ಮಾತಾಡುವಾಗ ಸುತ್ತ ಬೆಂಬಲಿಗರಿರುತ್ತಾರೆ. ಆದರೆ, ಲಿಂಗ ತಾರತಮ್ಯದ ಬಗ್ಗೆ ಮಾತಾಡುವಾಗ ನಾನೊಬ್ಬಳೆ" ಎನ್ನುತ್ತಾರೆ. ಒಕ್ಕೂಟವೆಂದರೆ ಈ ನಾನೊಬ್ಬಳೇ ಎನ್ನುವ ಭಾವನೆಗೆ ಸಿಗುವ ಸಹಭಾಗಿತ್ವ. ಸಹಭಾಗಿತ್ವ ನಮ್ಮ ಎಲ್ಲಾ ಕೆಲಸಕ್ಕೂ ಒಂದು ಮುಕ್ತವಾಗಿರುವ ಬಯಲನ್ನು (ಓಪನ್ ಸ್ಪೇಸ್) ಕೊಡುತ್ತದೆ. ಸಮಾಜದಲ್ಲಿ ವ್ಯವಹರಿಸಬೇಕಾದಾಗ ಎದುರಿಸುವ ಪುರುಷಪ್ರಧಾನ್ಯತೆಯ ಭಾರವನ್ನು ಬಿಟ್ಟು ನಮ್ಮನ್ನು ನಾವು ಅರಿಯುವ, ಆತ್ಮಾವಲೋಕನ ಮಾಡಿಕೊಳ್ಳಲು ಇರುವ ಅವಕಾಶ ಈ ಒಕ್ಕೂಟ. ಹೆಣ್ಣು ಏನೂ ಮಾಡಿದರೂ ಮೊದಲನೇ ಪ್ರಯತ್ನಕ್ಕೇ ಪರಿಪೂರ್ಣವಾಗಿರಬೇಕು, ಸಾಧಿಸಿ ತೋರಿಸಬೇಕು ಎನ್ನುವ ಸಮಾಜದಲ್ಲಿ, ಅವಳ "ಅಂಗನವಾಡಿ ಮಕ್ಕಳಿಗೆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಹೀಗೆ ಹೇಳಿಕೊಟ್ಟರೆ ಹೇಗೆ?. ತಮ್ಮ ಗುಂಪಿನ ಹೋರಾಟವನ್ನು ಹೀಗೆ ನಡೆಸಿದರೆ ಹೇಗೆ? ನಮ್ಮ ಬರವಣಿಗೆ ಹೀಗಾದರೆ ಹೇಗೆ? ಕೌಟುಂಬಿಕ ಕಷ್ಟಗಳನ್ನು ಹೀಗೆ ಎದುರಿಸಿದರೆ ಹೇಗೆ?" ಎನ್ನುವ ಒಳತೋಟಿಗಳು, ಪ್ರಯೋಗಗಳು, ಮೊದಲ ಪ್ರಯತ್ನಗಳು, ಎಡವುತ್ತಾ, ಕಲಿಯುತ್ತಾ ಹೋಗುವ ಸಹಜ ಪ್ರಕ್ರಿಯೆಗೆ ಇಲ್ಲಿ ಯಾರೂ ಬೆಟ್ಟು ತೋರಿಸುವವರಿಲ್ಲ. 'ನಿಮಗಾಗುವುದಿಲ್ಲ ಎಂದು ಮೊದಲೇ ಹೇಳಿಲ್ಲವೇ?' ಎಂದು ಪ್ರತೀ ಹೆಜ್ಜೆಗೂ ಹೇಳುವ ಸಮಾಜದಲ್ಲಿರುವ ಹೆಣ್ಣಿಗೆ ಒಕ್ಕೂಟದಲ್ಲಿ ಸಿಗುವ ಸೃಜನಾತ್ಮಕ ಸ್ವಾತಂತ್ರ್ಯ, ಅದರಿಂದ ತೆರೆಯುವ ಸಾಧ್ಯತೆಗಳು, ಆತ್ಮವಿಶ್ವಾಸ, ಒಕ್ಕೂಟದ ನಿಜವಾದ ಯಶಸ್ಸು.

ಇದು ಸಾಧ್ಯವಾಗಿದ್ದು ಒಕ್ಕೂಟ ಆರಂಭವಾದಾಗಿನಿಂದ ಅದರ ಸದಸ್ಯರು ಎಲ್ಲಾ ರೀತಿಯಲ್ಲೂ ತಮ್ಮ ಕೆಲಸಗಳನ್ನು ವಿಕೇಂದ್ರೀಕರಿಸಿಕೊಳ್ಳುತ್ತಾ ನಡೆದಿದ್ದು. ಜಾತಿ, ವರ್ಗ, ಇನ್ನಿತರ ಈಗಾಗಲೇ ಸಮಾಜದಲ್ಲಿ ಹರಳುಗಟ್ಟಿರುವ ಶ್ರೇಣಿಗಳನ್ನು ಒಡೆಯುವಂತೆ, ತಮ್ಮ ಎಲ್ಲಾ ಕೆಲಸಗಳಲ್ಲಿ ಪ್ರಜ್ಞಾಪೂರ್ವಕವಾಗಿ ಸಾಮಾನ ಪ್ರಾತಿನಿಧ್ಯ ಕೊಡುವ ಮೂಲಕ ಪ್ರಜಾಸತ್ತಾತ್ಮಕವಾಗಿ ಬೆಳೆಸಿರುವುದು. ಈ ಅರ್ಥದಲ್ಲಿ ಯಾವುದೇ ಸಂಘಟನೆಗೆ ಒಕ್ಕೂಟ ಒಂದು ಮಾದರಿ. ವೈಯಕ್ತಿಕವಾಗಿ ನನ್ನಂತವರಿಗೆ ಆಕ್ಟಿವಿಸಮ್ ಎಂದರೆ ಒಂದು ರೀತಿಯ ದಿಗಿಲು. ಯಾವುದೇ ಹೋರಾಟ ಬೆಳೆಯುತ್ತಾ ಅದರ ಆಶಯಗಳು ಘೋಷಣೆಗಳಾಗುತ್ತಿದ್ದಂತೆಯೇ ಅದು ಸೂಕ್ಷ್ಮತೆ ಕಳೆದುಕೊಳ್ಳುವ ಸಾಧ್ಯತೆಗಳಿವೆ. ಘೋಷಣೆಗಳ ಮಧ್ಯೆ ಏಳುವ ಪ್ರಶ್ನೆಗಳು, ಸಂಶಯ, ಆತ್ಮಾವಲೋಕನದ ಜಾಗ ಕಿರಿದಾಗುತ್ತಾ ಹೋಗುತ್ತದೆ. ಆದರೆ ಒಕ್ಕೂಟ, ಘೋಷಣೆಗಳ ಮಧ್ಯೆ ಕೇಳುವ ಭಿನ್ನ ಒಂಟಿ ಧ್ವನಿಗಳಿಗೂ ಕಿವಿಯಾಗುವುದನ್ನು ತನ್ನ ಪ್ರಣಾಳಿಕೆಯಲ್ಲಿಯೇ ಸೇರಿಸಿಕೊಂಡಿದೆ. ಅಂದರೆ ಇಲ್ಲಿಯೂ ನಾನೊಬ್ಬಳೇ ಅನ್ನಿಸಿದವರಿಗೂ ಇಲ್ಲಿ ಪ್ರಾತಿನಿಧ್ಯವಿದೆ. ಇದು ಯಾವುದೇ ಪ್ರಜಾಪ್ರಭುತ್ವವಾದಿ ದೇಶ, ಸಂಘಟನೆ, ಕೊನೆಗೆ ಕುಟುಂಬದ ತನಕವೂ ಬೆಳಸಿಕೊಳ್ಳಬೇಕಾದ, ಮುಖ್ಯವಾದ ಗುಣ.

ಒಕ್ಕೂಟ, ತನ್ನ ಆಶಯಗಳಿಗೆ ಬೆನ್ನೆಲುಬಾಗುವಂತೆ ಆಗಾಗ ಸದಸ್ಯರಿಗೆ ಕಮ್ಮಟಗಳನ್ನು ಏರ್ಪಡಿಸಿ, ಓದಲೇಬೇಕಾದ ಪುಸ್ತಕಗಳ ರುಚಿ ಹಚ್ಚಿಸುತ್ತದೆ. ಕೈಕೆಲಸ, ಶ್ರಮದ ಕೆಲಸಗಳಿಂದ ಸಿಗುವ ಆನಂದ, ತನ್ಮಯತೆಯನ್ನು ತೋರಿಸಿಕೊಡುತ್ತದೆ. ಇದ್ಯಾವುದೂ ಭಾಷಣಗಳ ಮೂಲಕ ಬರೀ ವಿವರಣೆಯಾಗದೇ ಅನುಭವವಾಗಿ ದಕ್ಕುವಂತೆ ತನ್ನ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಹೀಗೆ ಬೌದ್ಧಿಕ ಮತ್ತು ಶ್ರಮದ ಕೆಲಸಗಳನ್ನು ಎಲ್ಲರೂ ಮಾಡುವಂತೆ ಬೆಸೆಯುತ್ತದೆ. ಇಲ್ಲಿರುವುದು ಪ್ರೀತಿಯ, ಎಲ್ಲರನ್ನೂ ಒಳಗೊಳ್ಳುವ ರಾಜಕಾರಣ. ಸಮಾನತೆ, ಸಹಬಾಳ್ವೆ, ಜೀವಪರವಾದ ಆಶಯಗಳನ್ನಿಟ್ಟುಕೊಂಡ ಎಲ್ಲರೂ ಇದರ ಸದಸ್ಯರಾಗಬಹುದು. ಸರಳವಾಗಿ, ಒಬ್ಬ ಒಕ್ಕೂಟದ ಗೆಳತಿ ಹೇಳಿದ ಹಾಗೆ, ಇರುವುದನ್ನು ಹಂಚಿಕೊಂಡು ಬಾಳುವುದು.

ಜೆಂಡರ್ ಅನ್ನುವುದು ಮನುಷ್ಯಕುಲದ ಮೂಲ ಮತ್ತು ಅತ್ಯಂತ ಹಳೆಯದಾದ ವಿಭಜನೆ. ಜಾತಿ, ಧರ್ಮ, ವರ್ಗಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಹೆಂಗಸರ ದೇಹ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮತ್ತು ಅವರ ನಡವಳಿಕೆಯ ಮೇಲಿನ ನಿಯಂತ್ರಣ ಒಂದು ಆಯುಧ. ಹಾಗೆಯೆ ಉಳಿದೆಲ್ಲ ವಿಭಜನೆಯ ಹೊಡೆದಾಟಕ್ಕೆ ಮತ್ತೆ ಹೆಂಗಸರ ದೇಹವೇ ಯುದ್ಧರಂಗ. ಹೀಗಿರುವಾಗ ಮಹಿಳಾ ಹೋರಾಟ, ಜಾತಿ, ವರ್ಗ ಮತ್ತು ಧರ್ಮದ ವಿಭಜನೆಯನ್ನು ಮುಖಾಮುಖಿಯಾಗದೇ ಇರುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದಲೇ ಇದು ಎಲ್ಲರನ್ನೂ ಒಳಗೊಳ್ಳುವ ಮತ್ತು ಉಳಿದೆಲ್ಲ ಶ್ರೇಣೀಕರಣಗಳ ವಿರೋಧವಾಗಿ ಕೆಲಸ ಮಾಡುವವರೂ ಬಂದು ಸೇರಿಕೊಳ್ಳಲೇಬೇಕಾದ ಒಂದು ಗಮ್ಯ.

ಅರಿವಿನ ಪಯಣ ಮಾಡಲು ಸ್ಕೂಲುಗಳಿಗೆ ಹೋದಾಗ, ನನಗೆ ಈ ವಿಷಯಗಳ ಬಗ್ಗೆ ಯೋಚಿಸುವ ಹಾಗಾಯಿತು.

ಮಕ್ಕಳಿಗಾಗಿಯೇ ಅರಿವಿನ ಪಯಣ ಮಾಡಲು ಮಾನಸಿಕ ತಯಾರಿ ಬೇಕು. ಎಮೊಶನಲ್ ಆಗದೇ ಸಹಜವಾಗಿ ಉತ್ತರಿಸುವುದಕ್ಕೆ ಸಿದ್ಧವಾಗುವುದು. (ಕೆಲವೊಮ್ಮೆ ಡೆಫೆನ್ಸಿವ್ ಆಗಿ ಪ್ರಶ್ನೆ ಕೇಳುವ 16, 17 ವರ್ಷದ ಹುಡುಗರಿಗೆ ಉತ್ತರಿಸಿದ ಅನುಭವ). ಅರಿವಿನ ಪಯಣ, ಸಂಘ ಸಂಸ್ಥೆಗಳಿಗೆ, ಸ್ವಸಹಾಯ ಗುಂಪು ಹೀಗೆ ನಮ್ಮ ಪರಿಸರದಲ್ಲೇ ಅವಕಾಶಗಳನ್ನು ಮಾಡಿಕೊಂಡರೆ ಈ ಕೆಲಸ ನಿರಂತರವಾಗಿ ಆಗುತ್ತದೆ. ಅದು ಹೆಚ್ಚು ಪ್ರಾಕ್ಟಿಕಲ್ ಅನ್ನಿಸಿತು. ಈ ಕಾರ್ಯಕ್ರಮ ಮಾಡುವಾಗ ನಾವು ತಜ್ಞ ಆಪ್ತ ಸಲಹೆಕಾರರ ಫೋನ್ ನಂಬರ್ ಇಟ್ಟುಕೊಳ್ಳಬೇಕೆನಿಸಿತು. ನನ್ನ ಸುತ್ತಮುತ್ತಲಿನ ಪರಿಸರದ ಹೆಂಗಸರು ತಮ್ಮದೇ ಮಿತಿಯಲ್ಲಿ ಕ್ರಿಯೇಟಿವ್ ಅಗಿ ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದು ನೋಡಿದ್ದೇನೆ. ಅಂತಹ ಉದಾಹರಣೆಗಳನ್ನು ನಾವು ಗಮನಿಸಿಕೊಳ್ಳುತ್ತಾ ಅದನ್ನು ಮುಂದಿನ ಪಯಣದಲ್ಲಿ ಉದಾಹರಣೆಯಾಗಿ ಸೇರಿಸಿಕೊಳ್ಳುತ್ತಾ ಹೋಗುವುದು ಬಹಳ ಮುಖ್ಯ ಎಂದು ನನಗನಿಸಿತು. ಹಾಗಾಗಿ ದೌರ್ಜನ್ಯದ ಬಗ್ಗೆ ಮಾತಾಡುವುದರ ಜೊತೆಗೆ ಲಿಂಗಭೇದದ ಅರಿವನ್ನು ಹೆಚ್ಚಿಸುವ ಕೆಲಸವನ್ನು ಕೇಂದ್ರವನ್ನಾಗಿ ಮಾಡಿಕೊಳ್ಳಬೇಕು. ಯಾವುದು ದೌರ್ಜನ್ಯ ಮತ್ತು ಯಾಕೆ ಇದು ದೌರ್ಜನ್ಯ ಎಂದು ಅರಿವಾದರೆ, ಅದರಿಂದ ಹೊರಬರುವುದಕ್ಕೆ ಅವರು ತಮ್ಮ ತಮ್ಮದೇ ಮಾರ್ಗಗಳನ್ನು ಅನುಸರಿಸಬಹುದು.

ಅತ್ಯಂತ ಆಳವಾದ ಲಿಂಗತಾರತಮ್ಯವಿರುವ ನಮ್ಮ ದೇಶದಲ್ಲಿ ಹೆಂಗಸರ ಕೆಲಸಗಳಿಗೆ ಕೊಲಾಬರೇಟ್ ಮಾಡಿಕೊಂಡು ಮುಂದುವರಿಯುವುದು ಎಷ್ಟು ಮುಖ್ಯ ಎನ್ನುವ ಅರಿವು ಈ ಪಯಣದಿಂದ ನಾನು ಕಲಿತ ಪಾಠ.

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ನಾನು ಅರ್ಧ ಹೆಣ್ಣು: ಕಿರಣ್ ಎಂ ಗಾಜನೂರ್

ಎರಡೂ ದಿನಗಳ ಈ ಯಶಸ್ವಿ ಮಹಿಳಾ ಸಮಾವೇಶದ ವೇದಿಕೆಯ ಮೇಲೆ ಮೊದಲ ಪುರುಷ ಮಾತನಾಡುತ್ತಿದ್ದಾನೆ ಎಂದು ನಿರೂಪಕಿ ಹೇಳಿದರು. ಆದರೆ ಚರಿತ್ರೆಯ ಪುಟಗಳಲ್ಲಿ ಮಹಾತ್ಮ ಗಾಂಧಿ ಒಮ್ಮೆ ತಮ್ಮನ್ನು ಅರ್ಧಹೆಣ್ಣು ಎಂದು ಕರೆದುಕೊಂಡಿದ್ದರು. ಕರ್ನಾಟಕದ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಜೊತೆ ಸತತ ಮೂರು ತಿಂಗಳು ಕೆಲಸ ಮಾಡಿರುವ ನಾನು ನನ್ನನ್ನು ಪುರುಷ ಎಂಬುದಕ್ಕೆ ಬದಲಾಗಿ "ಅರ್ಧಹೆಣ್ಣು" ಎಂದು ಕರೆದುಕೊಳ್ಳಲು ಬಯಸುತ್ತೇನೆ. ಏಕೆಂದರೆ ಅಷ್ಟರ ಮಟ್ಟಿಗಿನ ಲಿಂಗಸೂಕ್ಷ್ಮತೆಯನ್ನು, ಭಿನ್ನವಿದ್ದು ಬೆರೆತು ಬಾಳಬೇಕಾದ ಲೋಕದೃಷ್ಟಿಯನ್ನು ನನಗೆ ಈ ಮೂರು ತಿಂಗಳ ಅನುಭವ ಕಟ್ಟಿಕೊಟ್ಟಿದೆ.

ಶಿವಮೊಗ್ಗದಲ್ಲಿ ನಾನು ಇವರ ಜೊತೆ ಮಾಡಿದ ಕೆಲಸದಿಂದ ನಾನು ಕಲಿತ ಮಹತ್ವದ ಪಾಠಗಳು ಏನು? ಎಂದು ಯೋಚಿಸಿದರೆ ನನಗೆ ಅತ್ಯಂತ ಸ್ಪಷ್ಟವಾಗಿ ಸಿಗುವ ಉತ್ತರ "ನನ್ನೊಳಗೆ ನನ್ನ ಅರಿವಿಗೆ ಬಾರದಂತೆ ಹುದುಗಿದ್ದ, ಆಗಾಗ ವ್ಯಕ್ತವಾಗುತ್ತಿದ್ದ ಲಿಂಗ ಅಸೂಕ್ಷ್ಮತೆಯನ್ನು ಗುರುತಿಸಿಕೊಳ್ಳಲು ಸಾಧ್ಯವಾಗಿದ್ದು" ಎಂಬುದನ್ನು ಮುಕ್ತವಾಗಿ ನಾನು ಹೇಳಬಲ್ಲೆ. ವ್ಯಕ್ತಿಯ ಅರಿವನ್ನು ತಿದ್ದುವ ಯಾವ ಸಂಗತಿಯೂ ಸಣ್ಣದ್ದಲ್ಲವಾದ್ದರಿಂದ ನನ್ನೊಳಗೆ ಆದ ತಿಳಿವಿನ ವಿಸ್ತರಣೆಗೆ ನಾನು ಒಕ್ಕೂಟಕ್ಕೆ ಅಭಾರಿಯಾಗಿದ್ದೇನೆ.

ನಿನ್ನೆ ಮಾತನಾಡುತ್ತಾ ನಿಶಾ ಗೂಳೂರು ಅವರು "ಸೊಂಟದ ಕೆಳಗೆ ಯಾವ ಅಂಗವಿದೆ ಎಂಬ ಸಂಗತಿ ಅಷ್ಟೆ ನಿನ್ನನ್ನು ಮಹಿಳೆ/ಪುರುಷ ಎಂದು ನಿರ್ಧರಿಸಿಬಿಡುವುದಿಲ್ಲ! ಬದಲಾಗಿ ನಿನ್ನ ತಲೆಯಲ್ಲಿ ಯಾವ ವಿಚಾರ ತುಂಬಿದೆ ಎಂಬ ಅಂಶ ನಿನ್ನನ್ನು ಸಮಸಮಾಜದ ಕನಸನ್ನು ಹೊತ್ತ ಪ್ರಜೆಯಾಗಿ ರೂಪಿಸುತ್ತದೆ ಎಂದು ಹೇಳಿದ್ದು ಸಾಂಪ್ರದಾಯಿಕ ಸಮಾಜದಲ್ಲಿ ಹುಟ್ಟಿ ಬೆಳೆದು ಪುರುಷನಾಗಿ ರೂಪುಗೊಂಡ ನನ್ನನ್ನು ಕದಲಿಸಿದ ಮಾತುಗಳಾಗಿದ್ದವು!

ಹಾಗಾಗಿ ಒಟ್ಟು ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದಿಂದ ಸಾರ್ವತ್ರಿಕವಾಗಿ ಆದ ಬದಲಾವಣೆಗಿಂತ ವ್ಯಕ್ತಿಗತವಾಗಿ ನನ್ನೊಳಗೆ ಆದ ಬದಲಾವಣೆ ಮಹತ್ವದ್ದು ಅನ್ನಿಸುತ್ತದೆ ನನಗೆ. ಇದರ ಆಚೆಗೆ ಅರಿವಿನ ಪಯಣದಲ್ಲಿ ನಾವು ಸುಮಾರು 20000 ಮಕ್ಕಳನ್ನು ತಲುಪಿದ್ದು ಮಹತ್ವದ ಕೆಲಸ ಅನ್ನಿಸುತ್ತದೆ. ಸಾಂಪ್ರದಾಯಿಕ ಸಮಾಜದ ಭಾಗವಾಗಿ ಬೆಳೆದು ನನ್ನೊಳಗಿದ್ದ ಗಂಡು ಭಾವದ ಕುರಿತು ಆತ್ಮವಿಮರ್ಶೆಯನ್ನು ಮಾಡಿಕೊಳ್ಳುವ ಮಹತ್ವದ ಅವಕಾಶವನ್ನು ಒಕ್ಕೂಟ ಒದಗಿಸಿದ್ದಕ್ಕೆ ನಾನು ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

*(ಪ್ರಸ್ತುತ ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯದಲ್ಲಿ ರಾಜ್ಯಶಾಸ್ತ್ರ ಪ್ರಾಧ್ಯಾಪಕರು)*

❖

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಭದ್ರಾವತಿಯಲ್ಲಿ ಅರಿವಿನ ಪಯಣ: ಡಾ. ವೀಣಾ ಭಟ್

**ನೊಂ**ದ ಹಾಗೂ ಶೋಷಿತ ಮಹಿಳೆಯರ ಮತ್ತು ಮಹಿಳಾಪರ ಮನಸ್ಸುಗಳ ದನಿಯಾಗಿ 2012ರಲ್ಲಿ ಮೈದಳೆದ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಅಸ್ತಿತ್ವದ ಹಾಗೂ ಕಾರ್ಯಚಟುವಟಿಕೆಗಳ ಬಗ್ಗೆ ಗೆಳತಿ ಡಾ॥ ಹೆಚ್.ಎಸ್ ಅನುಪಮಾ ಅವರಿಂದ ಕಾಲಕಾಲಕ್ಕೆ ತಿಳಿಯುತ್ತಿದ್ದರೂ, ಬಿಡುವಿಲ್ಲದ ವೃತ್ತಿಜೀವನ ಹಾಗೂ ಕೌಟುಂಬಿಕ ಕಾರಣಗಳಿಂದ ಈ ಹಿಂದಿನ ಒಕ್ಕೂಟದ ಸಮಾವೇಶಗಳಲ್ಲಿ ಸಕ್ರಿಯವಾಗಿ ನನಗೆ ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಈ ಬಾರಿ ಒಕ್ಕೂಟದ ಸಮಾವೇಶವು ಶಿವಮೊಗ್ಗದಲ್ಲಿ ನಡೆಯುತ್ತಿದೆ ಎಂದು ತಿಳಿದು ಖುಷಿ ಪಡುತ್ತಿದ್ದಾಗಲೇ ಡಾ॥ ಅನುಪಮಾ ದೂರದ ಚಂಡಿಗಡ್‌ನಿಂದ ಮಗಳ ಎಂಟ್ರೆನ್ಸ್ ಪರೀಕ್ಷೆಗೆ ಜೊತೆಯಾಗಿ ಹೋಗಿದ್ದಾಗ ಅಲ್ಲಿಂದಲೇ ದೂರವಾಣಿ ಮುಖಾಂತರ ಭದ್ರಾವತಿಯಲ್ಲಿ ಅರಿವಿನ ಪಯಣದ ಪುಸ್ತಕ ಬಿಡುಗಡೆಯ ಬಗ್ಗೆ ತಿಳಿಸಿದರು. 2017 ನವೆಂಬರ್ 29ರಂದು ಪೇಪರ್‌ಟೌನ್ ಕನ್ನಡ ಪ್ರೌಢಶಾಲೆಯಲ್ಲಿ ಒಕ್ಕೂಟದ ಸಂಗಾತಿಗಳಾದ ನಾಗವೇಣಿ ಹಾಗೂ ಅಡ್ವೋಕೇಟ್ ಗೀತಾರೊಂದಿಗೆ ಅರಿವಿನ ಪಯಣ ಪುಸ್ತಕದ ಬಿಡುಗಡೆ ಭದ್ರಾವತಿಯಲ್ಲಿ ಮಾಡುವ ಅವಕಾಶ ಸಿಕ್ಕಿತು. ಸಾಕಷ್ಟು ಶಾಲಾ–ಕಾಲೇಜುಗಳಲ್ಲಿ ಹದಿಹರೆಯದ ಸಮಸ್ಯೆಗಳ ಬಗ್ಗೆ ಮಾಹಿತಿ ಕಾರ್ಯಕ್ರಮಗಳನ್ನು ಕೊಟ್ಟ ಅನುಭವವಿದ್ದರೂ "ಅರಿವಿನ ಪಯಣ" ಕೈಪಿಡಿಯನ್ನು ಓದಿದಾಗ ಒಂದು ಹೊಸ ಅನುಭವ ಉಂಟಾಯಿತು. ಶಿಕ್ಷಕರಾಗಿ, ವೈದ್ಯರಾಗಿ ಬರೀ ದೈಹಿಕ, ಮಾನಸಿಕ ಬದಲಾವಣೆಗಳು, ಮುಟ್ಟಿನ ಸಮಯದಲ್ಲಿ ಸ್ವಚ್ಛತೆ, ಒಳ್ಳೆಯ ಸ್ಪರ್ಶ, ಕೆಟ್ಟಸ್ಪರ್ಶ ಇತ್ಯಾದಿಗಳ ಬಗೆಗಷ್ಟೇ ಈ ಹಿಂದಿನ ಅರಿವಿನ ಕಾರ್ಯಕ್ರಮಗಳಲ್ಲಿ ಹೇಳಲಾಗುತ್ತಿತ್ತು. ಆದರೆ ಅರಿವಿನಪಯಣದ ಕೈಪಿಡಿಯಲ್ಲಿ ಒಬ್ಬ ಮಹಿಳೆಯ ನಿಜವಾದ ಆಂತರಿಕ ಸೌಂದರ್ಯವೆಂದರೇನು? ಪೋಕ್ಸೋ ಕಾಯಿದೆ ಬಗ್ಗೆ, ನಮಗಾಗುತ್ತಿರುವ ದೌರ್ಜನ್ಯಗಳ ಬಗ್ಗೆ, ಭಯವಿಲ್ಲದೆ ಹೇಳಿಕೊಳ್ಳುವ ಬಗೆಗೆ (ಮೀಟೂ), ಬಾಲ್ಯವಿವಾಹದ ತೊಂದರೆಗಳ ಬಗ್ಗೆ, ಮೆರಿಟ್ ಅಂದರೇನು ಮುಂತಾದ ಹಲವು ವಿಷಯಗಳ ಬಗ್ಗೆ ಗಮನಸೆಳೆಯುವ, ಅತ್ಯಂತ ಮಾಹಿತಿಪೂರ್ಣ ವಿವರಗಳನ್ನು ಓದಿದಾಗ ಒಂದು ಬಾರಿ ರೋಮಾಂಚನವಾಯಿತು. ಇದು ಹಲವರ ಅನುಭವವೂ ಆಗಬೇಕೆಂದು ತುಂಬಾ ಉತ್ಸಾಹದಿಂದ ಹಲವಾರು ಶಾಲಾ–ಕಾಲೇಜುಗಳಿಗೆ ಒಕ್ಕೂಟದ ಸಂಗಾತಿಗಳಾದ ನಾಗವೇಣಿ ಹಾಗೂ ಗೀತಾರ ಸಹಾಯದಿಂದ ಅರಿವಿನ ಪಯಣದಲ್ಲಿ ಪಾಲ್ಗೊಂಡೆವು. ಈ "ಅರಿವಿನ ಪಯಣ" ಪುಸ್ತಕ ಕೈಸೇರಿದ ಮೇಲೆ ನಮ್ಮ ಪಯಣದ ಹೆಜ್ಜೆಗಳು ಗಟ್ಟಿಯಾಗಿ ಮೂಡಿಸಲು ಸಾಧ್ಯವಾಯಿತು ಎನ್ನಬಹುದು. ಭದ್ರಾವತಿಯಲ್ಲಿ ಸಾವಿರಗಟ್ಟಲೆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಪುಸ್ತಕಗಳನ್ನು ಮಾರಾಟ ಮಾಡಿದ್ದು ಆಯಿತು.

ಎಲ್ಲಕ್ಕಿಂತ ನೆನಪಿನಂಗಳದಲ್ಲಿ ಅಚ್ಚೊತ್ತಿ ನಿಂತಿರುವುದು ಒಕ್ಕೂಟದ ಸಂಗಾತಿಗಳು ಸರ್ ಎಂ. ವಿ ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ನಡೆಸಿಕೊಟ್ಟ ಅರಿವಿನ ಪಯಣ ಕಾರ್ಯಕ್ರಮ. ವಾಣಿ, ಗೌರಿ, ಕಿರಣ್ ಗಾಜನೂರು, ದು. ಸರಸ್ವತಿ, ರೇಖಾಂಬ ಇನ್ನಿತರರ ಜೊತೆಗೆ ಹೇಳಿದ "ಮುಟ್ಟು ಮುಟ್ಟೆಂದೇಕೆ ಕೀಳಾಗಿ ಕಾಣುವಿರಿ? ಮುಟ್ಟಲ್ಲವೇ ನಮ್ಮ ಸೃಷ್ಟಿಯ ಗುಟ್ಟು" ಎಂಬ ಹಾಡು ಮತ್ತು "ಆಕೆಗೊಂದು ತರ, ಅವನಿಗೊಂದು ತರ ಯಾಕೆ ಮಾಡಿದರೋ ಕಾಣೆ/ಯಾಕೆ ಮಾಡಿದರೋ ಕಾಣೆ ಶಿವನೇ ಯಾರು ಮಾಡಿದರೋ ಕಾಣೆ" ಎಂದಾಗಲಂತೂ ನಮಗೆಲ್ಲಾ ಎದ್ದು ಕುಣಿಯುವ ಹಾಗಾಯಿತು. ವಿದ್ಯಾರ್ಥಿಗಳಿಂದಲೂ ಅತ್ಯುತ್ತಮ ಪ್ರತಿಕ್ರಿಯೆ ದೊರೆತವು. ನಂತರ ದು. ಸರಸ್ವತಿಯವರು 'ಸ್ವಗತ' ಅಭಿನಯದಲ್ಲಿ ಮಗಳ ರಿಬ್ಬನ್ ಕಥೆ ವಿವರಿಸುತ್ತಾ ತನ್ನ ಬಾಲ್ಯದ ಘಟನೆಗಳನ್ನು ವಿವರಿಸುತ್ತಾ ಒಬ್ಬ ಮಹಿಳೆ ತನ್ನ ಭಾವನೆಗಳನ್ನು ಅಭಿವ್ಯಕ್ತಿಸುವಲ್ಲಿ ಸಮಾಜದಿಂದುಂಟಾಗುವ ತೊಡಕುಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟರು. ಮಹಿಳೆಯರು ತಲೆತಗ್ಗಿಸಿ, ಎದೆ ಮುದುರಿಕೊಂಡು ನಡೆಯಬೇಕಾದ ಅನಿವಾರ್ಯತೆಗಳು, ಸಂಬಂಧಿಕರು, ಪರಿಚಯಸ್ತರಿಂದಲೇ ಮಹಿಳೆಯರಿಗಾಗುವ ದೌರ್ಜನ್ಯಗಳನ್ನು ತಮ್ಮ ಅಭಿನಯದ ಮೂಲಕ ತೆರೆದಿಟ್ಟರು. ಬದುಕಿನಲ್ಲಾಗುವ ಘಟನೆಗಳನ್ನು, ದೌರ್ಜನ್ಯಗಳನ್ನು ಧೈರ್ಯವಾಗಿ ಹೇಳಿಕೊಳ್ಳಬೇಕು (ಮೀಟೂ). ಮತ್ತು ಪ್ರತಿ ಹೆಣ್ಣುಮಗಳು ಬೆದರಿ ಎದೆಮುದುರಿಕೊಳ್ಳದೆ ತಲೆಯೆತ್ತಿ ಧೈರ್ಯವಾಗಿ ಮುನ್ನಡೆಯಬೇಕು. ಗಾಳಿ, ಬೆಳಕು, ನೀರಿಗೆ ಒಡ್ಡಿಕೊಂಡು ಸ್ವತಂತ್ರಳಾಗಿ ಬೆಳೆಯಬೇಕು. ಮೊಗ್ಗಾಗಿ ಹೂವಾಗಿ ಸಂಪೂರ್ಣ ಅರಳಬೇಕು ಎಂದು ದು. ಸರಸ್ವತಿಯವರು ಸ್ವಗತವನ್ನು ಮುಗಿಸಿದಾಗ ನನಗಂತೂ ಇದೊಂದು ಅತ್ಯಂತ ಪರಿಣಾಮಕಾರಿಯಾದ ಅರಿವಿನ ಪಯಣವೆಂದೆನಿಸಿತು. ಅದು ಅಭಿಪ್ರಾಯ ಕೂಡ. ರೇಖಾಂಬ, ವಾಣಿ, ದು. ಸರಸ್ವತಿ, ಕಿರಣ್ ಗಾಜನೂರು ಹಾಗೂ ಇನ್ನಿತರ ಒಕ್ಕೂಟದ ಸಂಗಾತಿಗಳು ನಡೆಸಿಕೊಟ್ಟಷ್ಟು ಪರಿಣಾಮಕಾರಿಯಾಗಿ ಅರಿವಿನ ಪಯಣ ನಮಗೆ ಮಾಡಲು ಸಾಧ್ಯವಾಗದಿದ್ದರೂ ನಮ್ಮ ಶಕ್ತಿಮೀರಿ ಭದ್ರಾವತಿಯಲ್ಲಿ ಅರಿವಿನ ಪಯಣದಲ್ಲಿ ತೊಡಗಿಸಿಕೊಂಡೆವು. ಮಾರ್ಚ್ 1ರಂದು ಒಕ್ಕೂಟದ ಸಂಗಾತಿಗಳು ಹಾಗೂ ಜನಶಕ್ತಿ ವೇದಿಕೆಯಿಂದ ರಂಗಪ್ಪ ವೃತ್ತದಲ್ಲಿ "ಬಿಳಿ ಉಡುಗೆಯಲ್ಲಿ ಮಹಿಳೆಯರು ಮೌನಜಾಗೃತಿ" ಕಾರ್ಯಕ್ರಮದಲ್ಲಿ ಸಂಗಾತಿಗಳಾದ ಗೀತಾ ಹಾಗೂ ನಾಗವೇಣಿಯವರೊಂದಿಗೆ ಸಕ್ರಿಯವಾಗಿ ಭಾಗವಹಿಸಲು ಅವಕಾಶ ಸಿಕ್ಕಿತು. ಅದಕ್ಕಾಗಿ ಪೂರ್ವಭಾವಿ ಸಭೆಯು ಕೂಡ ನಮ್ಮ ಮನೆಯಲ್ಲಿ ನಡೆದಾಗ ದು. ಸರಸ್ವತಿ, ವಾಣಿ, ಗೌರಿ, ಕಿರಣ್ ಗಾಜನೂರು, ಮಾಯಣ್ಣ, ರಾಜು ಇನ್ನಿತರರ ಒಡನಾಟ ತುಂಬಾ ಖುಷಿಕೊಟ್ಟ ವಿಷಯವಾಯಿತು.

ಶಿವಮೊಗ್ಗ ಪತ್ರಿಕಾ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಹಲವಾರು ಒಕ್ಕೂಟದ ಸಂಗಾತಿಗಳ ಪರಿಚಯ ಹಾಗೂ ಅವರ ಕಾರ್ಯವೈಖರಿಯ ಬಗ್ಗೆ ಸಂತೋಷವೂ ಆಯಿತು. ಮಾರ್ಚ್ 1ರಂದು ಸೂರ್ಯಾಸ್ತವಾಗುತ್ತಿದ್ದಂತೆ ಭದ್ರಾವತಿಯ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ರಂಗಪ್ಪ ವೃತ್ತದಲ್ಲಿ ನೂರಾರು ಮಹಿಳೆಯರು ಬಿಳಿ ಉಡುಗೆಯಲ್ಲಿ ಮುಂಬತ್ತಿಯನ್ನು ಹಿಡಿದು ಮೌನವಾಗಿ ನಿಂತಿದ್ದರು. ಆ ಕಾರ್ಯಕ್ರಮದಲ್ಲು ಹಲವು ಮಹಿಳಾಪರ ಮನಸ್ಸುಗಳು, ಪುರುಷರು ಸೇರಿ ಕಾರ್ಯಕ್ರಮ ಚೆನ್ನಾಗಿ ಮೂಡಿಬಂದು ಸಾರ್ವಜನಿಕರ ಮನಸೆಳೆಯಲು ಸಹಕಾರಿಯಾಯಿತು. "ಸಮತೆಯೆಡೆಗೆ ನಮ್ಮ ನಡಿಗೆ" ಎಂಬ ವಾಟ್ಸ್‌ಆಪ್ ಗ್ರೂಪ್ ಜನವರಿ 14ರಂದು ಹುಟ್ಟುಹಾಕಲ್ಪಟ್ಟು ಜಿಲ್ಲಾದ್ಯಂತ ನಡೆಯುವ ಅರಿವಿನ ಪಯಣ ಹಾಗೂ 'ಅರಿವಿನ ಅವ್ವನ ದೊಂದಿ ಹಿಡಿದು' ಕಾರ್ಯಕ್ರಮಗಳ ವರದಿಯಾಗುತ್ತಿದ್ದದ್ದು ಎಲ್ಲರನ್ನು ಹುರಿದುಂಬಿಸುತ್ತಿತ್ತು. ಜನವರಿ 18ರಂದು ಜೈಭೀಮ ನಗರದಲ್ಲಿ ಒಕ್ಕೂಟದ ಸಂಗಾತಿಗಳು ನಡೆಸಿಕೊಟ್ಟ 'ಅರಿವಿನ ಅವ್ವನ ದೊಂದಿ ಹಿಡಿದು' ಕಾರ್ಯಕ್ರಮದಲ್ಲಿ ಯಾವ ರೀತಿ ಶೋಷಿತರ, ದಮನಿತರ ಹಾಗೂ ಜನಸಾಮಾನ್ಯರೊಂದಿಗೆ ಸಂಗಾತಿಗಳೆಲ್ಲಾ ಜೊತೆ–ಜೊತೆಯಾಗಿ ಹೇಗೆ ಸಮಸ್ಯೆಗಳ ಅರಿವು ಮೂಡಿಸುತ್ತಾರೆ ಎಂದು ಕಣ್ತೆರೆಯಿತು. ಗೆಳತಿ ಡಾ॥ ಸಬಿತಾ ಬನ್ನಾಡಿ ಹಾಗೂ ರೇಖಾಂಬರವರು ಆಗಾಗ್ಗೆ ಫೋನ್ ಮಾಡಿ ಒಕ್ಕೂಟದ ಕೆಲಸಗಳಲ್ಲಿ ಸಹಭಾಗಿಯಾಗಲು ಉತ್ತೇಜನ ನೀಡುತ್ತಿದ್ದರು. ಮಾರ್ಚ್ 8ರಂದು ಅಂಬೇಡ್ಕರ್ ಭವನದ ಗೌರಿಲಂಕೇಶ್ ವೇದಿಕೆಯಲ್ಲಿ ಕಿಕ್ಕಿರಿದ ಸಭಾಂಗಣದಲ್ಲಿ ನಡೆದ ಮಹಿಳಾ ಸಮಾವೇಶ ನಿಜವಾದ ಅರ್ಥದಲ್ಲಿ ಮಹಿಳಾ ಚೈತನ್ಯದಿನವಾಯಿತು. ಡಾ॥ ಸಬಿತಾ ಬನ್ನಾಡಿಯವರ ಹುರಿದುಂಬಿಸುವ ಆಶಯ ನುಡಿ, ಉದ್ಘಾಟಕರಾದ ಸ. ಉಷಾರವರ ಉದ್ಘಾಟನಾ ಭಾಷಣ ಎಲ್ಲವೂ ಅತ್ಯುತ್ತಮ. ಮನಿಷಾ ಗುಪ್ತೆಯ ದಿಕ್ಸೂಚಿ ಭಾಷಣದಲ್ಲಿ ಮಹಿಳೆಯ ಮುಂದಿರುವ ಸವಾಲುಗಳ ಬಗ್ಗೆ ನಿಜವಾದ ಅರ್ಥದಲ್ಲಿ ಮಹಿಳಾ ಚಳುವಳಿಗೆ, ಶೋಷಿತ ದನಿಯಾಗುವುದು ಹೇಗೆ ಎಂದು ಅತ್ಯಂತ ಪರಿಣಾಮಕಾರಿಯಾಗಿ ವಿವರಿಸಿ ಎಲ್ಲರ ಮನ ಗೆದ್ದರು. ವಿನಯ ಒಕ್ಕುಂದರವರ ಸಂವಿಧಾನ ಮತ್ತು ಮಹಿಳೆಯ ವಿಚಾರ ಸಂಕಿರಣದಲ್ಲಿ ಪ್ರತಿಕ್ರಿಯೆ ನೀಡಲು ಅವಕಾಶವೂ ಸಿಕ್ಕಿತ್ತು. ಒಟ್ಟಾರೆ ಎಲ್ಲರೂ ಕ್ರಿಯಾಶೀಲರಾಗಿ ಒಟ್ಟಿಗೆ ಭಾಗವಹಿಸುವ ಅವಕಾಶ ಒದಗಿದ್ದು ಸಂತೋಷದ ಸಂಗತಿ. ಮಾರನೆಯ ದಿನ ನೆಹರು ಮೈದಾನದಲ್ಲಿ ನಡೆದ ಜಾಥಾದಲ್ಲಿ ವೃತ್ತಿಯ ಕಾರಣವಾಗಿ ಭಾಗವಹಿಸಲು ಸಾಧ್ಯವಾಗದೇ ಇದ್ದರೂ ಗೆಳತಿಯರಿಂದ ಅದರ ಯಶಸ್ಸಿನ ಬಗ್ಗೆ ತಿಳಿಯಿತು.

ಇನ್ನೂ ಹೆಚ್ಚಿನ ಕಡೆ ಅರಿವಿನ ಕೊರತೆ ಇರುವುದರಿಂದ ಶಿವಮೊಗ್ಗದಲ್ಲಿ ನಡೆದ ಅರಿವಿನ ಪಯಣ ನಿರಂತರ ಪಯಣವಾಗಬೇಕು. ಇದಕ್ಕೆ ಎಲ್ಲಾ ಮಹಿಳಾಪರ ಮನಸ್ಸುಗಳು ಒಕ್ಕೂಟದ ಸಂಗಾತಿಗಳೊಂದಿಗೆ ಕೈಜೋಡಿಸಲೇಬೇಕು.

*(ಸ್ತ್ರೀರೋಗತಜ್ಞರು, ನಯನ ಆಸ್ಪತ್ರೆ, ಭದ್ರಾವತಿ.)*

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ನನ್ನ ಅರಿವು ಬೆಳೆಸಿದ ಅರಿವಿನ ಪಯಣ: ಪವಿತ್ರ ಜ್ಯೋತಿಗುಡ್ಡೆ

**ಒ**ಕ್ಕೂಟ ಅಂದ ತಕ್ಷಣ ನನಗೆ ಹೆಚ್ಚು ಆಪ್ತ ಅನಿಸುವುದು ಅರಿವಿನ ಪಯಣ; ಮಾನವೀಯ ಮೌಲ್ಯಗಳನ್ನು ಬಹಳ ಸೂಕ್ಷ್ಮವಾಗಿ ಬಿತ್ತುವಂತಹ ಕಾರ್ಯಕ್ರಮ ಅರಿವಿನ ಪಯಣ. ಅರಿವು ನೀಡುವ ಪ್ರಕ್ರಿಯೆಯಲ್ಲಿ ನನ್ನ ಒಳಗಿನ ಅರಿವನ್ನು ಬೆಳೆಸಿದ ಕಾರ್ಯಕ್ರಮ ಅರಿವಿನ ಪಯಣ. ನಾನು ಇದರಲ್ಲಿ ಹೆಚ್ಚಾಗಿ ನನ್ನನ್ನು ತೊಡಗಿಸಿಕೊಂಡದ್ದು ಶಿವಮೊಗ್ಗದ ಸಮಾವೇಶದ ಸಂದರ್ಭದಲ್ಲಿ. ಇದು ನನ್ನ ಪಾಲಿಗೆ ಬಹಳ ಸುಂದರ ಪಯಣವೇ ಆಗಿತ್ತು.

ಈ ಕಾರ್ಯಕ್ರಮದ ಸ್ವರೂಪ ಬಹಳ ಚೆನ್ನಾಗಿ ರೂಪುಗೊಂಡಿತ್ತು. ಹೆಚ್ಚಾಗಿ ಶಾಲಾ, ಕಾಲೇಜು ಮಕ್ಕಳಿಗೆ ಈ ಕಾರ್ಯಕ್ರಮವನ್ನು ನಡೆಸುತ್ತಾ ಬಂದಿದ್ದೇವೆ. ಈ ಕಾರ್ಯಕ್ರಮವನ್ನು ಒಂದು ಗಂಟೆಯಿಂದ ಸುಮಾರು ಒಂದುವರೆ ಗಂಟೆಗಳ ಕಾಲ ನಡೆಸುತ್ತಿದ್ದೆವು. ಮೊದಲಿಗೆ ಒಕ್ಕೂಟದ ಪರಿಚಯ ಹಿನ್ನೆಲೆಯೊಂದಿಗೆ ಆರಂಭಿಸಿ ಬಳಿಕ ಲಿಂಗ ತಾರತಮ್ಯ, ಆಂತರಿಕವಾಗಿ ನಮ್ಮನ್ನು ನಾವು ಚಂದ ಮಾಡುವುದರ ಕುರಿತು, ಲೈಂಗಿಕ ದೌರ್ಜನ್ಯದ ಕುರಿತಾಗಿ ನೀಲಿರಿಬ್ಬನ್ ನಾಟಕ ಮತ್ತು ಚರ್ಚೆ, ಮುಟ್ಟಿನ ಕುರಿತಾಗಿ ಹಾಡು, ಚರ್ಚೆ, ಬೆವರಿನ ಮಹತ್ವ, ಪೌರಕಾರ್ಮಿಕರ ಕೆಲಸದ ಮಹತ್ವ, ಕೊನೆಗೆ ಹಾಡು, ಬಳಿಕ ಮಕ್ಕಳ ಅಭಿಪ್ರಾಯ ಹಂಚಿಕೆಯೊಂದಿಗೆ ಕಾರ್ಯಕ್ರಮ ಮುಗಿಸುತ್ತಿದ್ದೆವು. ಒಟ್ಟಾರೆಯಾಗಿ ಕಾರ್ಯಕ್ರಮದಲ್ಲಿ ಮಾನವೀಯ ಮೌಲ್ಯಗಳ ಬಗ್ಗೆ ಮಾತಾಡಿಕೊಳ್ಳುತ್ತಾ ಜೊತೆಗೆ ಸಂವಾದದ ಮೂಲಕ ಅರಿವನ್ನು ಕಂಡುಕೊಳ್ಳುವುದೇ ನಮ್ಮ ಕಾರ್ಯಕ್ರಮದ ವಿಶೇಷತೆಯಾಗಿತ್ತು.

ಈ ಪ್ರಕ್ರಿಯೆಯಲ್ಲಿ ನಾವು ನಮ್ಮ ತಂಡದಲ್ಲೇ ಸುಮಾರು 5000ಕ್ಕೂ ಹೆಚ್ಚಿನ ಮಕ್ಕಳನ್ನು ತಲುಪಿರಬಹುದು. ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ಬಹಳ ಪ್ರೀತಿಯಿಂದ ಒಂದು ತಂಡವಾಗಿ ನಮ್ಮ ಕೆಲಸದಲ್ಲಿ ತುಂಬಾ ಕುಶಿ ಪಟ್ಟಿದ್ದೇವೆ.

ನಾನು ಈ ಪಯಣದಲ್ಲಿ ಲೈಂಗಿಕ ದೌರ್ಜನ್ಯದ ಕುರಿತಾಗಿ ಇರುವಂತಹ ನೀಲಿರಿಬ್ಬನ್ ನಾಟಕವನ್ನು ಮಾಡುತ್ತಾ ಇದ್ದೆ. ರಂಗಭೂಮಿಯ ವಿಶೇಷ ಅನುಭವವೇನೂ ನನಗಿಲ್ಲ. ನನಗೆ ತಿಳಿದಂತೆ ಮಾಡುತ್ತಿದ್ದೆ. ನನಗೆ ಸಿಕ್ಕಿದ ಪ್ರೀತಿಯ ಬೆಂಬಲ ಅಷ್ಟಿಷ್ಟಲ್ಲ. ನಾಟಕ ಮಾಡುತ್ತಾ ಮಾಡುತ್ತಾ ಮಾನಸಿಕವಾಗಿ ತುಂಬಾ ಧೈರ್ಯ ಬೆಳೆಯುತ್ತಿರುವ ಹಾಗೆ ಅನಿಸಿದೆ. ನಾನು ನಾಟಕ ಮಾಡುವಂತಹ ಸಂದರ್ಭದಲ್ಲಿ ಮಕ್ಕಳ ಮುಖದಲ್ಲಿ, ಕಣ್ಣುಗಳಲ್ಲಿ ಅವರು ಹೇಳದೇ ಇದ್ದಂತಹ ನೋವುಗಳು ಇಣುಕುತ್ತಿದ್ದವು. ನಾಟಕ ನೋಡಿ ಅದೆಷ್ಟೋ ಹೆಣ್ಣು ಮಕ್ಕಳು ಕಣ್ಣು ತುಂಬಿಕೊಳ್ಳುತ್ತಿದ್ದರೆ ಅದೆಷ್ಟೋ ಗಂಡು ಮಕ್ಕಳು ತಲೆಯನ್ನು ತಗ್ಗಿಸಿ, ನೋಡಿಯೂ ನೋಡದಂತೆ ಇರುತ್ತಿದ್ದರು. 'ಅಯ್ಯೋ' ಎನಿಸುತ್ತಿತ್ತು. ನಾಟಕ ನೋಡಿದ ಮೇಲೆ ಅನೇಕರು ಇಂತಹ ಸಮಸ್ಯೆಯನ್ನು ಧೈರ್ಯವಾಗಿ ಎದುರಿಸಬೇಕಾದ ಕುರಿತು ಮಾತಾಡುವಾಗ, ಅವರ ಕಣ್ಣುಗಳಲ್ಲಿ ಒಂದು ಭರವಸೆಯ ಕಿಡಿ ಕಂಡಾಗ,

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ನಮ್ಮ ಪಯಣ ಸಾರ್ಥಕ ಅನಿಸುತ್ತಿತ್ತು. ಕಾರ್ಯಕ್ರಮದ ಬಳಿಕ ಮಕ್ಕಳು ಅದೆಷ್ಟು ಸಂಭ್ರಮದಿಂದ ಬಂದು ನಮ್ಮನ್ನು ಮುತ್ತಿಕೊಳ್ಳುತ್ತಿದ್ದ ಚಿತ್ರಣ ಹಾಗೇ ಉಳಿದಿದೆ. ಒಂದು ಕ್ಷಣಕ್ಕೂ ನೀಲಿ ರಿಬ್ಬನ್ ನಾಟಕ ಮಾಡುವುದಕ್ಕೆ ನನಗೆ ಬೇಸರ ಅನಿಸಲೇ ಇಲ್ಲ. ಅದೆಷ್ಟು ಸಾರಿ ಮಾಡಿದೆನೋ.. ನನಗೇ ಗೊತ್ತಿಲ್ಲ.

ಒಮ್ಮೆ ಒಂದು ಶಾಲೆಯಲ್ಲಿ ಕಾರ್ಯಕ್ರಮದ ಸಂದರ್ಭದಲ್ಲಿ ಒಂದು ಪುಟ್ಟ ಬಾಲಕ ಜೋರಾಗಿ ಅತ್ತುಕೊಳ್ಳುತ್ತಾ, “ನಾನು ಮತ್ತು ನನ್ನ ಅಮ್ಮ ಮಾತ್ರ ನಮ್ಮ ಮನೆಯಲ್ಲಿ ಇದ್ದೇವೆ. ನನ್ನ ಅಮ್ಮನ ಬಗ್ಗೆ ಊರಲ್ಲಿ ಏನೆಲ್ಲಾ ಹೇಳಿ ನೋವು ಕೊಡ್ತಾರೆ, ನನಗೂ ತುಂಬಾ ನೋವಾಗ್ತ ಇತ್ತು, ಆದರೆ ಇನ್ನು ಮುಂದೆ ಅಮ್ಮನನ್ನು ತುಂಬಾ ಪ್ರೀತಿಯಿಂದ ಚೆನ್ನಾಗಿ ನೋಡಿಕೊಳ್ಳುತ್ತೇನೆ” ಎಂದು ಹೇಳಿಕೊಂಡಾಗ ಎಲ್ಲರ ಕಣ್ಣುಗಳಲ್ಲಿ ನೀರು ತುಂಬಿತ್ತು. ಆ ಒಂದು ಕ್ಷಣ ಇಡೀ ತರಗತಿಯಲ್ಲಿ ಪ್ರೀತಿ ಸಹಾನುಭೂತಿ ತುಂಬಿದ ಮೌನ ಆವರಿಸಿತ್ತು. ಈ ಕಾರ್ಯಕ್ರಮವನ್ನು ಎಲ್ಲಾ ಕಡೆಯೂ ಮಕ್ಕಳು ಪ್ರೀತಿಯಿಂದ ಸ್ವೀಕರಿಸಿದ್ದರು. ಒಂದೇ ಒಂದು ಕಡೆಯಲ್ಲೂ ಮಕ್ಕಳಿಂದ ನಿರಾಸೆಯ ಪ್ರತಿಕ್ರಿಯೆ ಸಿಕ್ಕಿಲ್ಲ. ಪ್ರತಿಸಾರಿ ಮಾಡಿದಾಗಲೂ ಮತ್ತೆ ಮತ್ತೆ ಇಂತಹ ಕಾರ್ಯಕ್ರಮದ ಅವಶ್ಯಕತೆ ಎಷ್ಟೊಂದು ಇದೆಯಪ್ಪಾ ಅನಿಸುತ್ತಿತ್ತು; ಅತ್ಯಂತ ಆಪ್ತ ಅನಿಸುತ್ತಿತ್ತು. ಕಾರ್ಯಕ್ರಮದ ಬಳಿಕ ಮಕ್ಕಳು ವ್ಯಕ್ತಪಡಿಸುತ್ತಿದ್ದ ಅಭಿಪ್ರಾಯಗಳು, ಅಷ್ಟು ಚಿಕ್ಕ ಅವಧಿಯಲ್ಲಿ ಕಂಡುಬರುತ್ತಿದ್ದ ಬಾಂಧವ್ಯ ಪಯಣ ಮುಂದುವರಿಸಿಲು ಇನ್ನಷ್ಟು ಶಕ್ತಿ ತುಂಬುತ್ತಿತ್ತು, ಆ ಹಿನ್ನೆಲೆಯಲ್ಲೆ ಅರಿವಿನ ಪಯಣ ಕೊನೆಯಿರದ ಒಂದು ನಿರಂತರ ಪಯಣವಾಗುತ್ತಾ ಬಂದಿದೆ.

ಸಮಾವೇಶದ ತಯಾರಿಯಲ್ಲಿ ಜೊತೆಗೂಡಿದ್ದು ನನಗೆ ಅಗಾಧ ಅನುಭವ ನೀಡಿದೆ, ತಲೆಬಾಗುವಂತಹ ಭಾವನೆ ತರಿಸಿದೆ. ಬೀದಿಯಲ್ಲಿ ಹಣ ಎತ್ತಲು ಹೋದಾಗ ವಯಸ್ಸಾದ ಭಿಕ್ಷುಕಿಯೊಬ್ಬರು ನಮ್ಮ ಕಾರ್ಯಕ್ರಮದ ಕುರಿತಾಗಿ ಬಹಳ ಆಸಕ್ತಿಯಿಂದ ಮಾತಾಡಿಸಿದರು. ನಾನೂ ನಮ್ಮ ಕಾರ್ಯಕ್ರಮದ ಕುರಿತಾಗಿ ವಿವರಿಸಿ ಸಮಾವೇಶಕ್ಕೆ ಆಹ್ವಾನಿಸಿದೆ, ಆ ಕ್ಷಣ ಅವರು ಅವರ ಜೋಳಿಗೆಯಲಿದ್ದ ಚಿಲ್ಲರೆ ಹಣವನ್ನೆಲ್ಲಾ ನನ್ನ ಕೈಯಲ್ಲಿಟ್ಟು, ಕಣ್ಣೀರಿಡುತ್ತಾ, “ನಮ್ಮ ಕಾಲ ಆಯ್ತು ಮಗಾ, ನೀವಾದ್ರೂ ಚೆನ್ನಾಗಿರಿ” ಅಂದಾಗ ಒಂದು ರೀತಿಯ ವಿಶೇಷ ಅನುಭವವಾಗಿತ್ತು.

ರಾತ್ರಿ ಹೊತ್ತು ಬೇರೆ ಬೇರೆ ಕೇರಿಗಳಲ್ಲಿ ಹೋಗಿ ಕಾರ್ಯಕ್ರಮ ನಡೆಸುವುದು, ಜಾರ್ಜ್ ಸರ್, ರಾಜಪ್ಪ ಮೇಷ್ಟ್ರು ಅಂತಹವರೊಂದಿಗೆ ಮಾತುಕತೆ, ಅಲೆಮಾರಿ ಕ್ಯಾಂಪಿನ ಮಕ್ಕಳೊಂದಿಗೆ ಹರಟೆ, ಹಾಡು, ಕುಣಿತ, ಜೊತೆಗೆ ಬೇರೆಬೇರೆ ಕೈಗಳ ಅಡುಗೆ ರುಚಿ ಎಲ್ಲವನ್ನೂ ಸವಿಯುತ್ತಾ ತುಂಬಾ ಖುಶಿ ಪಟ್ಟಿದ್ದೇನೆ. ನಾನಂತೂ ತುಂಬಾ ಖುಶಿಯಿಂದ ಒಕ್ಕೂಟದ ಕೆಲಸದಲ್ಲಿ ತೊಡಗಿಸಿಕೊಂಡಿದ್ದೇನೆ. ಜೀವಪರ ಯೋಚನೆಗಳನ್ನು ಅರ್ಥಮಾಡಿಕೊಳ್ಳುವ, ಹರಡುವ ಈ ಅವಕಾಶವನ್ನು ಅತ್ಯಂತ ಪ್ರೀತಿಯಿಂದ ಖುಶಿಯಿಂದ ಅನುಭವಿಸುತ್ತಾ ಬಂದಿದ್ದೇನೆ, ಜೊತೆಗೆ ಸಂಭ್ರಮಿಸಿದ್ದೇನೆ.

*(ಮಂಗಳೂರಿನಲ್ಲಿ ವಾಸ. ವಾಣಿಯವರೊಂದಿಗೆ ತರಿಕಿಟ ಕಲಾಕಮ್ಮಟ ಹಾಗೂ ಒಕ್ಕೂಟದ ಕಾರ್ಯಕ್ರಮದಲ್ಲಿ ಭಾಗಿ)*

❖

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಅನಿಷ್ಟ ಪದ್ಧತಿಯ ವಿರುದ್ಧ ಜಾಗೃತಿ ಕಾರ್ಯಕ್ರಮ: ರಾಜಪ್ಪ ಮಾಸ್ತರ್, ಶೇಕರಮ್ಮ

**ನಾ**ನು ಬಾಲ್ಯದಿಂದ ನನ್ನ ತಾಯಿ, ಸಹೋದರಿಯರ ಜೀವನದ ಕಷ್ಟ, ನಷ್ಟ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸಮಸ್ಯೆಗಳನ್ನು, ಅವರ ಬವಣೆಗಳನ್ನು ನೋಡುತ್ತಾ ಬೆಳೆದಿದ್ದರಿಂದ ಈ ಸಂಪ್ರದಾಯದ ಸಂಕೋಲೆಗಳು ನಮ್ಮ ಮಹಿಳೆಯರನ್ನು ಶೋಷಣೆಗೆ ಒಳಪಡಿಸುವ ಪ್ರಕ್ರಿಯೆಗಳ ಬಗ್ಗೆ ನನ್ನಲ್ಲಿ ಒಂದು ಬಗೆಯ ಆಕ್ರೋಶ ಮಡುಗಟ್ಟಿತ್ತು. ಅದಕ್ಕಾಗಿಯೇ ಸೊರಬ ತಾಲ್ಲೂಕು ಚಂದ್ರಗುತ್ತಿಯಲ್ಲಿ ನೂರಾರು ವರ್ಷಗಳಿಂದ ನಡೆದು ಬಂದ ಬೆತ್ತಲೆ ಸೇವೆಯನ್ನು ದಸಂಸ ಮುಖಂಡರಾಗಿದ್ದ ಪ್ರೊ ಬಿ ಕೃಷ್ಣಪ್ಪ ಅವರೊಡನೆ ಚರ್ಚಿಸಿ 1986 ರಲ್ಲಿ ಬೆತ್ತಲೆ ಸೇವೆಯ ವಿರುದ್ಧ ಹೋರಾಟ ನಡೆಸಿ ಯಶಸ್ವಿಯಾಗಿದ್ದು ನನ್ನಲ್ಲಿ ಹುರುಪು ಹಾಗೂ ಹೋರಾಟದ ಬಗ್ಗೆ ಆಸಕ್ತಿ ಮೂಡಿಸಿತ್ತು .

ಹಾಗಾಗಿ ನಾನು ಶಿಕ್ಷಕನಾಗಿದ್ದು ನಾನು ಭಾಗವಹಿಸಿದ ಸಭೆ ಸಮಾರಂಭಗಳಲ್ಲಿ, ಜಾಗೃತಿ ಸಮಾವೇಶಗಳಲ್ಲಿ, ಹೆಣ್ಣುಮಕ್ಕಳಲ್ಲಿ ನಡೆಯುವ ಶಾರೀರಿಕ ಪ್ರಕ್ರಿಯೆ 'ಮುಟ್ಟು', ಅದರಿಂದಾಗಿ ಸಮಾಜದಲ್ಲಿ ಅವರನ್ನು ಹೀನಾಯವಾಗಿ ನಡೆಸಿಕೊಳ್ಳುವ ರೀತಿ ಒಳ್ಳೆಯದಲ್ಲ, ಆ ಪ್ರಕ್ರಿಯೆ ನಮ್ಮ ತಾಯಂದಿರ ದೇಹದಲ್ಲಿ ನಡೆಯದಿದ್ದರೆ ನಾವೆಲ್ಲ ಹುಟ್ಟುತ್ತಲೇ ಇರಲಿಲ್ಲ ಎಂಬ ವಿಚಾರವನ್ನು ವೈಜ್ಞಾನಿಕ ತಳಹದಿಯಲ್ಲಿ ವಿವರಿಸಿ ಜಾಗೃತಿ ಮೂಡಿಸುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಲೇ ಇದ್ದೆ, ಮುಟ್ಟು ಮೈಲಿಗೆಯಲ್ಲ ಅದು ಹೊಸ ಜೀವಿಗಳ ಹುಟ್ಟಿಗೆ ಕಾರಣವಾಗುವ ಪವಿತ್ರ ಪ್ರಕ್ರಿಯೆ ಎಂದು ಜಾಗೃತಿ ಮೂಡಿಸುತ್ತಿದ್ದೆ.

ಆದರೆ 2017 ಸೆಪ್ಟೆಂಬರ್ ತಿಂಗಳಲ್ಲಿ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸಹೋದರಿಯರು ಸಾಗರದಲ್ಲಿ ಸಭೆ ಕರೆದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಶಿವಮೊಗ್ಗದಲ್ಲಿ ನಡೆಸಬೇಕೆಂದು ಅದರ ಪೂರ್ವಭಾವಿಯಾಗಿ ಸ್ಥಳೀಯವಾಗಿ ಮಹಿಳೆಯರ ಸಮಸ್ಯೆ ಕೈಗೆತ್ತಿಕೊಂಡು ನಿರಂತರವಾಗಿ ನಾಲ್ಕು ತಿಂಗಳು ಜಾಗೃತಿ ಮೂಡಿಸಬೇಕೆಂದು ತೀರ್ಮಾನಿಸಿದರು. ಆಗ ಸಾಗರ, ಸೊರಬ, ಹೊಸನಗರ, ತೀರ್ಥಹಳ್ಳಿ, ಶಿಕಾರಿಪುರ ಮುಂತಾದ ಮಲೆನಾಡಿನ ತಾಲೂಕುಗಳಲ್ಲಿ ಕೆಲವು ಊರುಗಳಲ್ಲಿ ಪ್ರತಿ ವರ್ಷ ಭೂಮಿ ಹುಣ್ಣಿಮೆಯ ಹಬ್ಬದಿಂದ ದೀಪಾವಳಿ ಹಬ್ಬದವರೆಗೆ ಗ್ರಾಮದೇವತೆಗಳ ಹಬ್ಬ ಆಚರಿಸುತ್ತಾರೆ. ಆ ಸಂದರ್ಭದಲ್ಲಿ ಮುಟ್ಟಿನ ಪ್ರಕ್ರಿಯೆಗೆ ಒಳಗಾದ ಹೆಣ್ಣು ಮಕ್ಕಳನ್ನು ದೀಪಾವಳಿಯ ಹಬ್ಬ ಮುಗಿಯುವವರೆಗೆ ಊರಿನಿಂದ ಹೊರಗೆ ಕಳುಹಿಸುವ ಪದ್ಧತಿ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಈಗಲೂ ಇದೆ ಎಂಬ ಅಂಶ ತಿಳಿದಾಗ ನನಗೆ ಬಹಳ ಆಶ್ಚರ್ಯ ಮತ್ತು ದುಃಖ ಆಯಿತು. ಈ ಸಮಸ್ಯೆಯ ಬಗ್ಗೆ ಜಾಗೃತಿ ಮೂಡಿಸಬೇಕೆಂದು ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ತೀರ್ಮಾನಿಸಿತು.

ತಕ್ಷಣವೇ ನಾನು ಜಾಗೃತನಾಗಿ ಇದೇ ಸರಿಯಾದ ಸಮಯ ಮತ್ತು ಅವಕಾಶ ಎಂದು ತಿಳಿದು ಈ ಅಮಾನವೀಯ ಪದ್ಧತಿಯ ವಿರುದ್ಧ ಹೋರಾಡಲು ಶೇಕರಮ್ಮನ ಜೊತೆಗೆ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸಹೋದರಿಯರಾದ ಪ್ರತಿಭಾ ಎಂ. ವಿ, ದು ಸರಸ್ವತಿ, ರೂಪಾ ಮತ್ತಿಕೆರೆ, ವಾಣಿ ಪೆರಿಯೋಡಿ, ಮಂಜುಳಾ, ಪವಿತ್ರಾ, ಡಾ: ಎಚ್ ಎಸ್ ಅನುಪಮಾ, ಎಚ್ ಬಿ. ರಾಘವೇಂದ್ರ, ಪರಮೇಶ್ವರ್ ಹೊಸ್ಕೊಪ್ಪ ಮುಂತಾದವರ ಜೊತೆ ಸೇರಿ ಜಾಗ್ರತಿ ಆಂದೋಲನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡೆ.

ಪ್ರಥಮವಾಗಿ ಸಾಗರ ತಾಲ್ಲೂಕಿನ ತ್ಯಾಗರ್ತಿಯಲ್ಲಿ 2017 ಅಕ್ಟೋಬರ್ ಎರಡನೆಯ ವಾರ ನಡೆಯುತ್ತಿದ್ದ ಸಂತೆಯಲ್ಲಿ ನಮ್ಮ ಜಾಗೃತಿ ಸಭೆಯನ್ನು ಸ್ನೇಹಿತ ವಸಂತ್ ಕುಗ್ವೆ ಹೋರಾಟದ ಹಾಡುಗಳೊಂದಿಗೆ ಪ್ರಾರಂಭಿಸಿದರು, ಜನರಲ್ಲಿ ಜಾಗೃತಿ ಮೂಡಿಸುವ ಹಾಡುಗಳು, ಉಪನ್ಯಾಸಗಳನ್ನು ಮಾಡುತ್ತಾ ಇದರ ಬಗ್ಗೆ ಅರಿವು ಮೂಡಿಸುವ ಕರಪತ್ರಗಳನ್ನು ಹಂಚಿದೆವು, ಜನರು ನಮ್ಮ ಮಾತುಗಳನ್ನು ಕೇಳುತ್ತಿದ್ದರು, ಹೋಗುತ್ತಿದ್ದರು, ಮಹಿಳೆಯರು ಮಾತ್ರ ದೂರದಿಂದ ನಮ್ಮ ಕಾರ್ಯಕ್ರಮವನ್ನು ಅತ್ಯಂತ ಆಸಕ್ತಿಯಿಂದ ಗಮನಿಸುತ್ತಿರುವುದು ಕಂಡುಬಂದಿತು. ಯಾರೂ ಸಹ ಯಾವುದೇ ಪ್ರತಿಕ್ರಿಯೆಯನ್ನು ನೀಡದೆ ಭಯಗ್ರಸ್ತರಾಗಿ ತುಟಿ ಬಿಚ್ಚುತ್ತಿರಲಿಲ್ಲ. ಆಗ ತ್ಯಾಗರ್ತಿ ಪಕ್ಕದ ಊರಿನ ಶಾಂತಮ್ಮ ಕರಪತ್ರ ಹಂಚುತ್ತಿದ್ದ ನನ್ನ ಹತ್ತಿರ ಬಂದು 1ನೀವು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ನನಗೂ ಈ ಕೆಟ್ಟ ಪದ್ಧತಿಯಿಂದ ಬಹಳ ಬೇಜಾರಾಗಿದೆ. ಆದರೆ ಊರಿನ ಪದ್ಧತಿ ಎದುರು ಮಾತನಾಡುವ ಹಾಗಿಲ್ಲ, ನನ್ನ ಅಣ್ಣ ತಮ್ಮಂದಿರು ಡಾಕ್ಟರ್, ಇಂಜಿನಿಯರ್, ಲೆಕ್ಚರ್ ಆಗಿದ್ದರೆ, ನನ್ನನ್ನು ಈ ಊರಿಗೆ ಮದುವೆ ಮಾಡಿಕೊಟ್ಟಿದ್ದಾರೆ. ಇಲ್ಲಿ ಬಂದ ಮೇಲೆ ಈ ಹೀನ ಪದ್ಧತಿಯಿಂದ ರೋಸಿ ಹೋಗಿದ್ದೇನೆ. ನಾನು ನನ್ನ ಗಂಡನಿಗೆ ಈ ಊರು ಬಿಟ್ಟು ಬೇರೆ ಊರು ಕಡೆಗೆ ಹೋಗೋಣ ಎಂದು ಬೇಡಿಕೊಂಡಿದ್ದೇನೆ. ನನಗೆ ಸಾಕಾಗಿ ಹೋಗಿದೆ.' ಎಂದು ಅಳಲು ಪ್ರಾರಂಭಿಸಿದಳು. ನಾನು ಶಾಂತನನ್ನು ಸಮಾಧಾನಪಡಿಸುವುದು ಕಷ್ಟವಾಯಿತು. ಅಷ್ಟರಲ್ಲಿ ಸಂತೆಗೆ ಬಂದ ಅವರ ಊರಿನವರನ್ನು ಕಂಡವಳೇ ಹೆದರಿ "ನಾನು ಈ ವಿಚಾರವನ್ನು ಎಲ್ಲಾ ಹೇಳಿದ್ದೇನೆ ಎಂದು ಯಾರಿಗೂ ಹೇಳಬೇಡಿ" ಎಂದು ಹೇಳಿ ಹೇಳಿಕೊಂಡು ಅಲ್ಲಿಂದ ತಕ್ಷಣವೇ ಹೊರಟು ಹೋದಳು. ಹೀಗೆ ಕೆಲವರು ಇದನ್ನು ಅನಿಷ್ಟ ಪದ್ಧತಿಯೆಂದು ಹೇಳುತ್ತಿದ್ದರು, ಆದರೆ ಊರಿನ ತೀರ್ಮಾನಕ್ಕೆ ಬದ್ಧರಾಗಿರಬೇಕು ಎಂದು ಅಸಹಾಯಕರಾಗುತ್ತಿದ್ದರು.

ಈ ಘಟನೆಯಿಂದ ನನಗೆ ಬಹಳ ಬೇಸರವಾಯಿತು ನಮ್ಮ ಸಮಾಜದಲ್ಲಿ ಗ್ರಾಮೀಣ ಹೆಣ್ಣು ಮಕ್ಕಳು ತಮ್ಮ ಕಷ್ಟ ಸಮಸ್ಯೆಗಳನ್ನು ಹೇಳಿಕೊಳ್ಳುವ ಸ್ವಾತಂತ್ರ್ಯ ಇಲ್ಲವಲ್ಲ ಎಂದು ವ್ಯಥೆ ಪಡುತ್ತ ಈ ಕಾರ್ಯಕ್ರಮವನ್ನು ವ್ಯಾಪಕವಾಗಿ ಶಾಲೆ ಕಾಲೇಜುಗಳಲ್ಲಿ ನಡೆಸಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮುಂದಿನ ಜನಾಂಗದಲ್ಲಾದರೂ ವಿವೇಕ ಮೂಡಿಸಬೇಕು ಎಂದು ತೀರ್ಮಾನಿಸಿದೆ.

ನಂತರ ಅನಂತಪುರದಲ್ಲಿ ನಡೆಯುವ ಸಂತೆಯಲ್ಲಿಯೂ ಈ ಜಾಗೃತಿ ಕಾರ್ಯಕ್ರಮ ನಡೆಸಿದೆವು. ಆದರೆ ಜನರು ಕೇಳುತ್ತಿದ್ದರು, ಸುಮ್ಮನೇ ಹೋಗುತ್ತಿದ್ದರು. ಒಂದು ರೀತಿಯಲ್ಲಿ ನೀರಸ ಪ್ರತಿಕ್ರಿಯೆ. ಸದ್ಯ ನಮ್ಮನ್ನು ವಿರೋಧಿಸುವ, ಹಲ್ಲೆ ಮಾಡುವ ಪ್ರಯತ್ನ ಮಾಡದಿರುವುದು ನಮ್ಮ ಕಾರ್ಯಕ್ರಮಕ್ಕೆ ಅವರು ನೀಡಿರುವ ಸಹಕಾರ ಎಂದು ತಿಳಿದುಕೊಂಡೆ. ಏಕೆಂದರೆ ಬೆತ್ತಲೆ ಸೇವೆ ವಿರೋಧಿ ಚಳವಳಿಯಲ್ಲಿ ನಾವು ಸಾರ್ವಜನಿಕರಿಂದ ದೈಹಿಕ ಹಲ್ಲೆಗೊಳಗಾದ ಕಹಿ ನೆನಪು ಈಗಲೂ ಮರೆಯಲಾಗುತ್ತಿಲ್ಲ. ಅದೊಂದು ನನ್ನಲ್ಲಿ ಜೀವನವಿಡೀ ಮರೆಯಲಾಗದ ಕಹಿ ನೆನಪು.

ನಂತರ ಶಾಲೆ ಕಾಲೇಜುಗಳಲ್ಲಿ ನಿರಂತರವಾಗಿ ಮೂರು ತಿಂಗಳು ಜಾಗೃತಿ ಕಾರ್ಯಕ್ರಮವನ್ನು ನಡೆಸಿದೆವು. ಅಲ್ಲಿಯೂ ಸಹ ಕೆಲವರು ಇದು ಮಹಿಳೆಯರ ಸಮಸ್ಯೆ, ಪುರುಷರದ್ದಲ್ಲ ಎಂದು ಧೋರಣೆ ವ್ಯಕ್ತಪಡಿಸುತ್ತಿದ್ದರೂ, ಕರಪತ್ರಗಳ ಜೊತೆಗೆ ಮಹಿಳಾ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ಕೆಲವು ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸುತ್ತಿದ್ದೆವು. ಸುಮಾರು ನಲವತ್ತು ಪ್ರೌಢಶಾಲೆಗಳಲ್ಲಿ ಹತ್ತು ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮ ನಡೆಸಿದೆವು. ಆಗ ನಾನು ನಮ್ಮ ತಾಯಿಯ ಬಗ್ಗೆ ನಾವು ಗೌರವ ಪ್ರೀತಿ ಹೊಂದಬೇಕು. ನಮ್ಮ ಮನೆಗಳಲ್ಲಿಯೇ ಮೊದಲು ಮಹಿಳೆಯರಿಗೆ ಸಮಾನತೆ ಕೊಡಬೇಕೆಂದು ವಿದ್ಯಾರ್ಥಿಗಳಿಗೆ ವಿವರಿಸುತ್ತಿದ್ದೆ. ನಾನು "ತೂರಬೇಡಿ ಗಾಳಿಗೆ ಹೆಣ್ತನದ ಘನತೆಯ, ಜೀವ ಕೊಡುವ ಜೀವವಿದು ಕಡಿಮೆ ಯಾರಿಗೆ..?" ಎಂಬ ಜಾಗೃತಿ ಹಾಡಿನೊಂದಿಗೆ ನನ್ನ ಉಪನ್ಯಾಸ ಪ್ರಾರಂಭಿಸುತ್ತಿದ್ದೆ. ಕೊನೆಯಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಒಂದು ಕೆಲಸ ಮಾಡಬೇಕೆಂದು ವಿನಂತಿಸುತ್ತಿದ್ದೆ. ಅದೇನೆಂದರೆ, ಇಂದು ಸಂಜೆ ಮನೆಗೆ ಹೋದವರೇ ನಿಮ್ಮ ತಾಯಿಯನ್ನು ತಬ್ಬಿಕೊಂಡು "ಜೀವ ಕೊಡುವ ಜೀವವಿದು ಕಡಿಮೆ ಯಾರಿಗೆ..?" ಎಂದು ಹೇಳಿ ಎಂದಾಗ ಎಲ್ಲರೂ ಮೌನವಾಗಿ ಬಿಡುತ್ತಿದ್ದರು.

ನಮ್ಮ ಉಪನ್ಯಾಸಗಳಲ್ಲಿ ಸಮಾಜದಲ್ಲಿ ಮಹಿಳೆಯರ ಜವಾಬ್ದಾರಿಗಳು ಎಷ್ಟು ಮುಖ್ಯ ಅವಶ್ಯ ಎಂದು ತಿಳಿಸುವುದರ ಜೊತೆಗೆ ಜಾತಿ ಧರ್ಮ ಸಂಪ್ರದಾಯಗಳ ಹೆಸರಲ್ಲಿ ಅವರಿಗಾಗುವ ನೋವು ಶೋಷಣೆಯ ಬಗ್ಗೆ ವಿವರಿಸುತ್ತಿದ್ದೆವು. ಸತಿ ಸಹಗಮನ ಪದ್ಧತಿ, ಬೆತ್ತಲೆ ಸೇವೆ, ಬಾಲ್ಯ ವಿವಾಹ, ವಿಧವೆಯರ ತಲೆ ಬೋಳಿಸುವ ಪದ್ಧತಿಗಳು ಕೆಟ್ಟದ್ದೆಂದು ಒಪ್ಪಿಕೊಂಡಿದ್ದೇವೆ. ಅದರಿಂದ ನಮಗೆ ಯಾವುದೇ ತೊಂದರೆ ಆಗಿಲ್ಲ. ಅದೇ ರೀತಿ ಮುಟ್ಟಿನ ಪ್ರಕ್ರಿಯೆಯಿಂದಾಗಿ ಮಹಿಳೆಯರನ್ನು ನಾವು ಹೀನಾಯವಾಗಿ ಕಾಣುವುದು ಎಷ್ಟು ಸರಿ? ಎಂದು ಪ್ರಶ್ನಿಸಿದಾಗ, ಸರಿಯಲ್ಲ ಎಂಬ ಉತ್ತರವೇ ಬರುತ್ತಿತ್ತು.

ಒಂದು ಪ್ರೌಢಶಾಲೆಯಲ್ಲಿ ಈ ಕಾರ್ಯಕ್ರಮ ನೀಡುತ್ತಿದ್ದಾಗ ಆ ಶಾಲೆಯ ಮುಖ್ಯೋಪಾಧ್ಯಾಯಿನಿ ಒಬ್ಬರು ಕಣ್ಣಲ್ಲಿ ನೀರು ತುಂಬಿಕೊಂಡು ತಮ್ಮ ಕಷ್ಟವನ್ನು ವಿವರಿಸಿದರು. ಅವರ ಕುಟುಂಬದಲ್ಲಿ ಅವರು ಮುಟ್ಟಿನ ಪ್ರಕ್ರಿಯೆಗೆ ಒಳಗಾದಾಗ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಅವರ ಮನೆಯವರೇ, ಅಣ್ಣ ತಮ್ಮಂದಿರೇ ಅವರನ್ನು ಹೊರಗೆ ಇಟ್ಟು ಅಸಡ್ಡೆ ತೋರಿಸುವುದು, ಅವರಿಗೆ ಬೇಕಾದ ಸೋಪು ಟವೆಲ್ಲು ಬಾಚಣಿಗೆಗಳನ್ನು ದೂರದಿಂದ ಎಸೆಯುವುದು, ಎಲ್ಲವನ್ನೂ ಬಹಳ ದುಃಖದಿಂದ ವಿವರಿಸಿ ಅವರು ಇದರ ವಿರುದ್ಧ ಹೋರಾಡುತ್ತಿರುವ ನಮಗೆ ಅನಂತ ಧನ್ಯವಾದಗಳನ್ನು ಹೇಳಿ ಅಭಿನಂದನೆಯಿಂದ ಬೀಳ್ಕೊಟ್ಟರು. ಇದೇ ರೀತಿ ಅನೇಕ ಶಿಕ್ಷಕಿಯರು ನಮ್ಮ ಬಗ್ಗೆ ಅಭಿಮಾನದ ಮಾತುಗಳನ್ನಾಡುತ್ತಿದ್ದರು. ಇಂತಹ ಪ್ರಸಂಗಗಳು ನನ್ನ ನೆನಪಿನ ಬುತ್ತಿಯಲ್ಲಿ ಸದಾ ಹಸಿರಾಗಿದೆ. ನೆನಪಿಸಿಕೊಂಡಾಗ ನಮ್ಮ ಅಮಾನುಷ ಜೀವವಿರೋಧಿ ಸಂಪ್ರದಾಯಗಳು ಆಚರಣೆ ಅದು ದೇವರ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವುದು ವಿಷಾದಕರ. ಇಂತಹ ಮಹಿಳಾ ದೌರ್ಜನ್ಯಗಳು ಲಿಂಗತಾರತಮ್ಯಗಳು ಆದಷ್ಟು ಬೇಗ ತೊಲಗಿ ಸಮಾನತೆಯ ಸಹಬಾಳ್ವೆಯ ಸಮಾಜ ನಿರ್ಮಾಣವಾಗುವುದು ನಮ್ಮೆಲ್ಲರ ಆಶಯ.

ಈ ಜಾಗೃತಿ ಆಂದೋಲನಕ್ಕೆ ನಮ್ಮೊಡನೆ ಸಹಕರಿಸಿದ ನನ್ನ ಬಾಳಸಂಗಾತಿ ಶೇಕರಮ್ಮ, ರೂಪ ಮತ್ತಿಕೆರೆ, ಡಾ: ಎಚ್ ಎಸ್ ಅನುಪಮಾ, ವಾಣಿ ಪೆರಿಯೋಡಿ, ದು ಸರಸ್ವತಿ, ವೃಂದಾ ಹೆಗಡೆ, ಮಂಜುಳಾ, ಪ್ರತಿಭಾ ಎಂ ವಿ, ಎಚ್ ಬಿ ರಾಘವೇಂದ್ರ, ಶಿಕ್ಷಕರಾದ ರಾಜು ಕುಸ್ಕೂರು, ಉಪನ್ಯಾಸಕ ಪುಟ್ಟಪ್ಪ ಕೆಎಚ್ ಹಾಗೂ ನಾವು ಜಾಗೃತಿ ಕಾರ್ಯಕ್ರಮ ನಡೆಸಲು ತುಂಬು ಹೃದಯದ ಸಹಕಾರ ನೀಡಿದ ಸಾಗರ, ಸೊರಬ, ಶಿಕಾರಿಪುರ ತಾಲ್ಲೂಕುಗಳ ಎಲ್ಲಾ ಶಾಲಾ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು, ಪ್ರೌಢಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಕ ವರ್ಗದವರು, ಸಹಕರಿಸಿದ ಸಾರ್ವಜನಿಕರು ಮಾಧ್ಯಮದವರಿಗೆ ನಮ್ಮ ಒಕ್ಕೂಟ ಆಭಾರಿಯಾಗಿದೆ ಎಂದು ತಿಳಿಸುತ್ತಾ, ಸಮಾನತೆಯ ವೈಚಾರಿಕತೆಯ ಸಮಾಜ ಸೃಷ್ಟಿಗಾಗಿ ನಾವೆಲ್ಲಾ ಪ್ರಯತ್ನಿಸೋಣ, ಯಶಸ್ವಿ ಆಗೋಣ ಎಂದು ಆಶಯಗಳೊಂದಿಗೆ ವಿರಾಮ ಹೇಳುತ್ತಿದ್ದೇನೆ.

ಈ ಅರಿವಿನ ಪಯಣದಲ್ಲಿ ನಮ್ಮನ್ನು ಪ್ರೀತಿ ಆದರ ಗೌರವಗಳಿಂದ ಕಂಡ ಮಹಿಳಾ ಒಕ್ಕೂಟದ ಎಲ್ಲ ಸಂಗತಿಗಳಿಗೆ ಧನ್ಯವಾದಗಳು.

*(ನಿವೃತ್ತ ಶಿಕ್ಷಕರು, ಸೊರಬ ಹಾಗೂ ಅವರ ಜೀವನ ಸಂಗಾತಿ)*

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ನಮ್ಮೊಳಗೊಂದು ವಿಭಿನ್ನ ಸಂಚಲನ: ಶುಭಾ ಮರವಂತೆ

**ಕ**ಳೆದ ವರ್ಷ ಶಿವಮೊಗ್ಗದ ಬೀದಿಬೀದಿ, ಶಾಲೆ, ಕಾಲೇಜುಗಳಲ್ಲೊಂದು ವಿಶಿಷ್ಟ ಸಂವಹನದ ಅರಿವಿನ ಪಯಣವೆಂಬ ಕಾರ್ಯಕ್ರಮ ನಡೆಯಿತು. ಸ್ಪಷ್ಟ ಕಾರ್ಯ ಸಾಧನೆಯ ರೂಪುರೇಷೆ ಹೊತ್ತು ಸಾಗಿದ ಅರಿವಿನ ಪಯಣದ ಈ ತಂಡ ಕೆಲವೇ ಕೆಲವು ಆಸಕ್ತರನ್ನು ಮುಂಚೂಣಿಯಲ್ಲಿ ಹೊಂದಿದ್ದರೂ ಅದು ಸಾಧಿಸಿದ ಪರಿಣಾಮ ಮಾತ್ರ ಅಮೋಘವಾದುದು. ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸದಸ್ಯರು ಹೆಣ್ಣು ಹೆಣ್ತನ–ಹುಟ್ಟು–ಮುಟ್ಟು, ಬಂಧನ–ಬಯಲು ಚಿಂತನೆಯ ಮೂಲಕ ಸಮಾಜವನ್ನು ತಲುಪಲು ಯೋಜಿಸಿದ ದಾರಿ, ರೂಪಿಸಿದ ಯೋಜನೆ ಬೃಹತ್ ಮಹಿಳಾ ಸಮಾವೇಶದ ಮೂಲಕ ಬೆಳಕು ಕಂಡಿದ್ದು ಒಂದು ಅವಿಸ್ಮರಣಿಯ ಗಳಿಗೆ ಎಂದೇ ಹೇಳಬೇಕು. ಹಾಡು–ನಾಟಕ–ಚಿಂತನ–ಮಂಥನ– ಸಂವಾದದ ಮೂಲಕ ಹುಟ್ಟು ಹಾಕಿದ ಹೊಸ ಆಲೋಚನ ಕ್ರಮಗಳು ಯುವ ಪೀಳಿಗೆಯಲ್ಲಿ ಹೊಸ ಸಂಚಲನ ಮೂಡಿಸಿದೆ.

ಮಹಿಳೆ ತನ್ನನ್ನು ತಾನು ವಿವರಿಸಿಕೊಳ್ಳುವ ತನಕ ಇಂತಹ ಹೋರಾಟದ ಹಾದಿ ಅನಿವಾರ್ಯವೆ ಆಗಿದೆ. ತನಗೆ ತಾನೆ ಅರ್ಥವಾಗುವುದು ಈ ವಿವರಿಸಿಕೊಳ್ಳುವುದರ ಒಂದು ಸಾಧ್ಯತೆ. ಅದನ್ನು ಆಗು ಮಾಡುವಲ್ಲಿ ತಂಡದ ಪರಿಶ್ರಮ ನಿಜಕ್ಕೂ ಶ್ಲಾಘನೀಯವಾದುದು. ವಾಣಿ ಪೆರಿಯೋಡಿ, ಡಾ. ಎಚ್.ಎಸ್. ಅನುಪಮಾ, ದು. ಸರಸ್ವತಿ ಮೊದಲಾದ ಹಲವು ಹಿರಿಯ ಕಿರಿಯ ತಲೆಮಾರುಗಳ ಎಲ್ಲಾ ಅನಿಸಿಕೆ, ಆಲೋಚನೆಗಳ ಮುಕ್ತ ವೇದಿಕೆಯಾಗಿ ಅರಿವಿನ ಪಯಣ ನಮ್ಮೊಳಗೆ ಸಜ್ಜಾಯಿತು. ಚರ್ಚೆ, ಸಂವಾದ, ಸಭೆ ಇದರ ಮೊದಲ ಹಂತ. ಶಾಲೆ ಕಾಲೇಜು ವಸತಿ ನಿಲಯಗಳಲ್ಲಿ ಹೆಣ್ಣು ಮಕ್ಕಳೊಳಗೆ ಜಾಗೃತಿ ಮೂಡಿಸುವುದು ಇದರ ಎರಡನೇ ಹಂತ. ರಂಗಗೀತೆಗಳ ಮೂಲಕ, ನಾಟಕ, ಏಕವ್ಯಕ್ತಿ ಪ್ರದರ್ಶನ ಪರಿಕರಗಳ ಮೂಲಕ ಜನಸಾಮಾನ್ಯರ ಬಳಿ ಹೋಗಿ ಅರಿವಿನ ದೀಪ ಹಚ್ಚುವ ಕೆಲಸ ಇತರ ಎಲ್ಲಾ ಕಾರ್ಯಕ್ರಮ, ಸಮಾವೇಶಗಳಿಗಿಂತ ಭಿನ್ನ. ಬಿಡಿಗಾಸು ದುಡಿಯುವ ಸಾಮಾನ್ಯ ಕೂಲಿ ಕಾರ್ಮಿಕ ಹೆಣ್ಣುಮಕ್ಕಳಲ್ಲಿ ಇದು ನಿಮ್ಮ ಕಾರ್ಯಕ್ರಮವೆಂದು ಮನಗಾಣಿಸಿ ಅವರಿಂದ ಒಂದೋ ಎರಡೋ ರೂಪಾಯಿ ಪಡೆಯುವ ಸಹನೆ ಇಡೀ ಪಯಣಕ್ಕೊಂದು ಅರ್ಥವಂತಿಕೆ ತಂದುಕೊಟ್ಟಿದೆ. ಹಣ ಎಲ್ಲದಕ್ಕೂ ಮುಖ್ಯ. ಆದರೆ ಅದನ್ನು ಸಂಗ್ರಹಿಸಿವ ದಾರಿ ಎಲ್ಲರಂತಲ್ಲ. ಹಣವಂತರು ಕೊಡುವ ಸಾವಿರಾರು ರೂಪಾಯಿ ಬೇಡ; ಹೃದಯವಂತರು ಕೊಡುವ ಒಂದು ರೂಪಾಯಿಯಾದರೂ ಸಾಕು ಎನ್ನುವ ಧೋರಣೆ ಮನಕಲುಕಿತು. ಸಾವಿರಾರು ಜನ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping


ಒಂದಾದರು ಈ ಬಯಲಿಗೆ. ಸ್ತ್ರೀ–ಪುರುಷರೆಂಬ ಲಿಂಗಭೇದ ತೊರೆದು ಒಂದಾದೆವು ಸಮಾನತೆಯ ಕನಸಿಗೆ.

ಒಟ್ಟಿನಲ್ಲಿ ಶಿವಮೊಗ್ಗದಲ್ಲಿ ನಡೆದ ಈ ಅರಿವಿನ ಪಯಣ ಯಶಸ್ವಿಯಾಯಿತಾದರೂ ನಾವು ಸಾಗಬೇಕಾದ ಗುರಿ ಇನ್ನೂ ದೂರವಿದೆ. ಹೆಣ್ಣನ್ನು ಭೋಗ ಸಂಸ್ಕೃತಿಯ ಭಾಗವಾಗಿಸುವ ಎಲ್ಲಾ ಹುನ್ನಾರಗಳನ್ನೂ ಒಡೆದು ಹಾಕಬೇಕಾಗಿದೆ. ನವ ಮನುವಾದಿ ಆಶಯಗಳು ಧರ್ಮದ ಹೆಸರಿನಲ್ಲಿ ಮೊಳಕೆ ಒಡೆಯುತ್ತಿರುವುದನ್ನು ಚಿಗುರಲ್ಲೇ ಚಿವುಟಬೇಕಿದೆ. ಇನ್ನೂ ಏನೇನೋ ಇದೆ. "ಮೆರವಣಿಗೆ ಹೊರಟಿದ್ದೇವೆ" ಎನ್ನುವ ಗೆಳತಿಯರ ಪಯಣಕ್ಕೆ ಇನ್ನಷ್ಟು ಸಹೋದರ–ಸಹೋದರಿಯರು ಜೊತೆಗೂಡಬೇಕಾಗಿದೆ. ಸಂಘಟನೆ–ಸಂವಹನ–ಹೋರಾಟ ಈ ಮೂರು ದಾರಿಗಳೂ ಒಂದಾಗಿ ಬೆರೆತ ಈ ಪಯಣದಲ್ಲಿ ನಾವೆಲ್ಲರೂ ಅದರ ಒಂದು ಹೆಜ್ಜೆಯಾದುದು ನಿಜಕ್ಕೂ ಒಂದು ರೋಮಾಂಚನ ಅನುಭವ.

ಮೆರವಣಿಗೆಯ ತೇರು ಎಲ್ಲ ಪ್ರಮುಖ ಜಿಲ್ಲೆಗಳಿಗೂ ಧಾವಿಸಲಿದೆ. ಕೈ ನೀಡಿ, ಮನದೆರೆದು ಸ್ವಾಗತಿಸುವ ಸರದಿ ನಿಮ್ಮದು.

*(ಕನ್ನಡ ಸಹ ಪ್ರಾಧ್ಯಾಪಕರು, ಸಹ್ಯಾದ್ರಿ ವಾಣಿಜ್ಯ ಕಾಲೇಜು, ಶಿವಮೊಗ್ಗ)*

❖



Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ವಿಚಾರಗಳ ಅರಿವು ಮೂಡಿಸಿದ ಪಯಣ: ಮಂಜುಳಾ ರಾಜು

**ಶಿ**ವಮೊಗ್ಗದಲ್ಲಿ ಅರಿವಿನ ಪಯಣ ನಮ್ಮ ಕಾಲೇಜಿನಲ್ಲಿ ಅಂದರೆ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಉದ್ಘಾಟನೆಗೊಂಡಿತು. ಸವಿತಾ ನಾಗಭೂಷಣ್, ಸ. ಉಷಾ, ದು ಸರಸ್ವತಿ, ರಂಗಬೆಳಕು ತಂಡದ ಹಾಡು ಮಾತು ಕಿರು ನಾಟಕದಿಂದ ಆರಂಭಗೊಂಡ ಅರಿವಿನ ಪಯಣ ಅವ್ಯಾಹತವಾಗಿ ಮೂರು ತಿಂಗಳು ನಾನಾ ಕಾಲೇಜು ಹೈಸ್ಕೂಲ್‌ಗಳು, ಕೇರಿ ಕೇರಿಗಳು, ಹಾಸ್ಟೆಲುಗಳಲ್ಲಿ ಮುಂದುವರಿದು ಸಂಚಲನವುಂಟು ಮಾಡಿತು. ಎಷ್ಟೋ ಹೆಣ್ಣು ಮಕ್ಕಳಿಗೆ ವೈಯಕ್ತಿಕವಾಗಿ, ಸಭೆಯಲ್ಲಿ ಭಾಗವಹಿಸುವ, ಮಾತಾಡುವ, ಹಾಡುವ ಧೈರ್ಯ ಮೂಡಿದ್ದಂತೂ ನಿಜ. ನನ್ನಮಟ್ಟಿಗೆ ಹೇಳುವುದಾದರೆ ನಾನು ಪಾಠ ಮಾಡುವ ಹೆಣ್ಣು ಮಕ್ಕಳಿಗೆ ಅನೇಕ ವಿಷಯಗಳಲ್ಲಿ ನನ್ನ ವ್ಯಾಪ್ತಿಯಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದರೂ, ಪೋಕ್ಸೋ ಕಾಯಿದೆ, ಕಾನೂನು ವಿಚಾರಗಳು ಈ ಕಾರ್ಯಕ್ರಮಗಳಿಂದ ಅರಿವಾಯಿತು. ಸಂವಹನ ಕೌಶಲ, ಸಂಘಟನೆ, ಪರಸ್ಪರ ಪರಿಚಯ, ಸ್ನೇಹದ ವಿಸ್ತರಣೆಯ ಲಾಭವಾಯಿತು. ಅರಿವಿನ ಪಯಣದಲ್ಲಿ ಅನೇಕ ಹೆಣ್ಣು ಮಕ್ಕಳು ತಮ್ಮ ಹೇಳಲಾಗದ ಮುಚ್ಚಿಟ್ಟ ಅನೇಕ ಸಂಕಟಗಳನ್ನು ಬಿಚ್ಚಿಟ್ಟರು. ಭಾವನೆಗಳಿಗೆ ನಿಲುಕದ ಮಾತುಗಳಿಗೆ ಕಿವಿಯಾದೆವು. ಮಾರ್ಚ್ 9ರ ಮೆರವಣಿಗೆಯಲ್ಲಿ ಸುಮಾರು 2000ಕ್ಕೂ ಮೀರಿ ಜನರು ಸ್ವಯಂಪ್ರೇರಣೆಯಿಂದ ಭಾಗವಹಿಸಿದ್ದು ಶಿವಮೊಗ್ಗ ನಗರ ಕಂಡ ವಿಶೇಷ ಮೆರವಣಿಗೆಯಾಗಿತ್ತು. 8ನೇ ತಾರೀಕಿನಂದು ನಡೆದ ವಿಚಾರ ಸಂಕಿರಣಗಳಲ್ಲಿ ಮಹಿಳೆಯರ ಅನೇಕ ಸಮಸ್ಯೆಗಳನ್ನು ಚರ್ಚಿಸಲಾಯಿತು. ವಿವಿಧ ರಂಗಗಳಲ್ಲಿ ಸಾಧನೆ ಮಾಡಿದ ಮಹಿಳೆಯರ ಆತ್ಮವಿಶ್ವಾಸ ಕಂಡು ಸಂತೋಷವಾಯಿತು. ಒಟ್ಟಾರೆ ಶಿವಮೊಗ್ಗ ನಗರದೆಲ್ಲಡೆ ಚಟುವಟಿಕೆಗಳು ತುಂಬಿಕೊಂಡಿತ್ತು.

*(ಕನ್ನಡ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಕುಂಸಿ, ಶಿವಮೊಗ್ಗ)*

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಉತ್ತಮ ಕಾರ್ಯಕ್ರಮ: ನಾಗವೇಣಿ, ಭದ್ರಾವತಿ.

ಅರಿವಿನ ಪಯಣ ಎಂಬುದು ಒಂದು ಉತ್ತಮವಾದ ಕಾರ್ಯಕ್ರಮವಾಗಿದೆ. ಹೆಸರೇ ಹೇಳುವಂತೆ ಈ ಕಾರ್ಯಕ್ರಮ ಅದೆಷ್ಟು ಸಾವಿರ ಹೆಣ್ಣುಮಕ್ಕಳಿಗೆ ಅರಿವನ್ನು ತಂದುಕೊಟ್ಟಿದೆ. ಅದು ಹೇಗೆಂದರೆ, ಮಹಿಳಾ ಮುನ್ನಡೆ ಎಂಬ ಸಂಘಟನೆಯಿಂದ ಕ.ರಾ.ಮ.ದೌ.ವಿ. ಒಕ್ಕೂಟದ ಜೊತೆಗೂಡಿ ಶಾಲೆ ಕಾಲೇಜುಗಳಲ್ಲಿ ಅರಿವಿನ ಪಯಣ ಎಂಬ ಹೆಸರಿನಲ್ಲಿ ಕೆಲವೊಂದು ಕ್ಯಾಂಪೇನ್‌ಗಳನ್ನು ಮಾಡಿದೆವು. ಈ ಕಾರ್ಯಕ್ರಮದ ಮೂಲಕ ಮಕ್ಕಳಿಗೆ ಮುಟ್ಟಿನ ಬಗ್ಗೆ ಇರುವಂತಹ ತಿಳುವಳಿಕೆ ಹಾಗೂ ಮೂಢನಂಬಿಕೆಗಳನ್ನು ತೊಡೆದುಹಾಕಲು ಪ್ರಯತ್ನಿಸಿ ಒಳ್ಳೆಯ ದೃಷ್ಟಿ ಹಾಗೂ ಕೆಟ್ಟ ದೃಷ್ಟಿಗಳ ವ್ಯತ್ಯಾಸಗಳನ್ನು ತಿಳಿಸಿದೆವು. ಅಪ್ರಾಪ್ತ ವಯಸ್ಸಿನಲ್ಲಿ ಗರ್ಭಿಣಿಯಾದರೆ ಯಾವ ಅನಾಹುತಗಳಾಗುತ್ತವೆ ಎಂಬುದರ ಬಗ್ಗೆ ತಿಳಿಸಿ, ಮುಖದ ಬಣ್ಣದಿಂದ ಯಾವುದೇ ಸಾಧನೆಗಳಾಗಲು ಸಾಧ್ಯವಿಲ್ಲ. ಅದು ನಮ್ಮ ಅಂತಸ್ಥೈರ್ಯದಿಂದ ಆಗುವುದು ಎಂದು ತಿಳಿಹೇಳಿದೆವು. ದಲಿತ ಕೇರಿಗಳಲ್ಲಿ ಕೆಲವೊಂದು ಹೋರಾಟದ ಹಾಡುಗಳನ್ನು ಹಾಡುತ್ತ ಅವರೆಲ್ಲರನ್ನು ಒಟ್ಟುಸೇರಿಸಿ, ದಲಿತ ಹೆಣ್ಣುಮಕ್ಕಳು ನಲ್ಲಿಯಲ್ಲಿ ನೀರು ಒತ್ತುವಾಗ ಯಾವ ರೀತಿ ಜಾತಿ ಭೇದ ಮಾಡುವರು; ಆ ಹೆಣ್ಣನ್ನು ಗಂಡಸರು ಯಾವ ರೀತಿ ಕಾಮುಕ ದೃಷ್ಟಿಯಿಂದ ನೋಡುವರು; ಅವಳ ಗಂಡನನ್ನು ಬರೀ ಶೌಚಾಲಯ ಸ್ವಚ್ಛ ಮಾಡುವುದಕ್ಕಾಗಿ ಮಾತ್ರ ಕರೆಯುತ್ತಾರೆ ಎಂಬುದನ್ನು ನಾಟಕದ ಮೂಲಕ ತಿಳಿಸಲಾಯಿತು. ಎಲ್ಲಾ ಹೆಣ್ಣುಮಕ್ಕಳು ಸೇರಿ ಬಿಳಿಯುಡುಗೆಯನ್ನು ಧರಿಸಿ ಮೇಣದಬತ್ತಿ ಹಿಡಿದು ಮೌನ ಆಚರಣೆಯನ್ನು ಮಾಡಲಾಯಿತು. ಈ ಕಾರ್ಯಕ್ರಮಗಳನ್ನು ಮಾಡುವುದರಿಂದ ನಮಗೂ ಕೆಲವು ಅರಿವು, ಒಳ್ಳೆ ವಿಚಾರಗಳನ್ನು ತಿಳಿದುಕೊಂಡಂತೆ ಆಯಿತು.

*(ಭದ್ರಾವತಿಯಲ್ಲಿ ವಾಸಿಸುತ್ತಿರುವ ಗೃಹಿಣಿ, ಮಹಿಳಾ ಮುನ್ನಡೆ ಸದಸ್ಯೆ)*

❖

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಅರಿವು ವಿಸ್ತರಿಸಿದ ಅರಿವಿನ ಪಯಣ: ಹೆಚ್.ಬಿ.ರಾಘವೇಂದ್ರ

**ನಾ**ನು ನನ್ನ 16ನೇ ವಯಸ್ಸಿನಲ್ಲಿ ಸಾರ್ವಜನಿಕ ಜೀವನಕ್ಕೆ ಬಂದಿದ್ದು. ವಿದ್ಯಾರ್ಥಿ ಸಂಘಟನೆಯಲ್ಲಿ ಕೆಲಸ ಮಾಡುತ್ತಿದ್ದ ನಾನು ಒಂದಿಷ್ಟು ಕಾಲ ಅಂಗನವಾಡಿ ಕಾರ್ಯಕರ್ತರ ನಡುವೆ ಕೆಲಸ ಮಾಡಿದ್ದೆ. ನಂತರ ನನ್ನ ಕಾನೂನು ಪದವಿ ಮಗಿದ ಮೇಲೆ ಸಾಗರಕ್ಕೆ ಬಂದು ನೆಲೆಸಿದ ಮೇಲೆ ನಾನು ಹುಟ್ಟಿದ ಕೇರಿಯಾದ ಸಾಗರದ ಶಿವಪ್ಪನಾಯಕ ನಗರದಲ್ಲಿ ಮಲೆನಾಡು ಮಹಿಳಾ ಸಮಾಜವನ್ನು ಹುಟ್ಟುಹಾಕಿ ಒಂದಿಷ್ಟು ವರ್ಷಗಳ ಕಾಲ ವಿವಿಧ ರೀತಿಯ ಚಟುವಟಿಕೆ ನಡೆಸಿದ್ದು ಇದೆ. ನಂತರ ಮಹಿಳೆಯರ ನಡುವೆ ಕೆಲಸ ಮಾಡಿದ್ದು ಕಡಿಮೆ. ಆದರೆ ರಾಜ್ಯದಲ್ಲಿ ನಡೆದ ಮಹಿಳಾ ಸಂಬಂಧಿ ಹೋರಾಟಗಳಲ್ಲಿ ಮತ್ತು ವಿಚಾರ ಸಂಕಿರಣಗಳಲ್ಲಿ ಸಮಾವೇಶಗಳಲ್ಲಿ ಭಾಗಿಯಾಗಿದ್ದು ಉಂಟು. ಅದು ಬಿಟ್ಟರೆ ಮಹಿಳೆಯರ ನಡುವೆ ಗಂಭೀರವಾಗಿ ಕೆಲಸ ಮಾಡಿದ್ದು ಬಹಳ ಕಡಿಮೆ. ಡಾ. ಎಚ್. ಎಸ್. ಅನುಪಮಾ ಅವರ ಪರಿಚಯವಾದ ಮೇಲೆ ಆಗಾಗ ಮಹಿಳಾ ಒಕ್ಕೂಟದ ಹೆಸರು ಕಿವಿಯ ಮೇಲೆ ಬೀಳುತ್ತಿತ್ತು. ಆದರೆ ಅದರ ಬಗ್ಗೆ ಅಷ್ಟೇನು ತಲೆ ಕೆಡಿಸಿಕೊಂಡಿರಲಿಲ್ಲ. ಯಾವಾಗ 2017ರಲ್ಲಿ ಕೊಪ್ಪಳದಲ್ಲಿ ಮಹಿಳಾ ಒಕ್ಕೂಟದ ಎರಡು ದಿನದ ಸಮಾವೇಶದಲ್ಲಿ ಭಾಗಿಯಾದೆನೋ.. ಸಮಾವೇಶಕ್ಕೆ ಬಂದ ವಿವಿಧ ಸ್ತರದ ಮಹಿಳಾ ಸಮೂಹ ಮತ್ತು ಸಮಾವೇಶಕ್ಕೆ ಆಗಮಿಸಿದ ಅತಿಥಿಗಳು ವೇದಿಕೆಯಲ್ಲಿ ಆಡಿದ ಮಾತುಗಳು ಕೇಳಿ ಮಹಿಳಾ ಒಕ್ಕೂಟದಲ್ಲಿ ಹೆಚ್ಚುಹೆಚ್ಚು ಕೆಲಸ ಮಾಡಬೇಕು ಎಂದು ಮನಸ್ಸು ಆದೇಶಿಸುತ್ತಾ ಇತ್ತು. ಅದೇ ಸಮಯಕ್ಕೆ ಕೊಪ್ಪಳದಲ್ಲಿ ನಡೆದ ಸಮಾವೇಶದಲ್ಲಿ 2018 ರ ಸಮಾವೇಶ ಶಿವಮೊಗ್ಗದಲ್ಲಿ ಎಂದು ತಿರ್ಮಾನವಾದಾಗ ಶಿವಮೊಗ್ಗದವರಾದ ನಮಗೆ ಹೆಚ್ಚಿನ ಜವಾಬ್ದಾರಿ ಇತ್ತು. ಮಾರ್ಚ್ ತಿಂಗಳು ಬರುವ ಆರು ತಿಂಗಳ ಮೊದಲೇ ಜಿಲ್ಲೆಯಲ್ಲಿ ಅರಿವಿನ ಪಯಣ ಅಭಿಯಾನ ಆರಂಭಿಸಿದೆವು. ನಾನು ಸಾಗರ ಶಿಕಾರಿಪುರ ತಾಲೂಕುಗಳ ಅರಿವಿನ ಪಯಣದ ಅಭಿಯಾನದಲ್ಲಿ ಪಾಲ್ಗೊಂಡಿದ್ದೆ.

'ದಟ್ ಡೇ ಆಫ್ಟರ್ ಎವೆರಿ ಡೇ' ಎಂಬ ಕಿರುಚಿತ್ರದ ಮೂಲಕ ನಾವು ಶಾಲಾ ಕಾಲೇಜುಗಳಲ್ಲಿ ಹೆಣ್ಣಿನ ಮೇಲೆ ಆಗುವ ಶೋಷಣೆ, ಅದನ್ನು ಹೇಗೆ ಎದುರಿಸಬೇಕು, ಜೈವಿಕವಾಗಿ ಮಹಿಳೆಯ ದೇಹದಲ್ಲಿ ಆಗುವ ಬದಲಾವಣೆಯನ್ನು ಕೀಳು ಎಂದು ಕೊಳ್ಳಬಾರದು, ಮುಟ್ಟು ಮುಂತಾದವುಗಳ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ವಿವರಿಸುತ್ತಾ ಸಾಗುತ್ತಿದ್ದೆವು. ಈ ಪಯಣದಲ್ಲಿ ವಿದ್ಯಾರ್ಥಿ ಯುವಜನರೊಂದಿಗೆ ಬೆರೆತು ಸೌಂದರ್ಯದ ಬಗ್ಗೆ ಇರುವ ತಪ್ಪು ಕಲ್ಪನೆ, ದೈಹಿಕ ನ್ಯೂನತೆಗಳ ಬಗ್ಗೆ ಕೀಳರಿಮೆ ಬೇಡಾ, ವ್ಯಕ್ತಿಗತ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ನೆಲೆಯಲ್ಲಿ ಕಾಡುತ್ತಿರುವ ಸಮಸ್ಯೆಗಳನ್ನು ಗುಪ್ತವಾಗಿ ಇಟ್ಟುಕೊಳ್ಳದೆ ಹತ್ತಿರದವರ ಬಳಿ ಹಂಚಿಕೊಳ್ಳಬೇಕು, ಕಾಲೇಜುಗಳಲ್ಲಿ, ಹಾಸ್ಟೆಲ್‌ಗಳಲ್ಲಿ, ಉದ್ಯೋಗ ಮಾಡುವ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯವಾದರೆ ಅದನ್ನು ಹೇಗೆ ಎದುರಿಸಬೇಕು, ಹೇಗೆ ಪ್ರತಿರೋಧಿಸಬೇಕು, ಈ ಕುರಿತು ಇರುವ ಕಾನೂನು ಮತ್ತು ಸಂಬಂಧಪಟ್ಟ ಇಲಾಖೆಗಳ ಮಾಹಿತಿ ಕೊಡುತ್ತಾ ಸಾಗುತ್ತಿದ್ದೆವು. ಶಾಲಾ ಕಾಲೇಜುಗಳಲ್ಲಿ ಕಾರ್ಯಕ್ರಮ ಮುಗಿದ ಮೇಲೆ ವಿದ್ಯಾರ್ಥಿನಿಯರು ಒಕ್ಕೂಟದ ಮಹಿಳಾ ಕಾರ್ಯಕರ್ತರನ್ನು ಮುತ್ತಿಕೊಂಡು ಖಾಸಗಿಯಾಗಿ ತಮ್ಮ ಸಮಸ್ಯೆಯನ್ನು ಹೇಳಿಕೊಳ್ಳುತ್ತಿದ್ದರು. ಜೊತೆಗೆ ನಾವು ತೋರಿಸಿದ ಕಿರುಚಿತ್ರ ನೋಡಿದ ಮೇಲೆ ವಿದ್ಯಾರ್ಥಿನಿಯರಲ್ಲಿ ಒಂದು ರೀತಿಯ ಆತ್ಮವಿಶ್ವಾಸ ಮೂಡಿದ ಹಾಗೆ ಕಾಣುತಿತ್ತು. ಹಾಗೆ ಯುವಕರ ಮೊಗದಲ್ಲಿ ಏನೋ ಒಂದು ರೀತಿ ಅಪರಾಧಿ ಭಾವ ಕಾಣುತಿತ್ತು. ಅಷ್ಟರ ಮಟ್ಟಿಗೆ ಈ ಅಭಿಯಾನ ಯಶಸ್ವಿ.

ಇನ್ನು ಸಾಗರ ತಾಲೂಕಿನ ಆನಂದಪುರ ಹೋಬಳಿಯ ಕೆಲವು ಹಳ್ಳಿಗಳಲ್ಲಿ ದೀಪಾವಳಿ ಹಬ್ಬದ ಸಮಯದಲ್ಲಿ ಮುಟ್ಟಾದ ಮಹಿಳೆಯರನ್ನು ಊರ ಹೊರಗೆ ಇಡುವ ಪದ್ಧತಿ ಜಾರಿಯಲ್ಲಿ ಇದೆ. ಈ ಕುರಿತು ಆ ಭಾಗದ ತ್ಯಾಗರ್ಥಿ ಮತ್ತು ಆನಂದಪುರದಲ್ಲಿ ಸಂತೆಯ ಸಮಯದಲ್ಲಿ ಈ ಕುರಿತು ಜಾಗೃತಿ ಮೂಡಿಸಲು ಪ್ರಯತ್ನ ಮಾಡಿದೆವು. ಆದರೆ ಈ ಕುರಿತು ಆ ಭಾಗದಲ್ಲಿ ಅಷ್ಟೇನು ಸಕರಾತ್ಮಕ ಪ್ರತಿಕ್ರಿಯೆ ಬರಲಿಲ್ಲ. ಒಂದು ಹಂತದಲ್ಲಿ ಈ ಭಾಗದ ಕೆಲವು ಪುರುಷರು ನಮ್ಮ ಮೇಲೆ ರೇಗಿದ್ದು ಇದೆ. ಈ ಮೌಢ್ಯ ಆಚರಣೆ ತಡೆಯಲು ಭಾಷಣ ಕರಪತ್ರ ಹಂಚುವುದರ ಮೂಲಕ ಸಾಧ್ಯವಿಲ್ಲ ಎನ್ನುವುದು ಈ ಭಾಗದ ಜನರ ಪ್ರತಿಕ್ರಿಯೆಯಿಂದ ಸ್ಪಷ್ಟವಾಗಿತ್ತು. ಇದಕ್ಕೆ ಬೇರೆ ರೀತಿಯ ದಾರಿಯನ್ನೆ ಹುಡಕಬೇಕಾಗಿದೆ ಎನ್ನುವ ಸತ್ಯ ನಮ್ಮ ಅರಿವಿಗೆ ಬಂತು.


ಇನ್ನು ವ್ಯಕ್ತಿಗತವಾಗಿ ಈ ಅರಿವಿನ ಪಯಣ ನನ್ನ ಅರಿವನ್ನು ವಿಸ್ತರಿಸಿದುದನ್ನು ನಾನು ಇಲ್ಲಿ ಹೇಳಲೇಬೇಕು. ಮಹಿಳಾ ಒಕ್ಕೂಟದ ಸಂಗಾತಿಗಳು ಅರಿವಿನ ಪಯಣದ ಸಮಯದಲ್ಲಿ ಆಡಿದ ಮಾತುಗಳು ನನ್ನಲ್ಲಿರುವ ಕೆಲವು ದೌರ್ಬಲ್ಯಗಳನ್ನು ನೀಗಿಸಿಕೊಳ್ಳಲು ಸಾಧ್ಯವಾಯಿತು. ಯಾವುದೇ ವಿಚಾರವಾದರೂ ವೇದಿಕೆಯಲ್ಲಿ ಉಪದೇಶ ಮಾಡುವುದು ಸುಲಭ. ಆದರೆ ವ್ಯಕ್ತಿಗತವಾಗಿ ಆಚರಣೆಗೆ ತರುವಾಗ ಹಲವು ತರಹದ ಸಮಸ್ಯೆಗಳನ್ನು ತಂದಿಡುತ್ತದೆ. ಉದಾಹರಣೆಗೆ ನಾನು ಮನೆಯಲ್ಲಿ ಹೆಂಡತಿಯೊಂದಿಗೆ ಅಕ್ಕನೊಂದಿಗೆ ಅಮ್ಮನೊಂದಿಗೆ ಹೇಗೆ ನಡೆದುಕೊಳ್ಳುತ್ತೇನೆ ಎನ್ನುವುದು ಬಹಳ ಮುಖ್ಯ. ಎಡ ಸಂಘಟನೆಯ ಹಿನ್ನೆಲೆಯವನಾದ ನನಗೆ ಈ ಕುರಿತು ಒಂದಿಷ್ಟು ತರಬೇತಿ ಇದ್ದರೂ ನೂರಕ್ಕೆ ನೂರು ಗಂಡು ಟೇಂಕಾರ ಹೋಗಿರುವುದಿಲ್ಲ ಎನ್ನುವುದು ಮನೆಯಲ್ಲಿ ನನ್ನ ನಡುವಳಿಕೆಯಿಂದ ಅರಿವಿಗೆ ಬರುತ್ತಾ ಹೋಯಿತು. ಈ ರೀತಿಯ ಅರಿವು ಬಂದದ್ದು ಮಹಿಳಾ ಒಕ್ಕೂಟದ ಸಂಗಾತಿಗಳು ಆಡಿದ ಮತ್ತು ಹೇಳಿದ ಮಾತುಗಳಿಂದ. ಉದಾಹರಣೆಗೆ ಊಟದ ವಿಚಾರದಲ್ಲಿ, ಮನೆ ಕೆಲಸ ವಿಚಾರದಲ್ಲಿ, ಕೆಲವು ವಿಷಯಗಳ ಚರ್ಚೆಯ ಸಮಯದಲ್ಲಿ ಮನೆಯಲ್ಲಿದ್ದ ಮಹಿಳೆಯರು ತಮಗಿದ್ದ ಅನುಭವ ಮತ್ತು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಜ್ಞಾನದ ಆಧಾರದಲ್ಲಿ ಕೆಲಸ ಮಾಡುತ್ತಾರೆ ಮತ್ತು ವಿಷಯ ಹಂಚಿಕೊಳ್ಳುತ್ತಾರೆ. ಅವರು ಹಂಚಿಕೊಂಡ ವಿಚಾರ ಅಥವಾ ಮಾಡಿದ ಕೆಲಸ ತಪ್ಪಾಗಿರಬಹುದು. ಆಗಿರುವ ತಪ್ಪನ್ನು ತಿದ್ದಬೇಕಾದ ನನ್ನಂತಹವರು ರೇಗದೆ ತಾಳ್ಮೆಯಿಂದ ವಿವರಿಸಬೇಕು. ಎಲ್ಲಿ ಸಮಸ್ಯೆಯಾಗಿದೆ ಎನ್ನುವುದನ್ನು ಹುಡುಕಬೇಕು. ಅದಕ್ಕೆ ಯಾವ ರೀತಿಯ ಪರಿಹಾರ ಎನ್ನುವುದನ್ನು ಪರಸ್ಪರ ಚರ್ಚಿಸಿ ತೀರ್ಮಾನಕ್ಕೆ ಬರಬೇಕು. ಆದರೆ ಎಷ್ಟೋ ಸಮಯದಲ್ಲಿ ಇಲ್ಲೆಲ್ಲಾ ಪುರುಷಾಧಿಪತ್ಯವೇ ಇರುತ್ತದೆ. ನನ್ನಲ್ಲಿದ್ದ ಆ ರೀತಿಯ ಸಣ್ಣ ಗಂಡು ಟೇಂಕಾರ ಈ ಅರಿವಿನ ಪಯಣದಲ್ಲಿ ಕಡಿಮೆ ಆಯಿತು ಎನ್ನಬಹುದು. ಇನ್ನು ಒಕ್ಕೂಟದ ಸಂಗಾತಿಗಳು ಹೇಳುವ ಪ್ರೀತಿಯ ರಾಜಕಾರಣ ನಿಜಕ್ಕೂ ಸಂಘಟಕನಾದ ನನಗೆ ಸಾಕಷ್ಟು ಟಿಪ್ಸ್ ಕೊಟ್ಟಿತು. ಇಲ್ಲಿ ಪಡೆದ ಟಿಪ್ಸ್‌ನ್ನು ನಾನು ಸಕ್ರಿಯವಾಗಿರುವ ಸಂಘಟನೆಯಲ್ಲಿ ಪ್ರಯೋಗ ಮಾಡುತ್ತಿದ್ದೇನೆ. ಇದು ಸಾಕಷ್ಟು ಕೆಲಸ ಮಾಡುತ್ತಿದೆ. ಕೊನೆಯಲ್ಲಿ ಹೇಳುವುದೇನೆಂದರೆ ನನ್ನ ಮುಂದಿನ ದಿನಗಳನ್ನು ಹೆಚ್ಚೆಚ್ಚು ಮಹಿಳಾ ಒಕ್ಕೂಟದ ಕೆಲಸಕ್ಕೆ ಮೀಸಲು ಇಡುತ್ತೇನೆ.

*(ಸಂಪಾದಕರು, 'ಚಾರ್ವಾಕ' ಪತ್ರಿಕೆ, ಸಾಗರ)*

❖



Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಅರಿವಿನ ಪಯಣವೆಂಬ ಸೇತುವೆ: ವೃಂದಾ ಹೆಗಡೆ, ಸಾಗರ

ಯುವಜನತೆ ಸಾಗುತ್ತಿರುವ ದಾರಿ, ವೇಗ, ಅವರನ್ನು ಮುಟ್ಟಲಾಗದ ದಿಗ್ಭ್ರಮೆ ಇವುಗಳಿಂದ ತತ್ತರಗೊಂಡ ಕ್ಷಣಗಳಲ್ಲಿ ಒಂದು ಸೇತುವೆ ನಿರ್ಮಾಣ ಮಾಡಿಕೊಟ್ಟಿದ್ದು, ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ. ಅರಿವಿನ ಪಯಣವೇ ಸೇತುವೆ.

2018 ಮಾರ್ಚ್ 8, 9ರಂದು ಶಿವಮೊಗ್ಗದಲ್ಲಿ ಕ.ಮ.ದೌ.ವಿ.ಒ. ಹಮ್ಮಿಕೊಂಡ ಮಹಿಳಾ ದಿನಾಚರಣೆಯ ಭಾಗವಾಗಿ ಸಾಗರದ ಪ್ರೌಢಶಾಲೆಗಳನ್ನು ಆಯ್ದುಕೊಂಡು ಅರಿವಿನ ಪಯಣ ಹಮ್ಮಿಕೊಳ್ಳಲಾಯಿತು. ಅನುರಾಗ್ ಕಶ್ಯಪ್‌ರ 'ದಟ್ ಡೇ ಆಫ್ಟರ್ ಎವೆರಿ ಡೇ' ಎಂಬ ಕಿರುಚಿತ್ರ ಪ್ರದರ್ಶಿಸಿ ಸಂವಾದ ನಡೆಸಲಾಯಿತು. ಇದರಲ್ಲಿ ನನಗೆ ಕಂಡು ಬಂದ ವಿಚಾರವೆಂದರೆ ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ಹೆಚ್ಚು ಮುಕ್ತವಾಗಿ ಯೋಚಿಸಬಲ್ಲರು ಹಾಗೂ ಅವರ ಸಾಮಾಜಿಕ, ಆರ್ಥಿಕ ಹಿನ್ನೆಲೆಯಲ್ಲಿ ಲಿಂಗ ತಾರತಮ್ಯ ಎಂಬುದನ್ನು ಪದಗಳ ಅರಿವಿಲ್ಲದೆಯೇ ನಡೆಸಿಕೊಂಡು ಬಂದವರು. ಹಾಗಾಗಿಯೂ ಮುಗ್ಧತೆಯನ್ನು ಉಳಿಸಿಕೊಂಡವರು. ಖಾಸಗಿ ಶಾಲೆಯ ಮಕ್ಕಳು ಪ್ಯಾರಾಕೀಟ್ಸ್ ತರಹ ಕಾಣುತ್ತವೆ. ಅದೇ ಕಾಲೇಜಿನ ಮಕ್ಕಳನ್ನು ಗಮನಿಸಿದರೆ ಒಂದು ರೀತಿಯ ದಿಗಿಲು ಉಂಟಾಗುತ್ತದೆ. ಮೆಟ್ರಿಕ್ ನಂತರದ ಎಸ್.ಸಿ., ಎಸ್.ಟಿ. ಹಾಸ್ಟೆಲ್ ಒಂದಕ್ಕೆ ದೇವದಾಸಿಯರ ಮೇಲಿನ (ರಿತೇಶ್ ಶರ್ಮರ) ಸಾಕ್ಷ್ಯಚಿತ್ರದ ಹೋಲಿ ವೈವ್ಸ್ ಅನ್ನು ತೋರಿಸಿ ಮಾತಿಗೆಳೆದವು. ಬೆತ್ತಲೆ ಸೇವೆಗೆ ಕುಖ್ಯಾತವಾದ ಚಂದ್ರಗುತ್ತಿಯ ಹತ್ತಿರದ ಊರಿನಿಂದ ಬಂದ, ಶೋಷಣೆಗೊಳಪಟ್ಟ ಜಾತಿಯ ಹಿನ್ನೆಲೆ ಇರುವ ಮಕ್ಕಳಿಗೇ ಈ ಪದ್ಧತಿಯ ಅರಿವಿಲ್ಲದಿರುವುದು ನಮ್ಮ ಅರಿವಿಗೆ ಬಂತು. ಕೆಲವು ಮಕ್ಕಳು 'ಏ ಇಂಥದೆಲ್ಲಾ ನಡೀತತಿ ಅಂತ ಗೊತ್ತೇ ಇಲ್ಲಲೋ ನಮ್ಗೆ, ಸುಮ್ನೆ ಕುರಿ ತಿಂದು ಮಜಾ ಮಾಡ್ತೀವಲೋ ಜಾತ್ರೇಲಿ' ಅಂತ ಮಾತಾಡಿಕೊಂಡಿದ್ದೇ ನಮ್ಮ ಪ್ರಯತ್ನ ಯಶಸ್ವಿಯಾಯಿತೆಂಬ ಭಾವನೆ ಹುಟ್ಟಿಸಿತು. ಮೇಲಾಗಿ ಹೆಚ್ಚಿನ ಮಕ್ಕಳು ಒಂದಲ್ಲಾ ಒಂದು ಪ್ರಶ್ನೆ ಕೇಳಿ ಸಮಾಧಾನ ಪಡೆದುಕೊಂಡರು. ಅಲ್ಲಿಯ ಕೆಲ ಮಕ್ಕಳು ನನ್ನ ಆಪ್ತರಾದರು. ಹಾಗೂ ಈ ವರ್ಷ ಅಂದರೆ 25 ಜನವರಿ 2019 ರಂದು ಹಾಸ್ಟೇಲ್ ಡೇಗೆ ಪ್ರೀತಿಯಿಂದ ಆಹ್ವಾನಿಸಿದರು. ಅತ್ಯಂತ ಶಿಸ್ತು ಬದ್ಧವಾಗಿ ಸಮಾರಂಭವನ್ನು ಆಯೋಜಿಸಿದ್ದೇ ಅಲ್ಲದೆ ಪ್ರೀತಿಯನ್ನು ಉಣಬಡಿಸಿದರು ಮಕ್ಕಳು. ಅಲ್ಲಿಗೆ ಅತಿಥಿಗಳಾಗಿ ಬಂದಿದ್ದ ಪದವಿಪೂರ್ವ ಕಾಲೇಜಿನ ಉಪನ್ಯಾಸಕರೊಬ್ಬರು ತಾವು ಚಿಕ್ಕಂದಿನಲ್ಲಿ ಹೀಗೇ ಎಸ್.ಸಿ., ಎಸ್.ಟಿ. ಹಾಸ್ಟೆಲ್‌ನಲ್ಲಿದ್ದು ಓದುವಾಗ ಊಟಕ್ಕೆ ಎಷ್ಟು ಕಷ್ಟ ಇತ್ತು, ಒಮ್ಮೊಮ್ಮೆ ಅನ್ನಕ್ಕೆ ಖಾರದ ಪುಡಿ ಬೆರೆಸಿ ಉಂಡಿದ್ದಿದೆ, ಕಟ್ಟಿಗೆ ಒಡೆದು ಹತ್ತು ರೂಪಾಯಿ ಗಳಿಸಿ ನೋಟ್‌ಬುಕ್ ಕೊಂಡಿದ್ದಿದೆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಎಂದು ತಮ್ಮ ಅನುಭವ ಹಂಚಿಕೊಳ್ಳುತ್ತಿದ್ದಾಗ ಆಲಿಸುತ್ತಿದ್ದ ನಮಗೆ ಅರಿವಿನ ಪಯಣವಾಗುತ್ತಿತ್ತು. ಈಗ ಅಷ್ಟೊಂದು ಕಷ್ಟ ಇಲ್ಲ, ಸರ್ಕಾರ ಇವರಿಗೆಲ್ಲಾ ಮಂಚವನ್ನೂ ಒದಗಿಸಿದೆ, ಒಳ್ಳೆಯ ಊಟವನ್ನು ಕೊಡುತ್ತದೆ. ಮಕ್ಕಳು ಇದರ ಸದುಪಯೋಗ ಮಾಡಿಕೊಳ್ಳಬೇಕು ಎಂದು ಹೇಳುವುದರ ಜೊತೆಗೆ ಡ್ರಗ್, ಸಿಗರೇಟ್, ಮದ್ಯ ಇವುಗಳ ವ್ಯಸನ ನಮ್ಮ ಯುವಕರನ್ನು ಹಾದಿ ತಪ್ಪಿಸುತ್ತಿರುವುದನ್ನೂ ವ್ಯಾಕುಲದಿಂದ ಹೇಳಿಕೊಂಡರು. ಹೌದು. ನಮ್ಮ ಹುಡುಗರು ರಾತ್ರಿ ರೈಲಿಗೆ ತುಮಕೂರು, ಬೆಂಗಳೂರಿಗೆ ಹೋಗಿ ಕೇಟರಿಂಗ್ ಕೆಲಸ ಮಾಡಿ, ಸಂಪಾದನೆ ಮಾಡಿಕೊಂಡು ಬರುವವರೂ ಇದ್ದಾರೆ. ಹಾಗೇ ಪಾರ್ಟ್‌ಟೈಮ್ ಕೆಲಸ ಮಾಡಿಕೊಂಡು ಕಾಲೇಜಿಗೆ ಬರುವವರೂ ಇದ್ದಾರೆ. ಪದವಿ ಶಿಕ್ಷಣ ಪಡೆಯಲು ಈಗ ಹೆಚ್ಚು ಹೆಚ್ಚು ಸಾಮಾಜಿಕವಾಗಿ ಹಿಂದುಳಿದ ಸ್ತರಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಪರಿಸ್ಥಿತಿ ಹೇಗಿದೆಯೆಂದರೆ ಇವರಿಗೆ ಮುಂದೆ ಉದ್ಯೋಗ ಸಿಗುವ ಯಾವ ಭರವಸೆಯೂ ಇಲ್ಲ. ನಾನು ನೋಡಿದಂತೆ ಪ್ರತಿ ಗಂಡು ವಿದ್ಯಾರ್ಥಿಯೂ ಉದ್ಯೋಗಕ್ಕಾಗಿ ಹಾತೊರೆಯುತ್ತಿರುತ್ತಾನೆ. ಮೀಸಲಾತಿಯ ಬಗ್ಗೆ ಇರುವ ಪೂರ್ವಾಗ್ರಹವನ್ನು ಜೀವಂತವಾಗಿರಿಸಿಯೇ ಮೀಸಲಾತಿಯನ್ನು ಅರ್ಥಹೀನಗೊಳಿಸುವಲ್ಲಿ ಖಾಸಗೀಕರಣ ಸಫಲಗೊಂಡಿದೆ. ಮೀಸಲಾತಿ ನೀತಿಯ ಬಗ್ಗೆ ಅದರ ಲಾಭ ಪಡೆದುಕೊಳ್ಳುತ್ತಿರುವ ದಲಿತೇತರ ಸಮುದಾಯಗಳೂ ಕೆಲವೊಮ್ಮೆ ಅಸಹನೆ ಹೊರಹಾಕುತ್ತಾರೆ. ಇನ್ನು ಹಿಂದುತ್ವದ ಬಗ್ಗೆಯಂತೂ ಹೆದರಿಕೆ ಹುಟ್ಟುವಷ್ಟು ವ್ಯಸನ ಸಾಂಕ್ರಾಮಿಕವಾಗಿದೆ. ಮಕ್ಕಳ ನೈತಿಕ ಅಧಃಪತನದ ಬಗ್ಗೆ ಮಾತನಾಡುವಾಗ ಡ್ರಗ್ ಅಡಿಕ್ಷನ್, ಸಿಗರೇಟು, ಮದ್ಯ, ಗುಟ್ಕಾ ವ್ಯಸನದ ಬಗ್ಗೆ ಬೇಕಷ್ಟು ಮಾತನಾಡಬಹುದು, ಕಾಳಜಿ ವ್ಯಕ್ತಪಡಿಸಬಹುದು, ಎನ್‌ಕ್ವೈರಿ ನಡೆಸಬಹುದು ಇತ್ಯಾದಿ ಇತ್ಯಾದಿ. ಆದರೆ ಇವೆಲ್ಲಕ್ಕಿಂತಾ ಅಪಾಯಕಾರಿಯಾದ ಮಹಾರೋಗವನ್ನು ಡಯಗ್ನೋಸ್ ಮಾಡುವ ಹಾಗೂ ಇಲ್ಲ.

ಇವೆಲ್ಲಾ ರೋಗಗಳಿಗೆ ಒಂದೇ ಕಾರಣ. ಅದೇ ಲಿಂಗ ತಾರತಮ್ಯ. ಅದಕ್ಕೆ ಬಲವಾದ ಮದ್ದು ಅರೆಯಬೇಕಿದೆ. ಅರಿವಿನ ಪಯಣ ಲಸಿಕೆಯ ಕೆಲಸ ಮಾಡುತ್ತಿದೆ. ಈ ಯೋಜನೆಯನ್ನು ರೂಪಿಸಿದವರಿಗೆ ಧನ್ಯವಾದಗಳು. ಲಸಿಕೆಗೂ ಪ್ರತಿರೋಧ ಬರುವುದುಂಟು. ಒಂದು ಸಂಸ್ಥೆಯ ಒಳಗೇ ಬರದಂತೆ ತಡೆಯುವವರಿದ್ದಾರೆ. ಮುಖ್ಯಕಾರಣ ಏನೆಂದರೆ ಈ ಮಹಾರೋಗವನ್ನು ರೋಗವೆಂದೇ ಪರಿಗಣಿಸಿಲ್ಲ ಮತ್ತು ಲಸಿಕೆ ಮತ್ತು ಮದ್ದೇ ರೋಗವೆಂದು ಪರಿಗಣಿಸಲ್ಪಡುತ್ತಿವೆ. ಇವರು ಮೂಢರಲ್ಲ ಬದಲು ಅತೀ ಜಾಣರು. ಈ ಜಾಣರನ್ನು ಮನುಜರನ್ನಾಗಿ ಪರಿವರ್ತಿಸುವ ಸವಾಲು ಎದುರಿಗಿದೆ.

ಲಿಂಗತಾರತಮ್ಯ ಎಂಬ ವಿಷ ಸಮಾಜದ ಎದೆ ಹಾಲಿನಲ್ಲೇ ಬೆರೆತುಹೋಗಿದೆ. ಸೀಸದಂತಹ ವಿಷ ಅದು. ಈ ವಿಷ ಯಾವೆಲ್ಲಾ ರೋಗಗಳಿಗೆ ಆಶ್ರಯ ಕೊಟ್ಟು ಬೆಳೆಸುತ್ತಾ ಹೋಗುತ್ತದೆ ಎಂದರೆ ಪುರುಷ ಪ್ರಾಧಾನ್ಯತೆ, ಮದ್ಯ, ಧೂಮಪಾನ ವ್ಯಸನ,

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಜೂಜು, ವೇಶ್ಯಾವೃತ್ತಿ, ಹೆಣ್ಣಿನ ಮೇಲೆ ನಿರ್ಬಂಧ ಹೇರುವುದು, ಬುರ್ಖಾ ಪದ್ಧತಿ, ದೇವದಾಸಿ ಪದ್ಧತಿ ಒಂದೇ ಎರಡೇ...... ಎಲ್ಲವಕ್ಕೂ ಆಯಾಯು ಔಷಧಿ ಪ್ರಯತ್ನಿಸುವುದಕ್ಕಿಂತ ಮೂಲಕಾರಣಕ್ಕೆ ಮದ್ದರೆಯುವುದೇ ಸರಿಯಾದ ಮಾರ್ಗ. ನಿಸ್ಸಂಶಯವಾಗಿ ಸಮಾಜ ಆರೋಗ್ಯಕರವಾಗಿ ರೂಪುಗೊಳ್ಳುವಲ್ಲಿ ಅರಿವಿನ ಪಯಣ ಪ್ರಮುಖ ಪಾತ್ರ ವಹಿಸುತ್ತದೆ.

ಸಾಮಾನ್ಯವಾಗಿ ಲಿಂಗತಾರತಮ್ಯ, ಸ್ತ್ರೀ ಸಂವೇದನೆ, ಸ್ತ್ರೀ ವಾದ ಈ ಎಲ್ಲಾ ವಿಷಯಗಳು ಹೆಣ್ಣು ಮಕ್ಕಳ ಮಧ್ಯೆಯೇ ಚರ್ಚಿತಗೊಳ್ಳಬೇಕು ಎಂಬ ತಪ್ಪು ಅಭಿಪ್ರಾಯ ಇದೆ. ಅರಿವಿನ ಪಯಣವನ್ನು ನಡೆಸಿದ ಅನುಭವವನ್ನು ಗಣನೆಗೆ ತೆಗೆದುಕೊಂಡರೆ ಈ ಎಲ್ಲಾ ವಿಷಯಗಳು ಗಂಡು ಮಕ್ಕಳ ನಡುವೆಯೇ ಚರ್ಚೆಗೊಳ್ಳಬೇಕಿದೆ ಎಂಬುದು ಮನದಟ್ಟಾಗುತ್ತದೆ. 'ಮೊದಲು ನೀವು ಸರಿಯಾಗಿ ಆ ಮೇಲೆ ನಮಗೆ ಹೇಳಿ. ಅತ್ತೆ–ಸೊಸೆ, ಗೆಳತಿಯರು ಇವರೆಲ್ಲಾ ಕಚ್ಚಾಡಿಕೊಳ್ಳುತ್ತಾರೆ ಅವರ ಸಮಸ್ಯೆ ಬಗೆಹರಿಸಿಕೊಳ್ಳಿ ನಂತರ ನಮ್ಮ ಸುದ್ದಿಗೆ ಬನ್ನಿ' ಎಂದು ಗಂಡು ವಿದ್ಯಾರ್ಥಿಗಳು ಪುರುಷ ಪ್ರಾಧಾನ್ಯತೆಯ ಡೆಫನಿಷನ್ ಹೇಳಲು ಹೋದಾಗಲೇ ತಡೆಯುತ್ತಾರೆ. ಸೈನಿಕರ ದೌರ್ಜನ್ಯವನ್ನಂತೂ ಎತ್ತುವ ಹಾಗೇ ಇಲ್ಲ. ಸೈನಿಕರ ಬಗ್ಗೆ ಗೌರವವಿರುವವರು ಅವರ ಮೇಲೆ ನಡೆಯುವ ದೌರ್ಜನ್ಯಗಳನ್ನು ವಿರೋಧಿಸಿ ಆದರೆ ಅವರು ನಡೆಸುವ ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯವನ್ನು ಮುಚ್ಚಿ ಹಾಕುವಿರೇಕೆ? ಎಂದು ಕೇಳಿದರೆ ಉಗ್ರವಾಗಿ ಪ್ರತಿಭಟಿಸುತ್ತಾರೆ. ಹೀಗೆ ಧಮಕಿ ಹಾಕುವ ವಿದ್ಯಾರ್ಥಿಗಳಲ್ಲಿ ಭಯೋತ್ಪಾದಕ ಕಾಣುತ್ತಾನೆ. ಆದರೆ ಅವರಿಗೆ ಭಯೋತ್ಪಾದಕ ಅಂದರೆ ಬೇರೆನೇ ಕಲ್ಪನೆ. ಮುಗಿಯದ ಕಥೆ....... ಹಾಗಾಗಿ ಅರಿವಿನ ಪಯಣದ ಅವಶ್ಯಕತೆ ಗಂಡು ಮಕ್ಕಳಿಗೆ ಇದೆ.

ನಮ್ಮ ಕೇರಿಯ (ಇಲ್ಲಿಯವರೆಗೆ ಹೆಣ್ಣು ಮಕ್ಕಳನ್ನು ಮಾತ್ರ ಸಾಧ್ಯವಾಗಿದೆ) ಜನರನ್ನು ಸಂಘಟಿಸಲೂ ಅರಿವಿನ ಪಯಣದ ಕಲ್ಪನೆ ಸಹಾಯ ಮಾಡಿದೆ. ದು. ಸರಸ್ವತಿಯವರು ಬಂದು ನಡೆಸಿಕೊಟ್ಟ ಪಯಣದಿಂದ ನಮ್ಮ ಸುತ್ತಲಿನ ಹೆಣ್ಣುಮಕ್ಕಳಲ್ಲಿ ಒಂದು ಹೊಸ ಉತ್ಸಾಹ ಸಂಚಲನವಾಗಿದೆ. ಇವೆಲ್ಲಕ್ಕೂ ಅರಿವಿನ ಪಯಣಕ್ಕೆ, ಒಕ್ಕೂಟದ ಶಕ್ತಿಗೆ ನಾನು ಆಭಾರಿ.

*(ಸಾಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ)*

❖

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಜಾಗೃತಿಯ ನಡೆ: ಎಂ.ಜಿ. ಗಾಯತ್ರಿ, ತೀರ್ಥಹಳ್ಳಿ

**ಡಾ.** ಎಚ್.ಎಸ್. ಅನುಪಮರವರ ಪ್ರೀತಿಯ ಆಹ್ವಾನದ ಸೆಳೆತಕ್ಕೆ ಕುಪ್ಪಳ್ಳಿಯಲ್ಲಿ ನಡೆದ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಒಂದು ಕಾರ್ಯಾಗಾರದಲ್ಲಿ ಭಾಗವಹಿಸಿದಾಗ ಸಂಘಟನೆಯ ಧ್ಯೇಯೋದ್ದೇಶಕ್ಕೆ, ಪ್ರೀತಿ ಭಾವಕ್ಕೆ ಮನ ಮಾರುಹೋಗಿತ್ತು. ಅಂದು ಇದೊಂದು ನಾಮಕಾವಸ್ಥೆಯ ಸಂಘಟನೆಯಲ್ಲ, ಪ್ರೇರಕ ಶಕ್ತಿ ಎಂದರಿಯಲು ಹೆಚ್ಚು ಹೊತ್ತು ಹಿಡಿಯಲಿಲ್ಲ. ಶತಮಾನಗಳಿಂದ ಹೆಣ್ಣೆಂಬ ಕಾರಣಕ್ಕೆ ದೌರ್ಜನ್ಯಕ್ಕೊಳಗಾಗಿ ನೊಂದು ಬೆಂದು ತಾಳಿದ ಬಾಳಿದ ಜೀವಗಳ ದನಿಯಾಗಿ ಸಾಕಿನ್ನು ನನ್ನ ಹಕ್ಕಿಗಾಗಿ ನಾನು ಹೋರಾಡಬಲ್ಲೆ, ಮೂಕವೇದನೆಯ ದನಿಯಾಗಬಲ್ಲೆನೆಂಬ ಆತ್ಮವಿಶ್ವಾಸದ ಗುಂಪನ್ನು ಆ ಕ್ಷಣ ಕಂಡಾಗ ಎಷ್ಟೋ ವರ್ಷಗಳ ಮನಸ್ಸಿನ ಹುಡುಕಾಟಕ್ಕೆ ಸಂದ ಜಯ ಎಂದು ಅನಿಸಿತು.

ಸ್ತ್ರೀಯರು ಪುರುಷರ ಕೈಗೊಂಬೆಗಳಲ್ಲ, ಆಕೆಗೂ ಮನಸ್ಸಿಗೆ ನೋವು ನಲಿವು ಆಸೆ–ಆಕಾಂಕ್ಷೆಗಳಿವೆ. ಆಕೆಯು ಎಲ್ಲರಂತೆ ಸಮಾಜದ ಸಮಾನ ಪ್ರಜೆ. ಆಕೆಗೆ ಸಲ್ಲಬೇಕಾದ ಸ್ಥಾನಮಾನ ಗೌರವ ಯಾರ ಕೃಪೆಯೂ ಅಲ್ಲ, ಅದು ಅವಳ ಹಕ್ಕು ಎಂಬ ಮನಸ್ಥಿತಿಯೂ ನನಗೆ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದಲ್ಲಿ ಮನದಟ್ಟಾಯಿತು. ದು. ಸರಸ್ವತಿ ಅನುಪಮಾ, ವಾಣಿ ಪೆರಿಯೋಡಿ, ರೇಖಾಂಬಾ ಮೊದಲಾದವರ ಜೊತೆ ಜೊತೆಗೆ ಕರೆದುಕೊಂಡು ಹೋಗುವ ಸಹೋದರಿಯರ ಸಮೂಹ ನನ್ನ ಆತ್ಮವಿಶ್ವಾಸ ಆಶಾಕಿರಣ ಇಮ್ಮಡಿಗೊಳಿಸಿದೆ.


ಅಂತೆಯೇ ಕಳೆದ ಬಾರಿ ನಮ್ಮದೇ ಶಿವಮೊಗ್ಗ ಜಿಲ್ಲೆಯಲ್ಲಿ ಇದೇ ಸಂಘಟನೆ ಮಹಿಳಾ ದಿನಾಚರಣೆ ಹಮ್ಮಿಕೊಂಡಾಗ 'ವಿಮೆನ್ ಇನ್ ವೈಟ್' ಕಾರ್ಯಕ್ರಮವನ್ನು ತೀರ್ಥಹಳ್ಳಿಯಲ್ಲಿಯೂ ಏರ್ಪಡಿಸಿ ನಮ್ಮ ಧ್ಯೇಯೋದ್ದೇಶಗಳನ್ನು ಮೌನದ ಮೂಲಕವೇ ಸಮಾಜಕ್ಕೆ ತಿಳಿಯಪಡಿಸಿದ ಹಾಗೂ ಇದರಲ್ಲಿ ಹೆಚ್ಚಿನ ಮಹಿಳೆಯರು, ಪ್ರಗತಿಪರ ಚಿಂತಕರು ಭಾಗವಹಿಸಿದ್ದು ಹಾಗೂ 83 ವರ್ಷದ ಸಮಾಜಸೇವಕಿ ನಿವೃತ್ತ ಶುಶ್ರೂಷಕಿಯೂ ಆದ ಜೆನ್ನಿ ಬಾಯಮ್ಮನವರು ಶಿವಮೊಗ್ಗದ ರ‍್ಯಾಲಿಯಲ್ಲಿ ಭಾಗವಹಿಸುವಂತೆ ಮಾಡಿದ್ದು ಒಂದು ಅಭೂತಪೂರ್ವ ಅನುಭವ. ಆದರೂ ರ‍್ಯಾಲಿ ಸಂದರ್ಭದಲ್ಲಿ ಈ ಮಹಿಳಾ ದಿನಾಚರಣೆ ಹೆಸರಿನಲ್ಲಿ ದುಂದುವೆಚ್ಚಕ್ಕೊಂದು ದಾರಿಯಷ್ಟೇ, ಇದರಿಂದ ಹೆಣ್ಣಿನ ಮೇಲಿನ ದೌರ್ಜನ್ಯ ನಿಲ್ಲಲು ಸಾಧ್ಯವೆ? ಎಂಬ ಅನುಮಾನ ಅಲ್ಲಲ್ಲಿ ಜನರಿಂದ ವ್ಯಕ್ತವಾದಾಗ 'ನಮ್ಮನ್ನು ನಮ್ಮಂತೆ ಬದುಕಲು ಬಿಡಿ' ಎಂಬ ಕೂಗಿನ ಒಂದು ಕಿಡಿ ಈ ರೀತಿ ಆರಂಭಗೊಂಡಿರುವುದು ಒಂದು ಕ್ರಾಂತಿಯ ಸಂಕೇತ, ಚಳವಳಿಯ ಆರಂಭ ಎನಿಸಿತು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಭಾವುಕ ಜೀವಿಯಾದ ಹೆಣ್ಣಿಗೆ ಬೇಕಾಗಿರುವುದು ಗಂಡಿನ ಕ್ರೌರ್ಯ, ದೌರ್ಜನ್ಯವಲ್ಲ; ಬದಲಿಗೆ ಪ್ರೀತಿ, ವಿಶ್ವಾಸ, ಸಮಾನತೆ. ಮಳೆ ಬಂದಾಗ ಮಾತ್ರ ಹಳ್ಳ ತುಂಬುವಂತೆ ಹೀನ ಘಟನೆ ನಡೆದಾಗ ಸಿಡಿದೇಳುವ ಜನ ದಿನಗಳೆದಂತೆ ತಣ್ಣಗಾಗುವದೇ ದೌರ್ಜನ್ಯ ಮರುಕಳಿಸಲು ಕಾರಣವಾಗುತ್ತಿದ್ದು ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಅತ್ಯಾಚಾರ, ಅನಾಚಾರ, ದೌರ್ಜನ್ಯ ತಡೆಗಟ್ಟಲು ಉಗ್ರ ಹೋರಾಟ ಖಂಡಿತಾ ಅನಿವಾರ್ಯ. ಇದಕ್ಕೆ ಕ್ರಾಂತಿಯಾಗಲೇಬೇಕು. ಇಂತಹ ಕ್ರಾಂತಿಗೀಗ ಈ ಮೂಲಕ ಪ್ರಶಸ್ತ ಕಾಲ. ಜಾಗೃತಿ, ಅರಿವು ಮೂಡಿದ್ದು, ಮುಂದೊಂದು ದಿನ ಕರ್ನಾಟದ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಟೀಕೆ, ಟಿಪ್ಪಣಿಗಳನ್ನು ಮೀರಿ ಎಲ್ಲಾ ಬಗೆಯ ಮಹಿಳಾ ಸಮಸ್ಯೆಗಳಿಗೂ ಪ್ರಬಲ ಅಸ್ತ್ರವಾಗಬಲ್ಲದು ಎಂಬ ಸಕಲ ಮುನ್ಸೂಚನೆ ಈ ಸಂಘಟನೆ ಮೂಲಕ ನನಗೆ ಗೋಚರಿಸುತ್ತಿದೆ.

*(ಹವ್ಯಾಸಿ ಪತ್ರಕರ್ತೆ, ತೀರ್ಥಹಳ್ಳಿ)*

❖



Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಬೆಳಗಲಿ ಮೌನ ಜಾಗೃತಿಯ ದೀಪ: ಹೊನ್ನಾಳಿ ಚಂದ್ರು

**2018ರ** ಮಾರ್ಚ್ 8ರ ಸಂಜೆ ಶಿವಮೊಗ್ಗದ ಗೋಪಿ ವೃತ್ತದ ಚಿತ್ರಣ ಇವತ್ತಿಗೂ ಕಣ್ಣಿಗೆ ಕಟ್ಟಿದಂತಿದೆ. ಇದೇ ಜಾಗದಲ್ಲಿ ಇದುವರೆಗೆ ಸಾವಿರಾರು ಪ್ರತಿಭಟನೆಗಳು ನಡೆದಿವೆ. ಲಕ್ಷಾಂತರ ಘೋಷಣೆಗಳು ಮೊರೆದಿವೆ. ಆದರೆ ಅಂದು ಸಂಜೆಯ ಘಟನೆ ಮಾತ್ರ ಅವಿಸ್ಮರಣೀಯ. ಅದು ಮೌನ ಜಾಗೃತಿಯ ಪ್ರಯತ್ನ.

ಅದೊಂದು ವಿನೂತನ ಪ್ರತಿಭಟನೆ.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಆಯೋಜಿಸಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮ ಪ್ರಯುಕ್ತ ಅಲ್ಲಿ ನೂರಾರು ಮಹಿಳೆಯರು ನೆರೆದಿದ್ದರು. ಬಹುತೇಕ ಎಲ್ಲರೂ ಬಿಳಿ ಉಡುಪು ಧರಿಸಿದ್ದರು. ಹಲವು ಪುರುಷರೂ ಸಹ ಕೈಜೋಡಿಸಿದ್ದರು. ಕತ್ತಲಾಗುತ್ತಿದ್ದಂತೆ ಕೈಯಲ್ಲಿದ್ದ ಮೊಂಬತ್ತಿ ಬೆಳಗಿಸಿದ್ದರು. ಮಹಿಳೆಯರ ಮೇಲೆ ಶತಶತಮಾನಗಳಿಂದ ನಡೆಯುತ್ತಿರುವ ದೌರ್ಜನ್ಯಕ್ಕೆ ವಿರುದ್ಧವಾಗಿ ಇಲ್ಲಿ ಮೌನವೇ ಪ್ರತಿರೋಧವಾಗಿತ್ತು. ಅರಿವಿನ ಬೆಳಕಾಗಿತ್ತು. ಹೆಣ್ಣೆಂದರೆ ಭೋಗವಲ್ಲ, ಮುಟ್ಟೆಂದರೆ ಕೀಳಲ್ಲ ಎಂಬ ಸರಳ ಮಾತುಗಳನ್ನು ಮೌನ ಜಾಗೃತಿಗಿಂತ ಸಮರ್ಥವಾಗಿ ಹೇಳುವ ಮತ್ತೊಂದು ಭಾಷೆ ಇಲ್ಲ ಎನ್ನುವುದನ್ನು ಈ ಬೆಳಕು ತೋರಿತ್ತು.

ಇಂತಹ ಮೌನ ಜಾಗೃತಿ ಶಿವಮೊಗ್ಗದಲ್ಲಿ ಮಾತ್ರ ನಡೆದಿದ್ದಲ್ಲ. ಜಿಲ್ಲೆಯ ವಿವಿಧೆಡೆ ಬಿಳಿ ಉಡುಪು ತೊಟ್ಟ ಮಹಿಳೆಯರು ಸಂಜೆಗತ್ತಲಲ್ಲಿ ಮೊಂಬತ್ತಿ ಹಿಡಿದು ಮೌನವಾಗಿ ನಿಂತು ಜಾಗೃತಿಯ ಬೆಳಕು ಮೂಡಿಸಿದ್ದರು. ಅಂದು ಇಡೀ ದಿನ ಅಂಬೇಡ್ಕರ್ ಭವನದಲ್ಲಿ ನಡೆದಿದ್ದ ವಿಚಾರ ಸಂಕಿರಣ, ಮರುದಿನ ನಡೆಯಬೇಕಿದ್ದ ಜಾಥಾ, ನೆಹರೂ ಕ್ರೀಡಾಂಗಣದಲ್ಲಿ ಆಯೋಜನೆಯಾಗಿದ್ದ ಬಹಿರಂಗ ಸಮಾವೇಶಗಳ ನಡುವೆ ಗೋಪಿ ವೃತ್ತದಲ್ಲಿ ನಡೆದ ಮೌನ ಜಾಗೃತಿ ಪ್ರಮುಖ ಎಂದರೆ ಅತಿಶಯೋಕ್ತಿಯಲ್ಲ.

ಮಹಿಳಾ ದಿನಾಚರಣೆ ಒಂದು ದಿನದಲ್ಲಿ, ಒಂದು ವಾರದಲ್ಲಿ ಆಗಿದ್ದಲ್ಲ. ಬಹುತೇಕ ಒಂದು ವರ್ಷದ ಶ್ರಮ ಅದು. ನಿರಂತರ ಸಭೆಗಳು, ಸಿದ್ಧತಾ ಚಟುವಟಿಕೆಗಳು, ವಿವಿಧ ಗುಂಪುಗಳು, ವ್ಯಕ್ತಿಗಳೊಂದಿಗೆ ಚರ್ಚೆ, ರಾಜ್ಯ ಹೊರರಾಜ್ಯದಿಂದ ಜೋಡಿಸಿದ ಕೈಗಳು ಒಟ್ಟಾಗಿ ಈ ಸಮಾವೇಶ ನಡೆದಿತ್ತು. ಕಾರ್ಯಕ್ರಮ ಎಂದರೆ ದುಡ್ಡು ಖರ್ಚಾಗುವುದು ಸಹಜವೇ. ಆದರೆ ಯಾರಿಂದ ಹಣ ಪಡೆಯಬೇಕು, ಅವರು ಕೊಟ್ಟರೆ ಅವರಿಂದ ಎಷ್ಟು ಹಣ ಪಡೆಯಬೇಕು ಎಂಬ ಸ್ವಯಂನಿಯಂತ್ರಣದ ಪಾಠ ಹೇಳಿತ್ತು. ಹತ್ತಾರು ರೂಪಾಯಿಗಳಿಗೆ ನೂರಾರು ಜನರು ಕರವಸ್ತ್ರಗಳನ್ನು, ಕಿರುಹೊತ್ತಿಗೆಗಳನ್ನು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮಾರಿ ಹಣ ಸಂಗ್ರಹಿಸಿದ್ದರು. ಸಮಾವೇಶದ ಉದ್ದೇಶ ಕೇಳುತ್ತಿದ್ದಂತೆ ಒಂದು ಕರವಸ್ತ್ರ ಖರೀದಿಸುವವರು ಹತ್ತು ಖರೀದಿಸಿದ್ದರು. ಜನರಿಂದ ಪಡೆದ ಪೈಸೆಪೈಸೆಯಿಂದಲೇ ಜನರಿಗಾಗಿ ಮಾಡಿದ ಈ ಸಮಾವೇಶ ಸಂಘಟನಾತ್ಮಕವಾಗಿಯೂ ಸಹ ಹೊಸದೊಂದು ಪಾಠವನ್ನು ನಮ್ಮಂತಹ ಸಂಘಟಕರಿಗೆ ಹೇಳಿತ್ತು.

ವಿವಿಧ ಜವಾಬ್ದಾರಿಯನ್ನು ವಹಿಸಿಕೊಂಡ ನಿರ್ವಹಿಸಿದ ಸಾವಿರಾರು ಕೈಗಳು ಈ ಎರಡು ದಿನ ಶಿವಮೊಗ್ಗದ ನೆಲದಲ್ಲಿ ಒಟ್ಟಾಗಿದ್ದವು. ಇಡೀ ಕನ್ನಡ ನೆಲದ ಮಹಿಳೆಯರು, ದೌರ್ಜನ್ಯ ವಿರೋಧಿಗಳು ಒಂದೆಡೆ ಸೇರುವ ಮೂಲಕ ಇಂತಹ ಯೋಚನೆಗಳನ್ನು ಮನದಲ್ಲಿಟ್ಟುಕೊಂಡು ಎಲ್ಲಿಗೆ ಹೋಗಬೇಕು ಎಂದು ಕಿರುಗಣ್ಣಿನಲ್ಲಿ ಕಾಯುತ್ತಿದ್ದ ಹಲವರನ್ನು ಒಂದುಗೂಡಿಸಿದ್ದವು.

ಈ ಸಮಾವೇಶ ಮುಗಿದ ನಂತರ ಮಹಿಳಾ ದೌರ್ಜನ್ಯ ವಿರೋಧಿಸುವ ಸಮುದಾಯ ಇನ್ನಷ್ಟು ವಿಸ್ತಾರವಾಗಿತ್ತು. ಶಿವಮೊಗ್ಗ ಹಲವು ಸಿದ್ಧಾಂತಗಳಿಗೆ ನೆಲೆ ಒದಗಿಸಿದ ನೆಲ. ಇಲ್ಲಿ ಸತ್ಯದ ಬೆಳಕು ಹುಡುಕುವುದು ಇತ್ತೀಚಿನ ದಿನಗಳಲ್ಲಿ ಇನ್ನಷ್ಟು ಕಷ್ಟ. ಇಂತಹ ಸಂದರ್ಭದಲ್ಲಿ ನಡೆದ ಮಹಿಳಾ ಸಮಾವೇಶವು ಎಷ್ಟೋ ಯುವಜನರನ್ನು ಸತ್ಯದತ್ತ ಕರೆದುಕೊಂಡು ಬಂದಿತ್ತು.

ವರ್ಷಕ್ಕೊಮ್ಮೆ ನಡೆಯುವ ಈ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು, ಜಾಗೃತಿಯನ್ನು ಒಂದು ತಪಸ್ಸಿನಂತೆ ಮಾಡುತ್ತಿರುವ ಬಳಗದ ಭಾಗೀದಾರರ ಸಂತತಿ ಬೆಳೆಯುತ್ತಿರುವುದೇ ಕರ್ನಾಟಕದ ಮಟ್ಟಿಗೆ ದೊಡ್ಡ ಜಾಗೃತಿ.

ಅಂದು ಜಾಥಾದಲ್ಲಿ ಭಾಗವಹಿಸಿದ್ದ ಮಹಿಳೆಯರು ಹಿಡಿದುಕೊಂಡಿದ್ದ ಬಣ್ಣಬಣ್ಣದ ಛತ್ರಿಗಳ ಮೇಲೆ ಘೋಷಣೆಗಳನ್ನು ಕಲಾವಿದರ ಜತೆಗೂಡಿ ಬರೆಯಿಸುವ ಕೆಲಸ ನನ್ನ ಹಲವು ಜವಾಬ್ದಾರಿಗಳಲ್ಲಿ ಒಂದಾಗಿತ್ತು. ಜಾಥಾ ಮುಗಿದ ನಂತರ ಈ ಛತ್ರಿಗಳು ಘೋಷಣೆಯ ಸಮೇತ ಹಲವರ ಮನೆ ಸೇರಿವೆ. ಅಲ್ಲಿ ಜಾಗೃತಿಯ ದೀಪ ಬೆಳಗುತ್ತಿದೆ.

*(ಪತ್ರಕರ್ತರು ಹಾಗೂ ರಂಗಕರ್ಮಿ, ರಂಗ ಸಂಘಟಕರು, ಶಿವಮೊಗ್ಗ.)*

❖

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಅರಿವಿನೊಂದಿಗೆ ಪ್ರೀತಿಯ ತೊರೆ: ಭಾಸ್ಕರ್, ರಂಗಬೆಳಕು ತಂಡ

**ಹೋ**ದ ವರ್ಷ ಶಿವಮೊಗ್ಗದಲ್ಲಿ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಅಂತಾರಾಷ್ಟ್ರೀಯ ಮಹಿಳಾ ದಿನದ ನೆಪದಲ್ಲಿ ಮಾರ್ಚ್ ತಿಂಗಳಲ್ಲಿ ಸಂಘಟಿಸಿದ್ದ ಕಾರ್ಯಕ್ರಮದ ತಯಾರಿ ಫೆಬ್ರವರಿ ತಿಂಗಳಲ್ಲಿ ಕಾವು ಪಡೆದುಕೊಂಡಿತ್ತು. ಒಕ್ಕೂಟದ ಪ್ರೀತಿಯ ರಾಜಕಾರಣದ ಕರೆಗೆ ರಂಗಬೆಳಕು ತಂಡದವರಾದ ನಾವು ಸಾಧ್ಯವಾದಷ್ಟು ಮಟ್ಟಿಗೆ ಹೆಜ್ಜೆ ಹಾಕಲು ತೀರ್ಮಾನ ಮಾಡಿದ್ದೆವು. ಸಂಘಟನೆಗಳು ವ್ಯಕ್ತಿ ಕೇಂದ್ರಿತವಾಗಿ ಅಥವಾ ವ್ಯಕ್ತಿ ಮತ್ತು ವಿಚಾರದ ನಂಟು ಇಲ್ಲದೆ ಅಥವಾ ವಿಚಾರ ಕೇವಲ ಯಾಂತ್ರಿಕವಾಗಿ, ಮಾತು ಮತ್ತು ಆಚರಣೆಗಳ ನಡುವೆ ದೊಡ್ಡ ಕಂದಕಗಳು ಉಂಟಾಗಿ ಈ ವಿಚಾರ ಸಂಕಿರಣ ಕಾರ್ಯಕ್ರಮಗಳು ಸಮಾವೇಶಗಳು ಅರ್ಥ ಕಳೆದುಕೊಳ್ಳುತ್ತಿರುವುದನ್ನು ಗಮನಿಸುತ್ತಿದ್ದು, ಅವುಗಳ ಕುರಿತು ನಿರಾಸಕ್ತಿ ಉಂಟಾಗಿದ್ದು, ನಾವು ಒಕ್ಕೂಟದ ಪೂರ್ವಭಾವಿ ಸಭೆಗೆ ಅರೆ ಮನಸ್ಸಿನಲ್ಲಿ ಭಾಗವಹಿಸಿದ್ದೆವು. ಆದರೆ ಒಕ್ಕೂಟದ ಮುಂದಾಳುಗಳು ಈ ನಿರಾಸಕ್ತಿ, ಬಳಲಿಕೆ ಉಂಟುಮಾಡುತ್ತಿರುವ ಜಡ್ಡುಗಟ್ಟಿದ ಸವಕಲು ದೃಷ್ಟಿಕೋನ ಮತ್ತು ಮಾದರಿಗಳಿಂದ ಬಿಡಿಸಿಕೊಂಡು ಹೊಸ ದಾರಿಗಳನ್ನು ಅತ್ಯಂತ ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ಹುಡುಕುತ್ತಿರುವುದು ಅರ್ಥವಾಯಿತು. ನಮ್ಮದೇ ಮಿತಿಗಳಲ್ಲಿ ಒಕ್ಕೂಟದ ಕಾರ್ಯಕ್ರಮಗಳಲ್ಲಿ ಬೇಷರತ್ತಾಗಿ ಪಾಲ್ಗೊಳ್ಳಬೇಕೆಂದು ನಮ್ಮ ತಂಡ ನಿರ್ಧಾರ ಮಾಡಿತು. ಹಬ್ಬಗಳಲ್ಲಿ ಸೇರಿಕೊಳ್ಳುವ ನಮ್ಮ ಅಮ್ಮ, ಚಿಕ್ಕಮ್ಮ, ದೊಡ್ಡಮ್ಮಂದಿರೂ, ಅಕ್ಕ-ತಂಗಿಯರು ಅಪಾರ ಪ್ರೀತಿ, ಕಾಳಜಿ, ಅಕ್ಕರೆಯಿಂದ ಮಾತು, ಕೆಲಸಗಳಲ್ಲಿ ಮುಳುಗಿರುವಂತೆ, ಒಕ್ಕೂಟದ ಗೆಳತಿಯರು ಕಾರ್ಯಕ್ರಮ ರೂಪಿಸುವಲ್ಲಿ ತೊಡಗಿಕೊಂಡಿದ್ದರು. ಹಾಗಾಗಿ ಈ ಸಭೆ, ಕಾರ್ಯಕ್ರಮ, ವಿಚಾರ ನಮ್ಮದೇ ಅನಿಸಿತು.

ಬಹುಶಃ ನಿಜವಾದ (ಪ್ರಾಮಾಣಿಕವಾದ) ಕಾಳಜಿಯ ಭಾಗವಾಗಿ ಕಾರ್ಯಕ್ರಮ ರೂಪಿಸಿದ್ದರಿಂದಲೇ ಅರಿವಿನ ಪಯಣ ಎಂಬ ಅರ್ಥಪೂರ್ಣ ಮಾದರಿ ರೂಪುಗೊಳ್ಳಲು ಸಾಧ್ಯವಾಯಿತು ಎನಿಸುತ್ತದೆ. ಅಕ್ಷರದವ್ವ ಸಾವಿತ್ರಿಬಾಯಿ ಫುಲೆಯವರ ಸ್ಫೂರ್ತಿಯೊಂದಿಗೆ ಸಾಧ್ಯವಾದಷ್ಟು ಶಾಲಾ-ಕಾಲೇಜು ಮತ್ತು ಬಹಳ ಮುಖ್ಯವಾಗಿ ಹಳ್ಳಿಗಳಿಗೆ, ಅದರಲ್ಲೂ ದಲಿತ ಕೇರಿಗಳಿಗೆ ಹೋಗಿ ಅಲ್ಲಿ ಮಾರ್ಚ್ 8, 9 ರ ಸಮಾವೇಶದ ನೆಪದಲ್ಲಿ ಹಾಡು ನಾಟಕ ಸಂವಾದ ಕಾರ್ಯಕ್ರಮ ಮಾಡಬೇಕೆಂಬುದು 'ಅರಿವಿನ ಪಯಣ', 'ಅರಿವಿನ ಅವ್ವನ ದೊಂದಿ ಹಿಡಿದು' ಕಾರ್ಯಕ್ರಮಗಳ ಒಟ್ಟು ಆಶಯ, ಗುರಿ. ಇದು ಅಪ್ಪಟ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಆಸಕ್ತಿ ಮತ್ತು ಕಾಳಜಿಯನ್ನು ಬೇಡುವ ಕಾರ್ಯಕ್ರಮ. ಮೈದಾನದಲ್ಲಿ ಸಾವಿರಾರು ಜನರನ್ನು ಸಂಘಟಿಸುವುದಕ್ಕಿಂತ ಇದು ಅತ್ಯಂತ ಮುಖ್ಯವಾದ, ತುರ್ತಿನ ಕೆಲಸ ಅನಿಸುತ್ತದೆ. ಜನ ನಾಯಕರು ಮತ್ತು ಸಂಘಟನೆಗಳು ಜನರ ನಡುವೆ ಹೋಗದಿರುವುದೇ ಬಹಳ ಮುಖ್ಯ ವೈಫಲ್ಯ. ಅರಿವಿನ ಪಯಣದ ಕಾರ್ಯಕ್ರಮಗಳು, ಬಹುಶಃ ಅದರಲ್ಲಿ ಭಾಗವಹಿಸಿದ ಎಲ್ಲ ಸಂಗತಿಗಳು ವಿಶೇಷ ಅನುಭವವನ್ನು ಪಡೆದುಕೊಂಡಿದ್ದಾರೆ.

ಅರಿವಿನ ಪಯಣ ಎರಡು ಮುಖ್ಯ ವಲಯಗಳಲ್ಲಿ ನಡೆಯಿತು. ಒಂದು, ಶಾಲಾ ಕಾಲೇಜುಗಳ ವಿದ್ಯಾರ್ಥಿ– ವಿದ್ಯಾರ್ಥಿನಿಯರಿಗೆ. ಇನ್ನೊಂದು, ಹಳ್ಳಿಗಾಡಿನ ಜನರಿಗೆ. ಅದರಲ್ಲೂ ದಲಿತ ಕೇರಿಗಳಿಗೆ. ಒಂದು ವಲಯ ಅಕ್ಷರಸ್ಥರಾಗಿದ್ದರೂ ತಾಂತ್ರಿಕ ಶಿಕ್ಷಣ ವ್ಯವಸ್ಥೆಯಿಂದ, ಅರಿವಿನಿಂದ ವಂಚಿತರಾಗಿರುವವರು. ಎರಡನೆಯ ವಲಯ ಅಕ್ಷರ ಸೇರಿದಂತೆ ಎಲ್ಲದರಿಂದ ವಂಚಿತರಾಗಿರುವ ಜಾತಿ, ಲಿಂಗ, ಬಣ್ಣ, ವರ್ಗ ಮುಂತಾದ ತಾರತಮ್ಯಗಳಿಂದ, ಹಿಂಸೆಯಿಂದ ನಲುಗುತ್ತಿರುವ ಜನ ಸಮುದಾಯಗಳು ಭರವಸೆ ಕಳೆದುಕೊಂಡು ಹತಾಶರಾಗಿದ್ದಾರೆ. ಅರಿವಿನ ಪಯಣದ ಸಂಗಾತಿಗಳು, ಹಾಡು, ನಾಟಕ, ಚರ್ಚೆ, ಸಂವಾದಗಳ ಮೂಲಕ ವಿದ್ಯಾರ್ಥಿ ಸಮುದಾಯ ಮತ್ತು ಹಳ್ಳಿಯ ಜನರನ್ನು ಮುಖಾಮುಖಿಯಾದಾಗ ಸಿಕ್ಕ ಪ್ರತಿಕ್ರಿಯೆ ಪಯಣಕ್ಕೆ ಅರ್ಥ ತಂದುಕೊಟ್ಟಿದೆ ಮತ್ತು ಲೈಂಗಿಕ ಕಿರುಕುಳ, ಜಾತಿ, ಬಣ್ಣಗಳ ತಾರತಮ್ಯ ಮೇಲರಿಮೆ–ಕೀಳರಿಮೆಯ ಹೆಣ್ಣು ಗಂಡಿನ ಭೇದಭಾವ ವಿಷಯಗಳ ಕುರಿತು ವಿದ್ಯಾರ್ಥಿಗಳಿಗೆ ಇರುವ ತಿಳುವಳಿಕೆ ಮತ್ತು ಅದನ್ನು ಪಲ್ಲಟಗೊಳಿಸುವಾಗ ವ್ಯಕ್ತವಾಗುವ ಅಭಿಪ್ರಾಯ ಅನಿಸಿಕೆಗಳು ಯಶಸ್ವಿ ಪಯಣದ ಗುರುತುಗಳನ್ನು ನಮ್ಮ ನೆನಪಿನಲ್ಲಿ ಮೂಡಿಸಿವೆ. ಇನ್ನು, ಹಳ್ಳಿಗಳಲ್ಲಿ ನಡೆದ ಅರಿವಿನ ಪಯಣ ನಮ್ಮ ಕಾಳಜಿ, ಪ್ರೀತಿ, ಬದ್ಧತೆ, ಸಾಮರ್ಥ್ಯಗಳಿಗೆ ಸವಾಲು ಹಾಕುತ್ತದೆ ಮತ್ತು ಪರೀಕ್ಷೆಗೆ ಒಡ್ಡುತ್ತದೆ. ಸೀದಾ ಸಾದಾ ಹಳ್ಳಿಗೆ ಹೋಗುವುದು, ಕೇರಿ ಕೇರಿಗಳಲ್ಲಿ ಹಾಡುತ್ತಾ ಜನರನ್ನು ಒಂದು ಜಾಗಕ್ಕೆ ಒಟ್ಟುಗೂಡಿಸಿ ಕಾರ್ಯಕ್ರಮ ಮಾಡುವುದು. "ಕೂಲಿ–ನಾಲಿ ಮಾಡಿ ತಮ್ಮ ಕುಟುಂಬಗಳನ್ನು ಪೊರೆಯೋ ಈ ಹಳ್ಳಿಗಾಡಿನ್ ತಾಯಂದ್ರು ಸಿಟಿನಲ್ಲಿ ನಡೆಯೋ ನಮ್ಮ ಸಮಾವೇಶಕ್ಕೆ ಹೇಗ್ ಬಂದಾರು? ಅದಿಕ್ಕೆ, ನಾವೇ ಅಲ್ಲಿಗ್ ಹೋಗಬೇಕು ಕಣಾ. ಅವ್ರ ಕಷ್ಟ–ಸುಖ ವಿಚಾರಿಸ್‌ಬೇಕು" ಎಂದು ಪಯಣವನ್ನು ದಲಿತ ಕೇರಿಗಳಿಗೆ ತಿರುಗಿಸಿದ ಸಣ್‌ತಿಮ್ಮಕ್ಕನ (ದು.ಸರಸ್ವತಿ) ಒತ್ತಾಸೆ ಬಹಳ ನೆನಪಾಗುತ್ತದೆ.


ಒಂದಷ್ಟು ಶಾಲೆ, ಕಾಲೇಜುಗಳು ಮತ್ತು ಕೆಲವು ಹಳ್ಳಿಗಳಲ್ಲಿ ನಾವು ಕಾರ್ಯಕ್ರಮ ನೀಡುತ್ತಾ ಹೋದಂತೆ ನಮ್ಮ ಅರಿವಿನಲ್ಲಿ ಪಲ್ಲಟಗಳಾದವು. ನಾವು ಪಡೆದ ಶಿಕ್ಷಣ, ನಮ್ಮ ಶೈಕ್ಷಣಿಕ ಭಾಷೆ, ದಮನಿತರ ಸಾಮಾಜಿಕ ಸ್ಥಿತಿಗತಿಗಳ ಕುರಿತು ಮೇಲ್ಮಟ್ಟದ ತಿಳುವಳಿಕೆ, ಇನ್ನೂ ಮುಂತಾದ ಕಾರಣಗಳಿಂದ ವಿಚಾರ ಆಚರಣೆಗಳ ನಡುವೆ ಬಹಳ ದೊಡ್ಡ ಕಂದಕ ಉಂಟಾಗುತ್ತಿರುವುದು ಅರಿವಿಗೆ ಬರತೊಡಗಿತ್ತು. ಹಾಗಾಗಿ ಅರಿವಿನ ಪಯಣಕ್ಕೆ ಹಲವು ಗುರಿ, ಉದ್ದೇಶಗಳಿವೆ ಅನಿಸಿತು. ಅದು ಪಯಣದಲ್ಲಿ ಇರುವ

ಎಲ್ಲ ಸಂಗತಿಗಳಿಗೂ ಅರಿವನ್ನು ವಿಸ್ತರಿಸಿಕೊಳ್ಳುವ ಒಂದು ಅವಕಾಶ ಎನಿಸಿತು. ನಾವು ಸಣ್‌ತಿಮ್ಮಿಯ ಭಾಷೆ, ಕಾಳಜಿ, ಜವಾಬ್ದಾರಿ ಮತ್ತು ಜೀವನೋತ್ಸಾಹವನ್ನು ಮೈಗೂಡಿಸಿಕೊಳ್ಳಬೇಕು ಎಂದು ಬಹಳವಾಗಿ ಅನಿಸತೊಡಗಿದೆ.

ಅರಿವಿನ ಪಯಣದ ಭಾಗವಾಗಿ ದುರ್ಗಿಗುಡಿ ಶಾಲೆಯಲ್ಲಿ ಸಣ್‌ತಿಮ್ಮಿ ಬುದ್ಧನ ಕಥೆ ಹೇಳಿದಾಗ ನನಗೆ ರೆಕ್ಕೆ ಮೂಡಿ ಹಾರಿದಂತೆ ಭಾಸವಾಯಿತು. ಅಲ್ಲಿ ಜಿನುಗಿದ ಕಣ್ಣೀರನ್ನು ಹಾಗೆ ಕಾಪಿಟ್ಟುಕೊಂಡಿದ್ದೇನೆ. ನಮ್ಮ ರಂಗಬೆಳಕು ತಂಡಕ್ಕೆ ಒಕ್ಕೂಟದೊಂದಿಗೆ ಕೆಲಸ ಮಾಡುವ ಅವಕಾಶ ಸಿಕ್ಕಿದ್ದು ವಿಶೇಷ. ಒಕ್ಕೂಟದ ಎಲ್ಲರ ತೊರೆಯಂಥ ಪ್ರೀತಿಗೆ ನಾವು ಆಭಾರಿಗಳಾಗಿದ್ದೇವೆ.

*('ರಂಗಬೆಳಕು' ರಂಗತಂಡ, ಶಿವಮೊಗ್ಗ)*

❖






Edited with the trial version of Foxit Advanced PDF Editor
To remove this notice, visit: www.foxitsoftware.com/shopping

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಮಹಿಳಾಪರ ಮನಸುಗಳು ಒಂದೆಡೆ ಸೇರಲಿ:

**ಎಚ್. ಎಸ್. ಅನುಪಮಾ** (ಸಂದರ್ಶನ 'ಹೊಸಮನುಷ್ಯ' ಪತ್ರಿಕೆಗಾಗಿ)

**ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ರಚನೆಯಾದದ್ದರ ಹಿನ್ನೆಲೆ ತಿಳಿಸುವಿರಾ?**

ಆರು ವರ್ಷ ಕೆಳಗೆ, ಮಹಿಳೆಯರ ಮೇಲಿನ ಹಿಂಸೆಯನ್ನು ಪ್ರತಿರೋಧಿಸಲೇಬೇಕೆಂದು ತೀವ್ರವಾಗಿ ಅನಿಸಿದಾಗ ಒಂದಷ್ಟು ಜನ ಗೆಳತಿಯರು ಕಂಡ ಒಗ್ಗೂಡುವಿಕೆಯ ಕನಸೇ ಈ ನಮ್ಮ ಒಕ್ಕೂಟ. ಕರ್ನಾಟಕದಾದ್ಯಂತ ಸಮಾನತೆ, ಸಾಮಾಜಿಕ ನ್ಯಾಯ, ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ನಂಬಿಕೆ ಇಟ್ಟಿರುವ; ಹಿಂಸೆ–ತಾರತಮ್ಯ ವಿರೋಧಿಸುವ 150ಕ್ಕೂ ಹೆಚ್ಚಿನ ಸಂಘಟನೆ–ವ್ಯಕ್ತಿಗಳ ಒಗ್ಗೂಡುವಿಕೆಯಾಗಿ ಒಕ್ಕೂಟ ರೂಪುಗೊಂಡಿತು. 2012ರಲ್ಲಿ ಮಂಗಳೂರಿನಲ್ಲಿ ರೂಪುಗೊಂಡ ಒಕ್ಕೂಟವು 2013ರಲ್ಲಿ ಮಂಗಳೂರು, ತದನಂತರದ ವರ್ಷಗಳಲ್ಲಿ ಮೈಸೂರು, ಬೆಂಗಳೂರು, ವಿಜಯಪುರ, ಕೊಪ್ಪಳದಲ್ಲಿ ಐಕ್ಯತೆಯ ಸಂಕೇತವಾಗಿ ಬೃಹತ್ ಸಮಾವೇಶ, ಸೈದ್ಧಾಂತಿಕ ತಿಳುವಳಿಕೆಗಾಗಿ ವಿಚಾರಸಂಕಿರಣ ಮತ್ತು ಜನರೊಡನೆ ಸಂವಾದಿಸುವ ಸಲುವಾಗಿ ಅರಿವು ಮೂಡಿಸುವ ಕಾರ್ಯಗಳನ್ನು ನಡೆಸಿದೆ.

**ಇಷ್ಟು ದೊಡ್ಡ ಪ್ರಮಾಣದಲ್ಲಿ ಮಹಿಳಾ ದಿನಾಚರಣೆ ಆಚರಿಸುತ್ತಿರುವುದರ ಉದ್ದೇಶವೇನು?**

ಹಲವು ನೆಲೆಗಳಲ್ಲಿ ಹಂಚಿಹೋಗಿರುವ ಮಹಿಳಾಪರ ಮನಸುಗಳನ್ನು ಒಂದೆಡೆ ಸೇರಿಸಿ ಮಹಿಳಾ ದಿನಾಚರಣೆಯ ನೆಪದಲ್ಲಿ ವರ್ಷಕ್ಕೊಮ್ಮೆ ಪರಸ್ಪರರನ್ನು ಅರಿಯುವಂತೆ ಮಾಡುವುದು ಸಮಾವೇಶದ ಉದ್ದೇಶ. ಭಾರತದಾದ್ಯಂತ ನಡೆಯುವ ಮಹಿಳಾ ಹೋರಾಟಗಳ ಜೊತೆ ಸಂಪರ್ಕ ಸಾಧಿಸುವುದು ಮುಖ್ಯವಾದ್ದರಿಂದ ಜನಪರ ಹೋರಾಟಗಳ ಪ್ರತಿನಿಧಿಗಳನ್ನು ಹೊರರಾಜ್ಯಗಳಿಂದ ಬರಮಾಡಿಕೊಂಡಿದ್ದೇವೆ. ರಾಜಾಸ್ಥಾನದ ಭಾಂವ್ರಿದೇವಿ, ಮಹಾರಾಷ್ಟ್ರದ ಊರ್ಮಿಳಾ ಪವಾರ್, ಮಣಿಪುರದ ಮೆಯಿರಾ ಪೈಬಿ ಸಂಘಟನೆಯ ಸೋದರಿಯರು, ಚೆನ್ನೈನ ವಿ. ಗೀತಾ, ಭೂಪಾಲ್ ಅನಿಲ ಸಂತ್ರಸ್ತರ ಸಂಘಟನೆಯ ಚಂಪಾದೇವಿ–ರಶೀದಾಬಿ, ಮೇಧಾ ಪಾಟ್ಕರ್, ದೆಹಲಿಯ ಉಮಾ ಚಕ್ರವರ್ತಿ, ಕವಿತಾ ಕೃಷ್ಣನ್, ತೆಲಂಗಾಣದ ಗೋಗು ಶ್ಯಾಮಲ, ಒರಿಸ್ಸಾದ ರಂಜನಾ ಪಾಡಿ ಬಂದು ಹೋಗಿದ್ದಾರೆ. ಈ ಬಾರಿ ಶಿವಮೊಗ್ಗೆಗೆ ಪುಣೆಯ ಮನಿಶಾ ಗುಪ್ತೆ, ಮುಂಬಯಿಯ ಫ್ಲೇವಿಯಾ ಆಗ್ನೆಸ್, ಹೈದರಾಬಾದಿನ ಲತಾ ಪಿ. ಎಂ. ಬರಲಿದ್ದಾರೆ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

**ನಿಮ್ಮ ಈ ಕಾರ್ಯಕ್ರಮಗಳಿಗೆ ಜನಸ್ಪಂದನೆ ಹೇಗಿದೆ?**


ಮಿಶ್ರ ಜನಸ್ಪಂದನೆ ದೊರೆತಿದೆ. ತೆರೆದ ಬಾಹುಗಳಿಂದ ಸ್ವಾಗತಿಸಿ, ಇದ್ದ ನಾಕು ಕಾಸಲ್ಲಿ ಒಂದನ್ನು ಸಮಾವೇಶಕ್ಕೆ ಕೊಟ್ಟು, ಸೋದರಿತ್ವದ ಚೆಲುವು ಅರಿತುಕೊಂಡೆವೆಂದವರೂ ಇದ್ದಾರೆ. ಸ್ತ್ರೀವಾದವೆಂದರೆ ಮೂಗುಮುರಿಯುವವರೂ ಎದುರಾಗಿದ್ದಾರೆ. ಸ್ತ್ರೀವಾದವೆಂದರೆ ಸ್ತ್ರೀಪುರುಷರಿಬ್ಬರೂ ಜೊತೆಗೂಡಿ ಸಮಾನತೆ ಹಾಗೂ ವಿಮೋಚನೆಗಾಗಿ ನಡೆಸುವ ಅವಿರತ ಪ್ರಯತ್ನವಾಗಿದೆ.

**ಮಹಿಳಾ ಸಬಲೀಕರಣದ ದಾರಿಯಲ್ಲಿ ಅಂದುಕೊಂಡ ಗುರಿಸಾಧನೆ ಆಗಿದೆಯೇ?**

ಸಹನೆ, ಶಾಂತಿ, ತ್ಯಾಗ, ಕ್ಷಮೆಗಳಂಥ ಗುಣಗಳ ಹೇರಿಕೆಯಡಿ ಮಹಿಳೆಗೆ ಹಿಂಸೆಯನ್ನು ಸಹಿಸಿಕೊಳ್ಳುವುದು ಹಾಗೂ ತನ್ನನ್ನು ತಾನು ಹಿಂಸಿಸಿಕೊಳ್ಳುವುದು ರೂಢಿಯಾಗಿದೆ. ಸ್ವಯಂ ಹಿಂಸೆಯಿಂದ ಬಿಡುಗಡೆ ಹೊಂದುವ, ತನ್ನ ಪರಿಸ್ಥಿತಿಗೆ ಕಾರಣಗಳನ್ನರಿಯುವ, ತನ್ನಂತಹ ಇತರರನ್ನು ಗುರುತಿಸುವ ಅರಿವು ಮೂಡಿದರಷ್ಟೆ ಆತ್ಮಗೌರವದ, ಘನತೆಯ ಬದುಕು ಸಾಧ್ಯವಾಗುವುದು. ಅದೇ ಮಹಿಳಾ ಸಬಲೀಕರಣ. ಸಬಲೀಕರಣ ಮುಟ್ಟುವ ಗುರಿಯಲ್ಲ, ವಿಸ್ತಾರಗೊಳ್ಳುವ ನಿರಂತರ ಪ್ರಕ್ರಿಯೆ. ಆಸ್ಫೋಟದಂತೆ ಅದು ಸಂಭವಿಸುವಂಥದ್ದಲ್ಲ, ಬದಲು ದೀಪದಂತೆ ಉರಿಯಬೇಕಾದ ನಿರಂತರ ಪ್ರಕ್ರಿಯೆ.

*ಸಂದರ್ಶಕರು: ಟಿ. ಎಲ್. ರೇಖಾಂಬ*

❖




ರೈತಸಂಘ ನಮ್ಮ ನಾಡಿನಲ್ಲಿ ಬೃಹತ್ ಶಕ್ತಿಯಾಗಿ ಬೆಳೆಯಲು ನಿಜವಾದ ಕಾರಣಕರ್ತರು ಹೆಣ್ಣುಮಕ್ಕಳು ಮತ್ತು ತಾಯಂದಿರು. ಬಗಲಲ್ಲಿ ಮಕ್ಕಳನ್ನು, ತಲೆಯ ಮೇಲೆ ನಮ್ಮೆಲ್ಲರಿಗಾಗಿ ಬುತ್ತಿಗಂಟನ್ನು ಹೊತ್ತು ಬಿಸಿಲು ಬೆಂಕಿಯ –ನ್ನು ಲೆಕ್ಕಿಸದೆ ಹೋರಾಟದಲ್ಲಿ, ದೂರದೂರದ ಪಾದಯಾತ್ರೆಗಳಲ್ಲಿ ನಮ್ಮೊಡನೆ ಹೆಜ್ಜೆ ಹಾಕಿದ ಸಾವಿರಾರು ರೈತಮಹಿಳೆಯರ ಶ್ರಮದ ಬೆವರಿನ ಫಲವಾಗಿ ರೈತ ಸಂಘದ ಹೋರಾಟಗಳು ಯಶಸ್ಸು ಕಂಡವು. ನಾನು ರೈತಸಂಘದ ಖಾಯಂ ಸದಸ್ಯ. ಇಂದು ಮಹಿಳೆಯರೇ ಸಹಸ್ರಾರು ಸಂಖ್ಯೆಯಲ್ಲಿ ಒಗ್ಗೂಡಿ ನಮ್ಮ ಊರಿನಲ್ಲಿ ಅರಿವಿನ ನಡಿಗೆ ನಡೆಸುತ್ತಿರುವುದು ತುಂಬಾ ಹೆಮ್ಮೆಯ ಸಂಗತಿ. ಈ ಅರಿವಿನ ನಡಿಗೆಯಲ್ಲಿ ನಾನು ಸಂತೋಷದಿಂದ ಜೊತೆಯಾಗುವೆ. ನೀವೆಲ್ಲರೂ ಜೊತೆಯಾಗಿ

~ಕಡಿದಾಳು ಶಾಮಣ್ಣ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಅಂತ್ಯಕ್ಕೊಂದು ಆರಂಭ

**ಮುಂ**ಬಯಿಯ ನ್ಯಾಯವಾದಿ, ಸ್ತ್ರೀವಾದಿ ಚಿಂತಕಿ, ಸಾಮಾಜಿಕ ಕಾರ್ಯಕರ್ತೆ ಮತ್ತು ಲೇಖಕಿ ಫ್ಲೇವಿಯಾ ಆಗ್ನೆಸ್ ಬಹಿರಂಗ ಸಾರ್ವಜನಿಕ ಸಭೆಯನ್ನುದ್ದೇಶಿಸಿ ತಮ್ಮ ಅನುಭವದ ಮಾತುಗಳಲ್ಲಿ ಮಹಿಳಾ ಚಳುವಳಿಗಳು ಸಾಗಬೇಕಾದ ದಾರಿಗೆ ದೀವಿಗೆಗಳನ್ನಿತ್ತರು. ಅವರ ಮಾತುಗಳನ್ನು ಕನ್ನಡಕ್ಕೆ ಅನುವಾದಿಸಿದ್ದು ಗೆಳತಿ ಕೃತಿ ಆರ್. ಪುರಪ್ಪೆಮನೆ. ವಿಶೇಷ ಆಹ್ವಾನಿತರನ್ನು ಸ್ಥಳೀಯ ತಳಿಯ ಅಕ್ಕಿಯನ್ನು ಭೂಮಿ ಹುಣ್ಣಿಮೆಯ ಬುಟ್ಟಿಯಲ್ಲಿ ಉಡಿ ತುಂಬುವ ಮೂಲಕ ಗೌರವಿಸಿದ್ದೂ ವಿಶೇಷವೇ. ಅದರೊಂದಿಗೆ ಸಿರಿವಂತೆಯ ಚಿತ್ರಸಿರಿ ದಂಪತಿಗಳು ಚಿತ್ರಿಸಿದ್ದ 'ಚಕ್ಕಳ್ ಬಕ್ಕಳ್ ಚಿನ್ನಾಣಿ' ಹಸೆಚಿತ್ರವನ್ನೂ ಉಡುಗೊರೆಯಾಗಿ ಕೊಟ್ಟೆವು. ಗೆಳತಿ ವಾಣಿಯ ಕೈಯ ಕಸೂತಿಯಿಂದ ಅಲಂಕೃತಗೊಂಡಿದ್ದ ಕರವಸ್ತ್ರಗಳನ್ನೂ ಅವರ ಕೈಗಿತ್ತೆವು. ಅನೇಕ ಸಂಘಟನೆಗಳ ಮಹಿಳಾ ಪ್ರತಿನಿಧಿಗಳು ತಂತಮ್ಮ ಹಕ್ಕೊತ್ತಾಯದ ಮಾತುಗಳನ್ನಾಡಿದರು. ಸಾಗರದ ಗೆಳತಿ ಪ್ರತಿಭಾ ಸಮಾವೇಶದ ಹಕ್ಕೊತ್ತಾಯಗಳನ್ನು ಘಂಟಾಘೋಷವಾಗಿ ಸಭೆಗೆ ಅರುಹಿದಳು. ಜನಶಕ್ತಿಯ ಗೆಳತಿ ಗೌರಿ ಎಲ್ಲರಿಗು ವಂದಿಸಿದಳು.

ಕಾರ್ಯಕ್ರಮದ ಕೊನೆಯಲ್ಲಿ ರಂಗಬೆಳಕು ತಂಡದ ಹಾಡಿಗೆ ಎಲ್ಲರೂ ಕುಣಿದು ಕುಪ್ಪಳಿಸಿದ್ದು ಮನಸ್ಸಿನಲ್ಲಿನ್ನೂ ಹಸಿರಾಗಿದೆ. ಗೆಳತಿ ಸಬಿತಾರಿಗೆ ಆ ತಕ್ಷಣವೇ ಹೊಳೆದ ಹೊಳಹಿನಿಂದ ಸ್ಫೂರ್ತಿಗೊಂಡ ಶಿವಮೊಗ್ಗದ ಗೆಳತಿಯರೆಲ್ಲರೂ ತಂತಮ್ಮಲ್ಲಿದ್ದ ಹಣವನ್ನು ಒಂದು ಕರವಸ್ತ್ರಕ್ಕೆ ಸುರುವಿದರು. ಆ ಇಡುಗಂಟನ್ನು ಮುಂದಿನ ಧಾರವಾಡದ ಸಮಾವೇಶಕ್ಕೆ ಶುಭಕೋರುವ ಪ್ರೀತಿಯ ಸಂಕೇತವಾಗಿ ಸರಸ್ವತಿ, ವಾಣಿ, ಅನುಪಮಾರ ಉಡಿಗೆ ಹಾಕಿದ್ದು ಒಂದು ಸಾರ್ಥಕ ಭಾವವನ್ನು ಮೂಡಿಸಿತು. ಶಿವಮೊಗ್ಗದ ಬಳಗದ ನೆನಪಿಗಾಗಿ ಹಾಗೂ ಮುಂದೆ ಧಾರವಾಡದಲ್ಲಿ ನಡೆಯುವ ಚೈತನ್ಯದಿನದ ಯಶಸ್ಸನ್ನು ಹಾರೈಸಿ ಅವರಿಗೆ ಪ್ರೀತಿ ತುಂಬಿದ ಸೆರಗಿನಲ್ಲಿ ಅಲ್ಲೇ, ಆ ಕ್ಷಣದಲ್ಲಿ ಸಂಗ್ರಹಿಸಿದ, ಲೆಕ್ಕ ತಿಳಿಯದ ಚಿಕ್ಕ ಮೊತ್ತದ ಪುಟ್ಟ ಗಂಟನ್ನು ಧಾರವಾಡದ ಸಮಾವೇಶಕ್ಕೆ ನೀಡುವುದರ ಮೂಲಕ ಅಂತ್ಯಕ್ಕೊಂದು ಆರಂಭವನ್ನು ನೀಡಿದೆವು. ಶಿವಮೊಗ್ಗದ ಜನತೆ, ಸಂಘಟನೆಗಳಿಗೆ ಇದುವರೆಗೂ ಆಗಿರದ ಹೊಸ ಅನುಭವವೊಂದಕ್ಕೆ ಸಾಕ್ಷಿಯಾದ ಈ ಎರಡು ದಿನಗಳ ಕಾರ್ಯಕ್ರಮ ಅದರ ಹಿಂದಿನ ಎಂಟು ತಿಂಗಳ ಸಿದ್ಧತೆಯು ಮುಂದೆ ಕೂಡ ತನ್ನದೇ ಸ್ವರೂಪದಲ್ಲಿ ಮುಂದುವರಿಯುವ ಭರವಸೆಯನ್ನು ಬಿತ್ತಿತು. ಹೊಸ ಕನಸು ಕಾಣುವ ಚೈತನ್ಯವನ್ನು ದಾಟಿಸಿತು.

– **ಒಕ್ಕೂಟದ ಸಂಗಾತಿಗಳು,** ಶಿವಮೊಗ್ಗ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸಹಭಾಗಿ ಸಂಘಟನೆ-ಸಂಸ್ಥೆಗಳು

ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ–ಮಂಗಳೂರು, ಮಾನಸ ಬಳಗ–ಬೆಂಗಳೂರು, ವಿಮೋಚನ ಮಹಿಳಾ ಹಕ್ಕುಗಳ ವೇದಿಕೆ ಬೆಂಗಳೂರು, ವಿಮೆನ್ಸ್ ವಾಯ್ಸ್ ಬೆಂಗಳೂರು, ಮೈಸೂರು ಜಿಲ್ಲಾ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎ.ಐ.ಎಂ.ಎಸ್.ಎಸ್.), ಪಿ.ಯು.ಸಿ.ಎಲ್. ಕರ್ನಾಟಕ, ಮಹಿಳಾ ಮುನ್ನಡೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ದಲಿತ ದಮನಿತರ ಸ್ವಾಭಿಮಾನಿ ಸಮಿತಿ, ಕರ್ನಾಟಕ ಪ್ರಾಂತ್ಯ ರೈತ ಸಂಘ, ಸ್ಪಂದನ–ಮಂಡ್ಯ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಬೆಂಗಳೂರು, ಸಾಧನಾ ಮಹಿಳಾ ಗುಂಪು–ಬೆಂಗಳೂರು, ವಿಮೋಚನ ಸಂಘ–ಅಥಣಿ, ಕರ್ನಾಟಕ ಲೇಖಕಿಯರ ಸಂಘ, ಉತ್ತರ ಕರ್ನಾಟಕ ಲೇಖಕಿಯರ ಸಂಘ ಹುಬ್ಬಳ್ಳಿ–ಧಾರವಾಡ; ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟ, ಆಲ್ ಇಂಡಿಯಾ ಪ್ರೋಗ್ರೆಸಿವ್ ವಿಮೆನ್ಸ್ ಅಸೋಸಿಯೇಷನ್, ಕರ್ನಾಟಕ ದಲಿತ ಮಹಿಳಾ ವೇದಿಕೆ, ಅತ್ಯಾಚಾರ ವಿರೋಧಿ ಪ್ರಚಾರಾಂದೋಲನ, ದಲಿತ ಬಹುಜನ ಚಳವಳಿ, ನ್ಯಾಷನಲ್ ಫೆಡರೇಷನ್ ಫಾರ್ ವಿಮೆನ್, ಭಾರತೀಯ ಮಹಿಳಾ ಒಕ್ಕೂಟ, ಮಾನಿನಿ, ಗಾರ್ಮೆಂಟ್ಸ್ ಲೇಬರ್ ಯೂನಿಯನ್, ಮುನ್ನಡೆ ಸಾಮಾಜಿಕ ಸಂಘಟನೆ, ಸ್ತ್ರೀ ಜಾಗೃತಿ ಸಮಿತಿ, ಚರಕ ಮಹಿಳಾ ವಿವಿಧೋದ್ದೇಶ ಸಂಘ–ಹೆಗ್ಗೋಡು, ಸಖಿ ಸಂಸ್ಥೆ– ಹೊಸಪೇಟೆ, ಎಸ್‌ಎಫ್‌ಐ, ಡಿವೈಎಫ್‌ಐ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, (ಅಂಬೇಡ್ಕರ್ ವಾದ), ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆ, ಕರ್ನಾಟಕ ಲೈಂಗಿಕ ಕಾರ್ಮಿಕರ ಯೂನಿಯನ್, ಸಂಗಮ ಬೆಂಗಳೂರು, ಪರ್ಯಾಯ ಕಾನೂನು ವೇದಿಕೆ (ಎಎಲ್‌ಎಫ್), ಅನೇಕ ಬೆಂಗಳೂರು, ಜೀವಾ ಬೆಂಗಳೂರು, ಒಂದೆಡೆ ಬೆಂಗಳೂರು, ಸ್ವರಾಜ್ ನೆಟ್‌ವರ್ಕ್, ಯೂತ್ ಎಂಪವರ್ಡ್ ಇನ್ ಆಕ್ಷನ್ ಫಾರ್ ಹ್ಯುಮ್ಯಾನಿಟಿ, ರೇಡಿಯೋ ಆಕ್ಟೀವ್ ಬೆಂಗಳೂರು, ಪ್ರಜಾ ರಾಜ್ಯ ವೇದಿಕೆ, ವಿಸ್ತಾರ್, ಜನಸಹಯೋಗ, ಸಾಧನಾ ಮಹಿಳಾ ಸಂಘ ಬೆಂಗಳೂರು, ತರಿಕಿಟ ಕಲಾಕಮ್ಮಟ ಮಂಗಳೂರು, ಸಂವಾದ, ಭಾರತೀಯ ಜ್ಞಾನ–ವಿಜ್ಞಾನ ಸಮಿತಿ, ಸ್ಲಂಜನಾಂದೋಲನ ಸಮಿತಿ, ಪೌರಕಾರ್ಮಿಕರ ಸಂಘಟನೆ, ಪಯಣ, ಸಮಾಜವಾದಿ ಜನಪರಿಷದ್, ಕರ್ನಾಟಕ ಜನಶಕ್ತಿ, ಕರ್ನಾಟಕ ಕೋಮುಸೌಹಾರ್ದ ವೇದಿಕೆ, ಫೋರಂ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಫಾರ್ ವರ್ಕರ್ಸ್ ರೈಟ್ಸ್, ದೇವದಾಸಿ ಮಹಿಳೆಯರ ಸಂಘಟನೆ ಬೆಳಗಾವಿ, ಭೂಮ್ತಾಯಿ ಬಳಗ ದೊಡ್ಡಬಳ್ಳಾಪುರ, ಕವಿ ಪ್ರಕಾಶನ–ಕವಲಕ್ಕಿ, ಸಬಲ ವಿಜಯಪುರ, ಉಜ್ವಲ ಸಂಸ್ಥೆ ವಿಜಯಪುರ, ಫೆಡಿನಾ, ದಲಿತ ಜನಸೇನೆ ಮಹಿಳಾ ಒಕ್ಕೂಟ, ಎಪಿಡಿ ಸಂಸ್ಥೆ, ಅನೌಪಚಾರಿಕ ಶಿಕ್ಷಣ ಸಂಸ್ಥೆ, ಏಯ್ಡ್ಸ್ ಜಾಗೃತಿ ಮಹಿಳಾ ಸಂಸ್ಥೆ, ಮಹಿಳಾ ಸಮಖ್ಯಾ, ಚೈತನ್ಯ ಮಹಿಳಾ ಕೋಆಪರೇಟಿವ್ ಬ್ಯಾಂಕ್ ಲಿ. ವಿಜಯಪುರ, ಪ್ರಿಯದರ್ಶಿನಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ, ಕರ್ನಾಟಕ ಅಂಗವಿಕಲರ ಐಕ್ಯತಾ ವೇದಿಕೆ, ನವಸ್ಫೂರ್ತಿ ಸಂಸ್ಥೆ, ವಿಜಯಪುರ, ಎ.ಐ.ಟಿ.ಯು.ಸಿ, ಸಿಐಟಿಯು, ಕರ್ನಾಟಕ ವಿದ್ಯಾರ್ಥಿ ಸಂಘಟನೆ, ಪಿ.ಯು.ಸಿ.ಎಲ್, ಎ.ಐ.ಟಿ.ಯು.ಸಿ, ಸಿಐಟಿಯು, ಕೊಪ್ಪಳ ಪ್ರಗತಿಪರ ಸಂಘಟನೆಗಳ ಒಕ್ಕೂಟ, ದಲಿತ ಬಹುಜನ ಚಳವಳಿ – ಗದಗ, ದಲಿತ ಕಲಾ ಮಂಡಳಿ ಗದಗ, ಜಾಗೃತಿ ಧಾರವಾಡ, ಲಡಾಯಿ ಪ್ರಕಾಶನ ಗದಗ, ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ್ ಕರ್ನಾಟಕ, ಸೇವಾ, ನವಜೀವನ ಮಹಿಳಾ ಒಕ್ಕೂಟ ರಾಯಚೂರು,


**ಶಿವಮೊಗ್ಗ ಜಿಲ್ಲೆಯ ಸಂಘಟನೆಗಳು:**

ದಲಿತ ಸಂಘರ್ಷ ಸಮಿತಿ (ರಿ) ಶಿವಮೊಗ್ಗ, ರಾಜ್ಯ ಸರಕಾರಿ ನೌಕರರ ಸಂಘ, ಕರ್ನಾಟಕ ರಾಜ್ಯ ಅಕ್ಷರ ದಾಸೋಹ, ಬಿಸಿಯೂಟ ತಯಾರಕರ ಫೆಡರೇಷನ್ ಶಿವಮೊಗ್ಗ ಜಿಲ್ಲಾ ಸಮಿತಿ, ಕರ್ನಾಟಕ ಅರಣ್ಯಮೂಲ ಬುಡಕಟ್ಟುಗಳ ಒಕ್ಕೂಟ, ಜನ ಹೋರಾಟ ಪತ್ರಿಕೆ ಶಿವಮೊಗ್ಗ, ಹೊಸ ಮನುಷ್ಯ ಪತ್ರಿಕಾ ಬಳಗ, ಸಾಧನಾ ಏಡ್ಸ್ ತಡೆಗಟ್ಟುವ ಮಹಿಳಾ ಸಂಘ(ರಿ) ಶಿವಮೊಗ್ಗ, ಶಿವಮೊಗ್ಗ ಲೇಖಕಿಯರ ಸಂಘ, ರಕ್ಷಾ ಸಮುದಾಯ ಸಂಘಟನೆ ಶಿವಮೊಗ್ಗ, ಕಲಾವಿದರ ಒಕ್ಕೂಟ (ರಿ), ಕರ್ನಾಟಕ ರಾಜ್ಯ ಪರಿಶಿಷ್ಟಜಾತಿ ಮತ್ತು ವರ್ಗಗಳ ನೌಕರರ ಒಕ್ಕೂಟ, ಶಿವಮೊಗ್ಗ ಜಿಲ್ಲಾ ಪತ್ರಕರ್ತರ ಸಂಘ, ಪ್ರೆಸ್ ಟ್ರಸ್ಟ್ ಶಿವಮೊಗ್ಗ, ಜಿಲ್ಲಾ ವಕೀಲರ ಸಂಘ, ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಹೊಂಗಿರಣ, ವಿವೇಕ, ನಂ ಟೀಂ, ಅಹರ್ನಿಶಿ ಪ್ರಕಾಶನ ಚಾವಡಿ ಬಳಗ, ಮಲೆನಾಡು ಸಂಘರ್ಷ ಸಮಿತಿ ತೀರ್ಥಹಳ್ಳಿ, ಎ.ಐ.ಟಿ.ಯು.ಸಿ, ಸ್ವರಾಜ್ ಇಂಡಿಯಾ ಅಭಿಯಾನ, ಸಮಾಜವಾದಿ ಅಭಿಯಾನ, ಲೋಹಿಯಾ ಜನ್ಮಶತಾಬ್ಧಿ ಟ್ರಸ್ಟ್ (ರಿ) ಸಾಗರ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಸಾಗರ, ಕರ್ನಾಟಕ ರಾಜ್ಯ ರೈತ ಸಂಘ ಸಮುದಾಯ ರಂಗ ತಂಡ, ಅಂಚೆ ಸಾಂಸ್ಕೃತಿಕ ಬಳಗ, ಸಾಹಿತ್ಯ ಸಮುದಾಯ, ಚಾರ್ವಾಕ ಪತ್ರಿಕಾ ಬಳಗ ಸಾಗರ, ಸಾಗರ ಮಹಿಳಾ ಸಮಾಜ, ಸ್ಪಂದನ (ರಿ) ಸಾಗರ, ಪ್ರಜ್ಞಾ ರಂಗ ತಂಡ, ಚರಕ ವಿವಿಧೋದ್ದೇಶ ಮಹಿಳಾ ಸಂಘ ಹೆಗ್ಗೋಡು, ಪ್ರಗತಿಪರ ಒಕ್ಕೂಟಗಳ ಸಂಘಟನೆ ಸೊರಬ, ಅಂತರಂಗ ಟ್ರಸ್ಟ್ (ರಿ) ಸಾಗರ, ನಟ ಮಿತ್ರರು ತೀರ್ಥಹಳ್ಳಿ, ಸ್ಪಂದನ ತೀರ್ಥಹಳ್ಳಿ, ಭಾರತೀಯ ಮಾನವ ಹಕ್ಕು ವೇದಿಕೆ, ಪತ್ರಕರ್ತರ ಸಂಘ ತೀರ್ಥಹಳ್ಳಿ, ಮಹಿಳಾ ಸ್ವಸಹಾಯ ಸಂಘ, ಅಂಟಿಗೆಪಂಟಿಗೆ ಮಹಿಳಾ ತಂಡ ಮೇಗರವಳ್ಳಿ, ಸಾಗರ ಮಹಿಳಾ ಸಮಾಜ, ಸುಬ್ಬಣ್ಣ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping


ರಂಗ ಸಮೂಹ, ಕರ್ನಾಟಕ ಜನಶಕ್ತಿ ಭದ್ರಾವತಿ, ಪ್ರಜಾಸಂಘರ್ಷ ವೇದಿಕೆ ಭದ್ರಾವತಿ, ದಲಿತ ಸಂಘಗಳ ಒಕ್ಕೂಟ, ಚಲವಾದಿ ಮಹಾಸಭಾ ಭದ್ರಾವತಿ, ಕರ್ನಾಟಕ ಮಾದಿಗ ಮಹಾಸಭಾ (ರಿ) ಭದ್ರಾವತಿ, ದಲಿತ ನೌಕರರ ಒಕ್ಕೂಟ (ಶಿ) ಭದ್ರಾವತಿ ಶಾಖೆ, ನಿರಂತರ ಜಾರ್ಜ್, ಕೆ ವಿ ಸುಬ್ಬಣ್ಣ ರಂಗಸಮೂಹ ಹೆಗ್ಗೋಡು, ನಾದಚಾವಡಿ ಕಲ್ಲೊಪ್ಪ ಹೊಸನಗರ ತಾ., ಸಾರಾ ಸಂಸ್ಥೆ ಹೊಸನಗರ ತಾ., ಯುವಕ ಯುವತಿಯರ ಸಂಘ – ಗಾಜನೂರು.


❖





Edited with the trial version of
Foxit Advanced PDF Editor
To remove this notice, visit:
www.foxitsoftware.com/shopping




Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಗಂಡಾಳ್ವಿಕೆ ಅಥವಾ ಪುರುಷಾಧಿಪತ್ಯಕ್ಕೆ ಎರಡು ಮುಖ. ಒಂದು ಆಕ್ರಮಣಕಾರಿಯಾಗಿದ್ದರೆ ಮತ್ತೊಂದು ವಿಧೇಯತೆ ತೋರಿಸುವ ಮುಖ. ಹೆಣ್ಣೊಬ್ಬಳು ತನ್ನ ಸೊತ್ತು ಎಂದು ಗಂಡು ಯೋಚಿಸುವುದು ಹಾಗೂ ತಾನು ಗಂಡಿನ ಸೊತ್ತು ಎಂದು ಹೆಣ್ಣು ಯೋಚಿಸುವುದು ಎರಡೂ ಪುರುಷಾಧಿಪತ್ಯದ ಧೋರಣೆಗಳೇ. ಹೆಣ್ಣನ್ನು ಪುರುಷನ ಮೂಗಿನ ನೇರದ ಯಾವುದೇ ವಿಶೇಷಣಗಳಿಲ್ಲದೆಯೂ ಆಕೆಯ ಸ್ವತಂತ್ರ ವ್ಯಕ್ತಿತ್ವವನ್ನು ಗುರುತಿಸಿ ಗೌರವಿಸುವುದು ಗಂಡಿಗೆ ಸಾಧ್ಯವಾದಾಗ, ಆ ವಿಶಾಲತೆ ಬಂದಾಗ ಲಿಂಗ ಸಮಾನತೆ ಸುಲಭವಾಗುತ್ತದೆ. ಹಾಗೆಯೇ ಮಹಿಳೆ ಆರ್ಥಿಕ ಸ್ವಾವಲಂಬನೆಯ ಜೊತೆಯಲ್ಲಿ ಬೌದ್ಧಿಕಳಾಗಿ ಸ್ವತಂತ್ರವಾಗಿ ಯೋಚಿಸಲು ಬದುಕಲು ತೊಡಗಿದಾಗ ಮಹಿಳಾ ಅಭ್ಯುದಯ ಸಾಧ್ಯವಾಗುತ್ತದೆ.

**~ಹರ್ಷಕುಮಾರ್ ಕುಗ್ವೆ**



ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ
ಅಂತಾರಾಷ್ಟ್ರೀಯ **ಮಹಿಳಾ** ದಿನಾಚರಣೆ
ಮಾರ್ಚ್ 8,9 2018 ಶಿವಮೊಗ್ಗ

ಸಮತೆಯೆಡೆಗೆ ನಮ್ಮ ನಡಿಗೆ

We want a world
Where no women is used
as a toy to play with

We want a world
Where women are free to
walk with heads high
and not with fears and anxieties.

A world where the women is
recognised and respected...
Not suppressed and defamed


A world where the women is
free to breathe the air of freedom
And not the air of dominance and insecurity

A world where women are able to
fly freely and chirp like a bird
Not the one whose legs are
tied with golden strings

A world where the mind is lead by thee
Into every widening action and thoughts
A world to perceive the women's strength

A harmonious world
Where there is no high wall
Between men and women
But a sense of love and equality

**~MAHIMA**
9th standard LRIS, Udupi




ಸಮತೆಯೆಡೆಗೆ ನಮ್ಮ ನಡಿಗೆ

ದೇಶದ ಉತ್ಪಾದಕತೆಯ ಬಹುಭಾಗವೇ ಆಗಿರುವ ಮಹಿಳೆಯರಿಗೆ ಇಂದಿಗೂ ಸ್ವತಂತ್ರ ಅಸ್ಮಿತೆ ಸಂಪೂರ್ಣವಾಗಿ ದೊರೆತಿಲ್ಲ. ಪುರುಷನ ಎರಡು ಪಟ್ಟು ಹೆಚ್ಚು ದುಡಿದರಷ್ಟೇ ಅವಳನ್ನು ಗುರುತಿಸುವಂತಾಗಿದೆ. ಈ ನಿಟ್ಟಿನಲ್ಲಿ ಆಕೆಯದ್ದೇ ಸ್ವಂತ-ಸ್ವತಂತ್ರ ಸಾಮರ್ಥ್ಯ ತೋರುವಲ್ಲಿ ಆಕೆ ಹಿಂದಿಗಿಂತಲೂ ಸದೃಢವಾದ ಹೆಜ್ಜೆ ಹಾಕಬೇಕಿದೆ. ಆ ಮೂಲಕ ಸಮ ಸಮಾಜದ ನಿರ್ಮಾಣದಲ್ಲಿ ಆಕೆ ಪಾಲ್ಗೊಳ್ಳಬೇಕಿದೆ. ಪ್ರತಿ ಹೆಣ್ಣಿನ ಮನದೊಳಗಿರುವ ನಿಜದ ನೆಲೆಯ 'ಆತ್ಮ' ಈಗಲಾದರೂ ಜಾಗೃತಗೊಳ್ಳಲಿ.

**~ಮಂಜುಶ್ರೀ ಕಡಕೋಳ, ಪತ್ರಕರ್ತೆ**



ಸಮತೆಯೆಡೆಗೆ ನಮ್ಮ ನಡಿಗೆ

ಮಲೆ ಮುಡಿ ಬಂದೆಡೆ ಹೆಣ್ಣೆಂಬರು
ಗಡ್ಡ ಮೀಸೆ ಬಂದಡೆ ಗಂಡೆಂಬರು
ಒಳಗೆ ಸುಳಿವ ಆತ್ಮ , ಜ್ಞಾನ, ಭಾವನೆಗಳು, ಜೀವ, ನೋವು ನಲಿವುಗಳೆಲ್ಲಾ ಸರಿಸಮನಾದವುಗಳೇ ಎಂದು ಅರಿದು ಜಗತ್ತಿನಲ್ಲಿದ್ದ ಸ್ತ್ರೀ ಅಸಮಾನತೆಯ ವಿರುದ್ಧ ಬಹುದೊಡ್ಡ ಕ್ರಾಂತಿ ಮಾಡಿ ಇಡಿಯ ಮಾನವ ಹಕ್ಕುಗಳ ಜಾಗೃತಿಯ ಹೋರಾಟಕ್ಕೆ ಹನ್ನೆರಡನೆಯ ಶತಮಾನದಲ್ಲೇ ನಾಂದಿಯಾಡಿದ ಬಸವಾದಿ ಶರಣರ ಕಲ್ಯಾಣ ಕ್ರಾಂತಿಯ ಕೊಂಡಿಯೇ ಈ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಎಂಬಂತೆ ಕಾರ್ಯನಿರ್ವಹಿಸುತ್ತಿದ್ದು, ಹಲವು ಮುಗ್ಧ ಮನಸುಗಳ ಹಿತರಕ್ಷಣೆಯ ಆಶಾದೀಪವಾಗಿದೆ. ಇದು ನನ್ನತನದ ಉಳಿವಿನ ಹೋರಾಟ. ನನ್ನ ಹಡೆದವ್ವ ಸೂಳೆ ಸಂಕೆವ್ವ.

**~ದೀಪ್ತಿ ಎಸ್ ಪಾಟೀಲ್**, ವಿದ್ಯಾರ್ಥಿನಿ



ಸಮತೆಯೆಡೆಗೆ ನಮ್ಮ ನಡಿಗೆ



ನನ್ನ ಬಾಲ್ಯ ಕಾಲದಲ್ಲೊಬ್ಬ ಅಮಾಯಕ ತಾಯಿ, ತನ್ನೆರಡು ಮಿಂಚುಗಂಗಳ ಪುಟ್ಟ ಹೆಣ್ಣುಮಕ್ಕಳ ಜೊತೆ ಶಿಥಿಲ ಗುಡಿಸಿಲಿನ ಎದುರು ಕೈಚೆಲ್ಲಿ ಕೂತಿದ್ದಳು. ಎಷ್ಟೋ ವರ್ಷಗಳ ನಂತರ ಅದೇ ತಾಯನ್ನು ಅದೇ ಸ್ಥಿತಿಯಲ್ಲಿ ಒಂಟಿಯಾಗಿ ಕಂಡೆ. ಅವಳೊಡಲ ಆ ಪುಟ್ಟ ಮಕ್ಕಳು ಯಾವ ದಾರಿಯಲ್ಲಿ ಬೆಳೆದು ಈಗ ಎಲ್ಲಿ ಏನಾದವು? ಅವಳ ಮುಖದ ಮೇಲಿನ ಆ ಆಳದ ಗೆರೆ ಅವಳ ಜರ್ಜರಿತ ದಾರಿಯ ಕತೆ ಹೇಳುತ್ತಿದೆಯೇ? ಆ ತಾಯಿಗೆ ನ್ಯಾಯಯುತ ಬಾಳಿನ ಅರಿವು ಮೂಡಿಸಲು ಮುಖ್ಯ ನಮ್ಮ ದಾರಿ ಈಗ ಸಹಜ ಸರಾಗ ತೆರೆದುಕೊಳ್ಳಬೇಕಿದೆ..

**~ನವ್ಯಾ ಕಡಮೆ**

ಸಮತೆಯೆಡೆಗೆ ನಮ್ಮ ನಡಿಗೆ

ಸಂಸ್ಕೃತಿ, ಸಂಪ್ರದಾಯಗಳ ಹೆಸರಲ್ಲಿ ಹೇರಲ್ಪಟ್ಟ ಯಾವುದೇ ವಿಚಾರವನ್ನ ಪ್ರಶ್ನಿಸೋ, ವಿಮರ್ಶಿಸಿಕೊಳ್ಳೋವಷ್ಟು ನಾವು ಹುಡುಗಿಯರು ಜಾಣರಾಗುವ ತನಕ ಊಟ, ಬಟ್ಟೆ ಕಡೆಗೆ ಉಸಿರಾಟದ ತನಕವೂ ದಾಸ್ಯ, ದಬ್ಬಾಳಿಕೆಗಳೇ ನಮ್ಮ ಕಂಫರ್ಟ್'ಗಳಾಗುತ್ತವೆ. ನಮ್ಮನ್ನ ಹೆಣ್ಣಾಗಿ ಕಾಣುವವರಿಂದ ದೂರ ಉಳಿಯೋಣ. ನಾವು ಒಂದು ಮನುಷ್ಯ ಜೀವಿ ಮಾತ್ರ. ನಮ್ಮ ಮಾತಿನ ಪ್ರತಿ ಶಬ್ದ, ನಮ್ಮ ಪ್ರತೀ ಹೆಜ್ಜೆ, ದೃಷ್ಟಿಕೋನ, ಊಟ, ಉಡುಗೆಗಳಲ್ಲಿ ತುಂಬಲ್ಪಟ್ಟ ಕಸವನ್ನ ಗುಡಿಸಲು ನಾವು ಮುಂದಾಗಬೇಕು.

**~ಶಿವಿ ಮಲ್ಲಿಕಾರ್ಜುನಪ್ಪ**



ಸಮತೆಯೆಡೆಗೆ ನಮ್ಮ ನಡಿಗೆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಹೆಣ್ಣು..

ಹಿಂದೆ ಮೌನವಾಗಿ
ಮಾತನಾಡುತ್ತಿದ್ದಳು..

ಈಗ ಮೆಲುದನಿಯಲ್ಲಿ
ಮಾತನಾಡುತ್ತಿದ್ದಾಳೆ..

ಮುಂದೆ ಗಟ್ಟಿದನಿಯಲ್ಲಿ
ಮಾತನಾಡಬಹುದು..

ಆಕೆ ಮಾತನಾಡುವ ಹಕ್ಕನ್ನೇನೋ
ಚಲಾಯಿಸುತ್ತಿದ್ದಾಳೆ..
ಆದರೆ..ಕೇಳಿಸಿಕೊಳ್ಳುವ ಜವಾಬ್ದಾರಿ
ಹೊರಲು ಪುರುಷ ಸಮಾಜ ಇನ್ನೂ
ಸಿದ್ಧವಾಗಿಲ್ಲ..

ಸಮಾನತೆ ಎಂದರೆ – ಹೇಳುವ
ಹಕ್ಕನ್ನು ಮತ್ತು ಕೇಳಿಸಿಕೊಳ್ಳುವ
ಜವಾಬ್ದಾರಿಯನ್ನು ಒಟ್ಟಾಗಿ
ನಿರ್ವಹಿಸುವುದು..

– ಗಿರಿಧರ ಕಾರ್ಕಳ



ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ
ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ
ಮಾರ್ಚ್ 8,9 2018 ಶಿವಮೊಗ್ಗ
ನಮ್ಮ ಬದುಕು ನಮ್ಮ ಹಕ್ಕು | ಹೆಣ್ಣು ಮಗಳು ಜಗದ ಬೆಳಕು

**THE WRONG STUDENTS**

While they were taught about
the rules of football
We were taught about
the rules of survival
"Don't maintain eye contact"
"Don't provoke them, back down!"
It starts young these lessons.
The lessons to be quiet.
We were taught dignity in silence
Of visible bra straps over education
We were taught to stay at home
Ah but no
Homes were not safe either
We were taught and taught and taught
While they grew up with no rule book
Grew up to be the danger
You warned us of,
prepared us to handle.
Tell me, wouldn't it have been easier
if you just... taught them instead?
The rules of respect and equality
before they are misled?

ಸಮತೆಯೆಡೆಗೆ ನಮ್ಮ ನಡಿಗೆ



**Emily Oshin**
XII Standard
DMS (Demonstration School)
Mysuru

ಈಳಿಗೆಗೆ ಮಾತು ಬಂತು
ನಾಲಿಗೆಯಲ್ಲಿ ಅದೇ ಗರಗಸ
ಈಳಿಗೆಗೆ ಕಣ್ಣು ಬಂತು
ನೋಟದಲ್ಲಿ ಅದೇ ಮೊನಚು
ಕಿವಿ ಮೂಡಿ ಸದ್ದು ಸ್ವರ ಮೈಸೇರಿತು
ನನ್ನ ನೆಲೆಯೇಕೆ
ಖಾಯಂ ಅಡಿಗೆ ಖೋಲಿ ?

~ಸುನಂದಾ ಕಡಮೆ



ಸಮತೆಯೆಡೆಗೆ ನಮ್ಮ ನಡಿಗೆ

ಇಷ್ಟು ದಿನ ಕೊಲೆ, ಅತ್ಯಾಚಾರ, ದೌರ್ಜನ್ಯ ಎಲ್ಲದರ ನಡುವೆಯೇ ಹೆಣ್ಣು ಪರಂಪರೆಯ ಮಣ್ಣ ಪದರದೊಳಗೆ ಅದೆಷ್ಟೇ ತುಳಿದರೂ ಗಟ್ಟಿಯಾಗಿ ಬೇರೂರಿ ಎದ್ದು ನಿಂತಿದ್ದಾಳೆ ಈಗಾಗಲೇ 'ಬೇಡ'ಗಳ ಪಟ್ಟಿ ಬೆಳೆದಿದೆ. ಉಪದೇಶಗಳಿಗೆ ಕತ್ತು ನೋಯುತ್ತಿದೆ. ದಿನವಿಡೀ ತಪ್ಪು ತಿದ್ದಿಕೊಳ್ಳುವುದೇ ಆಗಿದೆ. ಈ ಮಹಿಳಾದಿನಾಚರಣೆ ಇಂತಹ 'ವೈರಸ್'ಗಳನ್ನೆಲ್ಲಾ ತೊಡೆದು ಹಾಕಲಿ. ಭಾವನೆಗಳಿಗೆ ರೆಕ್ಕೆ ಮೂಡಲಿ ಹೊಸ ಬೆಳಕು ಬರಲಿ.

**ನಭಾ ಒಕ್ಕುಂದ**



ಬಹಳ ತಲ್ಲಣದ ದಿನಗಳು ಉರಿವ ಕೊಳ್ಳಿಯಾಗಿ ಎರಗುತ್ತಿವೆ. ಅದರಲ್ಲಿಯೂ ಮೂರು ಪಟ್ಟು ದುಡಿಮೆಯ ಮಹಿಳೆಯರು ಮತ್ತು ಹೆಂಗೂಸುಗಳ ಮೇಲೆ ಇನ್ನೂ ಕ್ರೂರ ಧಾಳಿ ನಡೆಯುತಿದೆ. ಎಳೆಬಾಲೆಯನ್ನು ದೇವದಾಸಿಯಾಗಿಸಿದ, ಹುಟ್ಟಿದ ಹೆಂಗೂಸನ್ನು ಹದಿನೈದು ಸಾವಿರಕ್ಕೆ ಮಾರಿಕೊಂಡ ಪ್ರಕರಣಗಳು ಪ್ರಜ್ಞಾವಂತ ಲೋಕಕ್ಕೆ ಸವಾಲಾಗಿವೆ. ಎಲ್ಲ ವಿಕಾರಗಳು ಒಟ್ಟಾಗಿ ಹೆಣ್ಣುಗಳ ಅಸ್ತಿತ್ವ ಅಸ್ಮಿತೆಯ ಬಲಿ ಪಡೆಯಲು ಹವಣಿಸುತ್ತಿವೆ. ಆದರೇನು? ಬದುಕಿನುದ್ದಕ್ಕೂ ಸಂಘರ್ಷದ ಹಾದಿ ಸವೆಸಿದ ಮಹಿಳಾ ಲೋಕವು ಹೆದರದೆ ಹಿಂಜರಿಯದೆ ಎದುರಾಗುವ ಸಂಕಟಗಳನ್ನು ಹಿಮ್ಮೆಟ್ಟಿಸುತ್ತ ಮುನ್ನಡೆವ ತಾಖತ್ತು ಹೊಂದಿದೆ. ಸಮಸ್ತ ಮಹಿಳೆಯರ ಐಕ್ಯತೆಯೊಂದಿಗೆ ಬೆವರ ಲೋಕದ ಬೆಸುಗೆಯೊಂದಿಗೆ ಜಾಗತಿಕ ತಾಯ್ತನದತ್ತ ನಮ್ಮೆಲ್ಲರ ಪಯಣ.

~ನೀಲಾ ಕೆ

ಸಮತೆಯೆಡೆಗೆ ನಮ್ಮ ನಡಿಗೆ





ಹೆಣ್ಣನ್ನು ಕೇವಲ ಸಾಂಪ್ರದಾಯಿಕ, ಸಾಮಾಜಿಕ ಚಿಕ್ಕಟ್ಟುಗಳ ಸಂಕೋಲೆಯಿಂದಲ್ಲದೆ ಜಾಗತಿಕ ಕಾಲಘಟ್ಟದ ಖರೀದಿ - ಬಿಕರಿ, ಬಳಸಿ - ಬಿಸಾಡುವ ಮತ್ತು ಕೊಂದು ಚೆಲ್ಲುವ ಮನೋಧರ್ಮಗಳಿಂದ, ಶಕ್ತಿಗಳಿಂದ ಮುಕ್ತಗೊಳಿಸಬೇಕಿದೆ.

~ಎನ್.ರವಿಕುಮಾರ್
ಶಿವಮೊಗ್ಗ, ಪತ್ರಕರ್ತರು

ಸಮತೆಯೆಡೆಗೆ ನಮ್ಮ ನಡಿಗೆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಚಿತ್ರ ಸಂಪುಟ